ಮಂಗಳೂರು
ಬುಧವಾರ, 27 ಮೇ 2026
ಸಂಪುಟ 48, ಸಂಚಿಕೆ 69 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಪರಿಷತ್‌ಗೆ ಜೂ.18ಕ್ಕೆ ಮತದಾನ | ೦೪
ಸುಪ್ರೀಂಗೆ ಡಿಕೆಶಿ ಧನ್ಯವಾದ | ೦೫

ದಿಲ್ಲಿಯಲ್ಲಿ ವರಿಷ್ಠರಿಂದ ಸರಣಿ ಸಭೆ

ಹೈಕಮಾಂಡ್‌ನ ಪರಿಹಾರ ಸೂತ್ರ



ಹೊಸದಿಲ್ಲಿ: ಕಳೆದ ಕೆಲ ದಿನಗಳಿಂದ ಕರ್ನಾಟಕದಲ್ಲಿ ಉಂಟಾಗಿದ್ದ ನಾಯಕತ್ವ ಗೊಂದಲಕ್ಕೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಮಂಗಳವಾರ ಪರಿಹಾರ ಸೂತ್ರವನ್ನು ಕಂಡುಕೊಂಡಿದೆ. ಶೀಘ್ರದಲ್ಲೇ ಅದು ಅನುಷ್ಠಾನಕ್ಕೆ ಬರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಿಲ್ಲಿಗೆ ಬರುವಂತೆ ಕಾಂಗ್ರೆಸ್ ಹೈಕಮಾಂಡ್ ಸೋಮವಾರ ಸೂಚನೆ ನೀಡಿತ್ತು. ಆದರಂತೆ ಸಿದ್ದರಾಮಯ್ಯ ದಿಲ್ಲಿಗೆ ತೆರಳಿದ್ದರು. ಇತ್ತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ದಿಲ್ಲಿಗೆ ದೌಡಾಯಿಸಿದ್ದರು. ಮಂಗಳವಾರ ಎಐಸಿಸಿ ಕಚೇರಿಯ ಇಂದಿರಾ ಭವನಕ್ಕೆ ಉಭಯ ನಾಯಕರನ್ನು ಕರೆಸಿಕೊಂಡ ಕಾಂಗ್ರೆಸ್ ಹೈಕಮಾಂಡ್ ಅವರೊಂದಿಗೆ ಸರಣಿ ಸಭೆಗಳನ್ನು ನಡೆಸಿದೆ. ➡ಪುಟ ೪

ಇಂದು ಬೆಂಗಳೂರಿಗೆ ಕೆಸಿವಿ, ಸುರ್ಜೆವಾಲಾ

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಬುಧವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ಬೆಂಗಳೂರಿನಲ್ಲಿ ಸಭೆ ನಡೆಸುವ ಸಾಧ್ಯತೆಗಳಿವೆ. ಬೆಳಗ್ಗೆ 10.30ಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲ್ಗೊಳ್ಳಲಿದ್ದು, ಬಳಿಕ ವಿಧಾನಸೌಧದ ಆವರಣದಲ್ಲಿರುವ ನೆಹರು ಅವರ ಪ್ರತಿಮೆಯ ಬಳಿ ಅವರ ಭಾವಚಿತ್ರಕ್ಕೆ ಗೌರವಾರ್ಪಣೆ ಮಾಡಲಿದ್ದಾರೆ.

ಜನಜಾಗೃತಿ ಅಭಿಯಾನಕ್ಕೆ ಸಿದ್ಧತೆ

ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

- ಜೂ.5ರಿಂದ 21 ರವರೆಗೆ ಜನಜಾಗೃತಿ
- ರಾಷ್ಟ್ರವ್ಯಾಪಿ ಅಭಿಯಾನದಲ್ಲಿ ಜನರಿಗೆ ಅರಿವು
- 22 ಪ್ರಮುಖ ಸಾಧನೆಗಳ ಬಗ್ಗೆ ಮಾಹಿತಿ



ಹೊಸದಿಲ್ಲಿ: ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಆಡಳಿತಕ್ಕೆ ಮಂಗಳವಾರ 12 ವರುಷಗಳು ತುಂಬಿದವು. ಈ ಸಾಧನೆ ಸಂಭ್ರಮಿಸುವ ಅನ್ವಯ ಮತ್ತು ಮೋದಿ ಸರಕಾರದ ಜನಪರ ಯೋಜನೆಗಳನ್ನು ರಾಷ್ಟ್ರವ್ಯಾಪಿ ಪರಿಚಯಿಸುವ, ಅರ್ಥೈಸುವ ಜನಜಾಗೃತಿ ಅಭಿಯಾನಕ್ಕೆ ಬಿಜೆಪಿ ಮತ್ತದರ ಮಿತ್ರಪಕ್ಷಗಳು ಅಣಿಯಾಗುತ್ತಿವೆ. ಎನ್‌ಡಿಎ ಸರಕಾರ ಜನರಿಗೆ ನೀಡಿರುವ, ನೀಡುತ್ತಿರುವ ಕಲ್ಯಾಣಪರ ಆಡಳಿತ, ಬಿಗು ಪಾರದರ್ಶಿತ್ವದ ವ್ಯವಸ್ಥೆಗಳು ಮತ್ತು ಜಾಗತಿಕ ರಂಗದಲ್ಲಿ ಬೆಳೆಯುತ್ತಿರುವ ಭಾರತದ ರಾಜತಾಂತ್ರಿಕ ಪ್ರಭಾವ ಇತ್ಯಾದಿ ಎಲ್ಲಕ್ಕೂ ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವ ಮೂಲ ಕಾರಣವೆಂದು ಬಿಜೆಪಿ ಮತ್ತು ಮಿತ್ರಪಕ್ಷ ಜೆಡಿಯು ನಾಯಕರು ಹೆಮ್ಮೆಯಿಂದ ಹೇಳಿದ್ದಾರೆ.

ಮೋದಿ ಸರಕಾರ ಜನಪರವಾಗಿ ಜಾರಿಗೊಳಿಸಿರುವ ಕಲ್ಯಾಣ ಕಾರ್ಯಕ್ರಮಗಳು, ಮೂಲಸೌಕರ್ಯ, ವಿದೇಶಾಂಗ ನೀತಿಸಹಿತ ಸರಕಾರದ 22 ಪ್ರಮುಖ ಸಾಧನೆಗಳ ಮಾಹಿತಿಯನ್ನು ಅಭಿಯಾನದಲ್ಲಿ ರಾಷ್ಟ್ರವ್ಯಾಪಿ ಜನರಿಗೆ ಪರಿಚಯಿಸಲಾಗುವುದು, ಪ್ರದರ್ಶಿಸಲಾಗುವುದು. ➡ಪುಟ ೪


ಬಲಿಷ್ಠ ಜಾಗತಿಕ ಮಾನ್ಯತೆ

ಹಿಂದಿನ ಸರಕಾರಗಳಿಗೆ ಹೋಲಿಸಿದಲ್ಲಿ, ಭಾರತದ ಜಾಗತಿಕ ಮಾನ್ಯತೆ ಇಂದು ಅದೆಷ್ಟೋ ಪಾಲು ಬಲಿಷ್ಠವಾಗಿರುವುದು ನಿರ್ವಿವಾದ ಸಂಗತಿ. ಸಂಘರ್ಷ ನಿರತ ಹಲವು ರಾಷ್ಟ್ರಗಳು ಇದೀಗಲೂ ಸಮಾನ ಭರವಸೆಯೊಂದಿಗೆ ಭಾರತದತ್ತ ನೋಡುತ್ತಿವೆ. ➡ಪುಟ ೪

ಜನಸಂಖ್ಯೆ ಸ್ವರೂಪ ಪರಾಮರ್ಶೆ ಹಿನ್ನೆಲೆ

ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ

ಹೊಸದಿಲ್ಲಿ: ರಾಷ್ಟ್ರೀಯ ಭದ್ರತೆ, ಸಾರ್ವಭೌಮತೆ ಮತ್ತು ಸಾಮಾಜಿಕ ಸ್ಥಿರತೆಗೆ ತೊಡಕುಗಳೊಂದಿಗೆ ಗಂಭೀರ ಸವಾಲಾಗಿ ಪರಿಣಮಿಸಿರುವ, ಜನಸಂಖ್ಯಾ



ಸ್ವರೂಪದಲ್ಲಿನ ಬದಲಾವಣೆಗಳ ಸಮಗ್ರ ಪರಾಮರ್ಶೆ ಮತ್ತು ಅಧ್ಯಯನಕ್ಕಾಗಿ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವೊಲೇಕರ್ ನೇತೃತ್ವದಲ್ಲಿ, ಉನ್ನತ ಮಟ್ಟದ ಅಧ್ಯಯನ ತಂಡ ರಚಿಸಲಾಗಿದೆ. ತಂಡವು ದೇಶಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಅಧ್ಯಯನ ನಡೆಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ. ➡ಪುಟ ೪


ರಾಷ್ಟ್ರದ ವರ್ತಮಾನ, ಭವಿಷ್ಯಕ್ಕೆ ತೊಂದರೆ

ಅಕ್ರಮ ನುಸುಳುವಿಕೆ ಮತ್ತು ಜನಸಂಖ್ಯಾ ಸ್ವರೂಪದಲ್ಲಿ ಅಸ್ವಾಭಾವಿಕ ಬದಲಾವಣೆಗೆ ಕಾರಣಕರ್ತ ಇತರ ಅಂಶಗಳು ಯಾವುದೇ ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ಗಂಭೀರ ಸವಾಲೊಡ್ಡಲಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2025ರ ಆ.15ರಂದು ಘೋಷಿಸಿದಂತೆ, ಇದೀಗ ಈ ಸಮಸ್ಯೆಯ ಅಧ್ಯಯನಕ್ಕಾಗಿ ಉನ್ನತಾಧಿಕಾರ ತಂಡ ರಚಿಸಲಾಗಿದೆ. ಜನಗಣತಿ ಆಯುಕ್ತ ಮತ್ತು ಮಾಜಿ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ, ಆರ್ಥಿಕ ತಜ್ಞರಾದ ಶಮಿಕಾ ರವಿ ತಂಡದಲ್ಲಿರುವರು. ಗೃಹ ವ್ಯವಹಾರ ಖಾತೆಯಲ್ಲಿನ ಜಂಟಿ ಕಾರ್ಯದರ್ಶಿ (ವಿದೇಶೀಯರು-1)ಗಳು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ರುವರು ಎಂದು ಸಚಿವ ಶಾ ಮಾಹಿತಿ ನೀಡಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಮಾಹಿತಿ

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ

ಹೊಸದಿಲ್ಲಿ: ದೇಶದಲ್ಲಿ ಪ್ರಸಕ್ತ ಅಸ್ತಿತ್ವದಲ್ಲಿರುವ ಕಾನೂನುಗಳು ದ್ವೇಷ ಭಾಷಣ-ದ್ವೇಷಯುಕ್ತ ಅಪರಾಧಗಳ ನಿಯಂತ್ರಿಸಲು ಸಂಪೂರ್ಣ ಶಕ್ತವಿವೆ ಮತ್ತು ಸಮರ್ಥವಾಗಿವೆ. ಹಾಗಾಗಿ ಈ ವಿಚಾರದಲ್ಲಿ ಪ್ರತ್ಯೇಕ



ಕಾನೂನಿನ ಅಗತ್ಯವಿಲ್ಲವೆಂದು ಕೇಂದ್ರ ಸರಕಾರ ಕರ್ನಾಟಕ ಸರಕಾರಕ್ಕೆ ಸ್ಪಷ್ಟವಾಗಿ ಹೇಳಿದೆ. ಈ ಮೂಲಕ ಪ್ರತ್ಯೇಕ ಕಾನೂನು ಜಾರಿ ಮಾಡುವ ಕರ್ನಾಟಕ ಸರಕಾರದ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಕರ್ನಾಟಕದ ಪ್ರಸ್ತಾವಿತ ದ್ವೇಷ ಭಾಷಣ ನಿಯಂತ್ರಣ ಶಾಸನ ಬೆಂಬಲಿಸಲು ಕೇಂದ್ರ ಗೃಹ ಖಾತೆ ನಿರಾಕರಿಸಿದೆ. ಅಂತಹ ಅಪರಾಧ ನಿಯಂತ್ರಿಸಲು ಸದ್ಯ ಅಸ್ತಿತ್ವದಲ್ಲಿರುವ ಕಾನೂನುಗಳು ಸಾಕಷ್ಟು ಸಮರ್ಥವಿವೆ. ಪ್ರತ್ಯೇಕ ಕಾನೂನು ಜಾರಿಗೊಳಿಸುವ ಕರ್ನಾಟಕ ಸರಕಾರದ ಕ್ರಮವು ಕಾನೂನು ಅತಿಕ್ರಮಣ ಮತ್ತು ಅಸಂಗತತೆಗೆ ಕಾರಣವಾಗಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ಎಚ್ಚರಿಸಿದೆ. ➡ಪುಟ ೪

ಏಕರೂಪತೆ ಕೊರತೆ, ನಕಲಿತನಕ್ಕೆ ಎಡೆ

ರಾಜ್ಯಮಟ್ಟದಲ್ಲಿ ಪ್ರತ್ಯೇಕ ಶಾಸನ ರಚನೆಯ ಅಗತ್ಯವಿಲ್ಲ. ಇದು ಕಾನೂನು ನಿಯಮಾವಳಿಗಳ ನಕಲಿತನ ಮತ್ತು ದೇಶಾದ್ಯಂತ ಪ್ರಸ್ತುತ ಕಾನೂನು ಅನುಷ್ಠಾನದಲ್ಲಿನ ಏಕರೂಪತೆಗೆ ತೊಡಕುಂಟು ಮಾಡಲಿದೆ ಎಂದು ಗೃಹ ಖಾತೆ ಕರ್ನಾಟಕ ಸರಕಾರಕ್ಕೆ ಸ್ಪಷ್ಟಪಡಿಸಿದೆ. ಬೆನ್ನಲ್ಲೇ, ಕೇಂದ್ರ ಸರಕಾರ ವ್ಯಕ್ತಪಡಿಸಿರುವ ಆಕ್ಷೇಪಗಳಿಗೆ ಪ್ರತಿಯಾಗಿ, ವಿಸ್ತೃತವಾದ ಪ್ರತ್ಯುತ್ತರ ನೀಡುವಂತೆ ಕರ್ನಾಟಕದ ಕಾನೂನು ಇಲಾಖೆ ರಾಜ್ಯದ ಗೃಹ ಇಲಾಖೆಯನ್ನು ಕೋರಿದೆ.

ಬುಧವಾರ 27 ಮೇ 2026 ಮಂಗಳೂರು




ನಮ್ಮೆಲ್ಲರನ್ನೂ ಪ್ರೀತಿಯಿಂದ ತಿದ್ದಿ ತೀಡಿ ಬೆಳೆಸಿದ, ತಮ್ಮ ಬದುಕಿನ ಉಜ್ವಲ ಉದಾಹರಣೆಯಿಂದ ನಮಗೆ ಆದರ್ಶವಾಗಿದ್ದ ಶ್ರೇಷ್ಠ ವಿದ್ವಾಂಸ, ಸಂಘಟಕ, ಲೇಖಕ, ಬೌದ್ಧಿಕ ಮಹಾಮೇರು, ಸಂವೇದನೆಯ ಉನ್ನತ ಮಾದರಿ ಮಾನ್ಯ ಹೊ. ವೆ. ಶೇಷಾದ್ರಿಗಳ ದಿವ್ಯ ಸ್ಮೃತಿಗೆ ಅವರ ಜನ್ಮ ಶತಾಬ್ದಿಯಂದು ಶ್ರದ್ಧಾಭಕ್ತಿಗಳ ಸಹಿತ ಶತ ಶತ ನಮನಗಳು. ಅವರ ದಯಾಮಯ ಕೃಪೆ ನನ್ನ ಮೇಲಿರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

■ **ದತ್ತಾತ್ರೇಯ ಹೊಸಬಾಳೆ,** ಸರಕಾರ್ಯವಾಹ ರಾಷ್ಟ್ರೀಯ ಸ್ವಯಂಸೇವಕ ಸಂಘ




ನನಗೆ ಹೊ.ವೆ. ಶೇಷಾದ್ರಿ ಅವರ ಬಗ್ಗೆ ಗೌರವ, ಅಭಿಮಾನ ಇರುವುದು ಶೋಷಿತ ವರ್ಗಗಳ ಬಗ್ಗೆ ಅವರಿಗಿದ್ದ ಕಳಕಳಿಗಾಗಿ. ಈ ವರ್ಗಗಳ ಉನ್ನತಿಯ ಬಗ್ಗೆ ಎಲ್ಲಾ ಮಗ್ಗಲುಗಳಿಂದ ಅವರು ಚಿಂತನೆ ಮಾಡಿದ್ದರು. ಆರ್ಥಿಕ ಅಭಿವೃದ್ಧಿಯ ಜೊತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಯ ಮಹತ್ವವನ್ನು ತುಂಬಾ ಚೆನ್ನಾಗಿ ತಿಳಿದು ಕೊಂಡಿದ್ದರು. ಅದನ್ನೇ ಅವರು ಪ್ರತಿಪಾದಿಸುತ್ತಿದ್ದರು. ಅವರು ಭಾರತೀಯ ಸಂಸ್ಕೃತಿಯ ಉದಾರವಾದಿ ಹಾಗೂ ಮಾನವತಾವಾದಿ ಚಿಂತನೆಗಳ ಪ್ರತಿರೂಪವಾಗಿದ್ದರು. ನಮ್ಮ ಸಂಸ್ಕೃತಿಯಲ್ಲಿರುವ ಉದಾರವಾದಿ ಚಿಂತನೆಗಳನ್ನು ಪುನರುಜ್ಜೀವನಗೊಳಿಸುವುದೇ ಶೋಷಿತ ವರ್ಗದವರಿಗೆ ನೀಡುವ ಒಂದು ದೊಡ್ಡ ಶಕ್ತಿಯಾಗಿದೆ. ಈ ವಿಶಿಷ್ಟ ಚಿಂತನೆಯನ್ನು ನಾನು ಕಲಿತಿದ್ದು ಶೇಷಾದ್ರಿಯವರಿಂದ. ಅವರ ನೆನಪು ಎಂದೆಂದೂ ಹಸಿರಾಗಿರಲಿ, ಅವರ ವಿಚಾರಗಳು ಸದಾ ಬೆಳಕಾಗಿರಲಿ.

■ **ಡಾ. ಸಿದ್ಧಲಿಂಗಯ್ಯ,** ಸಾಹಿತಿ (ಶೇಷಾದ್ರಿ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ ಪುಸ್ತಕದ ಬೆನ್ನುಡಿಯಿಂದ)



ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ. ವೆ. ಶೇಷಾದ್ರಿ ಅವರ ಜನ್ಮ ಶತಾಬ್ದಿ. ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವದ ಶೇಷಾದ್ರಿ ಅವರು ವಿದ್ವಾಂಸರೂ ಹೌದು. ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಕುರಿತಾದ ಸ್ಮರಣೆ ಇಲ್ಲಿದೆ.




ಜ್ಯೇಷ್ಠ ಪ್ರಚಾರಕ ಹೊ.ವೆ.ಶೇಷಾದ್ರಿ ಶತಸಂಭ್ರಮ



ಭಾರತೀಯ ವೈಚಾರಿಕ ಪ್ರಜ್ಞೆಯ ಅಸಾಮಾನ್ಯ ಅಧ್ವರ್ಯು

▸ **ಮಂಜುನಾಥ ಅಜ್ಜಂಪುರ, ಅಂಕಣಕಾರರು**



ಕಳೆದ ಒಂದೆರಡು ಶತಮಾನಗಳ ಅಂಧಕಾರದ ಕಾಲಘಟ್ಟದಲ್ಲಿ, ಬ್ರಿಟಿಷರು – ಮಾರ್ಕ್ಸ್‌ವಾದಿಗಳು – ಜಿಹಾದಿಗಳು – ಮಿಷನರಿಗಳು, ಭಾರತದ ಅಸ್ಮಿತೆ – ಆತ್ಮಾಭಿಮಾನಗಳನ್ನ ನಾಶ ಮಾಡಿಬಿಟ್ಟರು. ಭಾರತೀಯ ಕೃಷಿ, ಉದ್ಯಮ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷರು ಅಪ್ಪಳಿಸಿ ಬುಡಮೇಲು ಮಾಡಿದ್ದರು. ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿನ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ಕಾಲ ಹೋಗಿ, ಎಲ್ಲ ಭಾರತೀಯರೂ ನಿರಕ್ಷರಕುಕ್ಷಿಗಳಾಗಿಬಿಟ್ಟರು. ಉದ್ಯಮ, ತಂತ್ರಜ್ಞಾನಗಳನ್ನು ಇಲ್ಲಿಂದ ವಿದೇಶೀಯರು ಕೊಂಡೊಯ್ಯುತ್ತಿದ್ದ ಕಾಲ ಹೋಗಿ, ನಮ್ಮ ಜನರೇ ಅವಿವೇಕ ದಿಕ್ಕೆಟ್ಟವರಾಗಿಹೋದರು. ವಿದೇಶೀಯರಿಗೂ ಉಚಿತ ಅನ್ನ – ವಿದ್ಯೆ ನೀಡುತ್ತಿದ್ದ ಈ ದೇಶವು ಭಿಕ್ಷುಕರ, ದರಿದ್ರರ, ರೋಗಿಷ್ಟರ ನಾಡಾಗಿಹೋಯಿತು. ಇಷ್ಟು ಸಾಲದೆಂದು ಬ್ರಿಟಿಷರು ಮತ್ತು ಅವರ ದುಷ್ಟಪರಿಣತಿಯವರು, ತಮ್ಮ ಪಠ್ಯಪುಸ್ತಕಗಳ ಮೂಲಕ ನಮ್ಮದೊಂದು ದೇಶವೇ ಅಲ್ಲ, ನಮ್ಮದು ಒಂದು ಸಂಸ್ಕೃತಿಯೂ ಅಲ್ಲ ಎನ್ನುವ ಭ್ರಮೆಯನ್ನೇ ನಮ್ಮ ತಲೆಗೆ ತುಂಬಿದರು.

ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರು 1925ರಲ್ಲಿ ಹಿಂದು ಸಂಘಟನೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದ ಪರ್ವಕಾಲದಲ್ಲಿ ಧರ್ಮ ಮತ್ತು ಹಿಂದು ಪದಗಳ ವ್ಯಾಖ್ಯಾನವು ಸಹ ಒಂದು ಸವಾಲೇ ಆಗಿತ್ತು. ಈ ವ್ಯಾಖ್ಯಾನವು ಇಂದಿಗೂ ಒಂದು ಸಮಸ್ಯೆಯೇ ಆಗಿದೆ, ಸವಾಲಾಗಿಯೇ ಉಳಿದಿದೆ. ಅನಂತರದ ಮುಖ್ಯಸ್ಥರಾದ ಗುರೂಜಿ ಮಾಧವ ಸದಾಶಿವ ಗೋಳ್ವಲ್ಕರ್ ಅವರು ಬಹಳ ದೊಡ್ಡ ವಿದ್ವಾಂಸರು. ಭಾರತೀಯ ಗುರುಕುಲಗಳು ನಾಶವಾಗಿ, 19 ಮತ್ತು 20ನೆಯ ಶತಮಾನಗಳಲ್ಲಿ ಪ್ರಕಟವಾದ ಅಪ-ವ್ಯಾಖ್ಯಾನದ ಇಂಗ್ಲಿಷ್ ಗ್ರಂಥಗಳನ್ನು ಸೋಲಿಸಿ, ಭಾರತೀಯತೆಯ ಸತ್ವದ ಬಂಗಾರವನ್ನು ತೆಗೆಯಬೇಕಿತ್ತು. ಹೀಗಾಗಿ ಅಗತ್ಯವಾಗಿ, ಅವರ ಚಿಂತನ – ಮಂಥನಗಳಿಂದ ಸಹ ವ್ಯಾಖ್ಯಾನ-ನವನೀತದ ಸೃಷ್ಟಿಯಾಗಬೇಕಿತ್ತು.

ನಿಜ. ಸನಾತನ ಧರ್ಮ ಮತ್ತು ಹಿಂದು ಸಮಾಜಗಳನ್ನು ಉಳಿಸಲು ಬೇಕಾಗಿರುವ ಚಿಂತನೆಯ ಒಂದು ಅಧಿಕೃತ ಅಧಿಕರಣವು ಅವಶ್ಯಕವೂ ಆಗಿತ್ತು. ಗುರೂಜಿ ಅವರ ಹಿಂದಿ ಭಾಷೆಯ ಉಪನ್ಯಾಸಗಳೂ ಸೇರಿದಂತೆ, ಅವರ ಅಮೂಲ್ಯ ಚಿಂತನೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಅಚಿಮತ್ತದ Bunch of Thoughts ಗ್ರಂಥವನ್ನು 1966ರಲ್ಲಿ ಹೊರತರಲಾಯಿತು. ಈ ಸಾಗರೋಪಮ ಸಾಹಿತ್ಯ–ಸಾಹಸದ ಹಿಂದೆ ಜ್ಞಾನಿ, ವಿದ್ವಾಂಸ, ಲೇಖಕ, ಅಂಕಣಕಾರ, ಚಿಂತಕ ಹೊ.ವೆ.ಶೇಷಾದ್ರಿ ಅವರ ಕಣಕಣ ಪರಿಶ್ರಮವಿತ್ತು. ಮುಂದೆ ಈ ಗ್ರಂಥವನ್ನು ಕನ್ನಡಕ್ಕೆ ತಂದದ್ದೂ (ಚಿಂತನಗಂಗಾ) ಅವರದ್ದೇ ಪರಿಶ್ರಮ-ಪರಿಪಾಕ. ಹತ್ತಾರು ಸಹಸ್ರ ವರ್ಷಗಳ ಅತ್ಯದ್ಭುತ ಧಾರ್ಮಿಕ ಪರಂಪರೆಯನ್ನು ಮತ್ತು ಅದನ್ನು ಉಳಿಸಿ ಬೆಳೆಸುವ ಚಿಂತನೆಗಳನ್ನು ಗ್ರಂಥರೂಪದಲ್ಲಿ ಹಿಡಿದಿಡುವುದು ಸಾಮಾನ್ಯ ಕೆಲಸವಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಸರಕಾರ್ಯವಾಹ ಸ್ಥಾನದವರೆಗಿನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಜೊತೆಜೊತೆಯಲ್ಲಿಯೇ ತಮ್ಮ ಬರಹಗಳಿಂದ, ಉಪನ್ಯಾಸಗಳಿಂದ ಹಿಂದು ಸಮಾಜಕ್ಕೆ ಮಾರ್ಗದರ್ಶನ ನೀಡಿದ ಶೇಷಾದ್ರಿ ಅವರದ್ದು ಅನುಪಮ ಸಾಧನೆ. ಆರು ದಶಕಗಳ ಹಿಂದಿನಿಂದಲೇ ಅವರ ಅಂಕಣಗಳನ್ನು, ಬರಹಗಳನ್ನು ಓದುತ್ತ ಬೆಳೆದ ನನಗೆ ಅವರೊಂದು ವಿಸ್ಮಯ. ಅವರ ಹರಿತವಾದ ಭಾಷೆ, ವ್ಯಂಗ್ಯ, ಅವರು ನೀಡುತ್ತಿದ್ದ ಉದಾಹರಣೆಗಳು, ಅವರ ಉಲ್ಲೇಖನಗಳು ಬಹಳ ಪರಿಣಾಮಕಾರಿಯಾಗಿರುತ್ತಿದ್ದವು. ಅವರ ಅಧ್ಯಯನ ವೈಶಾಲ್ಯವು ವಿಸ್ಮಿತ ಆಯಾಮದ್ದು.

ಅವರ ಹಿಂದೆಯೇ, ಅಂಕಣಗಳಿಗೆ ಅವರಂತೆ ಶೀರ್ಷಿಕೆಗಳನ್ನು ಕೊಟ್ಟವರೂ, ಅವರಂತೆ ಭಾಷೆಯನ್ನು ಬಳಸಿದವರು ಯಾರೂ ಇಲ್ಲ. ಅವರ ಮಾದರಿಗಳು:

"ಶ್ರದ್ಧಾಂಜಲಿಯೇ, ಶಿಲಾಂಜಲಿಯೇ"

"ಬರಲಿದ್ದ ಸಾಮಾನ್ಯರ ಯುಗ"

"ಅಮ್ಮಾ, ಬಾಗಿಲು ತೆಗಿ"

"ಈ ಪರಿಯ ಮಹಿಮೆ ಇನ್ಯಾವ ಶಬ್ದದೊಳು ಕಾಣೆ"

"ಅದ್ದರ ಆಸೆಗೆ ಗೊಬ್ಬರ ಕೊಂಡರು"

ಅದು 1960ರ ದಶಕ ಎಂಬುದನ್ನು ಕಣ್ಮುಂದೆ ತಂದುಕೊಂಡಾಗ ಶೇಷಾದ್ರಿಗಳ ಕಥನ-ವೈಶಿಷ್ಟ್ಯದ ಅನುಭೂತಿ ನಮ್ಮದಾಗುತ್ತದೆ. ದೇಶವಿಭಜನೆಯ ನಿಜ-ಇತಿಹಾಸವೇ ಅವರಿಗೆ ಮರೆಯಾಗಿ ಹೋಗಿದ್ದಾಗ ಅವರು ಬರೆದ ಆ ಕಾಳರಾತ್ರಿಯ ಪ್ರಶ್ನೆ ಮತ್ತು ದೇಶವಿಭಜನೆಯ ದುರಂತ ಕಥೆ, ಇಂಗ್ಲಿಷಿನಲ್ಲಿ ಬರೆದ The Tragic Story of Partition ಗ್ರಂಥಗಳು ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಲ್ಲಣವನ್ನೇ ಹುಟ್ಟಿಸಿದವು. ಬಹಳ ದೊಡ್ಡ ಲೇಖಕರಾದ ಸೀತಾರಾಮ ಗೋಯಲ್, ಅರುಣ್ ಶೌರಿ ಮುಂತಾದವರು ಸಹ ಈ ಮಹತ್ವ ಕೃತಿಗಳ ಉಲ್ಲೇಖವನ್ನು ಮಾಡಿದ್ದಾರೆ.

1975ರ ಕರಾಳ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ, ಅನ್ಯಾಯಗಳ ಬಗೆಗೆ ಅವರು ಸಂಪಾದಿಸಿದ ಭುಗಿಲು (ಪ್ರಕಟಣೆ 1977) ಅಪೂರ್ವವಾದ ಸಾಕ್ಷ್ಯಾಧಾರಗಳ ದಾಖಲೆಯ ಕೃತಿಯೇ ಆಗಿದೆ. ಇಂಗ್ಲಿಷ್, ಹಿಂದೀ ಮತ್ತಿತರ ಭಾಷೆಗಳಲ್ಲಿ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ ಅನಂತರ ನೂರಾರು ಗ್ರಂಥಗಳು ಪ್ರಕಟವಾದವು. ಭುಗಿಲು ಕರ್ನಾಟಕದಲ್ಲಿ, ಕನ್ನಡದಲ್ಲಿ ಕಾರಣಾಂತರದಿಂದ ಏಕಮೇವ ಆಗಿಹೋಯಿತು.

ಅಸ್ಸಾಂ ಎಲ್ಲಿದೆ ಎಂಬುದೇ ಬಹಳ ಜನರಿಗೆ ಗೊತ್ತಿರದಿದ್ದ, ಎನ್ನುವ ಕಾಲಘಟ್ಟದಲ್ಲಿ ಶೇಷಾದ್ರಿ ಅವರ ಅಸ್ಸಾಮಿನ ಆರ್ತಸ್ವರ (1980) ಅಲ್ಲಿನ ಬಹು-ಆಯಾಮದ ಸಮಸ್ಯೆಗಳ ಚಿತ್ರಣ ನೀಡಿತು. ಮತಾಂತರವೆಂದರೆ ರಾಷ್ಟ್ರಾಂತರ ಎಂದು ಎಚ್ಚರಿಸಿದ ಅವರ ಮೀನಾಕ್ಷಿಪುರಂ, ಒಂದು ಎಚ್ಚರಿಕೆ (1981) ಆ ಕುರಿತ ಒಂದು ಸಾಮಾಜಿಕ – ಐತಿಹಾಸಿಕ ಪುರಾವೆಯೂ ಆಗಿದೆ.

ಶೇಷಾದ್ರಿಗಳ ನಿಧನಾನಂತರ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ



ರಚಿಸುವಾಗ ನನಗೆ ಅಚ್ಚರಿಯ ಅಪೂರ್ವಾನುಭವ. ಅಂತಹ ಧ್ಯೇಯಸಮರ್ಪಿತ ಮಹಾಚೇತನಗಳ ಜೀವನದಲ್ಲಿ ಸಾಮಾನ್ಯರ ಜೀವನದಲ್ಲಿ ನಾವು ಕಾಣುವ ಸಾಮಾನ್ಯ ಅನುಭವಗಳೇ ಇರುವುದಿಲ್ಲ. ಎಲ್ಲವೂ ಸಂಘ, ಹಿಂದು ಸಮಾಜ, ಸನಾತನ ಧರ್ಮ, ರಾಷ್ಟ್ರಜೀವನ, ಇತ್ಯಾದಿ ಧ್ಯೇಯಗಳ ಪರಿಧಿಯಲ್ಲಿಯೇ ಇರುತ್ತವೆ (ಎಷ್ಟೆಂದರೆ, ನನ್ನ ಕಿಡಿಗೇಡಿ ಬಾಲ್ಯಸ್ನೇಹಿತರು ಧ್ಯೇಯಯಾತ್ರಿ ಕೃತಿಯಲ್ಲಿ ಶೇಷಾದ್ರಿ ಅವರ ವಿಷಯವನ್ನೇ ಏಕೆ ಬರೆದಿಲ್ಲ ಎಂದು ಹಾಸ್ಯ ಮಾಡುತ್ತಿದ್ದರು).

★★★★★★

ಸುಮಾರು ಮೂರು ದಶಕಗಳ ಹಿಂದೆ ಶೇಷಾದ್ರಿ ಅವರು ಶಿವಮೊಗ್ಗಕ್ಕೆ ಬಂದಿದ್ದರು. ವೃತ್ತಿನಿಮಿತ್ತ ನಾನಾಗ ಶಿವಮೊಗ್ಗದಲ್ಲಿದ್ದೆ ಮತ್ತು ಸಂಘದ ಸಂಪರ್ಕ ತುಂಬಾ ಕಡಿಮೆಯಾಗಿಹೋಗಿತ್ತು. 1974ರ ದಾಂಡೇಲಿಯ ಸಂಘ ಶಿಕ್ಷಾ ವರ್ಗದ ಅನಂತರ ಅವರೊಂದಿಗೆ ವಿಸ್ತೃತವಾದ ಚರ್ಚೆ ಸಾಧ್ಯವಾಗಿರಲಿಲ್ಲ. ಆದರೂ, ಶಿವಮೊಗ್ಗದಲ್ಲಿ ಅವರೊಂದಿಗೆ ಒಂದಿಷ್ಟು ಮಾತನಾಡುವ ಮತ್ತು ಪ್ರಶ್ನೆ ಕೇಳುವ ಅವಕಾಶ ಸಿಕ್ಕಿತ್ತು.

ಜಾತಿ, ಉಪಜಾತಿ, ಜಾತೀಯತೆ, ಜಾತಿವಿನಾಶ ಆಂದೋಲನ, ಮತಾಂತರ, ಮರಳಿ ಮಾತೃಧರ್ಮಕ್ಕೆ ಅಭಿಯಾನ, ಮತೀಯ ಆಕ್ರಮಣಕಾರೀ ದುಃಶಕ್ತಿಗಳು ದೇಶಗಳ ಜನಸಂಖ್ಯಾ ಸಮತೋಲನವನ್ನೇ (Demographic Imbalance) ತಮ್ಮ ಜನಸಂಖ್ಯಾಸ್ಫೋಟದಿಂದ ನಾಶಮಾಡಿಬಿಡುವುದು, ಮುಸ್ಲಿಮರಾಗಲೀ – ಕ್ರೈಸ್ತರಾಗಲೀ ಮರಳಿ ಮಾತೃಧರ್ಮಕ್ಕೆ ಬಂದಾಗ ಯಾವ ಸಮುದಾಯಕ್ಕೆ ಸೇರಬೇಕಾಗುತ್ತದೆ, ಅವರದ್ದೇ ಪ್ರತ್ಯೇಕ ಸಮುದಾಯವಾಗಬೇಕೇ...... ಸಮಸ್ಯೆಗಳು – ಪ್ರಶ್ನೆಗಳು..... ಒಂದೇ ಎರಡೇ.... ಸಿಕ್ಕ ಅವಕಾಶದಲ್ಲಿಯೇ ಪ್ರಶ್ನಿಸಿದೆ. ಅವರ ಉತ್ತರಗಳು ದಶಕಗಳಿಂದ ಎದೆಯಲ್ಲಿ – ತಲೆಯಲ್ಲಿ ಅನುರಣಿಸುತ್ತಿವೆ.

"... ನೋಡಪ್ಪಾ, ಮಂಜೂ. ನಮ್ಮ ಹಿಂದು ಸಮಾಜದಲ್ಲಿ ಜಾತಿಗಳು ವಾಸ್ತವ. ಜಾತಿಗಳು ಹೋಗುವುದಿಲ್ಲ. ನಮಗೆ ಬೇಕಾದುದು ಜಾತಿಜಾತಿಗಳ ನಡುವಿನ ಸಾಮರಸ್ಯ. ಸಾಮರಸ್ಯಕ್ಕೇ ಸಂಘವೂ ಒತ್ತು ಕೊಡುತ್ತಿದೆ. ಸಾಮರಸ್ಯವೇ ಪರಿಹಾರ ಕಣಪ್ಪಾ.

ಹಿಂದಿನ ಅನೇಕ ಶತಮಾನಗಳಲ್ಲಿ, ದೇಶಾದ್ಯಂತ ತುಂಬ ತುಂಬ ಮತಾಂತರ ಆಗಿದೆ. ಬಹುತೇಕ ಸಮುದಾಯಗಳು (ಕ್ರೈಸ್ತರಾದರೂ ಮುಸ್ಲಿಮರಾದರೂ) ಅಲ್ಲಿಯೂ ಉಪ-ಸಮುದಾಯಗಳಾಗಿಯೇ ಮುಂದುವರಿದಿವೆ. ಮಾತೃಧರ್ಮಕ್ಕೆ ಮರಳಿದ ಮೇಲೆ ಆಯಾ ಸಮುದಾಯಗಳು ಹಿಂದು ಸಮಾಜದ ಅದೇ ಜಾತಿಗೇ ಸೇರಬೇಕಾಗುತ್ತದೆ. ಬೇರೆ ಪರಿಹಾರ, ಇಲ್ಲಪ್ಪಾ...." ಎಂದರು.

ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು, ಒಪ್ಪಿಕೊಳ್ಳಲು ಸಾಕಷ್ಟು ಕಾಲವೇ ಬೇಕಾಯಿತು. ಇಡೀ ದೇಶದಲ್ಲಿ ಜಾತಿ, ಉಪಜಾತಿ, ಕೋಮುಗಳ ನಡುವಿನ ನಿಲ್ಲದ ರಾಜಕೀಯವು ಅನೇಕ ದಶಕಗಳಿಂದ ದೊಡ್ಡ ಸಮಸ್ಯೆಯೇ ಆಗಿದೆ. ಮೀಸಲಾತಿಯು ಇದಕ್ಕೆ ಇನ್ನೊಂದೇ ಆಯಾಮ ನೀಡಿದೆ. ಅನೇಕ ಚಿಂತನಧಾರೆಗಳ ಪ್ರಭೃತಿಗಳು ದೊಡ್ಡ ದೊಡ್ಡ ಮಾತುಗಳನ್ನು ಆಡಿದರೂ, ವಾಸ್ತವದಲ್ಲಿ ಸಾಮರಸ್ಯದ ಪರಿಕಲ್ಪನೆಗೆ ಒತ್ತು ಕೊಡುವ ಮಾತೇ ಆಡುವುದಿಲ್ಲ.

ವಾಸ್ತವವಾಗಿ, ಶೇಷಾದ್ರಿ ಅವರು ಹೇಳಿದ ಪರಿಹಾರಕ್ಕಿಂತ ಉತ್ತಮವಾದುದು ಈವರೆಗೆ ಯಾವುದೂ ಕಾಣಲಿಲ್ಲ. ಈ ದಿಸೆಯಲ್ಲಿ ಜಾತಿ – ಉಪಜಾತಿ – ಉಪಉಪಜಾತಿಗಳಲ್ಲಿ ಮುಳುಗಿಹೋಗಿರುವ ನಮ್ಮ ಮಠಾಧೀಶರು, ಸ್ವಾಮಿಗಳು ಈಗಲಾದರೂ ಎಚ್ಚೆತ್ತುಕೊಂಡು ಇಸ್ಲಾಂ ಮತ್ತು ಕ್ರೈಸ್ತ ಮತಗಳಿಗೆ ಹೋಗಿರುವ ಸಮುದಾಯಗಳನ್ನು ಮರಳಿ ಮಾತೃಧರ್ಮಕ್ಕೆ ಕರೆದುಕೊಂಡು ಬರುವ ಮೂಲಕ ಅರ್ಥಪೂರ್ಣವಾದ ಸೇವೆ ಮಾಡಬಹುದು. ನನ್ನ ಅನೇಕ ಬರಹಗಳಲ್ಲಿ ಮತ್ತು ಮಾತುಗಳಲ್ಲಿ ಈ ಸೈದ್ಧಾಂತಿಕ ಅಂಶವನ್ನೇ ಪ್ರತಿಪಾದಿಸಿದ್ದೇನೆ.

ಹಿಂದು ಧರ್ಮ, ಹಿಂದು ಸಂಘಟನೆ, ಹಿಂದು ಸಮಾಜಗಳಿಗಾಗಿಯೇ ಸಮರ್ಪಿತರಾಗಿದ್ದ ಶೇಷಾದ್ರಿ ಅವರು ನಮ್ಮ ದೇಶ ಕಂಡ ಬಹಳ ದೊಡ್ಡ ಚಿಂತಕರು, ಬರಹಗಾರರು. ಕಮ್ಯೂನಿಸಂ, ಇಸ್ಲಾಂ ಮತ್ತು ಕ್ರೈಸ್ತ ಮತಗಳ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಅಪಾಯಗಳ ಬಗೆಗೆ ಬಹುಮೂಲ್ಯ ಚಿಂತನೆಗಳನ್ನು ಅವರು ನೀಡಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲೂ ಲಭ್ಯವಿರುವ ಅವರ ಕೃತಿಗಳು ಭಾರತವನ್ನು ಮತ್ತು ಸನಾತನ ಧರ್ಮವನ್ನು ಉಳಿಸುವೆಡೆಗೆ ಅಪೂರ್ವ ಕೊಡುಗೆಗಳಾಗಿವೆ. ಅವರ ಚಿಂತನೆಗಳ ಅಧ್ಯಯನ ಮತ್ತು ಅನುಷ್ಠಾನಗಳು ಅವರಿಗೆ ನಾವು ನೀಡಬಹುದಾದ ನೈಜ ಶ್ರದ್ಧಾಂಜಲಿ, ಸ್ಮರಣಾಂಜಲಿ.

ವಿಶೇಷವೆಂದರೆ, ಯಾವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಶೇಷಾದ್ರಿ ಅವರು ತಮ್ಮ ಪೂರ್ಣ ಜೀವನವನ್ನು ಹಿಂದು ಸಮಾಜಕ್ಕಾಗಿ ಮುಡುಪಿಟ್ಟರೋ, ಈಗ ಆ ಸಂಘದ ಶತಮಾನೋತ್ಸವವೂ ಹೌದು. ಶೇಷಾದ್ರಿ ಅವರು ಹುಟ್ಟಿದ್ದು 26ನೆಯ ಮೇ 1926ರಂದು. ಇದೀಗ ಅವರ ಶತಮಾನೋತ್ಸವ ವರ್ಷ ಪೂರ್ಣಗೊಂಡಿದೆ.



ಶೇಷಾದ್ರಿ ಅವರ ಪುಸ್ತಕಗಳು

1. ಯುಗಾವತಾರ (1967)
2. ತಾಯಿ ಕಾದಿಹಳು (1969)
3. ಕ್ರಾಂತಿಯಲ್ಲ ಭ್ರಾಂತಿ (1970)
4. ಅಮ್ಮಾ ಬಾಗಿಲು ತೆಗಿ (1970)
5. ಶಿವಾಜಿ (1972)
6. ಕೋರಿಕೆ (1973)
7. ಗುರು ಗೋವಿಂದ ಸಿಂಹ (1974)
8. ಭುಗಿಲು (1977)
9. ಅಸ್ಸಾಮಿನ ಆರ್ತಸ್ವರ (1980)
10. ಮೀನಾಕ್ಷಿಪುರಂ – ಒಂದು ಎಚ್ಚರಿಕೆ (1981)
11. ತೋರ್ ಬೆರಳು (1981)
12. ಆ ಕಾಳರಾತ್ರಿಯ ಪ್ರಶ್ನೆ (1981)
13. ಆಧುನಿಕ ಮಾನವ ಜೀವನದ ಕುರುಕ್ಷೇತ್ರದಲ್ಲಿ ಪಾರ್ಥಸಾರಥಿ ಯಾರು? (1982)
14. ಮೃಗಜಲ, ನಿಜಜಲ (1983)
15. ಭಾರತದಲ್ಲಿ ಕ್ರೈಸ್ತ ಚಟುವಟಿಕೆಗಳು (1985)
16. ಪರಿಪ್ರಶ್ನೆ (1986)
17. ಕೃತಿರೂಪ ಸಂಘದರ್ಶನ (1990)
18. ಇದೊಂದೇ ದಾರಿ (1995)
19. ವಿಕೃತಿಯಿಂದ ಸಂಸ್ಕೃತಿಯೆಡೆಗೆ (1995)
20. ದೇಶ ವಿಭಜನೆಯ ದುರಂತಕಥೆ (1995)
21. ನವನಿರ್ಮಾಣದ ಒಳಪದರಗಳು (1996)
22. ಚರೈವೇತಿ (1996)
23. ಕೈದೀವಿಗೆ (1996)
24. ದಿಶಾಬೋಧ (1998)
25. ನ್ಯಾಯಿಕ ಆಯೋಗಗಳ ಕಣ್ಣಲ್ಲಿ ಮತಾಂತರ (1999)
26. ಸಮರಸತೆಯ ಸವಾಲು (1999)
27. ಸಮಾಜಯೋಗ (2001)
28. ಹಿಂದು ಸಮಾಜಕ್ಕೆ ಸವಾಲುಗಳು– ಪರಿಹಾರಗಳು (2002)
29. ಜಾಗೃತಾತ್ಮರಿಗಾಗಿ (2004)
30. ಶ್ರೀ ಗುರೂಜಿ (2005)
31. Dr Hegdewar - Epoch Maker (1981)
32. Christian Missions in the eyes of Gandhiji (1981)
33. Warning of Meenakshipuram (1981)
34. The Tragic Story of Partition (1982)
35. RSS - A Vision in Action (1988)
36. Hindus abroad - The Dilemma: Dollar or Dharma (1990)
37. Universal Spirit of Hindu Nationalism (1991)
38. The Way (1991)
39. Implications of Christian Conversions (1999)
40. Yoga - A Science Imperative (2000)
41. Sri Guruji (2005)





ವೈಶ್ವಿಕ ವಿಚಾರಗಳ ಪ್ರತಿಪಾದಕ

▸ **ರಾಜೇಶ್ ಪದ್ಮಾರ್, ಪ್ರಚಾರ ಪ್ರಮುಖ್, ರಾಷ್ಟ್ರೀಯ ಸ್ವಯಂಸೇವಕ ಸಂಘ ದಕ್ಷಿಣ ಪ್ರಾಂತ**



ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ.ವೆ. ಶೇಷಾದ್ರಿ ಅವರ ನೂರನೆಯ ಜಯಂತಿಯ (26.5.1926–14.8.2005) ವರ್ಷ.

1926 ರ ಮೇ 26ರಂದು ಬೆಂಗಳೂರಿನಲ್ಲಿ ಜನಿಸಿದ ಹೊ. ವೆ. ಶೇಷಾದ್ರಿ ಅವರು 1942ರಲ್ಲಿ ಸಂಘದ ಸಂಪರ್ಕಕ್ಕೆ ಬಂದರು. ತಮ್ಮ ಎಂ.ಎಸ್ಸಿ ರಸಾಯನಶಾಸ್ತ್ರ ಸ್ನಾತಕೋತ್ತರ ಶಿಕ್ಷಣದ ಬಳಿಕ 1946ರಲ್ಲಿ ಸಂಘದ ಪ್ರಚಾರಕರಾದರು. ಕರ್ನಾಟಕದ ಮೊದಲ ತಂಡದ ಮೂವರು ಪ್ರಚಾರಕರಾದ ಕೃ. ಸೂರ್ಯನಾರಾಯಣ ರಾವ್, ಚಂಪಕನಾಥ್ ಜೊತೆಗೆ ಪ್ರಚಾರಕರಾದರು.

1947ರಲ್ಲಿ ಕೋಲಾರ ಜಿಲ್ಲಾ ಪ್ರಚಾರಕ್, 1948ರಲ್ಲಿ ಸಂಘದ ಮೇಲಿನ ನಿಷೇಧದ ವೇಳೆ ಬಂಧನ, 1953ರಲ್ಲಿ ಪ್ರಾಂತಕಾರ್ಯವಾಹ, 1953–1956 ಮಂಗಳೂರು ವಿಭಾಗ ಪ್ರಚಾರಕ್ ಆಗಿ ಹೆಚ್ಚುವರಿ ಹೊಣೆಗಾರಿಕೆ, 1960ರಲ್ಲಿ ಕರ್ನಾಟಕ ಪ್ರಾಂತ ಪ್ರಚಾರಕ್, 1980ರಲ್ಲಿ ಸಹಕ್ಷೇತ್ರ ಪ್ರಚಾರಕ್, 1981ರಲ್ಲಿ ದಕ್ಷಿಣ ಕ್ಷೇತ್ರ ಪ್ರಚಾರಕ್, 1983ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್, 1984ರಲ್ಲಿ ಸಹಸರಕಾರ್ಯವಾಹ, 1987–2000ರವರೆಗೆ ಸರಕಾರ್ಯವಾಹ, 2000ರಲ್ಲಿ ಸಹಸರಕಾರ್ಯವಾಹ, 2003ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್ ಜವಾಬ್ದಾರಿ ನಿರ್ವಹಿಸಿದರು.

2005ರ ಆಗಸ್ಟ್ 14 ರಂದು ಸಂಜೆ 6.57 ಕ್ಕೆ ಇಹಲೋಕದ ಯಾತ್ರೆ ಮುಗಿಸಿದರು. "ಶೇಷಾದ್ರಿ ಅವರದು ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವ. ಅವರು ವೈಶ್ವಿಕ ವಿಚಾರಗಳ ಪ್ರತಿಪಾದಕ" ಎಂದಿದ್ದರು ಐದನೇ ಸರಸಂಘಚಾಲಕರಾಗಿದ್ದ ಕು.ಸೀ. ಸುದರ್ಶನ್ ಜೀ. ಕನ್ನಡದಲ್ಲಿ 30, ಇಂಗ್ಲಿಷ್‌ನಲ್ಲಿ 11 ಸೇರಿ ಒಟ್ಟು 41 ಪುಸ್ತಕಗಳ ಕರ್ತೃ. ಉತ್ಥಾನ, ವಿಕ್ರಮ, ಆರ್ಗನೈಸರ್ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ನೂರಾರು ಲೇಖನಗಳು, ಅಂಕಣ ಬರಹಗಳು, ಪ್ರೇರಣಾದಾಯಿ ಪತ್ರಸಂದೇಶಗಳ ಮೂಲಕ ನಿರಂತರ ಬರವಣಿಗೆಯ ಕಾರ್ಯ ಹೊ.ವೆ. ಶೇಷಾದ್ರಿ ಅವರದು.

1982ರಲ್ಲಿ ಹೊ.ವೆ. ಶೇಷಾದ್ರಿ ಅವರ ತೋರ್ ಬೆರಳ್ ಕೃತಿಗೆ ಕರ್ನಾಟಕ ಸರ್ಕಾರದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿತು. ವೈಚಾರಿಕ ವಲಯದಲ್ಲಿ ಬಹುಪ್ರಶಂಸೆಗೊಳಗಾದ ಪುಸ್ತಕಗಳ ಪೈಕಿ ಒಂದು. ತಮ್ಮ ಬಿಡುವಿಲ್ಲದ ಪ್ರವಾಸದ ಮಧ್ಯೆಯೂ ಅವಿರತ ಬರವಣಿಗೆಯ ಮೂಲಕ ಸ್ವಯಂಸೇವಕರ ವೈಚಾರಿಕ ಹಂದರವನ್ನು ವಿಸ್ತರಿಸಿ, ಗಟ್ಟಿಗೊಳಿಸಿದವರು. ಸಮಾಜದೊಂದಿಗೆ ಸಂಘದ ಆಶಯಗಳನ್ನು ಹಂಚಿದವರು.



ಕಿರುಸುದ್ದಿ

ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ಕುಟುಂಬ ಸಮೇತರಾಗಿ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ



ಧರ್ಮಸ್ಥಳ: ಕರ್ನಾಟಕ ಸರ್ಕಾರದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಕುಟುಂಬ ಸಮೇತರಾಗಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಚಿವರು ಹಾಗೂ ಅವರ ಕುಟುಂಬದ ಸದಸ್ಯರು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಅಪಘಾತದಲ್ಲಿ ಗಾಯಗೊಂಡು 6 ತಿಂಗಳ ಬಳಿಕ ಯುವತಿ ಮೃತ್ಯು

ಕಿನ್ನಿಗೋಳಿ : ಅಪಘಾತವೊಂದರಲ್ಲಿ ತಲೆಗೆ ಗಾಯವಾಗಿ ರು ತಿಂಗಳುಗಳ ಕಾಲ ಕೋಮಾ ಸ್ಥಿತಿಯಲ್ಲಿದ್ದ ಪ್ರತಿಭಾನ್ವಿತ ಕಲಾವಿದೆ, ಪುನರೂರು ನಿವಾಸಿ, ಶ್ರೀಲತಾ ತಂತ್ರಿ (22) ಭಾನುವಾರ ಇಹಲೋಕ ತ್ಯಜಿಸಿದ್ದಾರೆ.



ಕಟೀಲು, ಮೂಡುಬಿದ್ರೆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿ, ಉದ್ಯೋಗಕ್ಕಾಗಿ 2025ರ ಜುಲೈನಲ್ಲಿ ದುಬೈಗೆ ಹೋಗಿದ್ದ ಶ್ರೀಲತಾ ತಂತ್ರಿ ಅಲ್ಲಿ ನವೆಂಬರ್‌ನಲ್ಲಿ ನಡೆದ ವಾಹನ ಅಪಘಾತದಲ್ಲಿ ತಲೆಗೆ ಗಾಯವಾಗಿ ಕೋಮಾ ಸ್ಥಿತಿಯಲ್ಲಿದ್ದರು. ಕಂಪನಿಯವರೇ ಚಿಕಿತ್ಸಾ ವೆಚ್ಚವನ್ನು ನೋಡಿಕೊಂಡಿದ್ದು, ಪರಿಸ್ಥಿತಿ ಸುಧಾರಣೆ ಕಾಣದೆ, ಮೂರು ದಿನಗಳ ಹಿಂದೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಕರೆತರಲಾಗಿತ್ತು. ಮೃತರು ತಾಯಿ ಮತ್ತು ಅಕ್ಕನನ್ನು ಅಗಲಿದ್ದಾರೆ. ಶಾಲಾ-ಕಾಲೇಜು ದಿನಗಳಲ್ಲಿ ನೃತ್ಯಗಾರ್ತಿಯಾಗಿ, ರಾಜ್ಯಮಟ್ಟದ ಕ್ರೀಡಾಪಟುವಾಗಿ, ಕಲಿತ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯುತ್ತಮ ವಿದ್ಯಾರ್ಥಿನಿ ಎಂದು ಬಹುಮಾನಿತೆಯಾಗಿದ್ದರು.

ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಏಳೂ ಮೇಳಗಳ ತಿರುಗಾಟಕ್ಕೆ ತೆರೆ

ರಥಬೀದಿಯಲ್ಲಿ ಉತ್ಸವದ ಉತ್ಸಾಹ!





ಕಿನ್ನಿಗೋಳಿ: ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಏಳೂ ಮೇಳಗಳ ತಿರುಗಾಟ ಮಂಗಳವಾರ ಸಂಪನ್ನಗೊಂಡಿತು.

ಸಂಜೆ 6 ಗಂಟೆಗೆ ದೇವರ ಚೌಕಿ ಪೂಜೆ ನಡೆದು ಯಕ್ಷಗಾನದ ಪೂರ್ವರಂಗವನ್ನು ಏಳೂ ಮೇಳಗಳ ಕಲಾವಿದರು ಪ್ರದರ್ಶಿಸಿದರು. ದೇವರು ರಂಗಸ್ಥಳಕ್ಕೆ ಬಂದಾಗ ಧನ್ಯರಾದ ಭಕ್ತಸಮೂಹ ಕಟೀಲು ರಥಬೀದಿಯಲ್ಲಿ ಉತ್ಸವದ ವಾತಾವರಣವನ್ನು ಸೃಷ್ಟಿಸಿತು.

ಏಳೂ ಮೇಳಗಳ ಕಲಾವಿದರು ಸಪ್ತ ಕಲ್ಯಾಣವನ್ನು ಪ್ರದರ್ಶಿಸಿದರು. ಶಶಿ ಪ್ರಭೆ, ದ್ರೌಪದಿ, ಸುಭದ್ರೆ, ಸ್ವಯಂ ಪ್ರಭೆ, ಶಿವಪ್ರಭೆ, ರತಿ ಹಾಗೂ ಪದ್ಮಾವತಿ ಪ್ರಸಂಗಗಳನ್ನು ಪ್ರದರ್ಶಿಸಿದ ಕಲಾವಿದರು ಬುಧವಾರ ಬೆಳಗ್ಗೆ ಮಂಗಳದ ಬಳಿಕ ದೇವರ ಎದುರು ಗೆಜ್ಜೆ ಬಿಚ್ಚಿದರು.

ಕಟೀಲಿನ ರಥಬೀದಿಯಲ್ಲಿ ಏಳೂ ಮೇಳಗಳ ದೇವರ ಪ್ರಸಾದವನ್ನು ಸಹಸ್ರಾರು ಕಲಾಭಿಮಾನಿಗಳು ಸ್ವೀಕರಿಸಿ ಧನ್ಯರಾದರು. ಮುಂದಿನ ತಿರುಗಾಟದ ಆರಂಭ ಡಿಸೆಂಬರ್ 3 ರಂದು ನಡೆಯಲಿದೆ. ಈ ಬಾರಿ ಏಳನೆಯ ಮೇಳದ ಉದ್ಘಾಟನೆಯೊಂದಿಗೆ ಕಟೀಲು ಮೇಳಗಳು ತಿರುಗಾಟ ಆರಂಭಿಸಿದ್ದು 720 ದೇವಿ ಮಹಾತ್ಮೆ ಪ್ರಸಂಗವನ್ನು ಪ್ರದರ್ಶಿಸಿವೆ.

ಕಟೀಲು ದೇಗುಲದ ಪರಿಸರದಲ್ಲಿ ಹೆಚ್ಚು ಸೇವೆಯಾಟಗಳು ನಡೆದಿದ್ದು ಹೊಸ ಪ್ರಸಂಗಗಳು ಹೆಚ್ಚು ಪ್ರದರ್ಶಿತವಾಗಿವೆ.

ಕಟೀಲು ಮೇಳಗಳು ಒಂದು ರೀತಿಯಲ್ಲಿ ಹೊಸಬರಿಗೆ ಕಲಿಕಾ ಕೇಂದ್ರಗಳೂ ಹೌದು. ಇಪ್ಪತ್ತಕ್ಕೂ ಹೆಚ್ಚು ಮಕ್ಕಳು ಹಿಮ್ಮೇಳ ಮುಮ್ಮೇಳಗಳಲ್ಲಿ ಸೇವೆ ನೀಡಿದ್ದಾರೆ. ಐನೂರಕ್ಕೂ ಹೆಚ್ಚು ಸೇವೆಯಾಟಗಳು ಯುಟ್ಯೂಬ್ ಗಳಲ್ಲಿ ಪ್ರದರ್ಶಿತವಾಗಿವೆ. ಪರಿಣಾಮ ದಿನಂಪ್ರತಿ ಸಾವಿರಾರು ಮಂದಿ ದೇಶ ವಿದೇಶಗಳಲ್ಲೂ ಯಕ್ಷಗಾನ ವೀಕ್ಷಿಸಿದ್ದಾರೆ.

ಕಟೀಲು ಮೇಳಗಳ ಕಲಾವಿದರಿಗೆ ಚಟುವಟಿಕೆಗಳು ಮಳೆಗಾಲದಲ್ಲೂ ನಾನಾ ರೀತಿಯಲ್ಲಿ ಮುಂದುವರಿಯಲಿವೆ. ಆಸಕ್ತ ಕಲಾವಿದರಿಗೆ ತಾಳಮದ್ದಲೆ ಸಪ್ತಾಹ ಜೂನ್ 8ರಿಂದ ಕಟೀಲಿನಲ್ಲಿ ನಡೆಯಲಿದೆ. ಅಭ್ಯಾಸ ಕಾರ್ಯಾಗಾರಗಳು ಕಳೆದ ವರ್ಷದಂತೆ ಈ ವರ್ಷವೂ ನಡೆಯಲಿದೆ.

ಕಟೀಲಿನ ಸೇವೆಗಳಲ್ಲಿ ಈ ವರ್ಷ ಪಟಾಕಿ ಸಿಡಿಸುವುದು ದೇವರು ರಂಗಸ್ಥಳಕ್ಕೆ ಬರುವಲ್ಲಿವರೆಗೆ ಮಾತ್ರ ಎಂದು ನಿಯಮ ಮಾಡಿದ್ದು ಸಾಧ್ಯವಾದಷ್ಟರ ಮಟ್ಟಿಗೆ ಜಾರಿಗೆ ಬಂದಿದೆ ಎಂದು ಕಲಾವಿದರ ಅಭಿಪ್ರಾಯ. ಅನ್ನ ಪ್ರಸಾದ ಇತ್ಯಾದಿ ಸಂದರ್ಭ ಏಕ ಬಳಕೆಯ ಪ್ಲಾಸ್ಟಿಕ್ ಕಡಿಮೆ ಮಾಡಬೇಕೆಂಬ ದೇವಸ್ಥಾನದ ವಿನಂತಿಗೆ ಸಾಕಷ್ಟು ಭಕ್ತರು ಸ್ಪಂದಿಸಿದ್ದಾರೆ.

ವಾದ್ಯ ಬ್ಯಾಂಡ್ ಇಲ್ಲದೆ ಆಟವನ್ನು ಸಾಂಪ್ರದಾಯಿಕವಾಗಿ ನಡೆಸಲು ಅನೇಕ ಭಕ್ತರು ಮನಸ್ಸು ಮಾಡಿದ್ದಾರೆ. ಹೀಗೆ ಕಲೆಯ ಆಶಯ ಹರಕೆ ಸೇವೆಯಾಟ ವೈಭವದ ಹೆಸರಿನಲ್ಲಿ ಹಾದಿ ತಪ್ಪದಂತೆ ದೇಗುಲ ಹಾಗೂ ಮೇಳದ ಆಡಳಿತ ತೆಗೆದುಕೊಂಡಿರುವ ನಿರ್ಧಾರಗಳಿಗೆ ಸಾಕಷ್ಟು ಭಕ್ತರು ಸ್ಪಂದಿಸಿದ್ದಾರೆ.

ಒಂದು ಸಾವಿರದಷ್ಟು ಸೇವೆಯಾಟಗಳು ಬುಕ್ಕಿಂಗ್

ಪ್ರತಿ ಯಕ್ಷಗಾನ ಸೇವೆಯಾಟಕ್ಕೆ ಕನಿಷ್ಠ ಒಂದು ಲಕ್ಷ ರೂಪಾಯಿ ವೆಚ್ಚ ಆಗುತ್ತದೆ. ಭಕ್ತರು ತಮ್ಮ ಮನೆಗೆ ಕಟೀಲಮ್ಮನೆ ಬರುತ್ತಾಳೆ ಎಂಬ ನಂಬಿಕೆಯಿಂದ ಸೇವೆಯಾಟವನ್ನು ಅತ್ಯಂತ ಸಂಭ್ರಮದಿಂದ ಮಾಡುತ್ತಾರೆ. ಊಟ ಇತ್ಯಾದಿ ಒಂದಿಷ್ಟು ಗೌಜಿ ಮಾಡುವುದ ರಿಂದ ಐದಾರು ಲಕ್ಷ ರೂಪಾಯಿ ಖರ್ಚು ಮಾಡಿದವರೂ ಇದ್ದಾರೆ. ವರ್ಷಂಪ್ರತಿ ಸೇವೆಯಾಟ ಆಡಿಸುವ ಭಕ್ತರೂ ನೂರಕ್ಕೂ ಮಿಕ್ಕಿ ಇದ್ದಾರೆ. ನಾಲ್ಕು ನೂರರಷ್ಟು ಕಟೀಲು ಮೇಳಗಳ ಆಟ ಆಡಿಸುವ ಹತ್ತು ಸಮಸ್ತರ ಸಮಿತಿಗಳಿವೆ. ಹೀಗೆ 500ಕ್ಕಿಂತಲೂ ಹೆಚ್ಚು ಖಾಯಂ ಸೇವೆಯಾಟಗಳು ಇವೆ. ಈ ವರ್ಷ ಒಂದು ಸಾವಿರದಷ್ಟು ಸೇವೆಯಾಟಗಳು ಬುಕ್ಕಿಂಗ್ ಆಗಿವೆ.

1323 ಸೇವೆಯಾಟ

ಮೇಳಗಳ ತಿರುಗಾಟ ಆರಂಭವಾದುದು ನವೆಂಬರ್ 16ಕ್ಕೆ. 189 ದಿನಗಳಲ್ಲಿ 1323 ಸೇವೆಯಾಟಗಳು. ಚರ್ಮುರಿ ಅಂಗಡಿ, ಕೇಟರಿಂಗ್, ಆಮಂತ್ರಣ ಪತ್ರಿಕೆ ಬೇನರ್ ಮುದ್ರಕರು, ಶಾಮಿಯಾನದವರು, ಹೂವಿನ ವ್ಯಾಪಾರಿಗಳು ಹೀಗೆ ನಾನಾ ವಿಧದ ವಹಿವಾಟು ಒಂದು ಯಕ್ಷಗಾನದ ನೆಪದಲ್ಲಿ ನಡೆದು 1ರಿಂದ 2 ಲಕ್ಷ ಹಣದ ವ್ಯವಹಾರ ಎಂದು ಲೆಕ್ಕ ಹಾಕಿದರೂ 25ರಿಂದ 35 ಕೋಟಿ ರೂಪಾಯಿ ವಹಿವಾಟು. 350ಕ್ಕೂ ಹೆಚ್ಚು ಕಲಾವಿದರು, ಕೆಲಸಗಾರರಿಗೆ ಉದ್ಯೋಗ ಜೊತೆಗೆ ಯಕ್ಷಗಾನ ಪ್ರದರ್ಶನದ ಮೂಲಕ ಸಂಸ್ಕೃತಿ ಪುರಾಣದ ತಿಳುವಳಿಕೆಯ ಪ್ರಚಾರ, ಕನ್ನಡದ ಕೆಲಸ ಹೀಗೆ ಕಟೀಲು ಮೇಳಗಳ ಕೊಡುಗೆ ದೊಡ್ಡದು.

ವಿವೇಕಾನಂದ ಕಾಲೇಜು | ದ್ವಿತೀಯ ಪಿಯುಸಿ ಪರೀಕ್ಷೆ-2 ರ ಫಲಿತಾಂಶ ಪ್ರಕಟ

ರಾಜ್ಯ ಮಟ್ಟದಲ್ಲಿ 6 ರ್‍ಯಾಂಕ್‌ಗಳು

ಪುತ್ತೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕಳೆದ ಮೇ ತಿಂಗಳಲ್ಲಿ ನಡೆಸಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2ರ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಯನ್ನು ಮಾಡಿರುತ್ತಾರೆ.



ವಿಜ್ಞಾನ ವಿಭಾಗದ ಅಭಿರಾಮ್ ಎ. ಭಟ್ 599 ಅಂಕಗಳೊಂದಿಗೆ ರಾಜ್ಯಕ್ಕೆ 2ನೇ ರ್‍ಯಾಂಕ್ (ಬಂಟ್ವಾಳ ತಾಲೂಕಿನ ವಸಂತ ಕುಮಾರ್ ಎನ್. ಹಾಗೂ ಸುಲೋಚನಾ ಕುಮಾರಿ ಬಿ.ಕೆ ದಂಪತಿ ಪುತ್ರ) ಪ್ರಾಪ್ತಿ ಆಳ್ವ 594 ಅಂಕಗಳೊಂದಿಗೆ ರಾಜ್ಯಕ್ಕೆ 7ನೇ ರ್‍ಯಾಂಕ್(ಬಂಟ್ವಾಳ ತಾಲೂಕಿನ ಸರಪಾಡಿಯ ಪ್ರವೀಣ ಆಳ್ವ ಹಾಗೂ ಸವಿತಾ ಆಳ್ವ ಪುತ್ರಿ) ಸಮೃದ್ಧಿ ಜೆ. ಶೆಟ್ಟಿ 593 ಅಂಕಗಳೊಂದಿಗೆ ರಾಜ್ಯಕ್ಕೆ 8ನೇ ರ್‍ಯಾಂಕ್ (ಪುತ್ತೂರು ತಾಲೂಕಿನ ಜಗದೀಶ್ ಶೆಟ್ಟಿ ಎನ್. ಹಾಗೂ ಹರಿಣಾಕ್ಷಿ ಜೆ. ಶೆಟ್ಟಿ ಪುತ್ರಿ) ಸನ್ನಿಧಿ ಕಲ್ಲೂರಾಯ (ಪುತ್ತೂರು ತಾಲೂಕಿನ ರಾಜೇಶ್ ಪಿ. ಹಾಗೂ ಕೃತಿ ಬಿಜಿ. ಪುತ್ರಿ) ಮನೋಜ್ಞ ಸಿ.ಎಚ್. (ಕಾಸರಗೋಡು ತಾಲೂಕಿನ ಸಿ.ಎಚ್. ರಾಮಮೋಹನ್ ಹಾಗೂ ವಿಜಯಲಕ್ಷ್ಮಿ ಕೆ. ಪುತ್ರಿ) 591 ಅಂಕಗಳೊಂದಿಗೆ ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದಿದ್ದಾರೆ. ವಾಣಿಜ್ಯ ವಿಭಾಗದ ತನ್ವಿ ಭಟ್ 592 ಅಂಕಗಳೊಂದಿಗೆ ರಾಜ್ಯಕ್ಕೆ 9ನೇ ರ್‍ಯಾಂಕ್ ಗಳಿಸಿದ್ದು ಅವರು ಬೆಂಗಳೂರಿನ ಅನಂತ ಪದ್ಮನಾಭ ಭಟ್ ಹಾಗೂ ಸ್ಮಿತಾ ದಂಪತಿ ಪುತ್ರಿ. ಒಟ್ಟು 457 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಹಾಗೂ 321 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯನ್ನು ಪಡೆದುಕೊಂಡಿದ್ದಾರೆ.

ಕೇರಳ: ಮೇ 30ರೊಳಗೆ ಎಲ್ಲಾ ಶಾಲೆಗಳಿಗೆ ತಲುಪಲಿವೆ ಪಠ್ಯಪುಸ್ತಕ: ಎನ್.ಶಂಸುದ್ದೀನ್

ಕಾಸರಗೋಡು: ಕೇರಳದಲ್ಲಿ ಮುಂದಿನ ಶೈಕ್ಷಣಿಕ ವರ್ಷಕ್ಕಾಗಿರುವ ಶಾಲಾ ಪಠ್ಯಪುಸ್ತಕಗಳ ಮುದ್ರಣ ಪೂರ್ಣಗೊಂಡಿದೆ ಎಂದು ರಾಜ್ಯ ಶಿಕ್ಷಣ ಖಾತೆ ಸಚಿವ ಎನ್. ಶಂಸುದ್ದೀನ್ ಹೇಳಿದ್ದಾರೆ. ಪ್ರಸ್ತುತ ಮುದ್ರಿಸಲಾಗಿರುವ ಪುಸ್ತಕಗಳನ್ನು ಜಿಲ್ಲಾ ಕೇಂದ್ರಗಳಿಗೆ ತಲುಪಿಸುವ ಕ್ರಮಗಳು ತ್ವರಿತಗತಿಯಲ್ಲಿ ಸಾಗುತ್ತಿದ್ದು, ಮೇ 30ರ ಮೊದಲು ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲೆಗಳಿಗೆ ಪುಸ್ತಕಗಳನ್ನು ಪೂರೈಸಲಾಗುವುದು ಎಂದು ಸಚಿವರು ತಿರುವನಂತಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ.



ಕೇರಳದಲ್ಲಿ ಪ್ಲಸ್ ವನ್ ಪ್ರವೇಶಾತಿ ಬಗ್ಗೆ ವಿಶೇಷ ಕಾಳಜಿ ಇರಿಸಲಾಗಿದೆ. ಅಲ್ಲದೆ ಪ್ಲಸ್ ವನ್‌ಗೆ ಸೀಟುಗಳ ಕೊರತೆ ಇದೆ ಎಂಬುದು ವಾಸ್ತವವಾಗಿದೆ ಎಂದು ಅವರು ತಿಳಿಸಿದರು. ಈ ಪರಿಸ್ಥಿತಿಯಲ್ಲಿ ಮಾರ್ಜಿನಲ್ ಸೀಟು ಹೆಚ್ಚಳ ಸೇರಿದಂತೆ ಆಗತ್ಯದ ತುರ್ತು ವ್ಯವಸ್ಥೆಗಳನ್ನು ಮಾಡಿದ ನಂತರವೇ ಹಂಚಿಕೆ ಪ್ರಕ್ರಿಯೆಯು ಅಧಿಕೃತವಾಗಿ ಪ್ರಾರಂಭವಾಗುತ್ತದೆ. ಈ ವಿಷಯದ ಕುರಿತು ತುರ್ತಾಗಿ ಚರ್ಚೆ ನಡೆಸಲಾಗುವುದು. ಕೇಂದ್ರ ಸರಕಾರದ ಪಿಎಂಶ್ರೀ ಶಾಲಾ ಯೋಜನೆಗೆ ಯುಡಿಎಫ್ ಒಕ್ಕೂಟವು ಬಲವಾದ ರಾಜಕೀಯ ವಿರೋಧ ಹೊಂದಿದೆ ಎಂದು ಸಚಿವ ಎನ್. ಶಂಸುದ್ದೀನ್ ಹೇಳಿದ್ದಾರೆ.

ಪಿಎಂಶ್ರೀ ಯೋಜನೆಯ ತಿಳುವಳಿಕೆ ಪತ್ರಕ್ಕೆ (ಎಂಒಯು) ಎಡರಂಗ ಸರಕಾರವು ಮೊದಲೇ ಸಹಿ ಹಾಕಿತ್ತು. ಈಗ ಹೊಸ ಐಕ್ಯರಂಗ ಸರಕಾರವು ಯೋಜನೆಯನ್ನು ಸ್ಥಗಿತಗೊಳಿಸಿರುವುದರಿಂದ ಹಿಂದೆ ಸಹಿ ಮಾಡಲಾದ ಒಪ್ಪಂದವು ಮಾನ್ಯವಾಗಿದೆಯೇ ಎಂಬುದನ್ನು ಕಾನೂನುಬದ್ಧವಾಗಿ ಪರಿಶೀಲಿಸಬೇಕಾಗಿದೆ. ಅದಕ್ಕಾಗಿ ಕೇಂದ್ರದಿಂದ ಹಣವನ್ನು ಪಡೆಯಲಾಗಿದೆ ಎಂಬ ಅಂಶವು ಪ್ರಸ್ತುತ ದೊಡ್ಡ ತಾಂತ್ರಿಕ ಸಂಕೀರ್ಣತೆಯನ್ನು ಸೃಷ್ಟಿಸುತ್ತಿದೆ. ಈ ಬಗ್ಗೆ ಸರಕಾರವು ಸಮಗ್ರವಾದ ಕಾನೂನು ಸಲಹೆಯನ್ನು ಪಡೆಯಲಿದೆ ಎಂದು ಸಚಿವರು ಹೇಳಿದರು.

ನದಿ, ಸಮುದ್ರ ನಡುವಿನ ಬೆಂಗ್ರೆಯಲ್ಲಿ ನೀರಿನ ಸಮಸ್ಯೆಯಿಲ್ಲ | ಜಲಸಿರಿ ಪೈಪ್‌ಲೈನ್ ಮೂಲಕ ನೀರು ನೀಡಲು ಆಗ್ರಹ

ಬೆಂಗ್ರೆಯಲ್ಲಿ ಕುಡಿಯುವ ನೀರು ಭರಪೂರ

ದಿಗಂತ ವಾಟರ್ ಚೆಕ್

▸ ಹರೀಶ ಕುಲ್ಕುಂದ

ಮಂಗಳೂರು: ನದಿ ಮತ್ತು ಸಮುದ್ರದ ನಡುವೆ ಇರುವ ಬೆಂಗರೆ ವಾರ್ಡ್‌ನಲ್ಲಿ ನೀರಿನ ಸಮಸ್ಯೆಯಿಲ್ಲ.

ಕಡಲಿನ ಬದಿಯಲ್ಲಿರುವ ಕಾರಣ ಹಾಗೂ ಹೆಚ್ಚಿನ ಮನೆಗಳಲ್ಲಿ ಬಾವಿ ಇರುವ ಹಿನ್ನೆಲೆಯಲ್ಲಿ ಈ ವಾರ್ಡ್‌ನಲ್ಲಿ ನೀರಿಗಾಗಿ ಹಾಹಾಕಾರವಿಲ್ಲ. ಜನರಿಗೆ ಅಗತ್ಯ ಇರುವಷ್ಟು ಪ್ರಮಾಣದ ನೀರು ಸ್ಥಳೀಯ ಬಾವಿಗಳಿಂದಲೇ ದೊರೆಯುತ್ತಿದೆ. ವಾರ್ಡ್‌ನ ಸ್ವಲ್ಪ ಭಾಗಕ್ಕೆ ಮಾತ್ರ ಮಂಗಳೂರು ಮಹಾನಗರ ಪಾಲಿಕೆಯ ಪೈಪ್‌ಲೈನ್ ಮೂಲಕ ನೀರು ಒದಗಿಸಲಾಗುತ್ತಿದೆ.

ಬೆಂಗ್ರೆ ವಾರ್ಡ್ ನಗರದ ಹೊರವಲಯದಲ್ಲಿರುವ ಕಸಬಾ ಬೆಂಗ್ರೆ ಹಾಗೂ ತೋಟ ಬೆಂಗ್ರೆ ಸ್ಥಳಗಳನ್ನು ಒಳಗೊಂಡಿದೆ. ಮಹಾನಗರ ಪಾಲಿಕೆಯ ಭಾಗವಾಗಿದ್ದರೂ ಸಂಪೂರ್ಣ ಗ್ರಾಮೀಣ ಪ್ರದೇಶದಂತೆ ಇರುವ ಈ ವಾರ್ಡ್ ಮನಪಾದ ಸೌಲಭ್ಯಗಳಿಂದಲೂ ತುಂಬಾ ದೂರದಲ್ಲಿದೆ. ವಾರ್ಡ್‌ನ ಒಂದು ಬದಿಯಲ್ಲಿ ಫಲ್ಗುಣಿ ನದಿ, ಇನ್ನೊಂದು ಬದಿಯಲ್ಲಿ ಸಮುದ್ರಕ್ಕೆ ಹೊಂದಿಕೊಂಡಿರುವ ಕಾರಣ ಬಾವಿಗಳಲ್ಲಿ ಸದಾ ನೀರಿನ ಒರತೆ ಇರುತ್ತದೆ. ಹೆಚ್ಚಿನ ಮನೆಗಳು ನೀರಿಗಾಗಿ ಬಾವಿಯನ್ನೇ ಆಶ್ರಯಿಸಿವೆ. ಕೆಲವೆಡೆ ಖಾಸಗಿ ಬೋರ್‌ವೆಲ್‌ಗಳಿವೆ. ಕೆಲವೇ ಕೆಲವು ಮನೆಗಳಿಗೆ ಮಾತ್ರ ಮನಪಾ ಪೈಪ್‌ಲೈನ್ ನೀರಿನ ಸಂಪರ್ಕವಿದೆ. ಪಣಂಬೂರು ಟ್ಯಾಂಕ್‌ನಿಂದ ಇಲ್ಲಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಿರುವ ಕಾರಣ ಈ ಬೇಸಿಗೆಯಲ್ಲಿ ಬೆಂಗ್ರೆ ವಾರ್ಡ್‌ಗೆ ಟ್ಯಾಂಕರ್ ನೀರು ಪೂರೈಸುವ ಅನಿವಾರ್ಯತೆ ಬಂದಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿ, ಬೋರ್‌ವೆಲ್‌ಗಳು ಇಲ್ಲ.

ಬೆಂಗ್ರೆ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಕಾಮಗಾರಿ ಶೇ. 100ರಷ್ಟು ಪೂರ್ಣಗೊಂಡಿದೆ. ಆದರೆ, ನೀರಿನ ಸಂಪರ್ಕ ಇನ್ನಷ್ಟೇ ಆಗಬೇಕಿದೆ. ಶೇ. 50ರಷ್ಟು ಜನತೆ ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಪಣಂಬೂರಿನಲ್ಲಿ ಜಲಸಿರಿ ಯೋಜನೆಯಡಿ ಬೃಹತ್ ಟ್ಯಾಂಕ್ ನಿರ್ಮಾಣಗೊಂಡಿದೆ. ಮನಪಾ ನೀರಿನ ಪೈಪ್‌ಲೈನ್ ಸಂಪರ್ಕ ಇಲ್ಲದ ಮನೆಗಳಿಗೆ ಜಲಸಿರಿ ಪೈಪ್‌ಲೈನ್ ಮೂಲಕ ತಕ್ಷಣ ನೀರು ಸರಬರಾಜು ಮಾಡಬೇಕು ಎಂಬುದು ಸ್ಥಳೀಯರ ಆಗ್ರಹ.



ಶಾಸಕರ ನಿಧಿಯಿಂದ ಕಸಬಾ ಬೆಂಗ್ರೆ ಮುಖ್ಯರಸ್ತೆ ಕಾಂಕ್ರೀಟೀಕರಣ ಕಾಮಗಾರಿ ನಡೆದಿದೆ

ಒಳಚರಂಡಿ ವ್ಯವಸ್ಥೆ ಇಲ್ಲ

ಬೆಂಗ್ರೆ ವಾರ್ಡ್‌ನಲ್ಲಿ ಇದುವರೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಇಡೀ ವಾರ್ಡ್‌ನಲ್ಲಿ ಯುಜಿಡಿ ಇಲ್ಲ. ಎಲ್ಲ ಮನೆಗಳಲ್ಲಿ ಟಾಯ್ಲೆಟ್ ಪಿಟ್‌ಗಳಿವೆ. ಸಮುದ್ರ ತಟದಲ್ಲಿರುವ ಈ ಪ್ರದೇಶ ಹೊಯಿಗೆಯಿಂದ ಕೂಡಿದ್ದು, ಜನಸಂಖ್ಯೆ ಹೆಚ್ಚಾದಂತೆ ಟಾಯ್ಲೆಟ್ ಪಿಟ್‌ಗಳಿಂದ ತ್ಯಾಜ್ಯ ನೀರು ಸೋರಿಕೆಯಾಗುವ ಅಪಾಯವಿದೆ. ಇದರಿಂದಾಗಿ ಇಲ್ಲಿನ ಬಾವಿ ನೀರು ಕಲುಷಿತಗೊಳ್ಳುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ಸಂಪೂರ್ಣ ಬೆಂಗ್ರೆ ವಾರ್ಡ್‌ಗೆ ಡ್ರೈನೇಜ್ ವ್ಯವಸ್ಥೆ ಕಲ್ಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ತೋಡಿನಲ್ಲಿ ಕೃತಕ ನೆರೆ

ಬೆಂಗ್ರೆ ವಾರ್ಡ್‌ನಲ್ಲಿ ಬಹುತೇಕ ಕಡೆಗಳಲ್ಲಿ ಮಳೆ ನೀರು ಹರಿಯಲು ಚರಂಡಿ ವ್ಯವಸ್ಥೆಯಿಲ್ಲ. ಇಲ್ಲಿ ತೋಡು ಎಂಬ ಪ್ರದೇಶವಿದೆ. ವಾರ್ಡ್‌ನ ಮಳೆನೀರು ಇಲ್ಲಿ ಸಂಗ್ರಹವಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ತೋಡು ಪ್ರದೇಶದಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗಿದೆ. ಇದರಿಂದಾಗಿ ಭಾರಿ ಮಳೆ ಬಂದಾಗ ಇಲ್ಲಿ ಕೃತಕ ಪ್ರವಾಹ ಸೃಷ್ಟಿಯಾಗುತ್ತದೆ. ಇದರಿಂದಾಗಿ ಸುತ್ತಲಿನ ಮನೆಗಳ ಜನರು ತೊಂದರೆ ಅನುಭವಿಸುತ್ತಿದ್ದಾರೆ.

ಮನಪಾ 60 ವಾರ್ಡ್‌ಗಳ ನೀರಿನ ಸಮಸ್ಯೆ ಕುರಿತಾದ ವಾಟರ್ ಚೆಕ್ ಸರಣಿ ಇಲ್ಲಿಗೆ ಮುಕ್ತಾಯ



ಬೆಂಗ್ರೆ ವಾರ್ಡ್‌ನಲ್ಲಿ ನೀರಿನ ಯಾವುದೇ ಸಮಸ್ಯೆ ಇಲ್ಲ. ಕೆಲ ಮನೆಗಳಿಗೆ ಮನಪಾ ಪೈಪ್‌ಲೈನ್ ಮೂಲಕ ನೀರು ಬರುತ್ತಿದೆ. ಬಹುತೇಕ ಜನರು ಬಾವಿಗಳನ್ನು ಆಶ್ರಯಿಸಿದ್ದಾರೆ. ಜಲಸಿರಿ ಪೈಪ್‌ಲೈನ್ ಆಗಿದ್ದು, ನೀರಿನ ಸಂಪರ್ಕ ಆಗಬೇಕಿದೆ. ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಬೇಕಿದೆ. ಈ ಬಗ್ಗೆ ಈಗಾಗಲೇ ಮನಪಾ ಆಯುಕ್ತರ ಗಮನಕ್ಕೆ ತರಲಾಗಿದೆ. ಇಲ್ಲಿ ಒಳಚರಂಡಿ ಪೈಪ್‌ಲೈನ್ ಅಳವಡಿಸುವುದೂ ಸವಾಲಾಗಿದೆ. ಜನರೂ ತಮ್ಮ ಜಾಗ ಬಿಟ್ಟುಕೊಡಬೇಕಿದೆ. ಕಸಬಾ ಬೆಂಗ್ರೆ, ತೋಟ ಬೆಂಗ್ರೆಯಲ್ಲಿ ಮಳೆ ನೀರು ಚರಂಡಿ ನಿರ್ಮಿಸಲಾಗುತ್ತಿದೆ. ಶಾಸಕರ ನಿಧಿಯಿಂದ ಕಸಬಾ ಬೆಂಗ್ರೆ ಮುಖ್ಯರಸ್ತೆ ಕಾಂಕ್ರೀಟೀಕರಣ ಕಾಮಗಾರಿ ನಡೆದಿದೆ. ಬೆಂಗ್ರೆ ಸರಕಾರಿ ಶಾಲೆ, ಅಂಗನವಾಡಿ, ಕ್ರೀಡಾಂಗಣ ಅಭಿವೃದ್ಧಿಪಡಿಸಲಾಗಿದೆ. ಒಳರಸ್ತೆಗಳಿಗೆ ಕಾಂಕ್ರೀಟ್, ಡಾಂಬರೀಕರಣ, ಇಂಟರ್‌ಲಾಕ್, ಎಲ್‌ಇಡಿ ಲೈಟ್ ಅಳವಡಿಸಲಾಗಿದೆ.

■ **ಮುನೀಬ್ ಬೆಂಗ್ರೆ,** ಬೆಂಗ್ರೆ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್



ಬೆಂಗ್ರೆ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಇಲ್ಲ. ಜಲಸಿರಿ ಯೋಜನೆಯಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, ನೀರಿನ ಸಂಪರ್ಕಕ್ಕಾಗಿ ಅನೇಕರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇದುವರೆಗೆ ಜಲಸಿರಿ ಪೈಪ್‌ಲೈನ್‌ನಲ್ಲಿ ನೀರು ಒದಗಿಸಿಲ್ಲ. ಮನಪಾ ಪೈಪ್‌ಲೈನ್ ಸಂಪರ್ಕ ಇಲ್ಲದ ಮನೆಗಳಿಗೆ ತಕ್ಷಣ ಜಲಸಿರಿ ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡಬೇಕು.

■ **ಲೋಕೇಶ್ ಸುವರ್ಣ ಬೆಂಗ್ರೆ,** ಸ್ಥಳೀಯರು



ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮೇ 28 ರಂದು ಬಕ್ರೀದ್ ಸಂದರ್ಭದಲ್ಲಿ ಕುರ್ಬಾನಿ ಹೆಸರಿನಲ್ಲಿ ಅಕ್ರಮ ಗೋ ಸಾಗಾಟ, ಗೋ ಹತ್ಯೆಯನ್ನು ತಡೆಯಬೇಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಅಕ್ರಮ ಕಸಾಯಿಖಾನೆಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ವಿಹಿಂಪ ವತಿಯಿಂದ ಆಗ್ರಹಿಸಲಾಯಿತು. ವಿಶ್ವ ಹಿಂದೂ ಪರಿಷದ್‌ನ ಹಿರಿಯರಾದ ಡಾ. ಎಂ. ಬಿ. ಪುರಾಣಿಕ್, ಮುಖಂಡ ಶರಣ್ ಪಂಪ್‌ವೆಲ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕರಾದ ಉಮಾನಾಥ್ ಕೋಟ್ಯಾನ್, ಕಿಶೋರ್ ಕುಮಾರ್, ಹಾಗೂ ವಿಶ್ವ ಹಿಂದೂ ಪರಿಷದ್, ಬಜರಂಗದಳದ ಪ್ರಮುಖರು ಉಪಸ್ಥಿತರಿದ್ದರು.

ಅನಧಿಕೃತ ಜಾನುವಾರು ವಧೆ, ಸಾಗಾಟಕ್ಕೆ ಅವಕಾಶವಿಲ್ಲ: ಜಿಲ್ಲಾಧಿಕಾರಿ ದರ್ಶನ್

ಮಂಗಳೂರು: ಅನಧಿಕೃತ ಒಂಟೆ/ ಜಾನುವಾರುಗಳ ವಧೆ, ಸಾಗಾಟ ಹಾಗೂ ಅನಧಿಕೃತ ಮಾಂಸ ಮಾರಾಟವನ್ನು ತಡೆಗಟ್ಟಲು ಸೂಕ್ತ ಕ್ರಮವಹಿಸಲು ದ.ಕ. ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಸೂಚಿಸಿದ್ದಾರೆ.

ಅವರು ಮಂಗಳೂರು ಮಹಾನಗರಪಾಲಿಕೆಕಚೇರಿ ಸಭಾಂಗಣದಲ್ಲಿ ನಡೆದ ಬಕ್ರೀದ್ ಹಬ್ಬ ಆಚರಣೆ ಸಂದರ್ಭದಲ್ಲಿ ಅನಧಿಕೃತ ಜಾನುವಾರುಗಳ ವಧೆ ಹಾಗೂ ಜಾನುವಾರು ಸಾಗಾಣಿಕೆಯನ್ನು ತಡೆಗಟ್ಟುವ ಕುರಿತು ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಜಾನುವಾರು ಸಾಗಾಣಿಕೆ ಸಮಯದಲ್ಲಿ ಪರವಾನಗಿಯನ್ನು ಕಡ್ಡಾಯವಾಗಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಪಡೆಯಬೇಕು. ಅನಧಿಕೃತ ಜಾನುವಾರು ಸಾಗಾಣಿಕೆಯನ್ನು ತಡೆಗಟ್ಟಲು ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಜಾನುವಾರು ಸಾಗಾಟ ವಾಹನಗಳ ಮೇಲೆ ನಿಗಾ ವಹಿಸಬೇಕು. ಜಾನುವಾರು ಸಾಗಾಣಿಕೆ ಮಾಡುವಾಗ ಅಧಿಕೃತ ದಾಖಲೆಗಳಾದ ಪರವಾನಿಗೆ, ಜಾನುವಾರು ಮಾಲೀಕರ ವಿವರಗಳು, ಕೊಂಡುಕೊಳ್ಳುವ ಮಾಲೀಕರ ವಿವರ, ವಾಹನ ದಾಖಲಾತಿ, ಚಾಲಕರ ವಿವರ ಸೇರಿದಂತೆ ದಾಖಲೆಗಳನ್ನು ಇಟ್ಟುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲನೆ ನಡೆಸುವಂತೆ ಅವರು ಹೇಳಿದರು.

ಯಾವುದೇಕಟ್ಟಡಗಳಲ್ಲಿಅನಧಿಕೃತ ಪ್ರಾಣಿ ವಧೆ ಕಂಡು ಬಂದಲ್ಲಿ ಅಂತಹ ಕಟ್ಟಡಗಳನ್ನು ನಿಯಮಾನುಸಾರ ಮುಟ್ಟುಗೋಲು ಹಾಕಬೇಕು. ಅಕ್ರಮವಾಗಿ ಜಾನುವಾರು ಗಳನ್ನು ಸಾಗಿಸುವುದು ಮತ್ತು ಹತ್ಯೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಸಮಿತಿಯನ್ನು ರಚಿಸಲಾಗಿದ್ದು, ಈನಿಟ್ಟಿನಲ್ಲಿ ಸಮಿತಿ ಸದಸ್ಯರುಕ್ರಮ ವಹಿಸಬೇಕು. ಸಂಬಂಧಿಸಿದ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದರು. ಸಭೆಯಲ್ಲಿ ಮುಖ್ಯ ಪಶುಸಂಗೋಪನಾ ಅಧಿಕಾರಿ ಡಾ.ಅಶೋಕ್‌ಕೆ.ಆರ್, ಎಎಸ್‌ಪಿ ಅನಿಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಕ್ರಮ ಕಸಾಯಿಖಾನೆ ಶಾಶ್ವತವಾಗಿ ಮುಚ್ಚುವಂತೆ ವಿ.ಹಿಂ.ಪ ಒತ್ತಾಯ

ಮಡಿಕೇರಿ: ಜಿಲ್ಲೆಯಲ್ಲಿ ಅಕ್ರಮವಾಗಿ ಕಸಾಯಿಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳನ್ನು ಶಾಶ್ವತವಾಗಿ ಮುಚ್ಚಬೇಕು ಮತ್ತು ಜಾನುವಾರು ಹತ್ಯೆ ನಡೆಸಿದ ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಬೇಕು ಎಂದು ಕೊಡಗು ಜಿಲ್ಲಾ ವಿಶ್ವ ಹಿಂದೂ ಪರಿಷದ್ (ವಿಹಿಂಪ) ಆಗ್ರಹಿಸಿದೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಅವರು, ಜಿಲ್ಲೆಯಲ್ಲಿ ಅಕ್ರಮ ವಾಗಿ ಕಸಾಯಿಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಬಕ್ರೀದ್ ಹಿನ್ನೆಲೆಯಲ್ಲಿ ಇವುಗಳು ಮತ್ತಷ್ಟು ಸಕ್ರಿಯವಾಗಲಿವೆ ಎಂದು ಕಳವಳ ವ್ಯಕ್ತಪಡಿಸಿದರಲ್ಲದೆ, ಗೋವುಗಳನ್ನು ಹತ್ಯೆ ಮಾಡುವ ಅಪರಾಧಿಗಳಿಗೆ ಏಳು ವರ್ಷ ಜೈಲು, ಪ್ರತಿ ಜಾನುವಾರಿಗೆ ಒಂದು ಲಕ್ಷ ರೂ.ನಂತೆ ದಂಡ ವಿಧಿಸಬೇಕು. ಅನಧಿಕೃತ ಸ್ಥಳದಲ್ಲಿ ವಧೆಗೆ ಸಿದ್ಧಪಡಿಸಿರುವ ಜಾನುವಾರುಗಳನ್ನು ಗೋಶಾಲೆಗೆ ವರ್ಗಾಯಿಸಬೇಕು. ಬೀಟ್ ಪೊಲೀಸರ ಮೂಲಕ ಅಕ್ರಮ ಕಸಾಯಿಖಾನೆಗಳನ್ನು ಗುರುತಿಸಿ ಶಾಶ್ವತವಾಗಿ ಮುಚ್ಚಬೇಕು. ಕೊಡಗಿನಲ್ಲಿ ಮಾರಾಟವಾಗುವ ಗೋಮಾಂಸದ ಮೂಲದ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವ ಹಿಂದೂ ಪರಿಷದ್ ಅಧ್ಯಕ್ಷ ಪುದಿಯೊಕ್ಕಡ ರಮೇಶ್, ಬಜರಂಗದಳದ ಪ್ರಮುಖರಾದ ವಿನಯ್ ಕುಮಾರ್, ದುರ್ಗೇಶ್, ಮುಕುಂದ್ ಉಪಸ್ಥಿರಿದ್ದರು.

ಮೇಲ್ಮನೆಗೆ ಅವಕಾಶ ನೀಡಲು ಕಾಂಗ್ರೆಸ್ ಆಕಾಂಕ್ಷಿಗಳ ಮನವಿ



• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಿಂದ ಮೇಲ್ಮನೆಗೆ ಪ್ರವೇಶ ಬಯಸಿರುವ ಆಕಾಂಕ್ಷಿಗಳು ಮಂಗಳವಾರ ದಿಲ್ಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಡಾ. ಸೈಯದ್ ನಾಸಿರ್ ಹುಸೇನ್ ಮತ್ತು ಕರ್ನಾಟಕದ ಉಸ್ತುವಾರಿ ಅಭಿಷೇಕ್ ದತ್ ಅವರನ್ನು ಭೇಟಿಯಾಗಿ ಮನವಿ ಮಾಡಿದರು.

ಜೂ. 30ರಂದು ವಿಧಾನಪರಿಷತ್‌ನ ಏಳು ಸ್ಥಾನಗಳು ಖಾಲಿಯಾಗಲಿವೆ. ಈ ಹಿನ್ನೆಲೆಯಲ್ಲಿ ಅವಕಾಶ ನೀಡಬೇಕೆಂದು ಆಕಾಂಕ್ಷಿಗಳು ಪಕ್ಷದ ಸಂಘಟನೆಗಾಗಿ ತಳಮಟ್ಟದಿಂದ ನಿರಂತರವಾಗಿ ಶ್ರಮಿಸುತ್ತಿರುವ ನಿಷ್ಠಾವಂತ ಕಾರ್ಯಕರ್ತರು ಮತ್ತು ಮುಖಂಡರ ಸೇವೆಯನ್ನು ಗುರುತಿಸಿ, ಮುಂಬರುವ ವಿಧಾನಪರಿಷತ್ ಸ್ಥಾನಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿಕೊಡುವಂತೆ ಈ ಸಂದರ್ಭದಲ್ಲಿ ನಾಯಕರ ಬಳಿ ಒಕ್ಕೊರಲಿನ ಮನವಿ ಸಲ್ಲಿಸಿದರು. ನಿಯೋಗದಲ್ಲಿ ಎ.ಎನ್. ನಟರಾಜ್ ಗೌಡ, ಬಿ.ಆರ್ ನಾಯ್ಡು, ಮೆಹರೋಜ್ ಖಾನ್, ಶಾಕಿರ್ ಸನದಿ, ಮಂಜುನಾಥ್ ಸುಣಗಾರ್, ಸುನೀಲ್ ಹನುಮಣ್ಣನವರ್, ಕಾಂತಾ ನಾಯಕ್ ಮತ್ತು ರಾಜೇಶ್ವರಿ ಪಾಟೀಲ್ ಇದ್ದರು.

ರಾಮ ಬಾಣ



ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ

ಪುಟ ೧ ➔ ಅಕ್ರಮ ವಲಸೆ ಮತ್ತಿತರ ಅಸ್ವಾಭಾವಿಕ ಅಂಶಗಳಿಂದಾಗಿ ದೇಶದ ಜನಸಂಖ್ಯಾ ಗಾತ್ರದಲ್ಲಾಗಿರುವ ಸ್ಥಿತ್ಯಂತರ ಅಥವಾ ಬದಲಾವಣೆಗಳ ಅಧ್ಯಯನಕ್ಕಾಗಿ, ಸಮರ್ಪಿತ ನಿಯೋಗವೊಂದನ್ನು ರಚಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ 2025ರ ಸ್ವಾತಂತ್ರ್ಯ ದಿನದಂದು ಘೋಷಿಸಿದ್ದರು. ದೇಶಾದ್ಯಂತ ಅಕ್ರಮ ನುಸುಳುವಿಕೆ ಮತ್ತು ಅಸ್ವಾಭಾವಿಕವಾದ ಜನಸಂಖ್ಯಾ ಬದಲಾವಣೆಗಳ ಪರಿಣಾಮಗಳ ಅಧ್ಯಯನ ಮಾಡಲಿರುವ ಉನ್ನತ ಮಟ್ಟದ ಸಮಿತಿಗೆ, ಸರಕಾರವೀಗ ವಿಧ್ಯುಕ್ತ ಚಾಲನೆ ನೀಡಿದೆ ಎಂದು ಅಮಿತ್ ಶಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ತಂಡದ ಕಾರ್ಯವೈಖರಿ: ಉನ್ನತಾಧಿಕಾರ ತಂಡವು ಭಾರತಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಕುರಿತು ಸಮಗ್ರ ಅಧ್ಯಯನ ನಡೆಸಲಿದೆ. ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದ ಆಗಿರುವ ಸ್ಥಿತ್ಯಂತರಗಳನ್ನು ಪರಿಶೀಲಿಸುವುದು, ಮತ-ಧರ್ಮೀಯ ಮತ್ತು ಸಾಮಾಜಿಕ ಗುಂಪುಗಳ ಜನಸಂಖ್ಯಾ ಬೆಳವಣಿಗೆ ದರದಲ್ಲಿ ಆಗಿರುವ ಅಸ್ವಾಭಾವಿಕ ವ್ಯತ್ಯಾಸಗಳನ್ನು ವಿಶ್ಲೇಷಿಸಲಿದೆ ಮತ್ತು ವ್ಯವಸ್ಥಿತವಾದ , ಕಾಲಮಿತಿ ಆಧಾರಿತ ಪರಿಹಾರವನ್ನು ಶಿಫಾರಸು ಮಾಡಲಿದೆ. ಜನಸಂಖ್ಯಾ ಡೇಟಾವನ್ನು ಮೀರಿದ ಸಮಸ್ಯೆ ಇದಾಗಿದೆ. ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆ ಅಥವಾ ವ್ಯತ್ಯಯವು ದೇಶದ ಸಾರ್ವಭೌಮತೆ, ಕಾನೂನು ಸುವ್ಯವಸ್ಥೆ, ಸಾಮಾಜಿಕ ಚೌಕಟ್ಟು, ದೇಶದ ಬುಡಕಟ್ಟು ಸಮುದಾಯಗಳ ಸಂರಕ್ಷಣೆಯೇ ಇತ್ಯಾದಿಗಳಿಗೆ ನೇರ ತೊಂದರೆಯೊಡ್ಡಲಿವೆ ಎಂದು ಸಚಿವ ಶಾ ಹೇಳಿದ್ದಾರೆ.

ಉನ್ನತಾಧಿಕಾರ ತಂಡವು ಜನಸಂಖ್ಯಾ ಡೇಟಾದ ವಿಶ್ಲೇಷಣೆ ನಡೆಸಲಿದೆ ಮತ್ತು ಸ್ಥಳೀಯ ಮುಖಂಡರು ಅಥವಾ ಸಂಬಂಧಪಟ್ಟ ಸಂಸ್ಥೆಗಳನ್ನು ಸಂಪರ್ಕಿಸಿ, ಎದುರಾಗಲಿರುವ ಸಮಸ್ಯೆಗಳ ನಿವಾರಣೆಗೆ ನೀತಿ ನಿಯಮಗಳ ಪ್ರಸ್ತಾವ ಮುಂದಿಟ್ಟು ಸಮಾಲೋಚನೆ ನಡೆಸಲಿದೆ. ಕ್ರಿಯಾತ್ಮಕ ಪರಿಹಾರ ಸಹಿತ ತನ್ನ ಶಿಫಾರಸುಗಳನ್ನು ನಿಗದಿತ ಕಾಲಮಿತಿಯೊಳಗೆ ಸಲ್ಲಿಸುವ ನಿರೀಕ್ಷೆಯಿದೆ. ಸಮಗ್ರ ಮಾಹಿತಿ- ನಿರ್ಧಾರಾತ್ಮಕ ಕ್ರಮಗಳ ಬಲದಿಂದ ದೇಶದ ಸಮಗ್ರತೆ ಮತ್ತು ಸಾಮಾಜಿಕ ವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ಕ್ರಿಯಾಪರ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ ಪ್ರಸ್ತುತ ಉಪಕ್ರಮ ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಮೊದಲು ಒಳ್ಳೆಯವನಾಗು , ಬಳಿಕ ಸಂಪಾದನೆ ಮಾಡು ಅಂತ ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು. ಸಂಪಾದನೆಯ ಮೂಲಕ ಸಮಾಜದಲ್ಲಿ ಒಳ್ಳೆಯವನೆನಿಸಿಕೊ ಅಂತ ಇಂದಿನ ಕಾಲದಲ್ಲಿ ಹೇಳುತ್ತಾರೆ

- ಕೇಮಾರು ಶ್ರೀಗಳು

- ಆಗ ಒಳ್ಳೆಯವನಾಗು ಅಂತ ಹೇಳಿದರೆ ಗುಣದಲ್ಲಿ ಎನ್ನುವ ಅರ್ಥವಿತ್ತು, ಈಗ ಒಳ್ಳೆಯವನಾಗು ಅಂತ ಹೇಳಿದರೆ ಹಣದಲ್ಲಿ ಎನ್ನುವ ಅರ್ಥವಿದೆ!

ದಿನ ಭವಿಷ್ಯ

ಮೇಷ
ನೆಗೆಟಿವ್ ಚಿಂತನೆ ಜನರನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕಬೇಡಿ. ನಿಜವಾಗಿ ಉತ್ತಮ ಫಲವನ್ನು ಗ್ರಹಗತಿ ಸೂಚಿಸುತ್ತಿದೆ.

ವೃಷಭ
ಎಲ್ಲವೂ ನಿಮಗೆ ಪೂರಕವಾಗಿಲ್ಲವೆ? ನಿಮ್ಮ ಕಾರ್ಯಶೈಲಿಯಲ್ಲಿ ಕೆಲ ಬದಲಾವಣೆ ಮಾಡಿಕೊಳ್ಳಿ. ಗಣೇಶನನ್ನು ಪ್ರಾರ್ಥಿಸಿ. ನಿಮಗೆ ಒಳಿತಾಗಲಿದೆ.

ಮಿಥುನ
ಸಂಬಂಧದಲ್ಲಿ ದೊಡ್ಡ ತಿರುವು ಉಂಟಾದೀತು. ವಿವಾಹ ಸಂಬಂಧ ಒದಗಬಹುದು. ವದಂತಿಗೆ ಕಿವಿಗೊಡಬೇಡಿ. ಆರ್ಥಿಕ ಪರಿಸ್ಥಿತಿ ಸುಧಾರಣೆ.

ಕಟಕ
ಇಂದು ಗಂಭೀರ ಮನಸ್ಥಿತಿ ತೋರುವಿರಿ. ಲಘು ಧೋರಣೆ ತೊರೆಯುವಿರಿ. ಇದು ನಿಮಗೆ ಒಳಿತನ್ನೇ ತರಲಿದೆ. ಆರ್ಥಿಕ ದೃಢತೆ.

ಸಿಂಹ
ಕೆಲಸದಲ್ಲಿ ಬದ್ಧತೆ ಇರಲಿ. ಕಾಟಾಚಾರದ ಕೆಲಸ ಮಾಡಬೇಡಿ. ಹಿರಿಯರ ಕಿವಿಮಾತು ಗಂಭೀರವಾಗಿ ಪರಿಗಣಿಸಿ. ಸಂಬಂಧದಲ್ಲಿ ಒಡಕು.

ಕನ್ಯಾ
ಎಲ್ಲರಿಂದ ಮೆಚ್ಚುಗೆ ಪಡೆಯುವ ದಿನ. ನಿಮ್ಮ ಕ್ಷೇತ್ರದಲ್ಲಿ ಸಾಧನೆಯ ಗರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ. ಎಚ್ಚರಿಕೆಯ ಹೆಜ್ಜೆ ಇಡುವುದೊಳಿತು.

ತುಲಾ
ಆತ್ಮೀಯರ ಬೆಂಬಲದಿಂದ ನಿಮ್ಮ ಕಾರ್ಯ ಸುಗಮ. ಕಾಡುವ ಒತ್ತಡಕ್ಕೆ ಶೀಘ್ರ ಪರಿಹಾರ ಸಿಗಲಿದೆ. ಆರ್ಥಿಕ ಹಿನ್ನಡೆ ಸಂಭವ.

ವೃಶ್ಚಿಕ
ಇಂದು ಆರಂಭಿಸುವ ಕೆಲಸದಲ್ಲಿ ಸಫಲತೆ ಖಚಿತ. ಎಲ್ಲರ ಜತೆ ಸೌಹಾರ್ದ ಸಂಬಂಧ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಷಯ ಬಂಧುತ್ವ ಕೆಡಿಸದಿರಲಿ.

ಧನು
ಪ್ರೀತಿಯಲ್ಲಿ ಅಪಯಶಸ್ಸು. ಹಳೆಯ ಅನುಭವ ಕಹಿಯಾಗಿ ಕಾಡಲಿದೆ. ಮಾನಸಿಕ ಉದ್ವಿಗ್ನತೆ. ಬಂಧುಗಳ ಅಸಹಕಾರ.

ಮಕರ
ವೈರುಧ್ಯಮಯ ಭಾವನೆಗಳ ತಾಕಲಾಟ. ಹೊಣೆಗಾರಿಕೆ ಹೆಚ್ಚಳ. ಸಹಕಾರ ಕಡಿಮೆ. ತಾಳ್ಮೆಯಿಂದ ಕಾಯಿರಿ. ಒಳ್ಳೆದಿನ ಬರಲಿದೆ.

ಕುಂಭ
ಕಳೆದ ಕೆಲದಿನಗಳ ಗೊಂದಲ ಇಂದು ಇತ್ಯರ್ಥ. ನಿಶ್ಚಿತ ನಿರ್ಧಾರಕ್ಕೆ ಬರುವಿರಿ. ಸಂಕಷ್ಟಗಳು ಪರಿಹಾರ. ಸಂಬಂಧ ಸುಧಾರಣೆ.

ಮೀನ
ಅನಿರೀಕ್ಷಿತ ಕಾರ್ಯದೊತ್ತಡ. ಆದರೂ ಸರಿಯಾಗಿ ನಿಭಾಯಿಸುವಿರಿ. ಆರ್ಥಿಕ ಲಾಭ. ಚರ್ಮದ ಅಲರ್ಜಿ ಕಾಡಬಹುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,9,6,3

ವೀರಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಬಿ.ಎಲ್.ಸಂತೋಷ್ ಹೇಳಿಕೆ

ಗಾಂಧಿಯಿಂದ ನೆಹರು ಪ್ರಧಾನಿ

• **ಜಮಖಂಡಿ:** ಸ್ವಾತಂತ್ರ್ಯ ನಂತರದ ದೇಶದಲ್ಲಿ ಗಾಂಧೀಜಿಯವರ ಬೆಂಬಲದಿಂದ ನೆಹರು ಪ್ರಧಾನಿಯಾದರು ಹೊರತು ಕಾಂಗ್ರೆಸ್ಸಿನ ಒಳಗಿನಿಂದ ಮತ್ತು ಹೊರಗಿನಿಂದಲ್ಲ. ಗಾಂಧೀಜಿಯವರ ಬೆಂಬಲವಿಲ್ಲದಿರದಿದ್ದರೆ ಅಂದು ಸರ್ದಾರ ಪಟೇಲರು ಪ್ರಧಾನಿಯಾಗಿರುತ್ತಿದ್ದರು ಎಂದು ಭಾರತೀಯ ಜನತಾ ಪಾರ್ಟಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು.

ನಗರದ ಬಸವ ಭವನ ಆವರಣದಲ್ಲಿ ಸ್ವಾತಂತ್ರ್ಯ ವೀರ ಸಾವರ್ಕರ್ ಪ್ರತಿಷ್ಠಾನದ ಆಶ್ರಯದಲ್ಲಿ ಏರ್ಪಡಿಸಿದ್ದ ವೀರಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದರು.

ಸಾವರ್ಕರ್ ಅವರು ಉತ್ತಮ ಶ್ರೇಷ್ಠ ಸಾಹಿತಿ, ಕ್ರಾಂತಿಕಾರಿ, ಸೃಜನಶೀಲ ಸಮಾಜೋದ್ಧಾರಕ, ಸಮಾನತಾವಾದಿಯಾಗಿದ್ದರು. ಅವರಿಂದಲೇ ರತ್ನಗಿರಿಯಲ್ಲಿ ಪತಿತ ಪಾವನ ಮಂದಿರ ಸ್ಥಾಪಿಸಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ ವ್ಯಕ್ತಿಯಾಗಿದ್ದರು. ನಾವೆಲ್ಲ ಓದಿದ ಸಿಪಾಯಿ ದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಅಧಿಕೃತವಾಗಿ ಹೇಳಿ ಪುಸ್ತಕ ಬರೆದರು.

ಅದು ಬಿಡುಗಡೆಗೂ ಮುನ್ನವೇ ಬ್ಯಾನ್ ಆಗಿತ್ತು. ಆದರೂ ಸಹ 18 ಭಾಷೆಯಲ್ಲಿ ತರ್ಜುಮೆಯಾಗಿ ಹೊರ ಬಂದಿತ್ತು. ಅಂತಹ ಧೀರ ವ್ಯಕ್ತಿಗೆ ಪದೆ ಪದೇ ಕಾಂಗ್ರೆಸ್ ಮೋಸ ಮಾಡುತ್ತಲೇ ಬಂದಿದೆ ಎಂದರು. ದೇಶದಲ್ಲಿ ಎರಡು ಬಾರಿ ಕರಿ ನೀರಿನ ಶಿಕ್ಷೆ ಅನುಭವಿಸಿದ ವ್ಯಕ್ತಿಯೆಂದರೆ ಇವರೊಬ್ಬರೇ. 13 ವರ್ಷ ಅಂಡಮಾನ ಜೈಲು ನಂತರ ರತ್ನಗಿರಿಯಲ್ಲಿ 11 ವರ್ಷದ ಕಠಿಣ ಕಾರಾಗೃಹವಾಸ ಮಾಡಿದ್ದರು. ಕೆಲವೊಬ್ಬರು ದಾಖಲೆಗೆ ಜೈಲು ಸೇರಿದ್ದು ಆದರೆ ಇವರು ಜೈಲು ಸೇರಿದ್ದೇ ಒಂದು ದಾಖಲೆಯಾಗಿತ್ತು.



'ಕರ್ಮಯೋಗಿ ಪ್ರಶಸ್ತಿ' ಪ್ರದಾನ

ಚಿಕ್ಕೋಡಿ ತಾಲೂಕಿನ ಶಮನೇವಾಡಿ ಗ್ರಾಮದಲ್ಲಿ ಮಂಗಳವಾರ ಎಚಿಎಂ ಇಂಜಿನಿಯರಿಂಗ್ ಕಾಲೇಜ್ ಉದ್ಘಾಟನೆ, 151 ಅಡಿ ಎತ್ತರದ ಭಗವಾನ ಪಾರ್ಶ್ವನಾಥರ ಮೂರ್ತಿ ಶಂಕುಸ್ಥಾಪನೆ ಹಾಗೂ ಸರಸ್ವತಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸಮ್ಮುಖದಲ್ಲಿ ರಾಷ್ಟ್ರಸಂತ ಆಚಾರ್ಯ ಗುಣಧರನಂದಿ ಮಹಾರಾಜರು ಅವರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ 'ಕರ್ಮಯೋಗಿ ಪ್ರಶಸ್ತಿ' ಪ್ರದಾನ ಮಾಡಿದರು. ಈ ವೇಳೆ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಇದ್ದರು.

ಸ್ವಾತಂತ್ರ್ಯ ದೀವಿಗೆಯನ್ನು ಹಚ್ಚಿದ ಸಾವರ್ಕರ್ ಹೆಸರನ್ನು ಇತಿಹಾಸದ ಪುಟದಲ್ಲಿಯೇ ಸೇರಿಸಲಿಲ್ಲ. ಅಂದು ಶಿಕ್ಷಣ ಮಂತ್ರಿಯಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ರ ಕೃಪೆಯಿಂದ ಅನೇಕ ಹೋರಾಟಗಾರರು ಇತಿಹಾಸದ ಪಠ್ಯಕ್ರಮದಿಂದ ಮರೆಯಾಗಿ ಹೋಗಿದ್ದಾರೆ. ಈಗ ಮತ್ತೆ ನಾವು ಮುನ್ನೆಲೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ.
■ ಬಿ.ಎಲ್.ಸಂತೋಷ್, ಬಿಜೆಪಿ ಪ್ರಧಾನ ಕಾರ್ಯದರ್ಶಿ

ಅಂತಹ ಅಂಡಮಾನ ಜೈಲನ್ನು ಕಾಂಗ್ರೆಸ್ಸಿಗರು ಆಸ್ಪತ್ರೆಯನ್ನಾಗಿ ಮಾಡಲು ಹೊರಟಿದ್ದು ಅಸಹ್ಯಕರವಾಗಿತ್ತು. ಏಕೆಂದರೆ ಅಲ್ಲಿ ಸುಮಾರು ೩೬೦ಕ್ಕೂ ಅಧಿಕ ಕೈದಿಗಳು ತಮ್ಮ ಹೆಸರು ಬರೆದು ಆತ್ಮಾರ್ಪಣೆ ಮಾಡಿಕೊಂಡಿದ್ದರು. ಆದರೆ, ಆ ಹೆಸರಿನಲ್ಲಿ ಯಾವುದೇ ಓರ್ವ ಕಾಂಗ್ರೆಸ್ಸಿಗರ ಹೆಸರಿಲ್ಲ ಎಂದರು. ಸ್ವಾತಂತ್ರ್ಯ ಅನೇಕ ಕಾರಣದಿಂದ ಸಿಕ್ಕಿದೆ. ಸ್ವಾತಂತ್ರ್ಯ ನಂತರ ಕೆಲವೊಂದು ಸಂಗತಿಯನ್ನು ತೆಗೆದು ಹಾಕಿದ್ದಾರೆ. ನಮ್ಮೆಲ್ಲರ ಮತದ ಪ್ರಭಾವದಿಂದ ಮತ್ತೆ ಪಠ್ಯದಲ್ಲಿ ಸೇರ್ಪಡೆಯಾಗಿದೆ ಎಂದರು. ರುದ್ರಾವಧೂತ ಮಠದ ಕೃಷ್ಣಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು. ಡಾ. ತಾತಾಸಾಹೇಬ ಬಾಂಗಿ ಅಧ್ಯಕ್ಷತೆ ವಹಿಸಿದ್ದರು.

ಎಐ ಸಕ್ರಿಯ ಆಡಳಿತ ರಾಜ್ಯವಾಗಲಿದೆ: ಶಾಲಿನಿ

• **ಬೆಂಗಳೂರು:** ಸಾರ್ವಜನಿಕ ಸೇವೆ ವಿತರಣೆ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆಯನ್ನು ಸುಧಾರಿಸುವ ಮೂಲಕ ಕರ್ನಾಟಕವನ್ನು ಎಐ ತಂತ್ರಜ್ಞಾನದ ಹಬ್ ಮಾತ್ರವಲ್ಲದೆ, ಎಐ-ಸಕ್ರಿಯ ಆಡಳಿತ ರಾಜ್ಯವನ್ನಾಗಿ ಮಾಡುವುದು ಸರ್ಕಾರದ ದೂರದೃಷ್ಟಿಯಾಗಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.



ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಎಐ-ಸಿಒಇ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸೆಂಟರ್ ಆಫ್ ಎಕ್ಸಲೆನ್ಸ್) ಅನುಷ್ಠಾನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಎಐ ಎನ್ನುವುದು ಕೇವಲ ತಂತ್ರಜ್ಞಾನದ ಚರ್ಚೆಯಲ್ಲ, ಇದು ಮೂಲಭೂತವಾಗಿ ನಂಬಿಕೆ, ಜವಾಬ್ದಾರಿ, ಪಾರದರ್ಶಕತೆ ಮತ್ತು ನಾಗರಿಕರ ಮೇಲಿನ ಪ್ರಭಾವದ ಕುರಿತಾಗಿದೆ ಎಂದರು.

ಆಡಳಿತದಲ್ಲಿ ಸುರಕ್ಷಿತ ಮತ್ತು ನಾಗರಿಕ ಕೇಂದ್ರಿತ ಎಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಕುರಿತು ಚರ್ಚಿಸಲು ವಿವಿಧ ರಾಜ್ಯಗಳ ಹಿರಿಯ ಸರ್ಕಾರಿ ಅಧಿಕಾರಿಗಳು, ನೀತಿ ನಿರೂಪಕರು, ಉದ್ಯಮದ ಮುಖಂಡರು, ಶಿಕ್ಷಣ ತಜ್ಞರು, ನವೋದ್ಯಮಗಳು ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರು ಈ ಕಾರ್ಯಾಗಾರದಲ್ಲಿ ಒಟ್ಟಾಗಿ ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, ಮರುಬಳಕೆ ಮಾಡಬಹುದಾದ ಎಐ ಸೇವೆಗಳು, ಬಹುಭಾಷಾ ಇಂಟರ್ಫೇಸ್‌ಗಳನ್ನು ಬೆಂಬಲಿಸಲು ಕರ್ನಾಟಕ ಎಐ ಸ್ಟಾಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದ ಅವರು, ಕರ್ನಾಟಕದ ಶಕ್ತಿಯು ಕೇವಲ ತಂತ್ರಜ್ಞಾನ ಸೃಷ್ಟಿಯಲ್ಲಷ್ಟೇ ಅಲ್ಲ, ಅದನ್ನು ಜನಸಾಮಾನ್ಯರ ಒಳಿತಿಗಾಗಿ ಬಳಸುವುದಾಗಿದೆ ಎಂದರು.

ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ ಅವರು, ಕರ್ನಾಟಕದಲ್ಲಿ ವಿವಿಧ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ 20 ಕ್ಕೂ ಹೆಚ್ಚು ಸೆಂಟರ್ ಆಫ್ ಎಕ್ಸಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳಲ್ಲಿ ಮೂರು ಎಐಗೆ ಮೀಸಲಾಗಿವೆ ಎಂದರು.

ಕಾರ್ಯಾಗಾರದಲ್ಲಿ ಆಂಧ್ರಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಪ್ರತಿನಿಧಿಗಳು ಹಾಗೂ ಇಂಡಿಯಾ ಎಐ ಮಿಷನ್‌ನ ಅಧಿಕಾರಿಗಳು ಭಾಗವಹಿಸಿದ್ದರು.

ಹೈಕಮಾಂಡ್‌ನ ಪರಿಹಾರ ಸೂತ್ರ

ಪುಟ ೧ ➔ ಮೊದಲಿಗೆ ಸಿದ್ದರಾಮಯ್ಯ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಭೆ ನಡೆಸಿದ್ದಾರೆ. ಬಳಿಕ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ತರುವಾಯ ಉಭಯ ನಾಯಕರೊಂದಿಗೆ ಆಗಮಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಾಧ್ಯಮಗಳೊಂದಿಗೆ ಮಾತನಾಡಿದ್ದಾರೆ. ಸಭೆಯಲ್ಲಿ ಮುಂಬರುವ ಚುನಾವಣೆಗಳ ಕುರಿತಾಗಿ ಚರ್ಚಿಸಿದ್ದಾಗಿ ತಿಳಿಸಿದ್ದಾರೆ. ಆದರೆ, ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಾಗುವ ಮುನ್ಸೂಚನೆ ಲಭಿಸಿದೆ. ಸಚಿವರಾದ ಪರಮೇಶ್ವರ, ಸತೀಶ್ ಜಾರಕಿಹೊಳಿ, ಎಚ್.ಸಿ ಮಹದೇವಪ್ಪ, ಭೈರತಿ ಸುರೇಶ್, ಕೆ.ಜೆ ಜಾರ್ಜ್, ಎಂ.ಬಿ.ಪಾಟೀಲ ಅವರೂ ದಿಲ್ಲಿಗೆ ತೆರಳಿದ್ದರು. ಬೆಳಗ್ಗೆ ವರಿಷ್ಠರ ಸಭೆಯ ಮುಂಚೆ ಸಚಿವರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತುಕತೆ ನಡೆಸಿದ್ದರು.

ಸಭೆಯ ನಂತರ ಸಚಿವ ಕೆ.ಜೆ ಜಾರ್ಜ್ ಅವರ ದಿಲ್ಲಿಯಲ್ಲಿರುವ ನಿವಾಸಕ್ಕೆ ತೆರಳಿದರು. ಹೈಕಮಾಂಡ್ ನಾಯಕರ ಕರೆಯ ಮೇಲೆ ಸೋಮವಾರವೇ ದಿಲ್ಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರಿಷ್ಠರ ಜೊತೆಗೆ ಮಾತುಕತೆ ನಡೆಸಿ ಮಂಗಳವಾರ ರಾತ್ರಿಯೇ ಆಪ್ತರೊಂದಿಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಆದರೆ, ರಾಜ್ಯದ ಜನ ಕುತೂಹಲಭರಿತಾಗಿ ರಾಜ್ಯ ರಾಜಕಾರಣದತ್ತ ದೃಷ್ಟಿ ನೆಟ್ಟಿದ್ದು, ಕಾಂಗ್ರೆಸ್ ಹೈಕಮಾಂಡ್ ಕಂಡುಕೊಂಡಿರುವ ಪರಿಹಾರ ಸೂತ್ರದ ಕುರಿತಾಗಿ ವ್ಯಾಪಕ ಚರ್ಚೆಯಲ್ಲಿ ತೊಡಗಿಕೊಂಡಿದ್ದಾರೆ.

ಮುಂಬರುವ ಚುನಾವಣೆ ಕುರಿತು ಚರ್ಚೆ

ಮುಂಬರುವ ವಿಧಾನ ಪರಿಷತ್ ಚುನಾವಣೆ ಮತ್ತು ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿದಂತೆಯೂ ದಿಲ್ಲಿಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಮಾತುಕತೆಯಾಗಿದೆ. ಜೂನ್‌ನಲ್ಲಿ ರಾಜ್ಯಸಭೆಯ ನಾಲ್ಕು ಸ್ಥಾನಗಳು ಮತ್ತು ಕರ್ನಾಟಕ ವಿಧಾನ ಪರಿಷತ್‌ನ ಏಳು ಸ್ಥಾನಗಳು ತೆರವಾಗಲಿದ್ದು, ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಚರ್ಚೆ ನಡೆದಿದೆ.

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ

ಪುಟ ೧ ➔ ಮಸೂದೆಗೆ ಮಂಜೂರಾತಿ ನೀಡಲು ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಿರಾಕರಿಸಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ದ್ವೇಷ ಭಾಷಣ, ದ್ವೇಷ ಅಪರಾಧಗಳ (ನಿಯಂತ್ರಣ) ಮಸೂದೆಗೆ ಸಂಬಂಧಿತ ಮಾಹಿತಿಯನ್ನು, ಗೃಹ ವ್ಯವಹಾರಗಳ ಖಾತೆಯ ಕೇಂದ್ರ-ರಾಜ್ಯ ವಿಭಾಗವು ಈ ವರ್ಷದ ಆರಂಭ ದಲ್ಲಿ ರಾಷ್ಟ್ರಪತಿಗಳ ಅಂಕಿತಕ್ಕೆ ರವಾನಿಸಿತ್ತು. ಪ್ರತಿಯಾಗಿ, ಯಾವ ಸಮಸ್ಯೆಗಳ ನಿವಾರಣೆ ಅಥವಾ ನಿಯಂತ್ರಣ ಪ್ರಸ್ತಾವಿತ ಮಸೂದೆಯ ಆಶಯವೋ, ಅವೆಲ್ಲವೂ ಈಗಾಗಲೆ ಅಸ್ತಿತ್ವದಲ್ಲಿರುವ ಕಾನೂನುಗಳ ಸಹಿತ 2023ರ ಭಾರತೀಯ ನ್ಯಾಯಸಂಹಿತೆಯ ವಿವಿಧ ನಿಯಮಾವಳಿಗಳಲ್ಲಿ ಬಹುತೇಕ ಅಡಕವಾಗಿವೆ ಎಂದು ಗೃಹ ವ್ಯವಹಾರಗಳ ಖಾತೆ ಮೇ 12ರಂದು ಪ್ರತ್ಯುತ್ತರಿಸಿತ್ತು.

ಚರ್ಚೆಗೆ ಸ್ಪೀಕರ್ ನಕಾರ: ವಿವಾದಾಸ್ಪದ ಮಸೂದೆಯನ್ನು ಕರ್ನಾಟಕ ಸರಕಾರ ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿಪಕ್ಷಗಳ ವಿರೋಧದ ಮಧ್ಯೆ ಅಂಗೀಕರಿಸಿತ್ತು. ಮಸೂದೆ ಮೇಲೆ ಚರ್ಚೆ ಪೂರ್ತಿಯಾಗೋ ಮುನ್ನವೇ ಮಸೂದೆಯನ್ನು ಮಂಜೂರು ಮಾಡಲಾಗಿತ್ತು. ಮಸೂದೆ ಬಗ್ಗೆ ವಿಸ್ತೃತ ಚರ್ಚೆಯಾಗಬೇಕು ಮತ್ತು ಸದನ ಸಮಿತಿ ಮಸೂದೆಯನ್ನು ಪರಾಮರ್ಶಿಸಬೇಕೆಂಬ ವಿಪಕ್ಷೀಯರ ಬೇಡಿಕೆಯನ್ನು ಸಭಾಪತಿ ಯು.ಟಿ.ಖಾದರ್ ತಿರಸ್ಕರಿಸಿದ್ದು, ಸಭಾಪತಿ ನಡೆಯನ್ನು ವಿರೋಧಿಸಿ ವಿಪಕ್ಷ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದ್ದರು.

ಕರ್ನಾಟಕದ ಪ್ರಸ್ತಾವಿತ ಶಾಸನದಲ್ಲಿ ದ್ವೇಷಪೂರಿತ ಅಪರಾಧಗಳಿಗೆ ಕಠಿಣ ಸಜೆ ನಿಗದಿಪಡಿಸಲಾಗಿದೆ. ಮಸೂದೆಯಡಿ, ಮೊದಲ ಬಾರಿ ಅಪರಾಧವೆಸಗಿದರೆ 1ರಿಂದ 7ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50ಸಾವಿರ ರೂ.ದಂಡ ವಿಧಿಸಲಾಗುವುದು. ಅಪರಾಧ ಪುನರಾವರ್ತನೆಯಾದಲ್ಲಿ ಗರಿಷ್ಠ 7ವರ್ಷ ಸಜೆ ಮತ್ತು 1ಲಕ್ಷ ರೂವರೆಗೆ ದಂಡ ವಿಧಿಸಲಾಗುವುದು. ಆದರೆ ಮಸೂದೆಯಲ್ಲಿನ ಹಲವು ನಿಯಮಗಳು ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾತಾಂತ್ರಿಕ ಅಭಿವ್ಯಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂಬ ಪ್ರತ್ಯುತ್ತರದೊಂದಿಗೆ, ಮಸೂದೆಗೆ ಮಂಜೂರಾತಿ ನೀಡಲು ರಾಜ್ಯಪಾಲ ಗೆಹ್ಲೋತ್ ನಿರಾಕರಿಸಿದ್ದರು ಮತ್ತು ಮಸೂದೆಯನ್ನು ರಾಜ್ಯ ಸರಕಾರಕ್ಕೆ ವಾಪಸ್ ಕಳುಹಿಸಿಕೊಟ್ಟಿದ್ದರು.

ರಾಜಧಾನಿಯಲ್ಲಿ ಎಬೋಲಾ ವೈರಸ್ ರೋಗದ ಶಂಕಿತ ಪ್ರಕರಣ ಪತ್ತೆ

• **ಬೆಂಗಳೂರು:** ನಗರದಲ್ಲಿ ಎಬೋಲಾ ವೈರಸ್ ರೋಗದ ಶಂಕಿತ ಪ್ರಕರಣವೊಂದು ಪತ್ತೆಯಾಗಿದೆ ಎನ್ನಲಾಗುತ್ತಿದ್ದು, ರಾಜಧಾನಿ ಜನತೆಯಲ್ಲಿ ತೀವ್ರ ಆತಂಕ ಮೂಡಿಸಿದೆ. ಉಗಾಂಡಾ ದೇಶದ ಕ್ಯಾಂಪಲಾ ಮೂಲದ ನಾಗಿರೆ ಲತಿಫಾ (28) ಎಂಬ ಮಹಿಳೆಯಲ್ಲಿ ಜ್ವರದ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದು, ಸದ್ಯ ಅವರನ್ನು ತೀವ್ರ ನಿಗಾದಲ್ಲಿ ಇರಿಸಲಾಗಿದೆ. ಈಕೆ ಕಳೆದ ಮೇ 23ರಂದು ಬೆಂಗಳೂರಿಗೆ ಆಗಮಿಸಿದ್ದರು. ರಾಯಲ್ ಏಸ್ ಬೂಟಿಕ್ ಹೋಟೆಲ್‌ನ ರೂಮ್ ನಂಬರ್ 303ರಲ್ಲಿ ತಂಗಿದ್ದರು ಎಂದು ತಿಳಿದುಬಂದಿದೆ.

Department of Health & Family Welfare

ಮಹಿಳೆಯಲ್ಲಿ ಎಬೋಲಾ ಮಾದರಿಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಹಿನ್ನೆಲೆ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡಿದ್ದು, ಆ್ಯಂಬುಲೆನ್ಸ್ ಮೂಲಕ ಅವರನ್ನು ಆಸ್ಪತ್ರೆಗೆ ದಾಖಲಿಸಿ ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಮಹಿಳೆಯಿಂದ ಮೇ 25ರಂದು ರಕ್ತ ಹಾಗೂ ಇತರ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ, ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕವಷ್ಟೇ ಸೋಂಕು ದೃಢವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳಿಂದ ತಿಳಿದುಬಂದಿದೆ. ಬುಧವಾರದೊಳಗೆ ಪರೀಕ್ಷಾ ವರದಿ ಲಭ್ಯವಾಗುವ ನಿರೀಕ್ಷೆಯಿದ್ದು, ವರದಿ ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಾರ್ವಜನಿಕರು ಅನಗತ್ಯ ಆತಂಕಕ್ಕೆ ಒಳಗಾಗಬಾರದು, ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

ವಿಧಾನ ಪರಿಷತ್‌ಗೆ ಜೂ.18ರಂದು ಮತದಾನ

• **ಬೆಂಗಳೂರು:** ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಖಾಲಿಯಾಗಲಿರುವ 7 ಸ್ಥಾನಗಳಿಗೆ ವೇಳಾಪಟ್ಟಿ ಪ್ರಕಟಿಸಿದೆ. ಜೂನ್ 18ರಂದು ಮತದಾನ ನಡೆಯಲಿದ್ದು, ಅದೇ ದಿನ ಫಲಿತಾಂಶ ಹೊರಬೀಳಲಿದೆ. ವಿಧಾನ ಪರಿಷತ್ ಸದಸ್ಯರಾದ ಗೋವಿಂದ ರಾಜು, ನಸೀರ್ ಅಹಮ್ಮದ್, ಎನ್.ನಾಗರಾಜು (ಎಂಟಿಬಿ), ಪ್ರತಾಪ ಸಿಂಹ ನಾಯಕ್ ಕೆ., ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ ಹಾಗೂ ಬಿ.ಕೆ.ಹರಿಪ್ರಸಾದ್ ಅವರ ಅವಧಿ ಜೂ.30 ರಂದು ಕೊನೆಗೊಳ್ಳಲಿದೆ. ತೆರವಾಗುವ ಈ ಸ್ಥಾನಗಳಿಗೆ ಹೊಸ ಸದಸ್ಯರ ಆಯ್ಕೆ ಮಾಡಬೇಕಾಗಿದೆ. ಚುನಾವಣಾ ಆಯೋಗ ಪ್ರಕಟಿಸಿರುವ ವೇಳಾಪಟ್ಟಿ ಪ್ರಕಾರ, ಜೂ.1ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಜೂ.9 ನಾಮಪತ್ರ ಪರಿ ಶೀಲನೆ ನಡೆಯಲಿದ್ದು, ಜೂ.11ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದೆ. ಜೂ.18ಕ್ಕೆ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ಜರುಗಲಿದೆ. ತರುವಾಯ ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಪ್ರಕಟವಾಗಲಿದೆ.

ನರೇಂದ್ರ ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

ಪುಟ ೧ ➔ ಎಲ್ಲರನ್ನೂ ಒಳಗೊಂಡ ಆಡಳಿತ ಸಿದ್ಧಾಂತದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೋದಿ ಸರಕಾರ, ದೇಶದ ಬಡವರ್ಗದ ಬದುಕನ್ನು ಗಮನಾರ್ಹವಾಗಿ ಸುಧಾರಿಸುತ್ತಿದೆ ಅಥವಾ ಇದಕ್ಕೆ ಪೂರಕ ಯೋಜನೆಗಳಿಗೆ ಆದ್ಯತೆ ನೀಡುತ್ತಿದೆ ಎಂದು ಬಿಹಾರದ ಸಚಿವ ರಾಮ್ ಕೃಪಾಳ್ ಯಾದವ್ ಸುದ್ದಿಗಾರರಿಗೆ ತಿಳಿಸಿದರು.

ಸಬ್‌ಕಾ ಸಾಥ್ , ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಅವಧಿಯಲ್ಲಿ ಪ್ರಧಾನಿ ಮೋದಿ ಅವರು ಸಬ್ ಕಾ ಸಾಥ್, ಸಬ್‌ಕಾ ವಿಕಾಸ್ ಮತ್ತು ಸಬ್‌ಕಾ ವಿಶ್ವಾಸ್ ಸಿದ್ಧಾಂತಗಳ ಆಧಾರದಲ್ಲಿ, ಮುಖ್ಯವಾಗಿ ದೇಶದ ಬಡವರ್ಗದ ಏಳಿಗೆಗಾಗಿ ಹಲವು ಜನಪರ ಉಪಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಪರಿಣಾಮ, ದೇಶವಿಂದು ಸರ್ವತ್ರ ಮುನ್ನಡೆ ಸಾಧಿಸುತ್ತಿದೆ ಮತ್ತು ದೇಶದ 140 ಕೋಟಿ ಜನತೆ ತುಂಬು ನೆಮ್ಮದಿ -ಸಂತೃಪ್ತಿ ವ್ಯಕ್ತಪಡಿಸುತ್ತಿದ್ದಾರೆ ಎಂದವರು ಪ್ರಶಂಸಿಸಿದ್ದಾರೆ.

ಜಗದ ಜನಪ್ರಿಯ ನಾಯಕ: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರುಷಗಳ ಆಡಳಿತವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿರುವ ದ್ಯೋತಕವಾಗಿ ಬಿಜೆಪಿಯು ಜೂ.5ರಿಂದ 21ರವರೆಗೆ ದೇಶಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಿದೆ ಎಂದು ಬಿಹಾರ ಬಿಜೆಪಿ ಅಧ್ಯಕ್ಷ ಸಂಜಯ್ ಸರೋಗಿ ತಿಳಿಸಿದ್ದಾರೆ. ರಾಷ್ಟ್ರ ಮೊದಲು ಎಂಬ ದೃಢ ಧ್ಯೇಯಕ್ಕೆ ಬದ್ಧರಾಗಿ ಪ್ರಧಾನಿ ನರೇಂದ್ರ ಮೋದಿ 12 ವರ್ಷಗಳ ಆಡಳಿತವನ್ನು ಪರಿಪೂರ್ಣವಾಗಿ ಮತ್ತು ಯಶಸ್ವಿಯಾಗಿ ಪೂರೈಸಿದ್ದಾರೆ. ಇಂದು ಜಗತ್ತಿನ ಅತ್ಯಂತ ಜನಪ್ರಿಯ ನಾಯಕರಲ್ಲೊಬ್ಬರಾಗಿರುವ ಪ್ರಧಾನಿ ಮೋದಿ ಅವರನ್ನು ದೇಶದ ಬಹುತೇಕ ಎಲ್ಲಾ ಪ್ರಜೆಗಳು ಅತ್ಯಂತ ಗೌರವ-ಆತ್ಮವಿಶ್ವಾಸದೊಂದಿಗೆ ಬೆಂಬಲಿಸುತ್ತಿದ್ದಾರೆ. ಮೋದಿಯವರು 12 ವರ್ಷ ಕಾಲ ಯಶಸ್ವೀ ಪ್ರಧಾನಿಯಾಗಿ ಸಾರ್ಥಕ ಆಡಳಿತ ನಿರ್ವಹಿಸಿದ ಸಾಧನೆಯ ದ್ಯೋತಕವಾಗಿ ಜೂ.5ರಿಂದ 21ರ ತನಕ ಪಾಕ್ಷಿಕ ಅವಧಿಗೆ ಪಕ್ಷವು ದೇಶಾದ್ಯಂತ ಅಭಿಯಾನ ನಡೆಸಲಿದೆ ಎಂದು ಸರೋಗಿ ಮಾಹಿತಿ ನೀಡಿದ್ದಾರೆ.

ಜನರ ಮನೆಬಾಗಿಲಿಗೆ ಎನ್‌ಡಿಎ ನಾಯಕರು: ರಾಷ್ಟ್ರವ್ಯಾಪಿ ಅಭಿಯಾನದಂಗವಾಗಿ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಸಂಸದರು ಮತ್ತು ಹಿರಿಯ ಬಿಜೆಪಿ ನಾಯಕರು ದೇಶಾದ್ಯಂತ ಜನರ ಮನೆಬಾಗಿಲಿಗೆ ತೆರಳಿ ನರೇಂದ್ರ ಮೋದಿ ಸರಕಾರದ ಭರ್ಜರಿ ಜನಪರ ಸಾಧನೆ -ಯೋಜನೆ-ಕಾರ್ಯಕ್ರಮಗಳನ್ನು ಪರಿಚಯಿಸುವರು. ಮುಖ್ಯವಾಗಿ ಮೋದಿ ಸರಕಾರವು ಕೈಗೊಂಡಿರುವ ಜನಪರ ಕಲ್ಯಾಣ ಕಾರ್ಯಕ್ರಮಗಳು, ಡಿಜಿಟಲ್ ಗವರ್ನೆನ್ಸ್, ಮೂಲಸೌಕರ್ಯ ಬೆಳವಣಿಗೆ, ಆರ್ಥಿಕ ಸುಧಾರಣೆಗಳು ಮತ್ತು ವಿದೇಶಾಂಗ ನೀತಿ ಉಪಕ್ರಮಗಳನ್ನು ಜನರಿಗೆ ಮನವರಿಕೆ ಮಾಡುವರೆಂದು ಪಕ್ಷ ನಾಯಕರು ತಿಳಿಸಿದ್ದಾರೆ.

ಬಹುತೇಕ ಕುಗ್ಗಿದೆ ಭ್ರಷ್ಟಾಚಾರಗಳು: ಮೋದಿ ಸರಕಾರ ಆಡಳಿತ ವ್ಯವಸ್ಥೆಯಲ್ಲಿ ಜಾರಿಗೊಳಿಸಿರುವ ಸುಧಾರಣೆಗಳು, ಭಾರತದ ವಿದೇಶಾಂಗ ಬಾಂಧವ್ಯಗಳು ಅದ್ಭುತವೆಂದು ಜೆಡಿಯು ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಪ್ರಶಂಸಿಸಿದ್ದಾರೆ. 12 ವರ್ಷಗಳ ಅವಧಿಯಲ್ಲಿ ಮುಖ್ಯವಾಗಿ ಪಾರದರ್ಶಿತ್ವಕ್ಕೆ ಸಂಬಂಧಿಸಿ ನರೇಂದ್ರ ಮೋದಿ ಸರಕಾರ ಕೈಗೊಂಡ ಮಹತ್ತ್ವದ ನಿರ್ಧಾರಗಳಿಂದಾಗಿ ಭ್ರಷ್ಟಾಚಾರವಿಂದು ಬಹುತೇಕ ಕಡಿಮೆಯಾಗಿದೆ.

ಹಿಂದಿನ ಸರಕಾರಗಳಿಗೆ ಹೋಲಿಸಿದರೆ, ಹೊಣೆಗಾರಿಕೆಗಳ ಗುರುತಿಸುವುದು ಮತ್ತು ಲೋಪಗಳ ಗುರುತಿಸುವಿಕೆ ಬಲು ಸುಗಮವಾಗಿದೆ. ಈಚಿನ ವರ್ಷಗಳಲ್ಲಿ ಜಾಗತಿಕ ಅಂಗಣದಲ್ಲಂತು ಭಾರತದ ಸ್ಥಾನಮಾನ ಅತ್ಯಂತ ಬಲಿಷ್ಠವಾಗಿದೆ ಎಂದು ಭಾರತದ ರಾಜತಾಂತ್ರಿಕ ಧೋರಣೆಗಳನ್ನು ಉಲ್ಲೇಖಿಸಿ, ಮೋದಿ ಸರಕಾರದ ವಿದೇಶಾಂಗ ನೀತಿ ಮತ್ತು ಆಡಳಿತ ನಿರ್ವಹಣೆ ದಾಖಲೆಯನ್ನು ರಾಜೀವ್ ರಂಜನ್ ಹೊಗಳಿದ್ದಾರೆ.

ಬಲಿಷ್ಠ ಜಾಗತಿಕ ಮಾನ್ಯತೆ

ಪುಟ ೧ ➔ ಚೀನಾ ಇರಲಿ, ರಷ್ಯಾ ಅಥವಾ ಅಮೆರಿಕ ಹೀಗೆ ಪ್ರತಿಯೊಂದು ರಾಷ್ಟ್ರಗಳೊಂದಿಗೆ ಭಾರತವು ಸಮತೋಲಿತ ಬಾಂಧವ್ಯವನ್ನು ಕಾಯ್ದುಕೊಂಡಿರುವುದೇ ಇದಕ್ಕೆ ಕಾರಣವೆಂದು ಗಮನ ಸೆಳೆದ ರಾಜೀವ್‌ರಂಜನ್, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ತೃತೀಯ ಅವಧಿಗೆ 2024ರಲ್ಲಿ ಅಧಿಕಾರಕ್ಕೆ ಮರಳಿದೆ ಮತ್ತು ಮೋದಿ ನೇತೃತ್ವದ ಎನ್‌ಡಿಎ ಸರಕಾರ ಜನಪರ ಕಲ್ಯಾಣ ಕಾರ್ಯಕ್ರಮಗಳ ವಿಸ್ತೃತತೆ, ಮೂಲಸೌಕರ್ಯಗಳ ಸೃಷ್ಟಿ ಮತ್ತು ಜಾಗತಿಕ ರಾಜತಾಂತ್ರಿಕತೆಗಳಿಗೆ ತಮ್ಮ ನಿರಂತರ ಆದ್ಯತೆಯೆಂಬ ರಾಜಕೀಯ ಸಂದೇಶ ರವಾನಿಸಿದೆ.

ದೇಗುಲ, ಶಾಲೆಗಳ ಬಳಿ ಮದ್ಯದಂಗಡಿ ಬಂದ್

• **ಕಲ್ಯಾಣಿ/ ಕೋಲ್ಕತಾ:** ಪಶ್ಚಿಮ ಬಂಗಾಳದಲ್ಲಿ ಶಾಲೆ, ಕಾಲೇಜು ಹಾಗೂ ದೇವಾಲಯಗಳ ಸುತ್ತಮುತ್ತ ಮದ್ಯದಂಗಡಿಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ಹೇರಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮುಂದಾಗಿದ್ದು, 1 ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಮದ್ಯದಂಗಡಿಗೆ ಅನುಮತಿ ನೀಡುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ನಾದಿಯಾ ಜಿಲ್ಲೆಯ ಕಲ್ಯಾಣಿಯಲ್ಲಿ ನಡೆದ ಆಡಳಿತಾತ್ಮಕ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮತ್ತು ಕುಟುಂಬಗಳ ವಾತಾವರಣವನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಶಿಕ್ಷಣ ಹಾಗೂ ಧಾರ್ಮಿಕ ಕೇಂದ್ರಗಳ ಸಮೀಪ ಮದ್ಯದಂಗಡಿಗಳ ಬಗ್ಗೆ ಸಾರ್ವಜನಿಕರಿಂದ ದೀರ್ಘಕಾಲದಿಂದಲೂ ಆಕ್ಷೇಪ ವ್ಯಕ್ತವಾಗುತ್ತಿತ್ತು ಎಂದು ಹೇಳಿದರು. ಇದೇ ವೇಳೆ ರಾಜ್ಯ ಸರ್ಕಾರ ಹಲವು ಜನಪರ ಯೋಜನೆಗಳನ್ನೂ ಘೋಷಿಸಿದೆ. ರಾಜ್ಯದಾದ್ಯಂತ ಸುಮಾರು 400 ಕ್ಯಾಂಟೀನ್‌ಗಳಲ್ಲಿ ಕೇವಲ 5 ರೂ.ಗೆ 'ಮಾಚ್-ಭಾತ್' (ಮೀನು-ಅನ್ನ) ಊಟ ಒದಗಿಸಲಾಗುವುದು ಎಂದು ಸುವೇಂದು ಅಧಿಕಾರಿ ತಿಳಿಸಿದರು. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರ ಒದಗಿಸುವುದು ಇದರ ಉದ್ದೇಶವಾಗಿದೆ. ಇದರ ಜೊತೆಗೆ 'ಅನ್ನಪೂರ್ಣ ಯೋಜನೆ' ಅಡಿಯಲ್ಲಿ ಅರ್ಹ ಮಹಿಳೆಯರಿಗೆ ಪ್ರತಿ ತಿಂಗಳು 3,000 ರೂ. ಆರ್ಥಿಕ ನೆರವು ನೀಡಲಾಗುವುದು ಎಂದು ಘೋಷಿಸಲಾಗಿದೆ. ಮೇ 27ರಿಂದ ಅರ್ಜಿ ವಿತರಣೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಹದಗೆಡುತ್ತಿದೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ: ಆರ್.ಅಶೋಕ

ಹಾಸನ: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ಗ್ಯಾರಂಟಿ ಯೋಜನೆಗಳ ಪರಿಣಾಮವಾಗಿ ರಾಜ್ಯದ ಸಾಲದ ಮೊತ್ತ 7 ಲಕ್ಷ ಕೋಟಿ ದಾಟಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ



ಮಾತನಾಡಿದ ಅವರು, ಮುಂದಿನ ವರ್ಷಕ್ಕೆ ಸಾಲದ ಪ್ರಮಾಣ 8.5 ಲಕ್ಷ ಕೋಟಿಗೆ ಏರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಡುವ ವೇಳೆಗೆ ಅದು 10 ಲಕ್ಷ ಕೋಟಿಗೆ ತಲುಪಲಿದೆ. ಇದುವರೆಗೆ ರಾಜ್ಯದ ಎಲ್ಲಾ ಸಿಎಂಗಳು ಮಾಡಿದ ಸಾಲಕ್ಕಿಂತ ಹೆಚ್ಚು ಸಾಲವನ್ನು ಸಿದ್ದರಾಮಯ್ಯ ಮಾಡಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಕಿತ್ತಾಟದಲ್ಲಿ ಸರ್ಕಾರ ಕೋಮಾದಲ್ಲಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೆ, ಯಾರು ಹೋಗುತ್ತಾರೆ ಎಂಬ ಗೊಂದಲವೇ ಆಡಳಿತವನ್ನು ಹಾಳು ಮಾಡಿದೆ. ಅವ್ಯವಸ್ಥೆ ಸರಿಪಡಿಸಲು ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿದೆ. 2028ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದರು. ಗ್ಯಾರಂಟಿ ಯೋಜನೆ ಕುರಿತು ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿ ವಿರೋಧಿ ನಾವುಗಳಲ್ಲ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಭಾಗ್ಯಲಕ್ಷ್ಮಿ, ಸೈಕಲ್ ವಿತರಣೆ ಯೋಜನೆ ಜಾರಿಗೆ ತಂದಿದ್ದೆವು. ನಾವು ಆದಾಯಕ್ಕೆ ಅನುಗುಣವಾಗಿ ಯೋಜನೆ ರೂಪಿಸಿದ್ದೆವು. ಆದರೆ ಕಾಂಗ್ರೆಸ್ ಚುನಾವಣೆ ಗೆಲ್ಲಲು ಗ್ಯಾರಂಟಿ ಘೋಷಿಸಿ ಈಗ ಅದಕ್ಕೆ ಕತ್ತರಿ ಹಾಕಲು ಹೊರಟಿದೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ಪಡಿತರ ಅಕ್ಕಿ ವಿತರಣೆಯಲ್ಲಿಯೂ ಅವ್ಯವಸ್ಥೆ ಉಂಟಾಗಿದೆ. ಕೇಂದ್ರ ಸರ್ಕಾರದಿಂದ ಒಂದು ತಿಂಗಳಿಗೂ ಅಕ್ಕಿ ಬಾಕಿ ಇಲ್ಲ. ಆದರೂ ಅನೇಕ ಪಡಿತರ ಅಂಗಡಿಗಳಲ್ಲಿ ಅಕ್ಕಿ ಸಿಗುತ್ತಿಲ್ಲ. ಮೂರು ತಿಂಗಳಿಂದ ಪಿಂಚಣಿ ಸಹ ಸರಿಯಾಗಿ ವಿತರಣೆ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸನ್ಮಾನ



ಪದ್ಮಶ್ರೀ ಪುರಸ್ಕೃತರಾದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಪುಸ್ತಕ ಮನೆ ರೂವಾರಿ ಎಂ. ಅಂಕೇಗೌಡ ಅವರನ್ನು ದಿಲ್ಲಿಯ ತಮ್ಮ ನಿವಾಸಕ್ಕೆ ಬರಮಾಡಿಕೊಂಡ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಮಂಗಳವಾರ ಆತ್ಮೀಯವಾಗಿ ಗೌರವಿಸಿದರು.

ಅನುಮತಿ ರಹಿತ ಕೇಂದ್ರಗಳಲ್ಲಿ ಕೋಚಿಂಗ್‌ಗೆ ಕಠಿಣ ಕ್ರಮ

ಬೆಂಗಳೂರು: ಇಲಾಖೆಯಿಂದ ಅನುಮೋದನೆ ಪಡೆದಿರುವ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಪಾಠ ನಡೆಸುತ್ತಿರುವ ಹಾಗೂ ಖಾಸಗಿ ಕೋಚಿಂಗ್ ಕೇಂದ್ರಗಳಲ್ಲಿ ತರಗತಿಗಳನ್ನು ನಡೆಸುತ್ತಿರುವ ಕೆಲವು ಪದವಿ ಪೂರ್ವ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಎಚ್ಚರಿಕೆ ನೀಡಿದೆ.

2026–27ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪ್ರವೇಶಕ್ಕೆ ಸಂಬಂಧಿಸಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ನಿರ್ದೇಶಕರು ಸಾರ್ವಜನಿಕ ಸಲಹೆ ಪ್ರಕಟಿಸಿದ್ದು, ಕೆಲವು ಕಾಲೇಜುಗಳು ಇಲಾಖೆಯ ಅನುಮೋದನೆ ಇಲ್ಲದ ಸ್ಥಳಗಳಲ್ಲಿ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ನೀಡಿದರೂ, ವಾಸ್ತವವಾಗಿ ಪಾಠಗಳನ್ನು ಖಾಸಗಿ ತರಬೇತಿ ಮತ್ತು ಕೋಚಿಂಗ್ ಸಂಸ್ಥೆಗಳಲ್ಲಿ ನಡೆಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಇಂತಹ ಕ್ರಮಗಳು ಕರ್ನಾಟಕ ಶಾಲಾ ಶಿಕ್ಷಣ ನಿಯಮಗಳು–2024 ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ನಿಯಮಗಳಿಗೆ ವಿರುದ್ಧವಾಗಿವೆ ಎಂದು ಇಲಾಖೆ ಸ್ಪಷ್ಟಪಡಿಸಿದೆ. ನಿಯಮ ಉಲ್ಲಂಘನೆ ನಡೆಸುವ ಸಂಸ್ಥೆಗಳಿಗೆ ಸ್ಪಷ್ಟೀಕರಣಕ್ಕೆ ಅವಕಾಶ ನೀಡಿ, ನಂತರ ಕಾಲೇಜುಗಳ ಮಂಜೂರಾತಿ ಮತ್ತು ಶೈಕ್ಷಣಿಕ ಮಾನ್ಯತೆ ರದ್ದುಪಡಿಸುವ ಕ್ರಮ ಜರುಗಿಸ ಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಕರು ಮತ್ತು ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಮೊದಲು ಸಂಬಂಧಿತ ಪಿಯು ಕಾಲೇಜಿನ ಅನುಮೋದಿತ ವಿಳಾಸ, ಮಂಜೂರಾದ ವಿಭಾಗಗಳು, ಕಾಂಬಿನೇಶನ್‌ಗಳು ಹಾಗೂ ಪ್ರವೇಶ ಸಾಮರ್ಥ್ಯ (ಇಂಟೇಕ್) ಕುರಿತು ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ತರಗತಿಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತದೆ ಎಂಬ ಮೌಖಿಕ ಭರವಸೆಗಳನ್ನು ನೀಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಇಂತಹ ಭರವಸೆಗಳು ಅಥವಾ ತಪ್ಪು ಮಾಹಿತಿಗಳನ್ನು ನಂಬಬಾರದು ಎಂದು ಪಾಲಕರಿಗೆ ಇಲಾಖೆ ಸಲಹೆ ನೀಡಿದೆ.

ಕಿರುಸುದ್ದಿ

ವಕೀಲರ ಧರಣಿಗೆ ಕೆ.ಎಸ್. ಈಶ್ವರಪ್ಪ ಬೆಂಬಲ

ಶಿವಮೊಗ್ಗ: ವಕೀಲರು ಧರಣಿ ಮಾಡುತ್ತಿದ್ದಾರೆ ಎಂದರೆ ಅದು ರಾಜ್ಯಕ್ಕೆ ಅಪಮಾನ. ಕೂಡಲೇ ರಾಜ್ಯ ಸರ್ಕಾರ ಈ ಕಡೆ ಗಮನ ಹರಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಒತ್ತಾಯಿಸಿದ್ದಾರೆ. ವಕೀಲರ ಭವನದ ಆವರಣದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಒತ್ತಾಯಿಸಿ ವಕೀಲರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಹೋರಾಟ ಸ್ಥಳಕ್ಕೆ ರಾಷ್ಟ್ರಭಕ್ತರ ಬಳಗದ ಬೆಂಬಲಿಗರೊಂದಿಗೆ ತೆರಳಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ನ್ಯಾಯಯುತ ಬೇಡಿಕೆಗಳನ್ನು ಈಡೇರಿಕೆಗೆ ವಕೀಲರು ಕಳೆದ ಹಲವು ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಶಿವಮೊಗ್ಗ ಕೇಂದ್ರವಾಗಿರಿಸಿ ಹೈಕೋರ್ಟ್ ಸಂಚಾರಿ ಪೀಠ ಬೇಕು ಎನ್ನುವ ಅವರ ಬೇಡಿಕೆಗೆ ರಾಷ್ಟ್ರಭಕ್ತರ ಬಳಗದ ಸಂಪೂರ್ಣ ಬೆಂಬಲವಿದೆ. ಕೊನೆಯವರೆಗೂ ನಾವು ಅವರೊಂದಿಗೆ ಇರುತ್ತೇವೆ ಎಂದು ಘೋಷಿಸಿದರು.

ಸಾಲಬಾಧೆ: ರೈತ ಆತ್ಮಹತ್ಯೆ

ಮೈಸೂರು: ಸಾಲ ಬಾಧೆ ತಾಳದೆ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ಮಂಟಿಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ದೇವರಾಜ್ (60) ಆತ್ಮಹತ್ಯೆ ಮಾಡಿಕೊಂಡವರು. ಇವರಿಗೆ ತಂದೆ–ತಾಯಿ, ಪತ್ನಿ, ಇಬ್ಬರು ಪುತ್ರರಿದ್ದಾರೆ. ದೇವರಾಜ್‌ಗೆ ಗ್ರಾಮದಲ್ಲಿ 4.5 ಎಕರೆ ಜಮೀನಿದ್ದು, ಡಬಲ್ ಬ್ಯಾರನ್ ಹೊಂದಿದ್ದಾರೆ. ತಂಬಾಕು ಮತ್ತು ಶುಂಠಿ ಬೆಳೆಗಾಗಿ ಹುಣಸೂರಿನ ಯೂನಿಯನ್ ಬ್ಯಾಂಕ್‌ನಲ್ಲಿ ಹಾಗೂ ಟ್ರ್ಯಾಕ್ಟರ್ ಖರೀದಿಗಾಗಿ ಖಾಸಗಿ ಫೈನಾನ್ಸ್‌ನಲ್ಲಿ ಲಕ್ಷಾಂತರ ರೂ. ಸಾಲ ಪಡೆದಿದ್ದರು. ಗ್ರಾಮದಲ್ಲಿ ಕೈಸಾಲವನ್ನು ಕೂಡಮಾಡಿದ್ದರು. ಬ್ಯಾಂಕಿನಿಂದ ಹಲವಾರು ಬಾರಿ ನೋಟಿಸ್ ಬಂದಿತ್ತಲ್ಲದೆ, ಸಾಲದ ಸಂಬಂಧ ನ್ಯಾಯಾಲಯದಲ್ಲೂ ಪ್ರಕರಣ ನಡೆದಿತ್ತು. ಈ ವರ್ಷ ತಂಬಾಕು, ಶುಂಠಿ ಸಾಲ ಬೆಳೆ ಕೈಕೊಟ್ಟಿದ್ದರಿಂದ ತೀರಿಸಲಾಗದೆ ಪರಿತಪಿಸುತ್ತಿದ್ದ ತಂದೆ ದೇವರಾಜ್ ಮನೆಯಲ್ಲಿದ್ದ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ಪ್ರದೀಪ್ ಕುಮಾರ್ ಹುಣಸೂರು ನಗರ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನಕ್ರಮಕೈಗೊಂಡಿದ್ದಾರೆ.

ಟಿ–20 ಕ್ರಿಕೆಟ್ ಬೆಟ್ಟಿಂಗ್: 23 ಮಂದಿ ಬಂಧನ

ಬೆಂಗಳೂರು: ಟಾಟಾ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಅಕ್ರಮವಾಗಿ ಜೂಜಾಟ ನಡೆಸುತ್ತಿದ್ದ ಜಾಲದ ಮೇಲೆ ಸಿಸಿಬಿ ಪೊಲೀಸರು ನಗರದಾದ್ಯಂತ ಕಾರ್ಯಾಚರಣೆ ನಡೆಸಿ, ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ 23 ಆರೋಪಿಗಳನ್ನು ಬಂಧಿಸಿ, ಅವರಿಂದ 13.39 ಕೋಟಿ ರೂ. ಮೌಲ್ಯದ ಡಿಜಿಟಲ್ ಚಿಪ್ಸ್ ಹಾಗೂ ನಗದನ್ನು ವಶಪಡಿಸಿಕೊಂಡಿದ್ದಾರೆ. ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಐಪಿಎಲ್ ಪಂದ್ಯಗಳ ಮೇಲೆ ದೊಡ್ಡಮಟ್ಟದ ಬೆಟ್ಟಿಂಗ್ ನಡೆಯುತ್ತಿರುವ ಬಗ್ಗೆ ಸಿಸಿಬಿಯ ವಿಶೇಷ ವಿಚಾರಣಾ ದಳಕ್ಕೆ ಖಚಿತ ಮಾಹಿತಿ ಲಭ್ಯವಾಗಿತ್ತು. ಇದರ ಆಧಾರದ ಮೇಲೆ ತೀವ್ರ ನಿಗಾ ವಹಿಸಿದ್ದ ವಿಶೇಷ ತಂಡವು ನಗರದ ಬೇರೆ ಬೇರೆ ಕಡೆಗಳಲ್ಲಿ ದಾಳಿ ನಡೆಸಿ ಒಟ್ಟು 17 ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಈ ಪೈಕಿ ಸಿಸಿಬಿ ಠಾಣೆಯೊಂದರಲ್ಲೇ 9 ಪ್ರಕರಣಗಳು ದಾಖಲಾಗಿವೆ. ದಾಳಿಯ ವೇಳೆ ಸಿಸಿಬಿ ಠಾಣೆಯಲ್ಲಿ ದಾಖಲಾದ ಪ್ರಮುಖ 4 ಪ್ರಕರಣಗಳಿಗೆ ಸಂಬಂಧಿಸಿದಂತೆ ಐದು ಮಂದಿ ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

ದಿಲ್ಲಿಯಲ್ಲಿ ಚುನಾವಣೆ ಚರ್ಚೆ

ಸುಬ್ರಹ್ಮಣ್ಯ: ಮುಂಬರುವ ರಾಜ್ಯಸಭಾ ಚುನಾವಣೆಯ ಕುರಿತು ವರಿಷ್ಠರೊಂದಿಗೆ ಚರ್ಚಿಸಲು ಮುಖ್ಯಮಂತ್ರಿಗಳು ಮತ್ತು ನಾಯಕರು ದಿಲ್ಲಿಗೆ ಹೋಗಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವರ ದರ್ಶನ ಮಾಡಿದ ತರುವಾಯ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸಂಪುಟ ವಿಸ್ತರಣೆ ಮುಖ್ಯಮಂತ್ರಿಗಳ ಪರಮಾಧಿಕಾರವಾಗಿದ್ದು, ಊಹಾತ್ಮಕ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ ಎಂದರು.

ಕುಕ್ಕೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆ: ಶ್ರೀಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬರಲು ಇರುವ ನಾಲ್ಕು ಪ್ರವೇಶ ರಸ್ತೆಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆಗಾಗಿ ಚೆಕ್‌ಪೋಸ್ಟ್ ಸ್ಥಾಪಿಸಲು ಆದೇಶ ನೀಡಲಾಗಿದೆ. ಇಂದು ದೇವಾಲಯಕ್ಕೆ ಬರುವಾಗ ರಸ್ತೆಯ ಬದಿಯಲ್ಲಿ ಪ್ಲಾಸ್ಟಿಕ್ ಬಾಟಲಿ, ತಟ್ಟೆ ಇತ್ಯಾದಿ ಬಿದ್ದಿರುವುದನ್ನು ನೋಡಿ ಆತಂಕವಾಯಿತು. ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಚೆಕ್‌ಪೋಸ್ಟ್ ಸ್ಥಾಪಿಸಿ 2 ಹಂತದ ತಪಾಸಣೆ ಮಾಡಲು ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಂದಾಯ ಇಲಾಖೆಯಲ್ಲಿ ಮೋಜಣಿದಾರರು ಕೆಲ ತಿಂಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಜತೆಗೆ ಸರ್ವೆಯರ್‌ಗಳ ಕೊರತೆ ಇರುವುದಾಗಿ ಉಡುಪಿ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಅರಣ್ಯ ಜಂಟಿ ಸರ್ವೆಗಾಗಿಯೇ ವಿಶೇಷವಾಗಿ ಸಿಬ್ಬಂದಿ ನಿಯೋಜಿಸಲು ತಿಳಿಸಿದ್ದು ಈ ಬಗ್ಗೆ ಕಂದಾಯ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಈಶ್ವರ್ ಖಂಡ್ರೆ ತಿಳಿಸಿದರು. ಮಾನವನ ಜೀವ ಅತ್ಯಮೂಲ್ಯವಾಗಿದ್ದು ಒಂದೇ ಒಂದು ಪ್ರಾಣ ಹಾನಿಯೂ ಆಗಬಾರದು. ಈ ನಿಟ್ಟಿನಲ್ಲಿ ಕ್ರಮ ವಹಿಸಲು ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.



ವನ್ಯಜೀವಿಗಳ ಸಂಚಾರದ ಬಗ್ಗೆ ನಿಗಾ ಇಡಲು ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಅಲ್ಲದೆ, ಕಮಾಂಡ್ ಸೆಂಟರ್ ತೆರೆಯಲಾಗಿದೆ.
■ ಈಶ್ವರ ಬಿ. ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಸಿಎಂ ಬದಲಾವಣೆ ಚರ್ಚೆ ಅನಗತ್ಯ: ಖಂಡ್ರೆ

ಹಾಸನ: ರಾಜಕೀಯ ವಲಯದಲ್ಲಿ ಹರಿದಾಡುತ್ತಿರುವ ಊಹಾಪೋಹ ಅಷ್ಟೆ. ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ಅನಗತ್ಯ ಮತ್ತು ಅಪ್ರಸ್ತುತ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದಿಲ್ಲಿಯಲ್ಲಿ ಪ್ರತ್ಯೇಕವಾಗಿ ಸಭೆ ನಡೆಸಿರುವ ಚರ್ಚೆ ನಾಯಕತ್ವ ಬದಲಾವಣೆಗಲ್ಲ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಘೋಷಣೆ ಆಗಿರುವ ಹಿನ್ನೆಲೆಯಲ್ಲಿ ಪಕ್ಷದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಅದನ್ನೇ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಅಗತ್ಯವಿಲ್ಲ ಎಂದು ಹೇಳಿದರು. ಸಿಎಂ ಹಾಗೂ ಡಿಸಿಎಂ ಜೊತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದರಲ್ಲಿ ವಿಶೇಷವೇನೂ ಇಲ್ಲ. ನಾವು ಎಲ್ಲರೂ ಒಂದೇ ಕುಟುಂಬದವರಂತೆ ಇದ್ದೇವೆ. ಸ್ನೇಹಿತರಾಗಿ ಟೀ ಕುಡಿಯುತ್ತೇವೆ, ಊಟಕ್ಕೆ ಹೋಗುತ್ತೇವೆ, ಪ್ರತ್ಯೇಕವಾಗಿ ಮಾತುಕತೆ ನಡೆಸುತೇವೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಬದಲಾವಣೆ ಕುರಿತು ಕೆಲ ಕಾಂಗ್ರೆಸ್ ಶಾಸಕರು ನೀಡುತ್ತಿರುವ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು ಆ ಹೇಳಿಕೆ ನೀಡಿದವರನ್ನೇ ಕೇಳಬೇಕು. ನಾನು ಸರ್ಕಾರದ ಭಾಗವಾಗಿ ಹೇಳುವುದೇನೆಂದರೆ, ಸರ್ಕಾರ ಅತ್ಯಂತ ಗಟ್ಟಿಯಾಗಿದ್ದು, ಜನಪರ ಆಡಳಿತ ನೀಡುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆ ಕುರಿತು ಪ್ರಶ್ನಿಸಿದಾಗ, ಅದರ ಬಗ್ಗೆ ಅವರನ್ನೇ ಕೇಳಿ. ನಾನು ಈಗಾಗಲೇ ಹೇಳಿರುವಂತೆ ಈ ಚರ್ಚೆ ಅಪ್ರಸ್ತುತ ಎಂದು ಉತ್ತರಿಸಿದರು. ತಮ್ಮ ದಿಲ್ಲಿ ಭೇಟಿ ಕುರಿತು ಕೇಳಿದ ಪ್ರಶ್ನೆಗೆ ಖಂಡ್ರೆ ನಗೆ ಚಟಾಕಿ ಹಾರಿಸಿ, ನಾನೇಕೆ ದಿಲ್ಲಿಗೆ ಹೋಗಬೇಕು ಎಂದು ಮರು ಪ್ರಶ್ನೆ ಹಾಕಿದರು.

ಮೇಕೆದಾಟು: ಸುಪ್ರೀಂಗೆ ಧನ್ಯವಾದ ಹೇಳಿದ ಡಿಕೆಶಿ

ಬೆಂಗಳೂರು: ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಇದು ಕರ್ನಾಟಕ ಪಾಲಿಗೆ ಶುಭಸುದ್ದಿ. ಕರ್ನಾಟಕ ರಾಜ್ಯದ ಜನರ ಪರವಾಗಿ ನಾವು ಸುಪ್ರೀಂ ಕೋರ್ಟಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆ: ಉಪಮುಖ್ಯಮಂತ್ರಿ



ಜಲ ಸಂಪನ್ಮೂಲ ಸಚಿವರೂ ಆಗಿರುವ ಅವರು ಮಂಗಳವಾರ ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಸುಪ್ರೀಂ ಕೋರ್ಟ್ ಈ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿದ್ದು, ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಬೇಕು ಎಂದು ಷರತ್ತು ವಿಧಿಸಿದೆ. ಈಗ ಈ ಯೋಜನೆ ಕುರಿತು ತೀರ್ಮಾನ ಮಾಡಬೇಕಿರುವುದು ಕೇಂದ್ರ ಸರ್ಕಾರ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆಯಲ್ಲಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು. ಪರಿಷ್ಕೃತ ಡಿಪಿಆರ್ ಸಲ್ಲಿಕೆ ಕುರಿತಾಗಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಮಿಳುನಾಡಿನಲ್ಲಿ ವಿರೋಧ ವ್ಯಕ್ತವಾಗಿದೆ.

ಮೇಕೆದಾಟು ಯೋಜನೆ: ಅನುಮತಿ ನೀಡದಂತೆ ಪ್ರಧಾನಿ ಮೋದಿಗೆ ವಿಜಯ್ ಪತ್ರ

ಹೊಸದಿಲ್ಲಿ: ಮೇಕೆದಾಟು ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರಕ್ಕೆ ಅನುಮತಿ ನೀಡಬಾರದೆಂದು ಕೋರಿ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಕಾವೇರಿ ನದಿಗೆ ಮೇಕೆದಾಟು ಅಣೆಕಟ್ಟು ಕಟ್ಟುವುದಾಗಿ ಕಾಂಗ್ರೆಸ್ ಸರ್ಕಾರ ಪ್ರಸ್ತಾವಿಸಿದ ದಿನಗಳ ಬಳಿಕ ವಿಜಯ್ ಪ್ರಧಾನಿಗೆ ಪತ್ರ ಬರೆದಿದ್ದಾರೆ. ಕರ್ನಾಟಕ ಸರ್ಕಾರದ ಮೇಕೆದಾಟು ಯೋಜನೆಯು ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಅತೀವ ಆತಂಕವನ್ನು ಸೃಷ್ಟಿಸಿದೆ ಎಂದು ತಮ್ಮ ಪತ್ರದಲ್ಲಿ ವಿಜಯ್ ಬರೆದಿದ್ದಾರೆ. ಕಾನೂನು ಸಲಹೆಗಳನ್ನು ಪಡೆದ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಸಭೆಯೊಂದರ ಬಳಿಕ ಮುಂದಿನ ಕಾನೂನು ಹೋರಾಟಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಕೆವಿಕೆಯಲ್ಲಿ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಉದ್ಘಾಟನೆ

ಹೊಸ ಆಲೋಚನೆಗಳಿಗೆ ದಾರಿ ತೋರಲಿ

ಬೆಂಗಳೂರು: ಇಂದು ಕೃಷಿ ಕ್ಷೇತ್ರ ಎದುರಿಸುತ್ತಿರುವ ಅನೇಕ ಸವಾಲುಗಳಿಗೆ ಉತ್ತರಿಸುವ ಶಕ್ತಿ ಇಂದಿನ ತಂತ್ರಜ್ಞಾನ ಮತ್ತು ಕೃಷಿ ಸ್ಟಾರ್ಟ್‌ಅಪ್‌ಗಳಲ್ಲಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಜಿಕೆವಿಕೆಯಲ್ಲಿ ನಡೆದ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮ ಉದ್ಘಾಟಿಸಿದ ಅವರು, ನಮ್ಮ ಸರ್ಕಾರ ಕೃಷಿಯನ್ನು ಕೇವಲ ಬದುಕಿನ ಮಾರ್ಗವಾಗಿ ನೋಡುವುದಿಲ್ಲ. ಅದನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಡಿಜಿಟಲ್ ಕೃಷಿ, ಡ್ರೋನ್ ತಂತ್ರಜ್ಞಾನ, ಡೇಟಾ ಆಧಾರಿತ ಬೆಳೆ ನಿರ್ವಹಣೆ, ಮೌಲ್ಯವರ್ಧನೆ, ನೇರ ಮಾರುಕಟ್ಟೆ ವ್ಯವಸ್ಥೆಗಳಿಗೆ ನಮ್ಮ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು. ಇಂದು ದೇಶದಲ್ಲಿ ಸಾವಿರಾರು ಅಗ್ರಿ ಸ್ಟಾರ್ಟ್ ಅಪ್ ಹುಟ್ಟಿಕೊಂಡಿವೆ. ಅದರಲ್ಲೂ ಬೆಂಗಳೂರು ಸ್ಟಾರ್ಟ್‌ಅಪ್‌ಗಳ ಹಬ್ ಆಗಿ ಮುಂಚೂಣಿಯಲ್ಲಿದೆ. ಯುವಕರು ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಸುವವರಾಗಬೇಕು. ಆ ನಿಟ್ಟಿನಲ್ಲಿ ಇಂದಿನ ಯುವಕರು ಕಾರ್ಯಪ್ರವೃತ್ತರಾಬೇಕು ಎಂದು ಕರೆ ನೀಡಿದರು.

ರೈತ ಉತ್ಪಾದಕರ ಸಂಘಗಳು, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಯುವ ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಗ್ರಾಮೀಣ ಆರ್ಥಿಕತೆಯಲ್ಲಿ ದೊಡ್ಡ ಬದಲಾವಣೆ ಸಾಧ್ಯ. ಈ ಅಗ್ರಿ ಸ್ಟಾರ್ಟ್ ಅಪ್ 2.0 ಹೊಸ ಆಲೋಚನೆಗಳಿಗೆ ದಾರಿ ತೋರಲಿ, ಯುವಕರಿಗೆ ಪ್ರೇರಣೆ ನೀಡಲಿ ಹಾಗೂ ರೈತರ ಬದುಕಿನಲ್ಲಿ ನಿಜವಾದ ಪರಿವರ್ತನೆ ತರಲಿ ಎಂದು ಆಶಿಸುತ್ತೇನೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.



ಅಗ್ರಿ ಸ್ಟಾರ್ಟ್‌ಅಪ್‌ಗಳು ರೈತರಿಗೆ ಹೊಸ ತಂತ್ರಜ್ಞಾನ, ಹವಾಮಾನ ಆಧಾರಿತ ಕೃಷಿ ಸಲಹೆ, ಡಿಜಿಟಲ್ ಮಾರುಕಟ್ಟೆ, ನಿಖರ ಕೃಷಿ, ಡ್ರೋನ್ ತಂತ್ರಜ್ಞಾನ, ಸಾವಯವ ಕೃಷಿ ಹಾಗೂ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಸುಲಭಗೊಳಿಸುತ್ತಿವೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುವುದರ ಜೊತೆಗೆ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಾಗುತ್ತಿದೆ.
■ ಡಾ. ಎಸ್.ವಿ. ಸುರೇಶ, ಜಿಕೆವಿಕೆ ಕುಲಪತಿ

50ಕ್ಕೂ ಹೆಚ್ಚು ಮಳಿಗೆಗಳ ಪ್ರದರ್ಶನ: ಈ ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಮಳಿಗೆಗಳನ್ನು ಪ್ರದರ್ಶಿಸಲಾಯಿತು. ಅಗ್ರಿ ಸ್ಟಾರ್ಟ್‌ಅಪ್‌ಗಳು, ಉದ್ಯಮಿಗಳು, ಸಂಶೋಧಕರು, ಹೂಡಿಕೆದಾರರು, ವಿದ್ಯಾರ್ಥಿಗಳು, ಕೈಗಾರಿಕೆಗಳು ಹಾಗೂ ರೈತ ಉತ್ಪಾದಕರ ಸಂಘಟನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಾಯಿತು.

ಕಲಾವಿದರಿಗೆ ಸಿಗಲಿದೆ ಜಾಗತಿಕ ಮನ್ನಣೆ

ಬೆಂಗಳೂರು: ಕೇಂದ್ರ ವಿದೇಶಾಂಗ ಮಂತ್ರಾಲಯದ ಅಧೀನದಲ್ಲಿರುವ ಸಾಂಸ್ಕೃತಿಕ ರಾಜತಾಂತ್ರಿಕ ಸಂಸ್ಥೆಯಾದ ಐಸಿಸಿಆರ್ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಪ್ಪಂದಕ್ಕೆ ಐಸಿಸಿಆರ್ ಪರವಾಗಿ ಜಂಟಿ ಕಾರ್ಯದರ್ಶಿ ಮನಿಷಾ ಸ್ವಾಮಿ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ಇಲಾಖೆಯ ಕಾರ್ಯದರ್ಶಿ ಜೆ.ಮಂಜುನಾಥ್ ಸಹಿ ಹಾಕಿದರು. ಈ ಒಡಂಬಡಿಕೆಯ ಮೂಲಕ ಕರ್ನಾಟಕದ ಕಲಾವಿದರು, ಸಾಂಸ್ಕೃತಿಕ ತಂಡಗಳು ಹಾಗೂ ಯುವ ಪ್ರತಿಭೆಗಳಿಗೆ ದೇಶ–ವಿದೇಶಗಳಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ಸಂಗೀತ, ನೃತ್ಯ, ಸಾಹಿತ್ಯ, ಕರಕುಶಲ, ಪಾಕಪದ್ಧತಿ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ಗುರುತಿಸಿ ಉತ್ತೇಜಿಸಲು ಯೋಜನೆ ರೂಪಿಸಲಾಗಿದೆ.

ವಿದೇಶಗಳಲ್ಲಿ ನಡೆಯುವ ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಕರ್ನಾಟಕದ ಕಲಾವಿದರು ಭಾಗವಹಿಸಲು ಐಸಿಸಿಆರ್ ನೆರವು ನೀಡಲಿದೆ. ವಿಮಾನ ಪ್ರಯಾಣ, ವೀಸಾ ಹಾಗೂ ಪ್ರದರ್ಶನ ವೆಚ್ಚಗಳನ್ನು ಭರಿಸಲು ಸಿದ್ಧತೆ ವ್ಯಕ್ತಪಡಿಸಿದೆ. ಈ ಮೂಲಕ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗುರುತಿನ ಅವಕಾಶ ಲಭಿಸಲಿದೆ.



ಕೇಂದ್ರ ಸರ್ಕಾರದ ಐಸಿಸಿಆರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಐತಿಹಾಸಿಕ ಒಡಂಬಡಿಕೆಗೆ ಸಹಿ ಮಾಡಲಾಗಿದೆ. ರಾಜ್ಯದ ಸಂಸ್ಕೃತಿ ಪ್ರವಾಸೋದ್ಯಮ, ಆರ್ಥಿಕತೆ ಹೆಚ್ಚಿಸಲು ಸಾಧ್ಯವಾಗುತ್ತದೆ. ದೇಶ, ವಿದೇಶಗಳಲ್ಲಿ ಸಾಂಸ್ಕೃತಿಕ ರಾಜತಾಂತ್ರಿಕತೆ ಬಲಪಡಿಸುವ ನಿಟ್ಟಿನಲ್ಲಿ ಈ ಒಡಂಬಡಿಕೆಯು ಮಹತ್ವಪೂರ್ಣವಾಗಿದೆ.
■ ಶಿವರಾಜ ಎಸ್.ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಎಸ್‌ಐಆರ್: ವಿವಿಧ ಜಿಲ್ಲೆಗಳಿಗೆ ಕೈನಿಂದ ವೀಕ್ಷಕರ ನೇಮಕ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ತಿಂಗಳು ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಿಗೆ ಕಾಂಗ್ರೆಸ್‌ನಿಂದ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಪ್ರತಿ ಜಿಲ್ಲೆಗೆ ಇಬ್ಬರಂತೆ ಪಕ್ಷದ ಪ್ರಮುಖರನ್ನು ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್ ಸುದರ್ಶನ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ. ಸೋಮವಾರ ಬೆಂಗಳೂರಿನ ಹೊರವಲಯ ದೇವನಹಳ್ಳಿ ಬಳಿ ಕೆಪಿಸಿಸಿ ವತಿಯಿಂದ ಆಯೋಜಿಸಲಾಗಿದ್ದ ಸಭೆಯಲ್ಲಿ ಎಸ್‌ಐಆರ್ ಸಾಧಕ–ಬಾಧಕಗಳ ಬಗ್ಗೆ ಕಾಂಗ್ರೆಸ್ ಚರ್ಚೆ ನಡೆಸಿದೆ.

ಬಹುಕೋಟಿ ವಂಚನೆ ಪ್ರಕರಣ | ಬೆಂಗಳೂರಿನಿಂದ ಬೆಳಗಾವಿಗೆ ಆರೋಪಿ ಶಿಫ್ಟ್

ಸಿಐಡಿಯಿಂದ ಶಿವಾನಂದ ನೀಲಣ್ಣವರ ವಿಚಾರಣೆ

ಬೆಳಗಾವಿ: ಬಹುಕೋಟಿ ವಂಚನೆ ಆರೋಪಿ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮುಖ್ಯಸ್ಥ ಶಿವಾನಂದ ನೀಲಣ್ಣವರ ಅವರನ್ನು ಸಿಐಡಿ ಅಧಿಕಾರಿಗಳು ಸೋಮವಾರ ತಡರಾತ್ರಿ ಬೆಂಗಳೂರಿನಿಂದ ಬೆಳಗಾವಿಗೆ ಕರೆ ತಂದಿದ್ದಾರೆ.

ನೀಲಣ್ಣವರ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆ ತಂದು ವಿಚಾರಣೆ ನಡೆಸಲಾಗುತ್ತಿದ್ದು, ನ್ಯಾಯಾಲಯವು ನೀಡಿದ್ದ 10 ದಿನಗಳ ಸಿಐಡಿ ಕಸ್ಟಡಿ ಅವಧಿ ಮೇ 27ರಂದು ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ ಒಂದು ದಿನ ಮುಂಚಿತವಾಗಿಯೇ ಅಂದರೆ ಬುಧವಾರ ನ್ಯಾಯಾಲಯಕ್ಕೆ ರಜೆ ಇರುವ ಕಾರಣ ಮಂಗಳವಾರವೇ ನ್ಯಾಯಾಧೀಶರ ಮುಂದೆ ಸಿಐಡಿ ಅಧಿಕಾರಿಗಳು ಆರೋಪಿಯನ್ನು ಹಾಜರು ಪಡಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಲಣ್ಣವರ ಪತ್ನಿ, ಕನ್ನಡ ಸಂಘಟನೆಯ ಜಿಲ್ಲಾ ಅಧ್ಯಕ್ಷ ಆರ್. ಅಭಿಲಾಷ್ ಹಾಗೂ ವ್ಯವಹಾರ ಪಾಲುದಾರ ಸುಭಾಷ್ ಅವರಿಗೆ ಸಿಐಡಿ ನೋಟಿಸ್ ಜಾರಿಗೊಳಿಸಿ ತನಿಖೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಇದರಿಂದಾಗಿ ಮೂವರೂ ಮಂಗಳವಾರ ಮಾಳಮಾರುತಿ ಠಾಣೆಯಲ್ಲಿ ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿ ಅವರಿಂದಲೂ ಮಹತ್ವದ ಮಾಹಿತಿ ಸಂಗ್ರಹಿಸಲಾಗಿದೆ ಎಂದು



ಪೊಲೀಸ್ ಮಾಹಿತಿಯಿಂದ ತಿಳಿದು ಬಂದಿದೆ.

ಪ್ರಕರಣದ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಹೂಡಿಕೆದಾರರ ಹಣ ಬಳಸಿ ಖರೀದಿಸಲಾಗಿದೆ ಎನ್ನಲಾದ ಐಷಾರಾಮಿ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಕೋಟ್ಯಂತರ ರೂಪಾಯಿ ಮೌಲ್ಯದ ಡಿಫೆಂಡರ್, ಮರ್ಸಿಡಿಸ್ ಬೆಂಝ್ ಹಾಗೂ ವೆಲ್ಫೇರ್ ಕಾರುಗಳನ್ನು ಸಿಐಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಬಹುಕೋಟಿ ವಂಚನೆ ಪ್ರಕರಣದಲ್ಲಿ ಸಿಐಡಿ ತನಿಖೆ ನಿರ್ಣಾಯಕ ಹಂತ ತಲುಪಿದ್ದು, ಮುಂದಿನ ಬೆಳವಣಿಗೆಗಳತ್ತ ಹೂಡಿಕೆದಾರರು ಹಾಗೂ ಸಾರ್ವಜನಿಕರು ಲಕ್ಷಾಂತರ ರೂ. ಹೂಡಿಕೆ ಮಾಡಿರುವುದಕ್ಕೆ ಮರಳಿ ಪಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಮಾಹಿತಿಗಳು ಲಭ್ಯವಾಗಿವೆ.

ಆರೋಪಿ ನೀಲಣ್ಣವರಗೆ ವೈದ್ಯಕೀಯ ಪರೀಕ್ಷೆ

ಬೆಳಗಾವಿ: ಬಹುಕೋಟಿ ವಂಚನೆ ಆರೋಪದ ಮೇಲೆ ಸಿಐಡಿ ವಶದಲ್ಲಿರುವ ಶಿವಾನಂದ ನೀಲಣ್ಣನವರ ಅವರನ್ನು ಮಂಗಳವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಬಿಐಎಂಎಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರ ತಂಡವು ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಿತು. ಸಿಐಡಿ ಅಧಿಕಾರಿಗಳು ಒದಗಿಸಿದ ಬಿಗಿ ಭದ್ರತೆಯಲ್ಲಿ ನೀಲಣ್ಣನವರ ಅವರನ್ನು ಆಸ್ಪತ್ರೆಗೆ ಕರೆ ತರಲಾಯಿತು. ಅಗತ್ಯವಿರುವ ವೈದ್ಯಕೀಯ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ, ಅವರನ್ನು ಮತ್ತೆ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಸಿಐಡಿ ಅಧಿಕಾರಿಗಳು ನೀಲಣ್ಣನವರ ಅವರನ್ನು ವಿಚಾರಣೆ ನಡೆಸಲಾಗುತ್ತಿದ್ದು, ಹಗರಣ ಮತ್ತು ಅದರ ವ್ಯಾಪಕ ಪರಿಣಾಮಗಳ ಬಗ್ಗೆ ಆಳವಾಗಿ ತನಿಖೆ ನಡೆಸುವ ನಿರೀಕ್ಷೆಯಿದೆ.

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಪ್ರಾರ್ಥಿಸಿದ ಬಾಲಿವುಡ್ ನಟ ರಣವೀರ್ ಸಿಂಗ್

ಚಾಮುಂಡೇಶ್ವರಿ ತಾಯೇ ನನ್ನನ್ನು ಕ್ಷಮಿಸು

ಮೈಸೂರು: ಬಾಲಿವುಡ್‌ನ ಖ್ಯಾತನಟ ರಣ ವೀರ್‌ಸಿಂಗ್ ಕಾಂತಾರ ಚಿತ್ರದ ದೈವಕ್ಕೆ ಅಪಹಾಸ್ಯ ಮಾಡಿದ ತಪ್ಪಿಗೆ ಕ್ಷಮೆಯಾಚಿಸಲು ಮಂಗಳವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದರು.



ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸಿ, ತನ್ನನ್ನು ಕ್ಷಮಿಸಿ ತಾಯಿ ಎಂದು ಅಂಗಲಾಚಿದರು.

2025ರ ನ.28ರಂದು ಗೋವಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ್ದ ನಟ ರಣವೀರ್ ಸಿಂಗ್, ಕಾಂತಾರ ಚಲನಚಿತ್ರದಲ್ಲಿ ಚಿತ್ರಿಸಲಾದ ಪವಿತ್ರ ದೈವ (ದೈವಕೋಲ) ಸಂಪ್ರದಾಯವನ್ನು ಬಹಿರಂಗವಾಗಿ ಅಪಹಾಸ್ಯ ಮಾಡಿದ್ದರು. ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ನಟರೊಬ್ಬರು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಂಥ ವ್ಯಂಗ್ಯ ಪ್ರದರ್ಶಿಸುವ ಮೂಲಕ ಕಾಂತಾರ ಚಲನಚಿತ್ರ ಮಾತ್ರವಲ್ಲದೇ, ತುಳು ಸಂಪ್ರ ದಾಯದಲ್ಲಿ ಆಳವಾಗಿ ಬೇರೂರಿರುವ ಆಧ್ಯಾತ್ಮಿಕ ನಂಬಿಕೆಗಳನ್ನು ಅಪಹಾಸ್ಯ ಮಾಡಿದ್ದಾರೆ. ಇದು ಸಾರ್ವಜನಿಕ ಶಾಂತಿ ಭಂಗಗೊಳಿಸುವ ಮತ್ತು ಸಮುದಾಯ ಗಳ ನಡುವೆ ದ್ವೇಷ ಉತ್ತೇಜಿಸಬಹುದು ಎಂದು ಆರೋಪಿಸಿ ದೂರು ನೀಡಲಾಗಿತ್ತು.

ದೂರಿನ ಸಂಬಂಧ ರಣವೀರ್ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳ ಅಡಿಯಲ್ಲಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬಳಿಕ ಬೇಷರತ್ ಕ್ಷಮೆಯಾಚಿಸಿರುವ ಪ್ರಮಾಣ ಪತ್ರವನ್ನು ಕೋರ್ಟ್‌ಗೆ ಸಲ್ಲಿಸಿ ದ್ದರು. ಚಾಮುಂಡಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲಿದ್ದಾರೆ ಎಂದು ರಣವೀರ್ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದರು. ಒಂದು ತಿಂಗಳಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಬೇಕೆಂದು ಹೈಕೋರ್ಟ್ ನಿರ್ದೇಶನ ನೀಡಿ, ಅವರ ವಿರುದ್ಧದ ಪ್ರಕರಣ ಇತ್ಯರ್ಥಪಡಿಸಿತ್ತು.

ಈ ಹಿನ್ನೆಲೆಯಲ್ಲಿ ಬೆಳಗ್ಗೆ 7.30 ವೇಳೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ರಣವೀರ್ ಸಿಂಗ್, ಯಾವುದೇ ಸೆಲೆಬ್ರಿಟಿಯ ಹಮ್ಮಿಲ್ಲದೆ ತೀರಾ ಸಾಮಾನ್ಯರಂತೆ ದೇವಸ್ಥಾನದಲ್ಲಿ ದೇವಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು. ತಮ್ಮ ಹಳೆ ಹೇಳಿಕೆಗೆ ದೇವಿಯ ಸನ್ನಿಧಿಯಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸಿ, ಕ್ಷಮೆಯಾಚಿಸಿದರು.

ಸಂಪಾದಕೀಯ

ಜನಸಂಖ್ಯಾ ಸಮತೋಲನದತ್ತ ಕೇಂದ್ರ ಸರ್ಕಾರದ ಗಂಭೀರ ಹೆಜ್ಜೆ

ದೇಶದ ಭದ್ರತೆ, ಸಾಮಾಜಿಕ ಸಮತೋಲನ ಮತ್ತು ಭವಿಷ್ಯದ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಕೇಂದ್ರ ಸರ್ಕಾರ ಕೈಗೊಂಡಿರುವ ಜನಸಂಖ್ಯಾ ಬದಲಾವಣೆ ಕುರಿತ ಉನ್ನತ ಮಟ್ಟದ ಸಮಿತಿ ರಚನೆಯ ನಿರ್ಧಾರವು ಮಹತ್ವದ ಮತ್ತು ದೂರದೃಷ್ಟಿಯ ಹೆಜ್ಜೆಯಾಗಿದೆ. ಅಕ್ರಮ ವಲಸೆ, ಅಸ್ವಾಭಾವಿಕ ಜನಸಂಖ್ಯಾ ಏರಿಳಿತ ಹಾಗೂ ಅದರ ಪರಿಣಾಮಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಲು ಸರ್ಕಾರ ಮುಂದಾಗಿರುವುದು ಸಮಸ್ಯೆಯನ್ನು ಕೇವಲ ರಾಜಕೀಯ ದೃಷ್ಟಿಯಿಂದ ಅಲ್ಲ, ರಾಷ್ಟ್ರಹಿತದ ದೃಷ್ಟಿಯಿಂದ ನೋಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ದೇಶದಲ್ಲಿ ಜನಸಂಖ್ಯೆಯ ರಚನೆಗೆ ಸಂಬಂಧಿಸಿದ ಬದಲಾವಣೆಗಳು ಕೇವಲ ಅಂಕಿಅಂಶಗಳ ವಿಚಾರವಲ್ಲ. ಅವು ಆರ್ಥಿಕ ವ್ಯವಸ್ಥೆ, ಉದ್ಯೋಗ, ಶಿಕ್ಷಣ, ಆರೋಗ್ಯ, ಗಡಿ ಭದ್ರತೆ, ಸ್ಥಳೀಯ ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯದ ಮೇಲೂ ಪರಿಣಾಮ ಬೀರುತ್ತವೆ. ವಿಶೇಷವಾಗಿ ಗಡಿ ರಾಜ್ಯಗಳಲ್ಲಿ ಅಕ್ರಮ ವಲಸೆ ಹಾಗೂ ಅಸಹಜ ನೆಲೆಸುವಿಕೆಯ ಪ್ರಶ್ನೆಗಳು ದೀರ್ಘಕಾಲದಿಂದಲೇ ಚರ್ಚೆಯ ವಿಷಯವಾಗಿವೆ.



ಈ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವ್ಲೇಕರ್ ನೇತೃತ್ವದ ಸಮಿತಿಗೆ ತಜ್ಞರು, ಜನಗಣತಿ ಆಯುಕ್ತರು ಹಾಗೂ ಆಡಳಿತ ಮತ್ತು ಭದ್ರತಾ ಕ್ಷೇತ್ರದ ಅನುಭವಿಗಳನ್ನೂ ಸೇರಿಸಿರುವುದು ಸಮಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಈ ಸಮಿತಿಯ ಪ್ರಮುಖ ಅಂಶವೆಂದರೆ, ಇದು ಕೇವಲ ಸಮಸ್ಯೆ ಗುರುತಿಸುವುದರಲ್ಲಿ ಅಲ್ಲದೇ, ವೈಜ್ಞಾನಿಕ ಮೌಲ್ಯಮಾಪನದ ಆಧಾರದ ಮೇಲೆ ನೀತಿ, ಕಾನೂನು ಹಾಗೂ ಆಡಳಿತಾತ್ಮಕ ಪರಿಹಾರಗಳನ್ನು ಸೂಚಿಸಲಿದೆ. ಗಡಿ ನಿರ್ವಹಣೆ ಬಲಪಡಿಸುವುದು, ಅಕ್ರಮ ವಲಸಿಗರನ್ನು ಗುರುತಿಸುವುದು, ಕೇಂದ್ರ-ರಾಜ್ಯಗಳ ಸಮನ್ವಯ ವೃದ್ಧಿಸುವುದು ಹಾಗೂ ನಿರಂತರ ಮೇಲ್ವಿಚಾರಣಾ ವ್ಯವಸ್ಥೆ ರೂಪಿಸುವಂತಹ ಅಂಶಗಳನ್ನು ಒಳಗೊಂಡಿರುವುದು ಶ್ಲಾಘನೀಯ. ದೇಶದ ಸಾರ್ವಭೌಮತ್ವ ಮತ್ತು ಸಾಮಾಜಿಕ ಸ್ಥಿರತೆ ಎರಡನ್ನೂ ಕಾಯುವ ದೃಷ್ಟಿಯಿಂದ ಇಂತಹ ಚೌಕಟ್ಟು ಅನಿವಾರ್ಯವಾಗಿದೆ.

ಈ ವಿಷಯವನ್ನು ಸಂವೇದನಾಶೀಲವಾಗಿ ಮತ್ತು ಸಮತೋಲನದಿಂದ ನಿರ್ವಹಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಯಾವುದೇ ಸಮುದಾಯದ ವಿರುದ್ಧದ ಪೂರ್ವಾಗ್ರಹ ಅಥವಾ ರಾಜಕೀಯ ಆರೋಪ-ಪ್ರತ್ಯಾರೋಪಗಳ ರೂಪಕ್ಕೆ ಇದು ತಿರುಗಬಾರದು. ಬದಲಿಗೆ, ರಾಷ್ಟ್ರದ ದೀರ್ಘಕಾಲೀನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅಂಕಿಅಂಶ, ಕಾನೂನು ಮತ್ತು ವಾಸ್ತವಾಧಾರಿತ ಕ್ರಮಗಳಿಗೆ ಆದ್ಯತೆ ನೀಡಬೇಕು. ಇದೇ ವೇಳೆ, ಕಾನೂನುಬದ್ಧ ವಲಸೆ ಮತ್ತು ಅಕ್ರಮ ನುಸುಳುವಿಕೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ನಿರ್ವಹಿಸುವ ಅಗತ್ಯವೂ ಇದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದ 'ಉನ್ನತಾಧಿಕಾರದ ಜನಸಂಖ್ಯಾ ಮಿಷನ್' ಈಗ ಕಾರ್ಯರೂಪಕ್ಕೆ ಬರುತ್ತಿರುವುದು ಗಮನಾರ್ಹ ಬೆಳವಣಿಗೆ. ದೇಶ ಎದುರಿಸುತ್ತಿರುವ ಭವಿಷ್ಯದ ಸವಾಲುಗಳನ್ನು ಮುಂಚಿತವಾಗಿ ಅಂದಾಜಿಸಿ, ಅವುಗಳಿಗೆ ಸೂಕ್ತ ನೀತಿ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿರುವುದು ಆಡಳಿತದ ಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ. ಸಮಿತಿಯ ಶಿಫಾರಸುಗಳು ಸಮತೋಲಿತ, ಪಾರದರ್ಶಕ ಹಾಗೂ ರಾಷ್ಟ್ರ ಹಿತದ ಪರವಾಗಿದ್ದರೆ, ಭಾರತದಲ್ಲಿ ದೀರ್ಘಕಾಲಿಕ ಜನಸಂಖ್ಯಾ ನಿರ್ವಹಣೆಗೆ ಇದು ಹೊಸ ದಿಕ್ಕು ತೋರಬಲ್ಲದು.


ಭಾರತದ ಅಭಿವೃದ್ಧಿಯ ಪಯಣ

▸ ಸಿ. ಪಿ. ರಾಧಾಕೃಷ್ಣನ್



ನಾನು ಬಾಲ್ಯದಲ್ಲಿ ತಿರುಪ್ಪೂರಿನ ಶಾಲೆಯೊಂದರಲ್ಲಿ ಕಲಿಯುತ್ತಿದ್ದಾಗ, ನಮ್ಮ ದೇಶದ ಬಗ್ಗೆ ಅನೇಕ ಕನಸುಗಳನ್ನು ಹೊಂದಿದ್ದೆ. ನನ್ನೊಳಗೆ ನಿರಂತರವಾಗಿ ಪ್ರಶ್ನೆಗಳು ಮೂಡುತ್ತಿದ್ದವು: ಭಾರತವು ತನ್ನ ಹಿರಿಮೆಯನ್ನು ಯಾವಾಗ ಮರಳಿ ಪಡೆಯುತ್ತದೆ? ಜಾಗತಿಕ ಮಟ್ಟದಲ್ಲಿ ಅದು ಯಾವಾಗ ಒಂದು ಶಕ್ತಿಯುತ ರಾಷ್ಟ್ರವಾಗಿ ಉದಯಿಸುತ್ತದೆ? ನಮ್ಮ ಬಡ ಮತ್ತು ವಂಚಿತ ಸಹೋದರ, ಸಹೋದರಿಯರಿಗೆ ಗೌರವಾನ್ವಿತ ಜೀವನ ಯಾವಾಗ ಸಿಗುತ್ತದೆ? ನನ್ನ ಹದಿಹರೆಯದ ದಿನಗಳಲ್ಲಿ ನನಗಿದ್ದ ಆಲೋಚನೆಗಳು ಇಂದು ನನಸಾಗುತ್ತಿರುವುದನ್ನು ಕಂಡು ನನಗೆ ಸಂತೋಷವಾಗುತ್ತಿದೆ.

ನಾನು ಆಗಾಗ್ಗೆ ಸ್ವಾಮಿ ವಿವೇಕಾನಂದರ "ಏಳಿ, ಎದ್ದೇಳಿ ಮತ್ತು ಗುರಿ ಮುಟ್ಟುವ ತನಕ ನಿಲ್ಲದಿರಿ" ಮಾತುಗಳನ್ನು ನೆನಪಿಸಿಕೊಳ್ಳುತ್ತೇನೆ. ತಮಿಳುನಾಡಿನ ಮಣ್ಣಿನಿಂದ ಸ್ವಾಮೀಜಿಯವರು ಘೋಷಿಸಿದ ಈ ಮಾತುಗಳು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ದೇಶಭಕ್ತಿ ಮತ್ತು ಬದ್ಧತೆಯನ್ನು ಜಾಗೃತಗೊಳಿಸುವ ಅಪಾರ ಶಕ್ತಿಯನ್ನು ಹೊಂದಿವೆ.



ಭಾರತದ ಸಂಪೂರ್ಣ ಸಾಮರ್ಥ್ಯ ಅನಾವರಣಗೊಂಡಾಗ, ಅದು ಇಡೀ ಜಗತ್ತಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯವಿರುವ ರಾಷ್ಟ್ರವಾಗಿ ಹೊರಹೊಮ್ಮುತ್ತದೆ ಎಂದು ನಾನು ಯಾವಾಗಲೂ ನಂಬಿದ್ದೆ. ಕಳೆದ ಒಂದು ದಶಕದಲ್ಲಿ, ನಮ್ಮ ದೇಶವು ಅತ್ಯಂತ ಉತ್ಸಾಹ ಮತ್ತು ದೃಢಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.

ಜಾಗತಿಕವಾಗಿ ಆರ್ಥಿಕ ಮಂದಗತಿ ಮತ್ತು ಅನಿಶ್ಚಿತತೆಗಳ ಈ ಸಮಯದಲ್ಲಿ, ಭಾರತದ ಆರ್ಥಿಕತೆಯು ಬಲವಾಗಿ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಪ್ರಗತಿಗೆ ಸರ್ಕಾರ ಮತ್ತು ಸಾರ್ವಜನಿಕರು ಈ ಅವಧಿಯನ್ನು ನಿರಂತರ ಅಭಿವೃದ್ಧಿಯ ಯುಗವನ್ನಾಗಿ ಮಾಡಲು ತೋರುತ್ತಿರುವ ಉತ್ಸಾಹವೇ ಕಾರಣವಾಗಿದೆ. ದುರ್ಬಲ ಆರ್ಥಿಕತೆಯ ಸ್ಥಿತಿಯಿಂದ ಇಂದು ನಮ್ಮ ದೇಶವು ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಮತ್ತು ಶೀಘ್ರದಲ್ಲೇ ವಿಶ್ವದ 3ನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಇದಕ್ಕಿಂತಲೂ ಅತ್ಯಂತ ಮಹತ್ವದ ವಿಷಯವೆಂದರೆ, ನಮ್ಮ ಆರ್ಥಿಕ ಅಭಿವೃದ್ಧಿಯು ಒಳಗೊಳ್ಳುವಿಕೆಯಿಂದ ಕೂಡಿದೆ.

ಹಳ್ಳಿಗಾಡಿನ ಜನರ ಅನುಕೂಲಕ್ಕಾಗಿ ಇಂದು ದೇಶವು ಪ್ರತಿಯೊಬ್ಬರಿಗೂ ಆರೋಗ್ಯ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವ ಬದ್ಧತೆಯೊಂದಿಗೆ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದರ ಪರಿಣಾಮವಾಗಿ, 44 ಕೋಟಿಗೂ ಹೆಚ್ಚು ಜನರು ಈಗ ಪ್ರಧಾನಮಂತ್ರಿ-ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 5 ಲಕ್ಷ ರೂಪಾಯಿಗಳ ವಿಮಾ ರಕ್ಷಣೆಯನ್ನು ಹೊಂದಿದ್ದಾರೆ. ಕಳೆದ ವರ್ಷವೊಂದರಲ್ಲೇ ಈ ಯೋಜನೆಯಡಿ 2.5 ಕೋಟಿ ಜನರು ಉಚಿತ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ.

ನಮ್ಮ ರೈತರು ತಮ್ಮ ಕಠಿಣ ಪರಿಶ್ರಮದ ಮೂಲಕ 350 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಿದ್ದು, ಭಾರತವನ್ನು ವಿಶ್ವದ ಎರಡನೇ ಅತಿ ದೊಡ್ಡ ಆಹಾರ ಉತ್ಪಾದಕ ರಾಷ್ಟ್ರದ ಸ್ಥಾನಕ್ಕೆ ಏರಿಸಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ, ಇದುವರೆಗೆ 4 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.

ನಮ್ಮ ನಾರಿ ಶಕ್ತಿಯು ದೇಶದ ಅಭಿವೃದ್ಧಿಗೆ ಸಂಪೂರ್ಣ ಕೊಡುಗೆ ನೀಡಲು ಈಗ ಅವಕಾಶಗಳು ಮುಕ್ತವಾಗಿವೆ. 3 ಕೋಟಿಗೂ ಹೆಚ್ಚು ಮಹಿಳೆಯರು ಲಕ್ಷಾಧಿಪತಿ ದೀದಿಯರು ಮತ್ತು ನಮೋ ಡ್ರೋನ್ ದೀದಿಯರು ಆಗಿದ್ದಾರೆ. ಮಹಿಳೆಯರು ಈಗ ಸಶಸ್ತ್ರ ಪಡೆಗಳಲ್ಲಿ ಕಾಯಂ ಹುದ್ದೆ ಪಡೆಯುತ್ತಿದ್ದಾರೆ ಮತ್ತು ಯುದ್ಧದ ಪಾತ್ರಗಳಲ್ಲೂ ಭಾಗವಹಿಸುತ್ತಿದ್ದಾರೆ. ನಾರಿ ಶಕ್ತಿ ವಂದನ ಅಧಿನಿಯಮವು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ.

ಮಹಿಳೆಯರ ದೈನಂದಿನ ಜೀವನವನ್ನು ಸುಲಭಗೊಳಿಸಲು ಮತ್ತು ಅವರ ಆರೋಗ್ಯದ ಮೇಲಿನ ಕಾಳಜಿಯಿಂದಾಗಿ, ದೇಶಾದ್ಯಂತ ಸುಮಾರು 2 ಕೋಟಿ ಹೊಸ ಎಲ್‌ಪಿಜಿ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ.

ಯುವಜನರಿಗಾಗಿ, ಕಳೆದ ಹತ್ತು ವರ್ಷಗಳಲ್ಲಿಯೇ 13 ಹೊಸ ಐಐಟಿಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ಐಐಟಿಗಳ ಸಂಖ್ಯೆ 23ಕ್ಕೆ ಏರಿದೆ. ಐಐಎಂಗಳ ಸಂಖ್ಯೆಯೂ 13 ರಿಂದ 21 ಕ್ಕೆ ಹೆಚ್ಚಾಗಿದೆ. ಏಮ್ಸ್ ಸಂಖ್ಯೆಯು 7 ರಿಂದ 23 ಕ್ಕೆ ಅಂದರೆ ಮೂರು ಪಟ್ಟು ಹೆಚ್ಚಾಗಿದೆ ಮತ್ತು ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 823 ಕ್ಕೆ ದುಪ್ಪಟ್ಟಾಗಿವೆ. ವೈದ್ಯಕೀಯ ಸೀಟುಗಳ ಸಂಖ್ಯೆ 51,348 ರಿಂದ 1,29,603 ಕ್ಕೆ ಹೆಚ್ಚಿರುವುದು ಹೆಮ್ಮೆಯ ವಿಷಯವಾಗಿದೆ.

ನಾವು ಮೂಲಸೌಕರ್ಯ ಸೌಲಭ್ಯಗಳಲ್ಲಿ ವಿಶ್ವದರ್ಜೆಯ ಮಾನದಂಡಗಳತ್ತ ಮುನ್ನಡೆಯುತ್ತಿದ್ದೇವೆ. ರೈಲ್ವೆಯನ್ನು ಸುಮಾರು ಶೇ. 99 ರಷ್ಟು ವಿದ್ಯುದ್ದೀಕರಿಸಲಾಗಿದೆ. ದೇಶಾದ್ಯಂತ, 164 ವಂದೇ ಭಾರತ್ ಎಕ್ಸ್ ಪ್ರೆಸ್ ರೈಲುಗಳು ಹೊಸ ಯುಗಕ್ಕೆ ನಾಂದಿ ಹಾಡಿವೆ. ವಿಮಾನ ನಿಲ್ದಾಣಗಳ ಸಂಖ್ಯೆಯೂ 74 ರಿಂದ 163 ಕ್ಕೆ ದ್ವಿಗುಣಗೊಂಡಿದೆ ಮತ್ತು ಉಡಾನ್ ಅಡಿಯಲ್ಲಿ ಸಾಮಾನ್ಯ ಜನರಿಗೂ ವಿಮಾನ ಪ್ರಯಾಣವು ಕೈಗೆಟುಕುವಂತಾಗಿದೆ.

ಒಂದು ದಶಕದ ಹಿಂದೆ ತಮಿಳುನಾಡಿಗೆ ಸುಮಾರು 880 ಕೋಟಿ ರೂ.ನಷ್ಟಿದ್ದ ರೈಲ್ವೆ ಬಜೆಟ್ ಹಂಚಿಕೆಯು 2026-27ರಲ್ಲಿ 7,600 ಕೋಟಿ ರೂ.ಗೆ ಹೆಚ್ಚಾಗಿದೆ. ತಮಿಳುನಾಡಿನಲ್ಲಿ, ರಾಮೇಶ್ವರಂ ಮತ್ತು ಪಂಬನ್ ನಡುವೆ ಹೊಸ ಪಂಬನ್ ಸೇತುವೆಯನ್ನು ನಿರ್ಮಿಸಿರುವುದು ಸಂತೋಷದ ವಿಷಯವಾಗಿದ್ದು, ಇದು ಭಾರತದ ಮೊದಲ ವರ್ಟಿಕಲ್ ಲಿಫ್ಟ್ (ಲಂಬವಾಗಿ ಮೇಲಕ್ಕೇರುವ) ಸೇತುವೆಯಾಗಿದೆ, ಇದು ಆಧ್ಯಾತ್ಮಿಕ ಪ್ರವಾಸೋದ್ಯಮ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತಮ ಅವಕಾಶವಾಗಿ ಕಾರ್ಯನಿರ್ವಹಿಸುತ್ತದೆ. ಜಮ್ಮು-ಕಾಶ್ಮೀರದ ಚೆನಾಬ್ ಸೇತುವೆ ಇರಲಿ ಅಥವಾ ಅಸ್ಸಾಂನ ಬೋಗಿಬೀಲ್ ಸೇತುವೆ ಇರಲಿ, ಭಾರತವು ಇಂದು ಹೊಸ ಯುಗದ ಮೂಲಸೌಕರ್ಯಗಳಲ್ಲಿ ಅದ್ಭುತಗಳನ್ನು ಸೃಷ್ಟಿಸುತ್ತಿದೆ.

ಅಭಿವೃದ್ಧಿಯು ಕೇವಲ ಸಾಮಾಜಿಕ ಗುಂಪುಗಳನ್ನು ಮಾತ್ರವಲ್ಲದೆ, ಎಲ್ಲಾ ಪ್ರದೇಶಗಳನ್ನೂ ಒಳಗೊಳ್ಳಬೇಕು ಎಂದು ನಾನು ಯಾವಾಗಲೂ ನಂಬಿದ್ದೇನೆ. ಒಂದು ಕಾಲದಲ್ಲಿ ಭಾರತದ ಕೊನೆಯ ಹಳ್ಳಿಗಳೆಂದು ಪರಿಗಣಿಸಲ್ಪಟ್ಟಿದ್ದ ಗಡಿ ಗ್ರಾಮಗಳು, ಈಗ ಮೊದಲ ಗ್ರಾಮಗಳಾಗಿವೆ ಮತ್ತು ವೈಬ್ರಂಟ್ ವಿಲೇಜಸ್ ಯೋಜನೆಯ ಮೂಲಕ ಅವುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಚಂದ್ರಯಾನ 3 ರ ಯಶಸ್ವಿ ಉಡಾವಣೆಯು ಭಾರತವನ್ನು ಸುಧಾರಿತ ಬಾಹ್ಯಾಕಾಶ ಪರಿಶೋಧನೆಯ ಯುಗಕ್ಕೆ ಕೊಂಡೊಯ್ದಿದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ, ಜಾಗತಿಕ ಕಂಪನಿಗಳು ಭಾರತವನ್ನು ತಮ್ಮ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಿವೆ, ಇದರ ಪರಿಣಾಮವಾಗಿ ಹೂಡಿಕೆಗಳು ಹಲವು ಪಟ್ಟು ಹೆಚ್ಚಾಗುತ್ತಿವೆ. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಭಾರತವು ಈಗ ಜಗತ್ತಿಗೆ ಮಾದರಿಯಾಗಿ ಹೊರಹೊಮ್ಮುತ್ತಿದೆ.

ಮೊಬೈಲ್ ಫೋನ್ ತಯಾರಿಕೆಯಲ್ಲಿ ನಾವು ಜಾಗತಿಕವಾಗಿ ಎರಡನೇ ಸ್ಥಾನವನ್ನು ಪಡೆದುಕೊಂಡಿದ್ದೇವೆ. ಒಂದು ಕಾಲದಲ್ಲಿ ಮೊಬೈಲ್ ಫೋನ್ ಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ನಾವು, ಇಂದು 300 ಕೋಟಿ ಯುಎಸ್ ಡಾಲರ್ ಮೌಲ್ಯದ ಮೊಬೈಲ್ ಫೋನ್ ಗಳನ್ನು ರಫ್ತು ಮಾಡುವ ದೇಶವಾಗಿ ಬೆಳೆದಿದ್ದೇವೆ.

2047ರ ವೇಳೆಗೆ, ಅಂದರೆ ಸ್ವಾತಂತ್ರ್ಯದ ಶತಮಾನೋತ್ಸವದೊಳಗೆ, ಭಾರತವು ಜಾಗತಿಕವಾಗಿ ಮುಂಚೂಣಿಯಲ್ಲಿರುವ ಮಹಾಶಕ್ತಿಯಾಗಬೇಕು ಮತ್ತು ಜಗತ್ತಿಗೆ ಮಾರ್ಗದರ್ಶನ ನೀಡುವ ಸ್ಥಾನವನ್ನು ತಲುಪಬೇಕು ಎಂಬ ಗುರಿಯನ್ನು ನಾವು ಹೊಂದಿದ್ದೇವೆ. ಈ ಕಠಿಣ ಪರಿಶ್ರಮದ ಅವಧಿಯೇ 'ಅಮೃತ ಕಾಲ'. ಸ್ವಾತಂತ್ರ್ಯದ ಹಂಬಲವು ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರನ ಹೃದಯದಲ್ಲಿ ಹೇಗೆ ಇತ್ತೋ, ಹಾಗೆ ದೇಶದ ಅಭಿವೃದ್ಧಿಯ ಆಲೋಚನೆಯು ಇಂದಿನ ಯುವಜನರ ಮನಸ್ಸಿನಲ್ಲಿ ಬೆಳೆಯಬೇಕು. ಈ ಅಮೃತ ಕಾಲದಲ್ಲಿ, ಇಂದಿನ ಯುವ ಪೀಳಿಗೆಯ ಆಲೋಚನೆಗಳು ಮತ್ತು ಪ್ರಯತ್ನಗಳು ದೇಶಭಕ್ತಿಯಿಂದ ಮೇಳೈಸಬೇಕು; ಅವರು ಶ್ರೇಷ್ಠ ಆದರ್ಶ ಹಾಗೂ ಸಚ್ಚಾರಿತ್ರ್ಯವುಳ್ಳವರಾಗಿ ಹೊರಹೊಮ್ಮಬೇಕು. ಆಗ ಮಾತ್ರ ನಾವು 2047 ರಲ್ಲಿ 'ವಿಕಸಿತ ಭಾರತ'ವನ್ನು ಕಾಣಲು ಸಾಧ್ಯವಾಗುತ್ತದೆ.

"ನನ್ನ ಸಹೋದರರೇ, ನಾವೆಲ್ಲರೂ ಕಷ್ಟಪಟ್ಟು ಕೆಲಸ ಮಾಡೋಣ. ಇದು ಮಲಗುವ ಸಮಯವಲ್ಲ. ಭಾರತದ ಭವಿಷ್ಯವು ನಮ್ಮ ಪ್ರಯತ್ನಗಳ ಮೇಲೆ ಅವಲಂಬಿತವಾಗಿದೆ" ಎಂಬ ಸ್ವಾಮಿ ವಿವೇಕಾನಂದರ ಮಾತುಗಳು ನಮಗೆ ಪ್ರೇರಣೆ ಮತ್ತು ನಿರ್ದೇಶನ ಎರಡನ್ನೂ ನೀಡುತ್ತವೆ. ನಮ್ಮ ಕಠಿಣ ಪರಿಶ್ರಮದ ಮೂಲಕ ವಿಕಸಿತ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಜೊತೆಯಾಗಿ ಶ್ರಮಿಸೋಣ.

(ಲೇಖಕರು, ಭಾರತದ ಉಪರಾಷ್ಟ್ರಪತಿ)

ದುಃಖಮಯ ಆನಂದಮಯ



ಅಜ್ಞಸ್ಯ ದುಃಖೌಘಮಯಂ ಜ್ಞಸ್ಯಾನಂದಮಯಂ ಜಗತ್ ।
ಅಂಧಂ ಭುವನಮಂಧಸ್ಯ ಪ್ರಕಾಶಂ ತು ಸುಚಕ್ಷುಷಃ ॥

ಅಜ್ಞಾನಿಗೆ ಜಗತ್ತು ದುಃಖಮಯ. ಜ್ಞಾನಿಗೆ ಅದು ಆನಂದಮಯ. ಕುರುಡನಿಗೆ ಜಗತ್ತು ಕುರುಡು. ಕಣ್ಣುಳ್ಳವನಿಗೆ ಅದು ಪ್ರಕಾಶಮಯ – ಎಂಬುದು ಶ್ಲೋಕಾರ್ಥ.

'ಯಥಾದೃಷ್ಟಿಃತಥಾಸೃಷ್ಟಿ' ಎಂಬಸೂಕ್ತಿಯಿದೆ. ನಮ್ಮನೋಟಕ್ಕನುಗುಣವಾಗಿಲೋಕವು ಒದಗಿ ಬರುತ್ತದೆ ಎಂದರ್ಥ. ದೃಷ್ಟಿ ಬದಲಾದರೆ ಸೃಷ್ಟಿಯೂ ಬದಲಾಗುತ್ತದೆ.

ನಮ್ಮೆದುರು ಭಗವಂತನು ಸೃಷ್ಟಿಸಿದ ಸುಂದರವಾದ ಜಗತ್ತಿದೆ. ಇಲ್ಲಿ ಚಿತ್ರ-ವಿಚಿತ್ರಗಳಿವೆ. ಕಣ್ಣಿಗೆ ಹಬ್ಬವನ್ನುಂಟು ಮಾಡುವ ಸನ್ನಿವೇಶಗಳಿವೆ. ಬೇಸರ ತರಿಸುವ ಸಂಗತಿಯೂ ಇದೆ. ಬದುಕಿಗೆ ಬೇಕಾದ ಪ್ರೇರಣೆ ಪ್ರಕೃತಿಯಲ್ಲಿದೆ. ಬದುಕನ್ನು ಸಮೃದ್ಧಗೊಳಿಸುವ ಸಂದೇಶಗಳು ಇವೆ. ಇನ್ನು ಕೆಲವರಿಗೆ ಇವೆಲ್ಲವೂ ನೀರಸವೆನಿಸಬಹುದು. ದುಃಖಮಯ ಅನ್ನಿಸಬಹುದು. ಒಟ್ಟಿನಲ್ಲಿ ನಮ್ಮ ದೃಷ್ಟಿ, ನಾವು ಪಡೆದ ಸಂಸ್ಕಾರ ಇವುಗಳ ಆಧಾರದ ಮೇಲೆ ನಮಗೆ ಪೂರಕವಾಗಿಯೂ, ವಿರುದ್ಧವಾಗಿಯೂ ಒದಗಿ ಬರುತ್ತದೆ.

ಸಂಪನ್ನವಾದ ಜಗತ್ತು ಅಜ್ಞಾನಿಗೆ ದುಃಖಮಯವೆಂದು ತೋರಬಹುದು. ನೀರಸವೆಂದು ಕಾಣಬಹುದು. ಇದಕ್ಕೆಲ್ಲ ಕಾರಣ ಅವನಿಗಿರುವ ಅಜ್ಞಾನ. ಅಜ್ಞಾನಿಗೆ ಒಳಿತು- ಕೆಡುಕುಗಳನ್ನು ಗುರುತಿಸುವ ಸಾಮರ್ಥ್ಯ ಕಡಿಮೆ. ಆದ್ದರಿಂದ ಜಗತ್ತೇ ಅವನಿಗೆ ದುಃಖಮಯವಾಗಿ ತೋರುತ್ತದೆ. ಇದಕ್ಕೆ ಕಾರಣ ಒಳ್ಳೆಯದನ್ನು ಕಂಡುಕೊಳ್ಳುವ ಜ್ಞಾನವಿಲ್ಲದಿರುವುದು. ಆದ್ದರಿಂದ ಎಲ್ಲವೂ ದುಃಖಮಯ ಎಂದೆನಿಸಿದರೆ ಆಕ್ಷೇಪಿಸುವಂತಿಲ್ಲ. ಅವನ ಅಲ್ಪ ತಿಳುವಳಿಕೆಯ ಹಿನ್ನೆಲೆಯಲ್ಲಿ ಹಾಗೆ ತೋರುತ್ತದೆ.

ಎಲ್ಲರಿಗೂ ಇದು ಅನ್ವಯವಾಗುವುದಿಲ್ಲ. ಜ್ಞಾನಿಯಾದವನಿಗೆ ಈ ಜಗತ್ತು ಆನಂದಮಯವಾಗಿ ತೋರುತ್ತದೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವನ್ನು ನೋಡಿ ಧನಾತ್ಮಕವಾಗಿ ಚಿಂತಿಸಿ ಅವುಗಳಲ್ಲಿರುವ ವಿಶೇಷತೆಯನ್ನು ಗುರುತಿಸಿ ಆನಂದವನ್ನು ಕಂಡುಕೊಳ್ಳುತ್ತಾನೆ. ಪಂಚಮದ ಇಂಚರದಲ್ಲಿ ಹಾಡುವ ಕೋಗಿಲೆ, ಮೋಡವನ್ನು ನೋಡಿ ನಲಿಯುವ ನವಿಲು ಇವೆಲ್ಲವೂ ಈ ಬಗೆಯ ವಿಶೇಷತೆಯನ್ನು ಯಾವ ಶಾಲೆಗೆ ಹೋಗಿಯೂ, ಗ್ರಂಥಗಳನ್ನು ಓದಿಯೋ ಇನ್ನೊಬ್ಬರ ಉಪದೇಶವನ್ನು ಕೇಳಿಯೋ ಕಲಿತುಕೊಂಡಿಲ್ಲ, ಪ್ರಕೃತಿಯ ಒಡಲೊಳಗಿದ್ದು ಕಲಿತುಕೊಂಡಿವೆ. ಇವುಗಳನ್ನು ನೋಡಿದ ಜ್ಞಾನಿಗೆ ಆನಂದವಾಗುವುದು ಸಹಜ. ವೈವಿಧ್ಯವನ್ನು ನೋಡಿ ಅದನ್ನು ಮಾಡಿದ ಭಗವಂತನ ವಿಶೇಷ ಸಾಮರ್ಥ್ಯವನ್ನು ನೆನೆದು ಆನಂದವನ್ನು ಅನುಭವಿಸುತ್ತಾನೆ. ಅಂಧ ಎಂದರೆ ಕುರುಡ. ಕಣ್ಣಿಲ್ಲದ ಅವನಿಗೆ ಎಲ್ಲವೂ ಕತ್ತಲೆಯಾಗಿ, ಕಪ್ಪಾಗಿ ತೋರುತ್ತದೆ. ಅವನ ಪಾಲಿಗೆ ಜಗತ್ತೇ ಕತ್ತಲೆ. ಜೀವನದಲ್ಲಿ ಬೆಳಕನ್ನೇ ಕಾಣದ ಅವನಿಗೆ ಎಲ್ಲವೂ ಕತ್ತಲೆಯೆನಿಸಿದರೆ ಆಶ್ಚರ್ಯವಿಲ್ಲ. ಜಗತ್ತೇ ಕತ್ತಲೆಯ ಕೂಪ ಎಂದೆನಿಸುವುದರಲ್ಲಿ ವಿಶೇಷತೆಯಿಲ್ಲ. ಇದಕ್ಕೆ ಬದಲಾಗಿ ಕಣ್ಣಿದ್ದವನಿಗೆ ಜಗತ್ತು ಪ್ರಕಾಶಮಯವಾಗಿ ತೋರುತ್ತದೆ. ಎಲ್ಲದರಲ್ಲಿಯೂ ಒಂದೊಂದು ಬಗೆಯ ಆಶ್ಚರ್ಯದ ಅಂಶವನ್ನು ಗುರುತಿಸಿ, ಸುಖಿಸುತ್ತಾನೆ. ಜನರು ಅವರು ಪಡೆದ ಸಂಸ್ಕಾರ, ಅವರಿಗಿರುವ ಅನುಕೂಲ ವ್ಯವಸ್ಥೆ, ಜ್ಞಾನದ ಹಿನ್ನೆಲೆಯಲ್ಲಿ ಜಗತ್ತನ್ನು ನೋಡುತ್ತಾರೆ. ಜಗತ್ತಿನ ಕುರಿತು ವ್ಯಾಖ್ಯಾನಿಸುತ್ತಾರೆ ಇದು ಲೋಕ ಸ್ವಭಾವ.

ಅಂತ್ಯೇಷ್ಟಿಯ ಕ್ರಿಯಾಕಲಾಪಗಳು ಮತ್ತು ಅವುಗಳ ಉದ್ದೇಶ

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ.

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಜೀವನು ಪ್ರಕೃತಶರೀರವನ್ನು ಬಿಟ್ಟು ಹೊರಟ ಮೇಲೆ ದೇಹವನ್ನು ಶವವೆಂದು ಕರೆಯಲಾಗುತ್ತದೆ. ದೀರ್ಘಕಾಲದವರೆಗೆ ಭೋಗ, ಧರ್ಮಾಚರಣೆ ಮತ್ತು ಅಧ್ಯಾತ್ಮಸಾಧನೆಗೆ ಆಶ್ರಯವಾದ ಸ್ಥೂಲದೇಹಕ್ಕೆ ಮತ್ತು ಮರಣ ಹೊಂದಿದ ಜೀವನ ಮುಂದಿನ ಪ್ರಯಾಣಕ್ಕೆ ಸಹಕಾರಿಯಾಗಿ ಮಾಡಲಾಗುವ ಸಂಸ್ಕಾರಕ್ಕೆ ಅಂತ್ಯಸಂಸ್ಕಾರವೆಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಮಾಡಲಾಗುವ ಶವದಹನವನ್ನು ಒಂದು ಯಜ್ಞವನ್ನಾಗಿಯೇ ಪರಿಗಣಿಸಲಾಗಿದೆ. ಹಾಗಾಗಿಯೇ ಇದನ್ನು ಅಂತ್ಯೇಷ್ಟಿ ಎಂದು ಕರೆಯಲಾಗುತ್ತದೆ. ಇದರಲ್ಲಿ ಯಮನೆಂಬ ದೇವತೆಯನ್ನುದ್ದೇಶಿಸಿ, ಮೃತನ ಶರೀರವನ್ನೇ ಆಹುತಿಯನ್ನಾಗಿ ಸಮರ್ಪಿಸಲಾಗುತ್ತದೆ. ಹಾಗಾಗಿಯೇ ಸಂಕಲ್ಪದಲ್ಲಿ 'ಯಮೋ ದೇವತಾ, ಶವಃ ಹವಿಃ' ಎಂಬುದಾಗಿ ಉಚ್ಚರಿಸಲಾಗುತ್ತದೆ.

ವ್ಯಕ್ತಿಯೊಬ್ಬ ಮರಣವನ್ನು ಹೊಂದುವ ಸಮಯದಲ್ಲಿ ಆತನ ದೊಡ್ಡ ಉಸಿರು ಹೊರಡುವ ಸಂದರ್ಭದಲ್ಲಿ ಕರ್ಣಸೂಕ್ತವನ್ನು ಪಠಿಸಬೇಕು. ಊರ್ಧ್ವಚ್ಛ್ವಾಸೀ ಎಂಬುದಾಗಿ ಉಪನಿಷತ್ತು ಆತನನ್ನು ಕರೆಯುತ್ತದೆ. ಮರಣಹೊಂದುವ ಸಮಯದಲ್ಲಿ ವಾಕ್ಕು ಮನಸ್ಸಿನಲ್ಲಿ ತನ್ನ ವ್ಯಾಪಾರಗಳನ್ನು ಲಯಗೊಳಿಸುತ್ತದೆ. ಮನಸ್ಸು ಪ್ರಾಣದಲ್ಲಿಯೂ, ಪ್ರಾಣವು ತೇಜಸ್ಸಿನಲ್ಲಿಯೂ, ತೇಜಸ್ಸು ಪರದೇವತೆಯಲ್ಲಿಯೂ ಲೀನವಾಗಿ ಜೀವನು ಮುಂದಿನ ಶರೀರಾರಂಭಕ್ಕೆ ಬೇಕಾದ ಎಲ್ಲ ಸಾಮಗ್ರಿಗಳೊಂದಿಗೆ ಈ ಶರೀರವನ್ನು ತ್ಯಜಿಸುತ್ತಾನೆ ಎಂಬುದನ್ನು ನಾವು ಈ ಹಿಂದೆ ತಿಳಿದುಕೊಂಡಿದ್ದೇವೆ. ಅದಕ್ಕೆ ಉಪನಿಷತ್ತು ಎತ್ತಿನಬಂಡಿಯ ಉದಾಹರಣೆಯನ್ನೂ ಕೊಟ್ಟಿದೆ. ಹೇಗೆ ಬಂಡಿಯಲ್ಲಿ ಸಕಲ ಸಾಮಗ್ರಿಗಳನ್ನು ತುಂಬಿಕೊಂಡು ಹೋಗುವಾಗ ಆ ಬಂಡಿಯು ಶಬ್ದವನ್ನು ಮಾಡುತ್ತದೆಯೋ, ಜೀವನ ಉತ್ಕ್ರಮಣದ ಸಮಯದಲ್ಲಿ ಮರ್ಮಸ್ಥಾನಗಳನ್ನು ಕತ್ತರಿಸಿಕೊಂಡು ಹೋಗುವಾಗ ಜೀವನೂ ಸಶಬ್ದವಾಗಿ ಈ ದೇಹವನ್ನು ತ್ಯಜಿಸುತ್ತಾನೆ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ.

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ. ಮರಣದ ಸಮಯದಲ್ಲಿ ಯಾವ ರೀತಿಯ ಮನೋವೃತ್ತಿಗಳು ಆತನ ಮನಸ್ಸಿನಲ್ಲಿ ಉಂಟಾಗುತ್ತವೆಯೋ ಅವನು ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ. ಹಾಗಾಗಿ ಹೆಚ್ಚೆಚ್ಚು ದೇವತಾ ನಾಮಸಂಕೀರ್ತನೆ, ವಿಷ್ಣುಸಹಸ್ರನಾಮ, ಭಗವದ್ಗೀತೆ ಮೊದಲಾದವುಗಳ ಪಠಣ ಇವುಗಳು ಅತ್ಯಂತ ಮುಖ್ಯವಾದುವು. ದೇವತಾ ನಾಮಸಂಕೀರ್ತನೆಯಿಂದ ಭಗವದ್ವಿಷಯಕವಾದ ಚಿಂತನೆಗಳು ಮೂಡಲಿ ಎಂಬುದು ಆಶಯ. ಜೀವನು ಇಡೀ ಜೀವನದಲ್ಲಿ ಯಾವ ರೀತಿಯ ಚಿಂತನೆಯನ್ನು ಹೆಚ್ಚು ಮಾಡಿದ್ದಾನೋ ಅದೇ ಚಿಂತನೆಯೇ ಆತನ ಮನಸ್ಸಿನಲ್ಲಿ ಮೂಡುತ್ತದೆ. ಹಾಗಾಗಿ 'ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್। ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥' ಎಂಬ ಮೂಲಕ ಭಗವಂತನು ಗೀತೆಯಲ್ಲಿ ಇದನ್ನೇ ತಿಳಿಸಿದ್ದಾನೆ. ಇಲ್ಲಿ 'ಸದಾ ತದ್ಭಾವಭಾವಿತಃ' ಎಂಬುದು ಬಹಳ ಮುಖ್ಯವಾದುದು. ಸಾವಿನ ಸಂದರ್ಭದಲ್ಲಿ ಭಗವಚ್ಚಿಂತನೆ ಮಾಡಿದರೆ ಸಾಕಲ್ಲ, ಇಡೀ ಜೀವನದಲ್ಲಿ ಯಾಕೆ ಅಂಥ ಸಚ್ಚಿಂತನೆಯನ್ನು ಮಾಡಬೇಕು ಎಂದು ಕೆಲವರಿಗೆ ಅನಿಸಬಹುದು. ಆದರೆ ಹಾಗಲ್ಲ. ಮರಣದಂಥ ತೀವ್ರ ಸಂಕಟದ ಸಮಯದಲ್ಲಿ ಆತ ಜೀವನವಿಡೀ ಯಾವ ರೀತಿಯ ಆಲೋಚನೆಗಳನ್ನು ಮಾಡಿಕೊಂಡು ಬಂದಿದ್ದಾನೋ ಅಂಥ ಆಲೋಚನೆಗಳೇ ಬರುತ್ತವೆಯೇ ಹೊರತೂ, ಸ್ವತಂತ್ರವಾಗಿ ತನಗೆ ಬೇಕಾದ ವಿಷಯವನ್ನು ಚಿಂತಿಸುವ ಸಾಮರ್ಥ್ಯ ಆತನಿಗಿರುವುದಿಲ್ಲ. ಹಾಗಾಗಿಯೇ ಸದಾ ತದ್ಭಾವಭಾವಿತಃ ಎಂದು ಗೀತೆಯಲ್ಲಿ ಹೇಳಲಾಗಿದೆ.

ಅದೇ ಸಂದರ್ಭದಲ್ಲಿ ಮರಣತ್ರಾಸದ ನಿವಾರಣೆಗಾಗಿ ಗೋದಾನವನ್ನು ಮಾಡಲಾಗುತ್ತದೆ. ಇದು ಯಾಕೆ ಅಂದರೆ, ಜೀವನು ತನ್ನ ಮರಣದವರೆಗೂ ಈ ದೇಹವನ್ನೇ ತಾನೆಂಬ ಅಭಿಮಾನದಿಂದ ಜೀವಿಸಿದ್ದ. ಅದನ್ನು ಈಗ ಬಿಟ್ಟು ಹೋಗುವಾಗ, ಅದರ ಜೊತೆಗೆ, ತನ್ನದು ಎಂದು ಅಭಿಮಾನಿಸಿದ್ದ ಎಲ್ಲವನ್ನೂ ಬಿಟ್ಟು ಹೊರಡಬೇಕಾಗುತ್ತದೆ. ಅಷ್ಟೇ ಅಲ್ಲ, ಜೀವೋತ್ಕ್ರಮಣದ ಸಂದರ್ಭದಲ್ಲಿ ಆಗುವ ಅನೂಹ್ಯ ನೋವು ಸಹಿಸಲಸಾಧ್ಯವಾಗಿರುತ್ತದೆ. ಹಾಗಾಗಿ ತೀವ್ರವಾದ ಆ ಸಂಕಟವು ಕಡಿಮೆಯಾಗಿ, ಆತನ ಉತ್ಕ್ರಮಣವು ಸುಖಕರವಾಗಿರಲೆಂಬ ಸಂಕಲ್ಪದಿಂದ ಇದನ್ನು ನಡೆಸಲಾಗುತ್ತದೆ. ಹಾಗೆಯೇ ಪಾಪನಿವಾರಣೆಯನ್ನು ಪ್ರಾರ್ಥಿಸಿ ತಿಲಪಾತ್ರದಾನವನ್ನು ನಡೆಸಲಾಗುತ್ತದೆ. ಇದಲ್ಲದೇ ದಶದಾನವೆಂದು ಪ್ರಸಿದ್ಧವಾದ ದಾನಕರ್ಮವನ್ನೂ ಪಾಪದ ನಾಶದ ಉದ್ದೇಶದಿಂದಲೇ ನಡೆಸಲಾಗುತ್ತದೆ.

ದಶದಾನಗಳೆಂದರೆ ಹತ್ತುವಿಧದ ದಾನಗಳು. ದಾನಕ್ಕೆ ನಮ್ಮ ಪಾಪವನ್ನು ಕಳೆದುಹಾಕುವ ಸಾಮರ್ಥ್ಯವಿರುತ್ತದೆ. ಸಾತ್ತ್ವಿಕವಾದ ದಾನವು ಎಲ್ಲಕ್ಕಿಂತ ಪ್ರಶಸ್ತವಾದುದು. ಆದರೆ ಇಲ್ಲಿ ಈ ದಾನಗಳನ್ನು ಮರಣೋನ್ಮುಖನು ಸ್ವತಃ ಕೊಡುತ್ತಿಲ್ಲ. ಬದಲಿಗೆ ಅವನ ಪ್ರತಿನಿಧಿಯಾಗಿ ಪುತ್ರನು ಕೊಡುತ್ತಾನೆ. ದಶವಿಧದಾನಗಳೆಂದರೆ, ಗೋದಾನ, ಭೂದಾನ, ತಿಲದಾನ, ಹಿರಣ್ಯದಾನ, ಆಜ್ಯದಾನ, ಬಟ್ಟೆ, ಧಾನ್ಯ, ಗುಡ, ಬೆಳ್ಳಿ, ಉಪ್ಪು ಹೀಗೆ ಹತ್ತು ವಿಧದ ದ್ರವ್ಯಗಳನ್ನು ಕೊಡುವ ದಾನವೇ ದಶದಾನವಾಗಿದೆ. ಇದರಿಂದ ಕಲಿಯುಗದಲ್ಲಿರುವ ದಾನದ ಮಹತ್ತ್ವವು ತಿಳಿಯುತ್ತದೆ. ಜ್ಞಾನ, ತಪಸ್ಸು ಮತ್ತು ಯಜ್ಞಗಳು ಉಳಿದ ಯುಗಗಳಲ್ಲಿ ಮುಖ್ಯವಾದವುಗಳಾದರೆ, ಕಲಿಯುಗದಲ್ಲಿ ದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಇದರಿಂದ ಪುಣ್ಯವೂ ದೊರೆಯುತ್ತದೆ ಮತ್ತು ಪಾಪವೂ ಕ್ಷೀಣಿಸುತ್ತದೆ. ದಾನದ ಪರಿಮಾಣ, ದಾನದ ರೀತಿ ಮೊದಲಾದವುಗಳಿಗೆ ಅನುಗುಣವಾಗಿ ಆಯಾ ಪಾಪಗಳ ಕ್ಷಯವುಂಟಾಗುತ್ತದೆ ಎಂದರ್ಥ. ಯಾಕೆಂದರೆ ಕರ್ಮದಲ್ಲಿಯೂ ದೃಢ, ಮಧ್ಯಮ, ಅದೃಢ ಎಂಬ ವಿಭಾಗಗಳಿವೆ.

ತಂದೆಯ ಅಂತಿಮಕ್ರಿಯೆಯನ್ನು ಆರಂಭಿಸುವಾಗ ಮಗನು ಕೃಚ್ಛ್ರಾಚರಣೆಯನ್ನು ಮಾಡಿಕೊಳ್ಳುತ್ತಾನೆ. ತಾನು ಮಾಡಿದ ಪಾಪದ ನಾಶವಾಗಿ, ತನ್ನ ಶುದ್ಧಿಯೊದಗಿ, ಕರ್ಮಾನುಷ್ಠಾನಕ್ಕೆ ಯೋಗ್ಯತೆ ದೊರಕಲಿ ಎಂಬುದು ಇದರ ಆಶಯ. ಇಲ್ಲಿಯೂ ದಾನವನ್ನು ಮಾಡಲಾಗುತ್ತದೆ. ಅನಂತರ ಮುಂಡನವನ್ನು ಮಾಡಲಾಗುತ್ತದೆ.

ಮೇರುಮಂದರತುಲ್ಯಾನಿ ಪಾಪಾನಿ ವಿವಿಧಾನಿ ಚ ।

ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ ವಪಾಮ್ಯಹಮ್ ॥ ಎಂಬುದು ಈ ಸಂದರ್ಭದಲ್ಲಿ ಹೇಳಲಾಗುವ ಮಂತ್ರ. ಅರ್ಥಾತ್ ದೇಹದಲ್ಲಿರುವ ಕೂದಲುಗಳಲ್ಲಿ ಪಾಪವು ಆಶ್ರಿತವಾಗಿರುತ್ತದೆ. ಜೊತೆಗೆ ಇವು ಮಲವೂ ಕೂಡ ಹೌದು. ಕೂದಲು, ಉಗುರುಗಳು ಮೊದಲಾದ ರೂಪದಲ್ಲಿ ದೇಹದಲ್ಲಿರುವ ಮಲವು ಹೊರತೋರಿಕೊಳ್ಳುತ್ತದೆ. ಕೆಲವಷ್ಟು ನಿತ್ಯವೂ ಹೊರಹೋಗುವುದಾದರೂ, ಇನ್ನು ಕೆಲವಷ್ಟು ಕೇಶಾದಿಗಳ ಮೂಲಕ ಹೊರಬರುತ್ತವೆ. ಇಂಥ ಕೇಶಗಳನ್ನು ಕತ್ತರಿಸುವುದೆಂದರೆ, ಅದರಲ್ಲಿ ಆಶ್ರಿತವಾಗಿರುವ ಪಾಪಗಳನ್ನು ಕತ್ತರಿಸಿಕೊಂಡಂತೆ. ಹಾಗೆಂಬುದಾಗಿ ಈ ಮಂತ್ರವೇ ಹೇಳುತ್ತಿದೆ. ಒಟ್ಟಿನಲ್ಲಿ ಪ್ರತಿಯೊಂದು ಕರ್ಮಕ್ಕೂ ಅದರದ್ದೇ ಆದ ಉದ್ದೇಶ ಹಾಗೂ ಪ್ರಯೋಜನಗಳಿವೆ. ಇಷ್ಟಾದ ಮೇಲೆ ತಂದೆಯ ವಿಚ್ಛಿನ್ನವಾದ ಔಪಾಸನಾಗ್ನಿಯ ಪುನಃಸಂಧಾನವನ್ನು ಮಾಡಲಾಗುತ್ತದೆ. ಅರ್ಥಾತ್ ಅಗ್ನಿಯ ಉಪಾಸನೆಯನ್ನು ನಿತ್ಯವೂ ಮಾಡಬೇಕಾದದ್ದು. ಅದು ವಿಚ್ಛಿನ್ನವಾದಲ್ಲಿ ಅದರ ಪ್ರಾಯಶ್ಚಿತ್ತದೊಂದಿಗೆ ಮತ್ತೆ ಸಂಧಾನವನ್ನು ಮಾಡಿಕೊಳ್ಳಬೇಕಾಗುತ್ತದೆ. ಜೀವಿತದ ಅವಧಿಯಲ್ಲಾದರೆ ಅದೇ ವ್ಯಕ್ತಿಯೇ ಅದನ್ನು ಮಾಡಿಕೊಳ್ಳಬೇಕು. ತೀರಿಕೊಂಡಾಗ ಮಾತ್ರ ಆ ವ್ಯಕ್ತಿಯು ಉಪಾಸಿಸುತ್ತಿದ್ದ ಅಗ್ನಿಯ ಸಂಧಾನವನ್ನು ಆತನ ಮಗನು ಮಾಡಬಹುದಾಗಿದೆ. ಆ ಅಗ್ನಿಯಲ್ಲಿಯೇ ಆತನ ದೇಹವನ್ನು ಸುಡಲಾಗುತ್ತದೆ. ಒಟ್ಟಿನಲ್ಲಿ ಇಡೀ ಜೀವನದಲ್ಲಿ ಜೊತೆಗಿದ್ದ ಅಗ್ನಿಗೆ ತನ್ನ ದೇಹವನ್ನೇ ಆಹುತಿಯಾಗಿಸಿಕೊಳ್ಳುವ ಮೂಲಕ ವ್ಯಕ್ತಿಯ ಈ ಶರೀರದಲ್ಲಿನ ಜೀವನವು ಪೂರ್ಣಗೊಳ್ಳುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಇಂಥ ಎಲ್ಲ ಆಚರಣೆಗಳು ಎಷ್ಟು ಅರ್ಥಪೂರ್ಣ ಎಂಬುದು ಇದರಿಂದ ತಿಳಿಯುತ್ತದೆ.

ಇಷ್ಟೆಲ್ಲ ಆದ ಮೇಲೆ ಶವದ ಸ್ನಾನವನ್ನು ಮಾಡಲಾಗುತ್ತದೆ. ಶವವು ಈಗ ಅಂತ್ಯೇಷ್ಟಿಯ ದ್ರವ್ಯವಾಗಿರುವುದರಿಂದ, ದ್ರವ್ಯದ ಶುದ್ಧಿಗಾಗಿ ಮಾಡಲಾಗುವ ಪ್ರೋಕ್ಷಣಾದಿಗಳಂತೆ ಇದೂ ಒಂದು ಸಂಸ್ಕಾರವಾಗಿದೆ. ಈ ಸ್ನಾನವನ್ನು ಓಷಧಿದ್ರವ್ಯಗಳಿಂದ ಕೂಡಿದ ನೀರಿನಿಂದ ಮಾಡಲಾಗುತ್ತದೆ. ಏತನ್ಮಧ್ಯೆ ಶವಕ್ಕೆ ಹಳೆಯ ಬಟ್ಟೆಯನ್ನು ತೆಗೆದು, ಹೊಸಬಟ್ಟೆಯನ್ನು ಆಚ್ಛಾದಿಸುವುದೇ ಮೊದಲಾದ ಕ್ರಿಯೆಗಳಿದ್ದೇ ಇವೆ. ಒಟ್ಟಿನಲ್ಲಿ ಮರಣವು ಬದುಕಿರುವ ಪ್ರತಿಯೊಬ್ಬನಿಗೂ ವೈರಾಗ್ಯವನ್ನುಂಟುಮಾಡುವ ಸಂದರ್ಭ. ಹುಟ್ಟಿದ ಪ್ರತಿಯೊಬ್ಬನಿಗೂ ಮರಣವಿದೆ ಎಂಬುದು ನೆನಪಾದಾಗ ಆದಷ್ಟು ಶೀಘ್ರವಾಗಿ ಧರ್ಮವನ್ನು ಸಂಪಾದಿಸಿಕೊಳ್ಳಬೇಕೆಂಬ ಬುದ್ಧಿ ಉಂಟಾಗುತ್ತದೆ. ಐಹಿಕ ಸುಖಭೋಗಗಳೆಲ್ಲವೂ ಅನಿತ್ಯ. ಕೇವಲ ಧರ್ಮ ಮಾತ್ರವೇ ನಮ್ಮ ಜೊತೆ ಬರುವಂಥದ್ದೆಂಬ ಜ್ಞಾನೋದಯವುಂಟಾಗಬೇಕೆಂಬುದೇ ಈ ಎಲ್ಲ ಕ್ರಿಯಾಕಲಾಪಗಳ ಮುಖ್ಯ ಉದ್ದೇಶ. ಹಾಗಾಗಿಯೇ ಗರುಡ ಪುರಾಣಾದಿಗಳಲ್ಲಿಯೂ ಕೂಡ ನರಕಾದಿಗಳ ವರ್ಣನೆಯನ್ನು ಮಾಡಲಾಗಿದೆ.

ವ್ಯಕ್ತಿಯ ಪ್ರಾಣೋತ್ಕ್ರಮಣದ ಅನಂತರ ಮಾಡಲಾಗುವ ವಿಧಿ-ವಿಧಾನಗಳ ಮುಂದುವರಿದ ಚರ್ಚೆಯನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತೀಸ್ತಾ ನದಿ ನೀರು ಹಂಚಿಕೆ: ಚೀನಾದ ಮಧ್ಯಸ್ಥಿಕೆ ಕೋರುತ್ತಿರುವ ಬಾಂಗ್ಲಾ

▸ ಕೆ.ಆರ್. ಕಾಮತ್

ಬಾಂಗ್ಲಾ ದೇಶದಲ್ಲಿ ಚುನಾವಣೆ ನಡೆದು ತಾರಿಕ್ ರೆಹಮಾನ್ ಪ್ರಧಾನಿಯಾದ ಬಳಿಕ ಭಾರತದೊಂದಿಗಿನ ಸಂಬಂಧ ಸುಧಾರಿಸಬಹುದೆಂದು ಭಾವಿಸಲಾಗಿತ್ತು. ಆದರೆ ತಾರಿಕ್ ರೆಹಮಾನ್ ಅವರು ಚೀನಾದೆಡೆಗೆ ಹೆಚ್ಚು ವಾಲುತ್ತಿದ್ದು, ಭಾರತದ ಜತೆಗಿನ ಸಂಬಂಧಕ್ಕೆ ಹೆಚ್ಚು ಮಹತ್ವ ನೀಡದಿರುವಂತೆ ತೋರಿಬರುತ್ತಿದೆ. ಅದೂ ಸಾಲದೆಂಬಂತೆ ಅವರು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ತೀಸ್ತಾ ನದಿ ಜಲ ಹಂಚಿಕೆ ಮಾತುಕತೆಯಲ್ಲಿ ಚೀನಾ ಕೂಡಾ ಪಾಲ್ಗೊಳ್ಳಬೇಕು ಎಂದು ಹೇಳುವ ಮೂಲಕ ಚೀನಾದ ಬೆಂಬಲವನ್ನು ವಿಧ್ಯುಕ್ತವಾಗಿ ಕೋರಿದ್ದಾರೆ. ತಾರಿಕ್ ರೆಹಮಾನ್‌ಅವರ ಈ ನಡೆಯು ಭಾರತ ಮತ್ತು ಬಾಂಗ್ಲಾದೇಶ ನಡುವಿನ ಸಂಬಂಧಗಳ ಮೇಲೆ ಮತ್ತೆ ಕರಿಛಾಯೆ ಹರಡುವುದು ನಿಶ್ಚಿತವಾಗಿದೆ.

ತೀಸ್ತಾ ನದಿ ಜಲ ಸಮಗ್ರ ನಿರ್ವಹಣೆ ಯೋಜನೆ (TRCM-RP) ಕುರಿತು ಬಾಂಗ್ಲಾದೇಶದ ವಿದೇಶಾಂಗ ಸಚಿವ ಕಬಿ ಉರ್ ರೆಹಮಾನ್ ಮತ್ತು ಚೀನಾ ವಿದೇಶಾಂಗ ಸಚಿವ ವಾಂಗ್ ಯೀ ಸೇರಿಕೊಂಡು ಬೀಜಿಂಗ್‌ನಲ್ಲಿ ಮಾತುಕತೆ ನಡೆಸಿದ್ದಾರೆಂದೂ ಬಾಂಗ್ಲಾದೇಶದ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದು ಭಾರತದ ಆಂತರಿಕ ವ್ಯವಹಾರದಲ್ಲಿ ಚೀನಾದ ಹಸ್ತಕ್ಷೇಪವೇ ಸರಿ.

ಇದಕ್ಕೆ ಪ್ರತಿಕ್ರಿಯಿಸಿರುವ ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್‌ರವರು "ಭಾರತ ಮತ್ತು ಬಾಂಗ್ಲಾ ದೇಶಗಳ ನಡುವೆ 54 ನದಿಗಳು ಹರಿಯುತ್ತಿವೆ. ಜಲ ಸಂಬಂಧಿತ ಎಲ್ಲಾ ವಿಷಯಗಳನ್ನು ಚರ್ಚಿಸಲು ನಾವು ಈಗಾಗಲೇ ದ್ವಿಪಕ್ಷೀಯ ಸಮಿತಿಯನ್ನು ನಿರ್ಮಿಸಿದ್ದೇವೆ. ಈ ದ್ವಿಪಕ್ಷೀಯ ಸಮಿತಿಯು ಆಗಾಗ ಸೇರಿ ಮಾತುಕತೆ ನಡೆಸುವುದನ್ನು ಮುಂದುವರಿಸುತ್ತದೆ" ಎಂದು ಹೇಳಿ ಚೀನಾದ ಮಧ್ಯಸ್ಥಿಕೆಯ ಪಾತ್ರವನ್ನು ತಳ್ಳಿ ಹಾಕಿದ್ದಾರೆ.

ಭಾರತ ಮತ್ತು ಬಾಂಗ್ಲಾದೇಶದ ನಡುವೆ 1996ರಲ್ಲಿ ಗಂಗಾ ನದಿ ಜಲ ಒಪ್ಪಂದ ಏರ್ಪಟ್ಟಿತ್ತು. 30 ವರ್ಷಗಳ ಈ ಒಪ್ಪಂದವು ಡಿಸೆಂಬರ್ 2026ಕ್ಕೆ ಅಂತ್ಯಗೊಳ್ಳುತ್ತದೆ. ಈ ಒಪ್ಪಂದ ನವೀಕರಣ ಆಗಬೇಕಾಗಿದೆ. ಇದರ ಜತೆಗೇ 2024ರಲ್ಲಿ ಉಭಯ ದೇಶಗಳ ಮಧ್ಯೆ ತೀಸ್ತಾ ನದಿ ಜಲ ಒಪ್ಪಂದ ರೂಪುಗೊಂಡಿತ್ತು. ಈ ಒಪ್ಪಂದದ ಪ್ರಕಾರ ಭಾರತಕ್ಕೆ ಶೇಕಡ 42.5 ರಷ್ಟು ನೀರು ಹಂಚಿಕೆಯಾದರೆ ಬಾಂಗ್ಲಾದೇಶಕ್ಕೆ ಶೇಕಡ 37.5 ರಷ್ಟು ನೀರು ಹಂಚಿಕೆಯಾಗಬೇಕು. ಆದರೆ ಪಶ್ಚಿಮ ಬಂಗಾಳ ಸರ್ಕಾರವು ಈ ಒಪ್ಪಂದವನ್ನು ವಿರೋಧಿಸಿದ್ದರಿಂದ ಒಪ್ಪಂದವು ಜಾರಿಗೆ ಬರಲೇ ಇಲ್ಲ. ಹೀಗಾಗಿ ಒಪ್ಪಂದ ಪತ್ರಗಳ ಮೇಲೆ ಎರಡು ದೇಶಗಳ ಸಹಿ ಬೀಳಲೇ ಇಲ್ಲ. ಹೀಗಾಗಿ ತೀಸ್ತಾ ನದಿ ನೀರಿನ ಹಂಚಿಕೆ ಬಗೆಹರಿಯದೆ ಹಾಗೇ ಉಳಿದಿದೆ.

ಪಶ್ಚಿಮ ಬಂಗಾಳದ ಮಮತಾ ಸರ್ಕಾರ ಒಪ್ಪಂದವನ್ನು ವಿರೋಧಿಸಿದ್ದು ತನ್ನ ಪಾಲಿನ ಹೆಚ್ಚಿನ ನೀರಿಗಾಗಿ ಅಲ್ಲ. ಇಲ್ಲಿಯೂ ಓಲೈಕೆಯ ರಾಜಕಾರಣ ಕೆಲಸ ಮಾಡಿತ್ತು. ಭಾರತ ಸರ್ಕಾರವು ಇತ್ತೀಚೆಗೆ ಸಿಂಧೂ ನದಿ ಜಲ ಒಪ್ಪಂದವನ್ನು ರದ್ದುಗೊಳಿಸುವ ತನಕ ಸಿಂಧೂ ನದಿ ಮತ್ತು ಅದರ ಉಪನದಿಗಳಲ್ಲಿನ ಹೆಚ್ಚಿನ ನೀರು ಪಾಕಿಸ್ತಾನಕ್ಕೆ ಹರಿದು ಹೋದ ರೀತಿಯಲ್ಲೇ, ತೀಸ್ತಾ ನದಿಯಲ್ಲಿನ ಹೆಚ್ಚಿನ ಪ್ರಮಾಣದ ನೀರು ಬಾಂಗ್ಲಾದೇಶಕ್ಕೆ ಹರಿದು ಹೋಗುತ್ತಲೇ ಇದೆ. ಬಹುಶಃ ಪಶ್ಚಿಮ ಬಂಗಾಳ ಸರ್ಕಾರ ಇದನ್ನೇ ಬಯಸಿದ್ದಿರಬಹುದು! ಒಪ್ಪಂದ ಏರ್ಪಟ್ಟರೆ ಭಾರತವು ಹೆಚ್ಚು ನೀರನ್ನು ತನಗೆ ಬಳಸಿಕೊಳ್ಳಬಹುದಾಗಿದೆ.

ಬಾಂಗ್ಲಾದೇಶವು 85 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಇದು ಅದರ ಒಟ್ಟು ಭೂವೈಶಾಲ್ಯದಲ್ಲಿ ಶೇ. 50ರಷ್ಟು ಆಗಿದೆ. ಭತ್ತ ಮತ್ತು ಆಲೂಗಡ್ಡೆ ಮುಖ್ಯ ಬೆಳೆಗಳಾಗಿವೆ. ಹೇರಳ ನೀರು ಸಿಗುತ್ತಿರುವುದರಿಂದ ವರ್ಷಕ್ಕೆ ಮೂರು ಬಾರಿ ಭತ್ತ ಬೆಳೆಯಲಾಗುತ್ತದೆ. ಇದಕ್ಕೆ ಹೋಲಿಸಿದರೆ ಪಶ್ಚಿಮ ಬಂಗಾಳವು 52 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ.

ತೀಸ್ತಾ ನದಿಯು ಸಿಕ್ಕಿಂನ ಪೂರ್ವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ತೀಸ್ತಾ ಗಾಗ್ಸೆ ಎಂಬಲ್ಲಿ 17,770 ಅಡಿ ಎತ್ತರದಲ್ಲಿ ಹುಟ್ಟಿ ಸಿಕ್ಕಿಂ ಆದ ಮೇಲೆ ಪಶ್ಚಿಮ ಬಂಗಾಳದ ಮೂಲಕ ಹರಿದು ನಂತರ ಬಾಂಗ್ಲಾ ದೇಶ ಪ್ರವೇಶಿಸುತ್ತದೆ. ತೀಸ್ತಾ ನದಿಯ ಒಟ್ಟು ಉದ್ದ 414 ಕಿ.ಮೀ. ಈ ಪೈಕಿ 315 ಕಿ.ಮೀ. ಭಾರತದಲ್ಲಿ ಹರಿದರೆ 109 ಕಿ.ಮೀ. ಬಾಂಗ್ಲಾ ದೇಶದಲ್ಲಿ ಹರಿಯುತ್ತದೆ. ಇದರ ಜಲಾನಯನ ಪ್ರದೇಶ 12,540 ಕಿಮೀ. ಗಂಗೆಯ ನಂತರ ತೀಸ್ತಾ ನದಿಯು ಪಶ್ಚಿಮ ಬಂಗಾಳದ ಎರಡನೇ ಅತಿ ದೊಡ್ಡ ನದಿಯಾಗಿದೆ. ಪಶ್ಚಿಮ ಬಂಗಾಳ ಮತ್ತು ಬಾಂಗಾದೇಶ ಎರಡಕ್ಕೂ ತೀಸ್ತಾ ನದಿಯು ಅತ್ಯಂತ ಪ್ರಮುಖ ನದಿಯಾಗಿದೆ.

ತೀಸ್ತಾ ನದಿಯು ಭಾರತದಲ್ಲಿ ಮಂಗಾನ್, ಸಾಂಗ್ಟಕ್, ಪಾಕ್ ಫೋಂಗ್, ಕಾಲಿಮ್ ಪೋಂಗ್, ಡಾರ್ಜಿಲಿಂಗ್, ಜಸಾಯಿಗುರಿ, ಕೂಚ್ ಬಿಹಾರ್, ರಗ್ಪೊ ಮತ್ತು ಮೆಕ್ಲಿಗಂಜ್ ಮುಂತಾದ ಜಿಲ್ಲೆಗಳ ಮೂಲಕ ಹರಿದು ಭಾರತದಲ್ಲಿ ತನ್ನ ಪ್ರಯಾಣವನ್ನು ಮುಗಿಸಿ ಬಾಂಗ್ಲಾದೇಶವನ್ನು ಪ್ರವೇಶಿಸುತ್ತದೆ.

ಭಾರತದಲ್ಲಿ ತೀಸ್ತಾ ನದಿಯ ಮೇಲೆ ಹಲವಾರು ಸೇತುವೆಗಳನ್ನು ನಿರ್ಮಿಸಲಾಗಿದೆ. ಸಿಲಿಗುರಿ ಬಳಿ ನಿರ್ಮಿಸಲಾದ ಸೆವೊಕ್ ರೈಲ್ವೇ ಸೇತುವೆಯು ಪಶ್ಚಿಮ ಬಂಗಾಳ ರಾಜ್ಯಕ್ಕೆ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ.ಅದೇ ವಿಧವಾಗಿ ಜಲಪಾಯಿಗುರಿ ಬಳಿ ನಿರ್ಮಿಸಲಾದ ಜಲಪಾಯ್ ಗುರಿ ಸೇತುವೆ ಕೂಡಾ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಕೂಚ್‌ಬಿಹಾರ್ ಜಿಲ್ಲೆಯ ಹಲ್ದಿಬಾರಿಯಲ್ಲಿ ನಿರ್ಮಿಸಲಾದ 3.8.ಕಿ.ಮೀ. ಉದ್ದದ ಸೇತುವೆಯು ಪಶ್ಚಿಮಬಂಗಾಳದ ಅತ್ಯಂತ ಉದ್ದದ ಸೇತುವೆಯಾಗಿದೆ.

ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶಗಳ ನಡುವೆ ಸುಮಾರು 54 ನದಿಗಳು ಹರಿಯುತ್ತಿವೆ. ಅವುಗಳಲ್ಲಿ ತೀಸ್ತಾ ನದಿಯನ್ನು ಬಿಟ್ಟು ಉಳಿದೆಲ್ಲ ನದಿಗಳು ಬಹಳ ಸಣ್ಣವು. ರಾಣಿಕೋಲಾ ನದಿಯು ತೀಸ್ತಾದ ದೊಡ್ಡ ಉಪನದಿಯಾದರೆ ರಂಗ್ಪೊ ತೀಸ್ತಾದ ಎರಡನೆ ದೊಡ್ಡ ಉಪನದಿ. ಇವಲ್ಲದೆ ಒಂದು ಡಜನ್‌ಗಳಷ್ಟು ನದಿಗಳು ತೀಸ್ತಾದಲ್ಲಿ ವಿಲೀನಗೊಂಡು ಅದರ ರಭಸ ಹೆಚ್ಚಿಸುತ್ತವೆ.

ಬಾಂಗ್ಲಾದೇಶವು ತೀಸ್ತಾ ನದಿಯಿಂದ ಹೆಚ್ಚಿನ ಪಾಲು ಅಪೇಕ್ಷಿಸುತ್ತಿದೆ. ಭಾರತದ ಜತೆ ಸರಿಸಮಾನವಾಗಿ ಅಂದರೆ ಶೇ. 50-50 ನೀರು ಹಂಚಿಕೆಯಾಗಬೇಕೆಂದು ಹಠ ಮಾಡುತ್ತಿದೆ. ಆದರೆ ತೀಸ್ತಾ ನದಿಯ ಶೇ. 65 ಭಾಗ ಭಾರತದಲ್ಲಿ ಹರಿದರೆ ಶೇ. 35ರಷ್ಟು ಮಾತ್ರ ಬಾಂಗ್ಲಾದೇಶದಲ್ಲಿ ಹರಿಯುತ್ತದೆ. ಹಾಗಿದ್ದರೂ ಬಾಂಗ್ಲಾ ದೇಶವು ಅರ್ಧದಷ್ಟು ನೀರಿನ ಪಾಲು ಕೇಳುವುದು ವಿಪರ್ಯಾಸ.

ಅದೂ ಸಾಲದೆಂಬಂತೆ ಈಗ ಈ ವಿಚಾರದಲ್ಲಿ ಚೀನಾದ ನೆರವು ಕೋರಲು ಹೊರಟಿದೆ. ಚೀನಾವು ಮಧ್ಯಸ್ಥಿಕೆ ವಹಿಸಬೇಕೆಂದು ಬಯಸುತ್ತಿದೆ. ದ್ವಿಪಕ್ಷೀಯ ವಿಚಾರದಲ್ಲಿ ಮೂರನೇ ಪಕ್ಷದ ನುಸುಳುವಿಕೆಯನ್ನು ಭಾರತವಂತೂ ಸಹಿಸಲಾರದು. ಇದು ಉಭಯದೇಶಗಳ ಮಧ್ಯೆ ಉದ್ವಿಗ್ನತೆ ಹೆಚ್ಚಿಸಬಹುದು.

ಇಂಡೋ–ಪೆಸಿಫಿಕ್ ಮುಕ್ತ ಬದ್ಧತೆ ಪುನರುಚ್ಚಾರ

ಪಹಲ್ಗಾಮ್, ಬೋಂಡಿ ದಾಳಿ ಖಂಡಿಸಿ ಕ್ವಾಡ್ ಜಂಟಿ ಹೇಳಿಕೆ



ಹೊಸದಿಲ್ಲಿ: ಕಳೆದ ವರ್ಷ ನಡೆದ ಪಹಲ್ಗಾಮ್ ಮತ್ತು ಬೋಂಡಿ ಬೀಚ್ ಭಯೋತ್ಪಾದಕ ದಾಳಿಗಳನ್ನು ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರು ಮಂಗಳವಾರ ಜಂಟಿಯಾಗಿ ಖಂಡಿಸಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ನಡೆದ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಲಾಯಿತು.

ಉಗ್ರವಾದ ವಿರುದ್ಧದ ಹೋರಾಟ ಮತ್ತು ಇಂಡೋ–ಪೆಸಿಫಿಕ್ ಪ್ರದೇಶವನ್ನು ಉಗ್ರವಾದದಿಂದ ಸಂಪೂರ್ಣ ಮುಕ್ತಗೊಳಿಸುವ ತಮ್ಮ ಬದ್ಧತೆಯನ್ನು ಕ್ವಾಡ್ ವಿದೇಶಾಂಗ ಸಚಿವರು ಪುನರುಚ್ಚರಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ನಿಷೇಧಿತ ಉಗ್ರರು, ಉಗ್ರ ಸಂಘಟನೆಗಳು, ಭಯೋತ್ಪಾದನೆಗೆ ಹಣಕಾಸಿನ ನೆರವನ್ನು ನೀಡುವವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಕ್ವಾಡ್ ವಿದೇಶಾಂಗ ಸಚಿವರು ಹೇಳಿದ್ದಾರೆ.

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ ಕ್ವಾಡ್ ಮಂಗಳವಾರ ತನ್ನ ಜಂಟಿ ಹೇಳಿಕೆ ಪ್ರಕಟಿಸಿದೆ. ಗಡಿಯಾಚೆಗಿನ ಉಗ್ರವಾದ ಸೇರಿ ಎಲ್ಲಾ ಮಾದರಿಯ ಭಯೋತ್ಪಾದನೆಗಳನ್ನು ಕ್ವಾಡ್ ಸ್ಪಷ್ಟವಾಗಿ ಖಂಡಿಸಿದೆ.

ಕಳೆದ ವರ್ಷ ಏ.22ರಂದು ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮೂವರು ಪಾಕಿಸ್ತಾನಿ ಉಗ್ರರು ನಡೆಸಿದ್ದ ಗುಂಡಿನ ದಾಳಿಗೆ 26 ಮಂದಿ ಬಲಿಯಾಗಿದ್ದರು. 2025ರ ಡಿ.14ರಂದು ಆಸ್ಟ್ರೇಲಿಯಾದ ಬೋಂಡಿ ಬೀಚ್‌ನಲ್ಲಿ ನಡೆದಿದ್ದ ಉಗ್ರರ ದಾಳಿಗೆ 15 ಮಂದಿ ಮೃತಪಟ್ಟಿದ್ದರು.

ಚೀನಾ ಏಕಪಕ್ಷೀಯ ನೀತಿಗೆ ಕ್ವಾಡ್ ಪರೋಕ್ಷ ವಿರೋಧ: ಭಯೋತ್ಪಾದನೆ ವಿಷಯದ ಹೊರತಾಗಿ ಕ್ವಾಡ್ ಇಂಡೋ–ಪೆಸಿಫಿಕ್ ಸಮುದ್ರ ಮಾರ್ಗದಲ್ಲಿ ಚೀನಾದ ಏಕಪಕ್ಷೀಯ ಅಥವಾ ಬಲವಂತದ ಕ್ರಮಗಳಿಗೆ ಪರೋಕ್ಷ ವಿರೋಧ ವ್ಯಕ್ತಪಡಿಸಿದೆ. ದಕ್ಷಿಣ ಚೀನಾ ಮತ್ತು ಪೂರ್ವ ಚೀನಾ ಸಮುದ್ರದಲ್ಲಿನ ಉದ್ವಿಗ್ನತೆಗಳ ಕುರಿತು ಕ್ವಾಡ್ ಕಳವಳ ವ್ಯಕ್ತಪಡಿಸಿದೆ. ಹಡಗುಗಳ ದಾರಿಯನ್ನು ತಡೆಯುವುದು, ಡಿಕ್ಕಿ ಹೊಡೆಯುವುದು ಮತ್ತು ಅಪಾಯಕಾರಿಯಾಗಿ ವಾಟರ್ ಕ್ಯಾನನ್‌ಗಳನ್ನು ಬಳಸುವಂತಹ ಸಾಗರೋತ್ತರ ಸಂಬಂಧಿತ ಕ್ರಮಗಳನ್ನು ಆತಂಕಕಾರಿ ಎಂದು ಕ್ವಾಡ್ ಉಲ್ಲೇಖಿಸಿದೆ.

ಪಶ್ಚಿಮ ಏಷ್ಯಾ ಕುರಿತು, ಜಾಗತಿಕ ವ್ಯಾಪಾರದ ನಿರಂತರ ಹರಿವನ್ನು ಖಚಿತಪಡಿಸಲು ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮಾರ್ಗಗಳ ಸುರಕ್ಷತೆ ಹಾಗೂ ಅಡೆತಡೆರಹಿತ ಮುಕ್ತ ಸಂಚಾರದ ಮಹತ್ವವನ್ನು ಕ್ವಾಡ್ ವಿದೇಶಾಂಗ ಸಚಿವರು ತಿಳಿಸಿದ್ದಾರೆ.

ಶಾಂತಿ, ಸಮೃದ್ಧಿಗೆ ವಿಶ್ವಾಸಾರ್ಹ ಪಾಲುದಾರಿಕೆ ಅತ್ಯಗತ್ಯ

ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರಬೇಕಾದರೆ ಕ್ವಾಡ್ ಸದಸ್ಯ ರಾಷ್ಟ್ರಗಳ ನಡುವೆ ವಿಶ್ವಾಸಾರ್ಹ ಪಾಲುದಾರಿಕೆ ಬಹಳ ಅತ್ಯಗತ್ಯ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ವಾಡ್ ಸಭೆಯಲ್ಲಿ ಮಾತನಾಡಿದ ಅವರು, ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಸಾಗರ ಭದ್ರತೆ ಮತ್ತು ಆರ್ಥಿಕ ಆಯ್ಕೆಗಳನ್ನು ಉತ್ತೇಜಿಸುವುದು ಮತ್ತು ಕ್ವಾಡ್ ರಾಷ್ಟ್ರಗಳ ನಡುವೆ ಪಾರದರ್ಶಕ ಪಾಲುದಾರಿಕೆ ಅಗತ್ಯ. ಈ ಪ್ರದೇಶವು ಜಾಗತಿಕ ಪ್ರಗತಿ ಮತ್ತು ಸ್ಥಿರತೆಯ ಮೂಲವಾಗಿ ಉಳಿಯಬೇಕು ಎಂದು ಜೈಶಂಕರ್ ಹೇಳಿದ್ದಾರೆ.

ಶೂನ್ಯ ಸಹಿಷ್ಣುತೆ: ಜೈಶಂಕರ್

ಕ್ವಾಡ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಭಯೋತ್ಪಾದನೆ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಇರಲಿದೆ. ಉಗ್ರ ದಾಳಿಗೆ ಒಳಗಾದ ರಾಷ್ಟ್ರಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿವೆ ಎಂದು ಪ್ರತಿಪಾದಿಸಿದ್ದಾರೆ.

ಖನಿಜ ಒಪ್ಪಂದಕ್ಕೆ ಭಾರತ-ಅಮೆರಿಕ ಸಹಿ: ಚೀನಾ ಅಪರೂಪದ ಖನಿಜಗಳ ರಫ್ತಿನ ಏಕಸ್ವಾಮ್ಯ ತಡೆಯುವ ಉದ್ದೇಶದಿಂದ ಭಾರತ ಮತ್ತು ಅಮೆರಿಕ ಖನಿಜಗಳ ಒಪ್ಪಂದವನ್ನು ಘೋಷಿಸಿದ್ದು, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರೂಬಿಯೊ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಸರಿಯಾದ ಸಮಯದಲ್ಲಿ ನಿರ್ಣಾಯಕ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ ಎಂದು ಜೈಶಂಕರ್ ಹೇಳಿದ್ದಾರೆ.

ಇಂಧನ, ರಸಗೊಬ್ಬರ, ವಿದೇಶಿ ವಿನಿಮಯಕ್ಕೆ ಒತ್ತು



ಕೇಂದ್ರ ಸರ್ಕಾರ ಸಂಪನ್ಮೂಲ ನಿರ್ವಹಣೆಯ ಮೇಲ್ವಿಚಾರಣೆಯ ಕಡೆ ಹೆಚ್ಚಿನ ಗಮನಕ್ಕೆ ಕರೆ

ಜಾಗತಿಕ ಅಡಚಣೆಗಳಿಂದಾಗಿ ದೇಶೀಯ ಆರ್ಥಿಕತೆ ತೀವ್ರ, ಬಾಹ್ಯ ಒತ್ತಡ ಎದುರಿಸುತ್ತಿದ್ದು, ದೀರ್ಘಾವಧಿಯ ಸ್ಥಿರತೆ ಕಾಯ್ದುಕೊಳ್ಳಲು ನಿರ್ದಿಷ್ಟ ಆಮದು ಮತ್ತು ಮೀಸಲು ವಲಯಗಳ ಮೇಲೆ ಕಾರ್ಯತಂತ್ರದ ಗಮನ ಹರಿಸುವುದು ಅತ್ಯಗತ್ಯವಾಗಿದೆ. ಹೆಚ್ಚುತ್ತಿರುವ ಜಾಗತಿಕ ಆರ್ಥಿಕ ಅನಿಶ್ಚಿತತೆಗಳನ್ನು ಎದುರಿಸಲು ಕೇಂದ್ರ ಸರ್ಕಾರ ಸಂಪನ್ಮೂಲ ನಿರ್ವಹಣೆಯ ಮೇಲ್ವಿಚಾರಣೆಯ ಕಡೆ ಹೆಚ್ಚಿನ ಗಮನ ಕೊಡುತ್ತಿದೆ.

ದೇಶೀಯ ಹಣದುಬ್ಬರದ

ಇಂಧನ ವೆಚ್ಚಗಳ ಏರಿಕೆ, ಹೆಚ್ಚಿನ ವಲಯಗಳಲ್ಲಿ ದೇಶೀಯ ಹಣದುಬ್ಬರದ ಪ್ರವೃತ್ತಿಯನ್ನು ತೀವ್ರಗೊಳಿಸಿದೆ. ಚಿಲ್ಲರೆ ಹಣದುಬ್ಬರ, ಮಾರ್ಚ್‌ನಲ್ಲಿ ಶೇ. 3.40 ರಿಂದ ಏಪ್ರಿಲ್‌ನಲ್ಲಿ ಶೇ. 3.48 ಕ್ಕೆ ಏರಿತು, ಆದರೆ ಸಗಟು ಹಣದುಬ್ಬರ ನಲವತ್ತೆರಡು ತಿಂಗಳ ಗರಿಷ್ಠ ಮಟ್ಟವಾದ ಶೇ.8.3 ಕ್ಕೆ ತಲುಪಿದೆ. ಪ್ರಾದೇಶಿಕ ಸಂಘರ್ಷ ಪ್ರಾರಂಭವಾದಾಗಿನಿಂದ, ಮೇ ಮಧ್ಯಭಾಗದಿಂದ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಬೆಲೆಗಳು ಪ್ರತಿ ಕೆಜಿಗೆ 4 ರೂ.ಗಳಷ್ಟು ಹೆಚ್ಚಾಗಿದೆ ಮತ್ತು ದೇಶೀಯ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಬೆಲೆಗಳು ಪ್ರತಿ 14.2 ಕೆಜಿ ಸಿಲಿಂಡರ್‌ಗೆ 60 ರೂ. ಗಳಷ್ಟು ಏರಿವೆ. ಈ ಅಂತಾರಾಷ್ಟ್ರೀಯ ಬೆಲೆ ಏರಿಕೆಯ ನೇರ ಪರಿಣಾಮ ಗ್ರಾಹಕರು ಮತ್ತು ಉದ್ಯಮಗಳ ಮೇಲೆ ಆಗುವುದನ್ನು ತಗ್ಗಿಸಲು, ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿತು, ಇದರಿಂದಾಗಿ ಆದಾಯಕ್ಕೆ 1 ಲಕ್ಷ ಕೋಟಿ ರೂ. ಗಳಿಗಿಂತ ಹೆಚ್ಚಿನ ನಷ್ಟ ಉಂಟಾಗಿದೆ.

ಕೃಷಿ ವೆಚ್ಚಗಳ ಏರಿಕೆ

ಇಂಧನ ಮಾತ್ರವಲ್ಲದೆ, ನಿರ್ಣಾಯಕ ಹಡಗು ಸಾರಿಗೆ ಮಾರ್ಗಗಳ ಅಡಚಣೆಯಿಂದಾಗಿ ಕೃಷಿ ಆಮದು ವೆಚ್ಚಗಳು ಅಭೂತಪೂರ್ವ ಏರಿಕೆ ಕಾಣುತ್ತಿವೆ. ಯೂರಿಯಾ ಮತ್ತು ಡೈ–ಅಮೋನಿಯಂ ಫಾಸ್ಫೇಟ್ ಸೇರಿದಂತೆ ಅಗತ್ಯ ಮಣ್ಣಿನ ಪೋಷಕಾಂಶಗಳಿಗೆ ಬೇಕಾದ ಅಮೋನಿಯಾ, ಸಲ್ಫರ್ ಫಾಸ್ಫಾರಿಕ್ ಆಮ್ಲ ಮತ್ತು ನೈಸರ್ಗಿಕ ಅನಿಲದಂತಹ ಕಚ್ಚಾ ವಸ್ತುಗಳು ಹೆಚ್ಚಾಗಿ ಆಮದಾಗುತ್ತವೆ. ದೇಶೀಯ ಮಾರುಕಟ್ಟೆ, ತನ್ನ ಡೈ–ಅಮೋನಿಯಂ ಫಾಸ್ಫೇಟ್ ಅಗತ್ಯದ ಶೇಕಡಾ ಎಂಬತ್ತಕ್ಕಿಂತ ಹೆಚ್ಚು ಮತ್ತು ಒಟ್ಟಾರೆ ರಸಗೊಬ್ಬರ ಅಗತ್ಯಗಳ ಶೇಕಡಾ ಅರವತ್ತೈದರಿಂದ ಎಪ್ಪತ್ತರಷ್ಟು ಆಮದಿನ ಮೇಲೆ ಅವಲಂಬಿತವಾಗಿರುವುದರಿಂದ, ರಾಷ್ಟ್ರೀಯ ಸಬ್ಸಿಡಿ ಹೊರೆ ಹೆಚ್ಚಾಗುವ ನಿರೀಕ್ಷೆಯಿದೆ. ಒಟ್ಟು ರಸಗೊಬ್ಬರ ಸಬ್ಸಿಡಿ ಬಜೆಟ್‌ನಲ್ಲಿ ನಿಗದಿಪಡಿಸಲಾದ 1.71 ಲಕ್ಷ ಕೋಟಿ ರೂ.ಗಳಿಗಿಂತ ಶೇಕಡಾ ಎಪ್ಪತ್ತೈದರಷ್ಟು ಹೆಚ್ಚಾಗುವ ನಿರೀಕ್ಷೆಯಿದ್ದು, ಜಾಗತಿಕ ಅಡಚಣೆಗಳು ಮುಂದುವರಿದರೆ ಈ ಹಣಕಾಸು ವರ್ಷದಲ್ಲಿ ದಾಖಲೆಯ 3 ಲಕ್ಷ ಕೋಟಿ ರೂಪಾಯಿಗಳನ್ನು ದಾಟುವ ಸಾಧ್ಯತೆಯಿದೆ.

ಲಾಜಿಸ್ಟಿಕ್ಸ್ ಅಪಾಯಗಳು ಮತ್ತು ದೃಢತೆ

ಮುಂದುವರಿದ ಪ್ರಾದೇಶಿಕ ಸಂಘರ್ಷ, ವಾಣಿಜ್ಯ ಕಾರ್ಯಾಚರಣೆಗಳಿಗೆ ವ್ಯಾಪಕ ಅಪಾಯ ಉಂಟುಮಾಡುತ್ತದೆ, ಇದರಲ್ಲಿ ಹೆಚ್ಚಿನ ಲಾಜಿಸ್ಟಿಕ್ಸ್ ವೆಚ್ಚಗಳು, ಸರಕುಗಳ ಆಗಮನದಲ್ಲಿ ವಿಳಂಬ, ದೀರ್ಘಾವಧಿಯ ಹಡಗು ಸಾರಿಗೆ ಸಮಯ, ಇನ್‌ಪುಟ್ ಕೊರತೆ ಮತ್ತು ರಫ್ತು ಆದೇಶಗಳ ಮೇಲಿನ ಹೆಚ್ಚಿನ ಅನಿಶ್ಚಿತತೆ ಸೇರಿವೆ.

- ಮೇ ಮಧ್ಯದಿಂದ ಇಂಧನ ವೆಚ್ಚ 7.5 ರೂಪಾಯಿ ಏರಿಕೆ.
- ಅಬಕಾರಿ ಕಡಿತದಿಂದ 1 ಲಕ್ಷ ಕೋಟಿ ರೂಪಾಯಿ ನಷ್ಟ.
- ರಸಗೊಬ್ಬರ ಸಬ್ಸಿಡಿ 3 ಲಕ್ಷ ಕೋಟಿಗೆ ತಲುಪುವ ಸಾಧ್ಯತೆ.
- ಸಣ್ಣ ಸಂಸ್ಥೆಗಳಿಗೆ 8.1 ಲಕ್ಷ ಕೋಟಿ ಪಾವತಿ ಬಾಕಿ.
- ಜಿಎಸ್‌ಟಿ ಆದಾಯ ಶೇಕಡಾ 8.3 ರಷ್ಟು ವಿಸ್ತರಣೆ.




ಉದ್ಯಮಗಳ ಮೇಲೆ ಒತ್ತಡ ಹೆಚ್ಚಳ

ದೇಶೀಯ ಉದ್ಯಮಗಳ ಕಾರ್ಯನಿರತ ಬಂಡವಾಳದ ಮೇಲೆಯೂ ಒತ್ತಡ ಹೆಚ್ಚುತ್ತಿದ್ದು, ವಿಶೇಷವಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕ ವಲಯದ ಉದ್ಯಮಗಳು ಪ್ರಸ್ತುತ ಸಣ್ಣ ಉದ್ಯಮಗಳಿಗೆ ಪಾವತಿಸಬೇಕಾದ ಬಾಕಿ ಹಣದಲ್ಲಿ 8.1 ಲಕ್ಷ ಕೋಟಿ ರೂ.ಗಳನ್ನು ತಡೆಹಿಡಿದಿದ್ದು, ಕಡ್ಡಾಯವಾಗಿ ನಲವತ್ತೈದು ದಿನಗಳ ಇತ್ಯರ್ಥದ ಸಮಯ ಜಾರಿಗೆ ಆಡಳಿತಾತ್ಮಕ ನಿರ್ದೇಶನಗಳನ್ನು ನೀಡಲಾಗಿದೆ. ಈ ತೀವ್ರ ಬಾಹ್ಯ ಸವಾಲುಗಳ ಹೊರತಾಗಿಯೂ, ದೇಶೀಯ ಸ್ಥೂಲ ಆರ್ಥಿಕ ಸೂಚಕಗಳು ರಚನಾತ್ಮಕ ಸ್ಥಿರತೆಯನ್ನು ತೋರಿಸುತ್ತಿದ್ದು, ಒಟ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹಣೆಯಲ್ಲಿ ಶೇ. 8.3 ರಷ್ಟು ವಾರ್ಷಿಕ ಬೆಳವಣಿಗೆ, ದೇಶೀಯ ಸಗಟು ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ.26 ಹೆಚ್ಚಳ, ಪ್ರಯಾಣಿಕ ವಾಹನಗಳ ಮಾರಾಟ ಮತ್ತು ಹೆಚ್ಚಿನ ಜೀವ ವಿಮಾ ಪ್ರೀಮಿಯಂಗಳಿಂದ ಇದು ಬೆಂಬಲಿತವಾಗಿದೆ.

ಅಗತ್ಯ ಸಂಪನ್ಮೂಲ ನಿರ್ವಹಣೆ

ಹೆಚ್ಚುತ್ತಿರುವ ಜಾಗತಿಕ ಸರಕುಗಳ ಮೌಲ್ಯ ಬಾಹ್ಯ ಆರ್ಥಿಕ ಒತ್ತಡದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದು, ಮೂರು ಪ್ರಾಥಮಿಕ ಸಂಪನ್ಮೂಲಗಳ ವ್ಯವಸ್ಥಿತ ನಿರ್ವಹಣೆಯ ಅಗತ್ಯ ಸೃಷ್ಟಿಯಾಗಿದೆ. ಇದನ್ನು '3ಎಫ್', ಅಂದರೆ, ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಇದರಲ್ಲಿ ವಿದೇಶಿ ವಿನಿಮಯ ನೇರವಾಗಿ ಚಿನ್ನದ ಖರೀದಿಗೆ ಸಂಬಂಧಿಸಿದೆ. ಈ ಮೂರು ಅತ್ಯಗತ್ಯ ಘಟಕಗಳಿಗೆ ಅಂತಾರಾಷ್ಟ್ರೀಯ ಪಾವತಿಗಳನ್ನು ಸಂಪೂರ್ಣವಾಗಿ ವಿದೇಶಿ ವಿನಿಮಯದ ಮೂಲಕವೇ ನಿರ್ವಹಿಸಬೇಕಾಗುತ್ತದೆ, ಏಕೆಂದರೆ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ದೇಶೀಯ ಕರೆನ್ಸಿಯಲ್ಲಿನ ವಹಿವಾಟುಗಳನ್ನು ಬೆಂಬಲಿಸುವುದಿಲ್ಲ.



ಜಾಗತಿಕ ಬಿಕ್ಕಟ್ಟಿನ ಪರಿಣಾಮಗಳು

ಪಶ್ಚಿಮ ಏಷ್ಯಾ ವಲಯದಲ್ಲಿನ ಭೌಗೋಳಿಕ ರಾಜಕೀಯ ಅಸ್ಥಿರತೆ ವ್ಯಾಪಕ ವಾಣಿಜ್ಯ ಪರಿಣಾಮಗಳನ್ನು ಉಂಟುಮಾಡಿದ್ದು, ಸ್ಥಳೀಯ ಚಿಲ್ಲರೆ ಬೆಲೆಗಳು ಮತ್ತು ಪೂರೈಕೆ ಸರಪಳಿ ಮಾರ್ಗಗಳ ಮೇಲೆ ನೇರ ಪರಿಣಾಮ ಬೀರಿದೆ. ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಿದ್ದರಿಂದ ಫೆಬ್ರವರಿ ಅಂತ್ಯದಿಂದ ಜಾಗತಿಕ ಕಚ್ಚಾ ತೈಲ ಬೆಲೆಗಳಲ್ಲಿ ಶೇ. 50ರಷ್ಟು ಏರಿಕೆಯಾಗಿದೆ. ಈ ಹೆಚ್ಚುತ್ತಿರುವ ವೆಚ್ಚಗಳಿಂದಾಗಿ, ದೇಶೀಯ ಇಂಧನ ಚಿಲ್ಲರೆ ವ್ಯಾಪಾರಿಗಳು ಬೆಲೆ ಏರಿಕೆಯನ್ನು ಜಾರಿಗೊಳಿಸಿದ್ದು, ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 2.61 ರೂ. ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 2.71 ರೂ. ಹೆಚ್ಚಿಸಿದ್ದಾರೆ. ಹನ್ನೊಂದು ದಿನಗಳ ಅವಧಿಯಲ್ಲಿ ನಾಲ್ಕನೇ ಬಾರಿಗೆ ಬೆಲೆ ಏರಿಕೆಯಾಗಿದ್ದು, ಮೇ 15 ರಿಂದ ಇಂಧನ ಬೆಲೆ ಏರಿಕೆ ಸುಮಾರು 7.5 ರೂ. ಗಳಷ್ಟು ಏರಿಕೆಯಾದಂತಾಗಿದೆ.

ಕಿರುಸುದ್ದಿ

ಟ್ರಂಪ್ ಅಬ್ರಹಾಂ ಒಪ್ಪಂದ ತಿರಸ್ಕರಿಸಿದ ಪಾಕಿಸ್ತಾನ

ಇಸ್ಲಾಮಾಬಾದ್: ಪಾಕಿಸ್ತಾನ, ಅಬ್ರಹಾಂ ಒಪ್ಪಂದಕ್ಕೆ (ಅಬ್ರಾಹಂ ಎಕಾರ್ಡ್ಸ್) ಸೇರಬೇಕೆಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಯನ್ನು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಮಂಗಳವಾರ ತಿರಸ್ಕರಿಸಿದ್ದಾರೆ. ಮಾಧ್ಯಮ ಸಂದರ್ಶನವೊಂದರಲ್ಲಿ ಆಸಿಫ್, ಈ ಸಾಮಾನ್ಯೀಕರಣ ಒಪ್ಪಂದಕ್ಕೆ ಸೇರುವುದು ಪಾಕಿಸ್ತಾನದ ಮೂಲಭೂತ ತತ್ವಗಳು ಮತ್ತು ಸಿದ್ಧಾಂತಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ತಿಳಿಸಿದರು. ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗಳಿಗೆ ಮಧ್ಯಸ್ಥಿಕೆ ವಹಿಸುತ್ತಿರುವ ಸೌದಿ ಅರೇಬಿಯಾ, ಕತಾರ್ ಈಜಿಪ್ಟ್, ಜೋರ್ಡಾನ್, ಟರ್ಕಿ ಮತ್ತು ಪಾಕಿಸ್ತಾನ ಸೇರಿದಂತೆ ಇತರ ದೇಶಗಳು ತಕ್ಷಣವೇ ಈ ಒಪ್ಪಂದಕ್ಕೆ ಸಹಿ ಹಾಕಬೇಕು ಎಂದು ಟ್ರಂಪ್ ಅವರು ಟ್ರುತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ ಬೆನ್ನಲ್ಲೇ ಈ ಪ್ರತಿಕ್ರಿಯೆ ಬಂದಿದೆ. 2020ರಲ್ಲಿ ಅಮೆರಿಕಾದ ಮಧ್ಯಸ್ಥಿಕೆಯಲ್ಲಿ ನಡೆದ ಅಬ್ರಹಾಂ ಒಪ್ಪಂದ, ಇಸ್ರೇಲ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಬಹ್ರೇನ್ ಸೇರಿದಂತೆ ಹಲವಾರು ಅರಬ್ ದೇಶಗಳ ನಡುವೆ ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತಾ ಸಂಬಂಧಗಳನ್ನು ಸ್ಥಾಪಿಸಿತ್ತು.

ದೀದಿಗೆ ಶಾಕ್: 12 ಟಿಎಂಸಿ ಸಂಸದರು ಶೀಘ್ರ ಬಿಜೆಪಿಗೆ?

ಕೋಲ್ಕತ್ತಾ: ಬಂಗಾಳ ವಿಧಾನಸಭಾ ಚುನಾವಣೆಯಲ್ಲಿನ ಹೀನಾಯ ಸೋಲಿನ ನಂತರ, ತೃಣಮೂಲ ಕಾಂಗ್ರೆಸ್ ನೊಳಗಿನ ಆಂತರಿಕ ಬಿಕ್ಕಟ್ಟು ಉಲ್ಬಣಗೊಂಡಿದೆ. ಹಲವು ತೃಣಮೂಲ ಕಾಂಗ್ರೆಸ್(ಟಿಎಂಸಿ) ಸಂಸದರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಮತ್ತು ಅವರಲ್ಲಿ 12 ಸಂಸದರ ಗುಂಪೊಂದು ಅತಿಶೀಘ್ರದಲ್ಲಿ ಟಿಎಂಸಿ ತೊರೆದು ಬಿಜೆಪಿ ಸೇರಲಿದ್ದಾರೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ, ಲೋಕಸಭೆಯಲ್ಲಿರುವ ಟಿಎಂಸಿ ಪಕ್ಷದ 29 ಸಂಸದರಲ್ಲಿ 12 ಮಂದಿ ಈಗಾಗಲೇ ಬಿಜೆಪಿ ಸೇರುವುದು ಬಹುತೇಕ ಖಚಿತವಾಗಿದೆ. ಇನ್ನೂ 6 ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

ಪಕ್ಷಾಂತರ ನಿಷೇಧದಿಂದ ತಪ್ಪಿಸಲು 20 ಸಂಸದರ ಬೆಂಬಲ ಅಗತ್ಯ: ಪಕ್ಷಾಂತರ ನಿಷೇಧ ಕಾನೂನಿನಿಂದ ತಪ್ಪಿಸಲು ಕನಿಷ್ಠ 19–20 ಸಂಸದರನ್ನು ಒಟ್ಟುಗೂಡಿಸಲು ಸಾಧ್ಯತೆ ಇದೆ. ಈ ಸಂಭಾವ್ಯ ವಿಭಜನೆಯ ಬಗ್ಗೆ ಟಿಎಂಸಿ ನಾಯಕತ್ವಕ್ಕೂ ಮಾಹಿತಿ ಸಿಕ್ಕಿದ್ದು, ಪಕ್ಷ ಒಗ್ಗೂಡಿಸುವ ಪ್ರಯತ್ನಗಳು ಆರಂಭವಾಗಿವೆ ಎಂದು ಮೂಲಗಳು ಹೇಳಿವೆ. ಟಿಎಂಸಿ ಮುಖ್ಯಸ್ಥೆ ಮಮತಾ ಸೋದರಳಿಯ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಆಪ್ತರೆಂದು ಗುರುತಿಸಲ್ಪಟ್ಟ ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

100 ಟಿಎಂಸಿ ನಗರಸಭಾ ಸದಸ್ಯರ ರಾಜೀನಾಮೆ: ಭ್ರಷ್ಟಾಚಾರ ವಿರೋಧಿ ತನಿಖೆ ಹಾಗೂ ರಾಜಕೀಯ ಒತ್ತಡ ಎದುರಿಸುತ್ತಿರುವ 100ಕ್ಕೂ ಹೆಚ್ಚು ಟಿಎಂಸಿ ನಗರಸಭಾ ಸದಸ್ಯರು ವೈಯಕ್ತಿಕ ಕಾರಣಗಳನ್ನು ನೀಡಿ ರಾಜೀನಾಮೆ ಸಲ್ಲಿಸಿದ್ದಾರೆ.

ಅಮೆರಿಕದಿಂದ ಕದನ ವಿರಾಮ ಗಂಭೀರ ಉಲ್ಲಂಘನೆ: ಇರಾನ್

ಟೆಹ್ರಾನ್: ದಕ್ಷಿಣ ಇರಾನ್‌ನಲ್ಲಿರುವ ಇರಾನ್ ಕ್ಷಿಪಣಿ ಉಡಾವಣಾ ಕೇಂದ್ರಗಳ ಮೇಲೆ ಅಮೆರಿಕ ಸ್ವಯಂ ರಕ್ಷಣೆ ಕಾರಣಗಳನ್ನು ನೀಡಿ ವೈಮಾನಿಕ ದಾಳಿ ನಡೆಸಿದ್ದು, ತೀವ್ರ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಮಂಗಳವಾರ ಕದನ ವಿರಾಮ ಒಪ್ಪಂದದ ಗಂಭೀರ ಉಲ್ಲಂಘನೆ ಮಾಡಿರುವುದಾಗಿ ಇರಾನ್ ಆರೋಪಿಸಿದೆ. ಅಮೆರಿಕ ವೈಮಾನಿಕ ದಾಳಿಯಿಂದ ಇರಾನ್–ಅಮೆರಿಕ ನಡುವಿನ ಉದ್ವಿಗ್ನತೆ ಹೆಚ್ಚಾಗಿದ್ದು, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಆತಂಕ ಹೆಚ್ಚಿಸಿದೆ. ದಾಳಿಯಿಂದ ಹಾರ್ಮುಜ್ ಜಲಸಂಧಿ ಪ್ರವೇಶದ್ವಾರದಲ್ಲಿ ಒಂದು ಹಡಗಿಗೆ ಹಾನಿಯಾಗಿದೆ. ಅಮೆರಿಕದ ಯುದ್ಧ ವಿಮಾನಗಳ ಮೇಲೆ ಇರಾನ್ ಸೇನೆ ಖಂಡಾಂತರ ಕ್ಷಿಪಣಿಗಳಿಂದ ಪ್ರತಿದಾಳಿ ನಡೆಸಿದೆ. ದಾಳಿ-ಪ್ರತಿದಾಳಿ ಮಧ್ಯೆಯೇ ಉಭಯ ರಾಷ್ಟ್ರಗಳ ನಿಯೋಗಗಳು ಒಪ್ಪಂದ ಮಾತುಕತೆ ಅಂತಿಮಗೊಳಿಸುವ ಪ್ರಯತ್ನದಲ್ಲಿವೆ. ಒಪ್ಪಂದ ಅಂತಿಮಗೊಳ್ಳದಿದ್ದರೆ ದೊಡ್ಡ ದಾಳಿ ನಡೆಸುವುದಾಗಿ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ಇರಾನ್‌ಗೆ ಬೆದರಿಕೆ ಹಾಕಿದ್ದರು. ಅಮೆರಿಕ ಕದನ ವಿರಾಮವನ್ನು ಪಾಲಿಸುತ್ತಿದೆ ಎಂದು ಅಮೆರಿಕ ಅಧಿಕಾರಿಗಳು ಹೇಳಿದ್ದಾರೆ.

ಉತ್ತಮ ಒಪ್ಪಂದ ಇನ್ನೂ ಸಾಧ್ಯ: ಅಧ್ಯಕ್ಷ ಟ್ರಂಪ್ ಪರಸ್ಪರ ಲಾಭದಾಯಕ ಒಪ್ಪಂದ ಅಥವಾ ಯಾವುದೇ ಒಪ್ಪಂದ ಮಾಡಿಕೊಳ್ಳಲು ಬಯಸಿದ್ದರು. ಆದರೆ ಇನ್ನೂ ಇರಾನ್ ಜತೆ ಒಂದು ಉತ್ತಮ ಒಪ್ಪಂದ ಮಾಡಿಕೊಳ್ಳಲು ಅವಕಾಶ ಇದೆ ಎಂದು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಗಡಿ ಕಳ್ಳಸಾಗಣೆ ತಡೆಗೆ ಆ್ಯಂಟಿ ಡ್ರೋನ್ ವ್ಯವಸ್ಥೆ ಅಳವಡಿಕೆ

ಬಿಕಾನೇರ್: ಅಂತಾರಾಷ್ಟ್ರೀಯ ಗಡಿಗಳಲ್ಲಿ ಶಸ್ತ್ರಾಸ್ತ್ರ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಣೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಮುಂದಿನ ಆರು ತಿಂಗಳೊಳಗೆ ಆ್ಯಂಟಿ–ಡ್ರೋನ್ ವ್ಯವಸ್ಥೆಗಳನ್ನು ಅಳವಡಿಸುವ ಪ್ರಕ್ರಿಯೆ ಪೂರ್ಣಗೊಳಿಸಲಿದೆ.

ರಾಜಸ್ಥಾನದ ಬಿಕಾನೇರ್ ಜಿಲ್ಲೆಯ ಸಾಂಚು ಗಡಿ ಚೌಕಿಯಲ್ಲಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಯೋಜನೆ ಪ್ರಕಟಿಸಿದರು. ಸಮಗ್ರ ಗಡಿ ಭದ್ರತೆಗಾಗಿ ಬಹುಮುಖಿ ನಾಲ್ಕು ಅಂಶಗಳ ಭದ್ರತಾ ಗ್ರಿಡ್ ಅಗತ್ಯವಿದೆ ಎಂದು ಅವರು ತಿಳಿಸಿದರು. ಈ ವ್ಯವಸ್ಥೆ ಬಿಎಸ್‌ಎಫ್, ಸಶಸ್ತ್ರ ಪಡೆಗಳು, ಸ್ಥಳೀಯ ನಾಗರಿಕ ಆಡಳಿತ ಮತ್ತು ನಾಗರಿಕರನ್ನು ಒಳಗೊಂಡಿರುತ್ತದೆ.

ಡ್ರೋನ್‌ಗಳು ಭಾರತೀಯ ಭೂಪ್ರದೇಶದೊಳಗೆ ಇಳಿಯುವುದರಿಂದ, ಕಳ್ಳಸಾಗಣೆ ಸರಕುಗಳನ್ನು ಸ್ವೀಕರಿಸುವವರನ್ನು ಗುರುತಿಸಲು ಸ್ಥಳೀಯ ಪೊಲೀಸರೊಂದಿಗೆ ನಿಕಟ ಸಮನ್ವಯ ಅಗತ್ಯ. ಬಿಹಾರ, ಗುಜರಾತ್, ತ್ರಿಪುರಾ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಗಡಿ ಪ್ರದೇಶಗಳಲ್ಲಿ ಈ ನಿಟ್ಟಿನಲ್ಲಿ ಸಮನ್ವಯ ಸಭೆಗಳು ನಡೆಯುತ್ತಿವೆ. ಜತೆಗೆ, ತಾಂತ್ರಿಕ ದುರುಪಯೋಗವನ್ನು ಎದುರಿಸಲು ಬಿಎಸ್‌ಎಫ್ ಕಾರ್ಯಾಚರಣೆಯ ವ್ಯಾಪ್ತಿಯನ್ನು ಈ ಹಿಂದೆ 15 ಕಿಲೋಮೀಟರ್‌ನಿಂದ 50 ಕಿಲೋಮೀಟರ್‌ಗೆ ವಿಸ್ತರಿಸಲಾಗಿದೆ. ವ್ಯಾಪ್ತಿಯಲ್ಲಿ ಅಕ್ರಮ ನಿರ್ಮಾಣಗಳು ಅಥವಾ ಅಸಹಜ ಜನಸಂಖ್ಯಾ ಬದಲಾವಣೆಗಳ ಬಗ್ಗೆ ಗಮನಹರಿಸಲಾಗುತ್ತದೆ. 2030ರ ವೇಳೆಗೆ ಎಲ್ಲಾ ಗಡಿ ಚೌಕಿಗಳಲ್ಲಿ ಮೂಲಸೌಕರ್ಯ ಬಲಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ನಿಷೇಧಿತ ಪ್ರಾಣಿ ಹತ್ಯೆ ಬೇಡ, ಚಿತ್ರ ತೆಗೆಯಬೇಡಿ: ಮದನಿ

ಲಖನೌ: ಬಕ್ರೀದ್ ಹಬ್ಬದ ಸಂದರ್ಭ ದೇಶದ ಕಾನೂನು ಉಲ್ಲಂಘಿಸಿ ನಿಷೇಧಿತ ಪ್ರಾಣಿಗಳ ಹತ್ಯೆ ಮಾಡದಂತೆ ಮತ್ತು ಅವುಗಳ ಚಿತ್ರಗಳನ್ನು ಜಾಲತಾಣಗಳಲ್ಲಿ ಪೋಸ್ಟ್ ಮಾಡದಂತೆ ಉತ್ತರಪ್ರದೇಶದ ಜಾಮಿಯತ್ ಉಲೆಮಾ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಈದ್ ಉಲ್ ಅದಾ ಸಂದರ್ಭ ಮುಸ್ಲಿಮ್ ನಾಯಕರೊಬ್ಬರು ತಮ್ಮ ಸಮುದಾಯಕ್ಕೆ ಕಾನೂನು ಉಲ್ಲಂಘಿಸದಂತೆ ಕರೆ ನೀಡಿರುವುದು ಪ್ರಶಂಸಾರ್ಹ ನಡೆಯಾಗಿದೆ. ಪ್ರಾಣಿ ಹತ್ಯೆ ಮಾಡುವುದರ ಬಗ್ಗೆ ಜಾಹೀರಾತು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಹತ್ಯೆ ಮಾಡಿದ ಪ್ರಾಣಿಗಳ ಚಿತ್ರಗಳನ್ನು ಪೋಸ್ಟ್ ಮಾಡದಿರಲು ಮದನಿ ಕರೆ ನೀಡಿದ್ದಾರೆ. ಸರ್ಕಾರಿ ಕಾನೂನು ಪಾಲಿಸಿ ಬಕ್ರೀದ್ ಆಚರಿಸಬೇಕು, ಪ್ರಾಣಿ ಹತ್ಯೆ ತಪ್ಪಿಸಬಹುದು. ನಮ್ಮ ಆಚರಣೆಯು ಇನ್ನೊಬ್ಬರಿಗೆ ತೊಂದರೆ ನೀಡಬಾರದು ಎಂದು ಮದನಿ ಹೇಳಿದ್ದಾರೆ. ಇತ್ತೀಚೆಗೆ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕೆಂದು ಮದನಿ ಉತ್ತರಪ್ರದೇಶ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು. ಗುರುವಾರ (ಮೇ 28) ಮುಸ್ಲಿಮ್ ಸಮುದಾಯ ಬಕ್ರೀದ್ ಆಚರಿಸಲಿದೆ.

ಕೇರಳದ ಕನಸಿನ ಯೋಜನೆಗಳ ಬೆಂಬಲಕ್ಕೆ ನೂತನ ಮುಖ್ಯಮಂತ್ರಿ ಮನವಿ

ಕೇರಳ ಸಿಎಂ ಸತೀಶನ್ ಪ್ರಧಾನಿ ಮೋದಿ ಭೇಟಿ

ಹೊಸದಿಲ್ಲಿ : ಕೇರಳದ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ದಿಲ್ಲಿಯಲ್ಲಿ ಭೇಟಿ ಮಾಡಿದರು.ಸತೀಶನ್ ಅಧಿಕಾರ ಸ್ವೀಕರಿಸಿದ ಬಳಿಕ ಇದು ಪ್ರಧಾನಿಯವರೊಂದಿಗಿನ ಅವರ ಪ್ರಥಮ ಭೇಟಿಯಾಗಿದ್ದು, ಕೇರಳದ 'ಕನಸಿನ ಯೋಜನೆ'ಗಳಿಗೆ ಕೇಂದ್ರದ ಬೆಂಬಲ ಕೋರಿದ್ದಾಗಿ ಮಾಧ್ಯಮದವರಿಗೆ ತಿಳಿಸಿದ್ದಾರೆ.



ಕೇರಳದ ಸಮಸ್ಯೆಗಳು ಮತ್ತು ಆದ್ಯತೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ವಿತ್ತ ಸಚಿವರ ಜತೆ ಚರ್ಚಿಸಿದ್ದೇನೆ. ಕೇರಳವೀಗ ಹಣಕಾಸು ಬಿಕ್ಕಟ್ಟಿಗೆ ಸಿಲುಕಿದ್ದು, ಜೂನ್ ಮೊದಲ ವಾರ ರಾಜ್ಯದ ಹಣಕಾಸು ಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಲಾಗುವುದು. ಅದಕ್ಕೂ ಮುನ್ನ ತಾವು ಈ ಬಗ್ಗೆ ವಿವರಗಳಿಗೆ ಹೋಗುವುದಿಲ್ಲ ಎಂದೂ ಅವರು ತಿಳಿಸಿದರು.

ಕೇಂದ್ರ ಮತ್ತು ರಾಜ್ಯದ ಸಂಬಂಧಗಳಲ್ಲಿನ ಕೆಲವು 'ಸಮಸ್ಯೆ'ಗಳ ಬಗ್ಗೆ ಪ್ರಧಾನಿ ಮತ್ತು ವಿತ್ತಸಚಿವರಿಗೆ ನಾನು ಮಾಹಿತಿ ನೀಡಿದ್ದೇನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ತಿಳಿಸಿದ್ದು, ಕೇಂದ್ರ ಸರಕಾರವೂ ಕೆಲವು ವಿಷಯಗಳನ್ನು ಪ್ರಸ್ತಾವಿಸಿದ್ದು, ರಾಜ್ಯ ಸರಕಾರ ಈ ಬಗ್ಗೆ ಪರಿಶೀಲಿಸಲಿದೆ ಎಂದರು. ದಕ್ಷಿಣದ ಕೆಲವು ವಿಪಕ್ಷ ಆಡಳಿತದ ರಾಜ್ಯ ಸರಕಾರಗಳು ತಮ್ಮ ಹಣಕಾಸು ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ನರೇಂದ್ರ ಮೋದಿ ಸರಕಾರದ ಜೊತೆ ಸಂಘರ್ಷಕ್ಕಿಳಿದಿರುವಂತೆಯೇ, ಕೇರಳದ ಹಿಂದಿನ ಎಡರಂಗ ಸರಕಾರವೂ ಇದೇ ರೀತಿ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿದಿತ್ತು. ಇದೀಗ ಸತೀಶನ್ ಸರಕಾರವು, ಹಿಂದಿನ ಪಿಣರಾಯಿ ವಿಜಯನ್ ಸರಕಾರದ ಹಣಕಾಸು ನಿರ್ವಹಣೆಯಲ್ಲಿನ ವೈಫಲ್ಯಗಳನ್ನು ಶ್ವೇತಪತ್ರದ ಮೂಲಕ ತೆರೆದಿಡಲು ಮುಂದಾಗಿರುವುದು ಕುತೂಹಲ ಮೂಡಿಸಿದೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಯ ಬಗ್ಗೆ ಪ್ರಸ್ತಾವಿಸಿದ ಸತೀಶನ್ ಅವರು, ಯೋಜನೆಗೆ ಅಗತ್ಯವಿರುವ ಭೂಸ್ವಾಧೀನಕ್ಕಾಗಿ 5,580ಕೋ.ರೂ.ಗಳನ್ನು ಸರಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದೆ.ಈ ಮೊತ್ತವನ್ನು ಕೇರಳದ ಸಾಲ ಮಿತಿಯಿಂದ ಹೊರಕ್ಕಿಡಬೇಕೆಂದು ಕೋರಿರುವುದಾಗಿ ತಿಳಿಸಿದರು. ರಾಜ್ಯದ ಸಾಲ ಮಿತಿಯುವ ಜಿಎಸ್‌ಡಿಪಿ ನಿಯಮಗಳಡಿ ಅಧಿಕೃತವಾಗಿ ಶೇ.3ರಷ್ಟಿತ್ತು. ಆದರೆ ಈ ಮಿತಿಗೆ ಜೋಡಿಸಲ್ಪಟ್ಟ ಷರತ್ತುಗಳ ಕಾರಣದಿಂದ ಪರಿಣಾಮಕಾರಿ ಸಾಲ ಸಾಮರ್ಥ್ಯ ಶೇ.3.5ರಷ್ಟಿದೆ ಎಂದ ಅವರು, ಕೆ ಐಐಎಫ್‌ಬಿ ಮತ್ತು ಪಿಂಚಣಿ ನಿಧಿಗಳಿಗೆ ಸಂಬಂಧಿಸಿದ ಬಾಕಿ ಬಗ್ಗೆ ಪ್ರಸ್ತಾವಿಸಲಾಗಿದೆ. ಪ್ರಧಾನಿಯವರ ಜತೆ ಚರ್ಚಿಸಿದ ವಿಷಯಗಳ ಬಗ್ಗೆ ಇನ್ನಷ್ಟು ಚರ್ಚೆಗಳನ್ನು ಶ್ವೇತಪತ್ರ ಬಿಡುಗಡೆಯ ಬಳಿಕ ಕೇಂದ್ರದ ಜತೆ ನಡೆಸಲಾಗುವುದು ಎಂದರು.

ಚೀನಾ–ಪಾಕಿಸ್ತಾನ ಜಂಟಿ ಹೇಳಿಕೆಗೆ ಭಾರತದ ತೀಕ್ಷ್ಣ ತಿರುಗೇಟು

ಜಮ್ಮು–ಕಾಶ್ಮೀರ ಭಾರತದ ಅವಿಭಾಜ್ಯ ಅಂಗ

ಹೊಸದಿಲ್ಲಿ: ಜಮ್ಮು–ಕಾಶ್ಮೀರ ಕುರಿತು ಚೀನಾ ಹಾಗೂ ಪಾಕಿಸ್ತಾನ ಹೊರಡಿಸಿರುವ ಜಂಟಿ ಹೇಳಿಕೆಗೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಯಾವುದೇ ಉಲ್ಲೇಖಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದಾಗಿ ಸ್ಪಷ್ಟಪಡಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸೋಮವಾರ ಹೇಳಿಕೆ ಪ್ರಕಟಿಸಿದ್ದು, ಜಮ್ಮು–ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಭಾಗಗಳಾಗಿದ್ದು, ಈ ವಿಚಾರದಲ್ಲಿ ಬೇರೆ ಯಾವುದೇ ರಾಷ್ಟ್ರಕ್ಕೆ ಪ್ರತಿಕ್ರಿಯೆ ನೀಡುವ ಅಥವಾ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿಲ್ಲ ಎಂದು ಖಡಕ್ ಸಂದೇಶ ರವಾನಿಸಿದ್ದಾರೆ.

ಚೀನಾ–ಪಾಕಿಸ್ತಾನ ಜಂಟಿ ಹೇಳಿಕೆಯಲ್ಲಿ ಜಮ್ಮು–ಕಾಶ್ಮೀರ ಕುರಿತ ಉಲ್ಲೇಖಗಳನ್ನು ಭಾರತ 'ಅನಗತ್ಯ ಹಾಗೂ ಅಸಂಗತ' ಎಂದು ಬಣ್ಣಿಸಿದ್ದು, ಭಾರತದ ನಿಲುವು ಎಲ್ಲರಿಗೂ ಚೆನ್ನಾಗಿ ತಿಳಿದಿರುವ ವಿಚಾರ ಎಂದು ಹೇಳಿದೆ.



ಇದೇ ವೇಳೆ, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಗಳ ವಿರುದ್ಧವೂ ಭಾರತ ಮತ್ತೊಮ್ಮೆ ಗಂಭೀರ ಆಕ್ಷೇಪ ವ್ಯಕ್ತಪಡಿಸಿದೆ. ಈ ಯೋಜನೆಗಳ ಕೆಲವು ಭಾಗಗಳು ಭಾರತದ ಸಾರ್ವಭೌಮ ಪ್ರದೇಶದೊಳಗೆ ಬರುತ್ತವೆ ಎಂದು ಹೇಳಿರುವ ಭಾರತ, ಪಾಕಿಸ್ತಾನದ ಆಕ್ರಮಣವನ್ನು ಮಾನ್ಯಗೊಳಿಸುವ ಅಥವಾ ಬಲಪಡಿಸುವ ಯಾವುದೇ ಕ್ರಮಗಳನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ವಿಷಯವನ್ನು ಚೀನಾ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ಹಲವು ಬಾರಿ ತಿಳಿಸಲಾಗಿದೆ ಎಂದೂ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಇನ್ನೊಂದೆಡೆ, ಅಂತರಸೀಮಾ ಜಲ ಸಂಪನ್ಮೂಲ ಸಹಕಾರ ಕುರಿತು ಚೀನಾ ಮತ್ತು ಪಾಕಿಸ್ತಾನ ಉಲ್ಲೇಖಿಸಿರುವ ವಿಚಾರವನ್ನೂ ಭಾರತ ತಳ್ಳಿಹಾಕಿದೆ. ಎರಡು ರಾಷ್ಟ್ರಗಳಿಗೂ ಪರಸ್ಪರ ಗಡಿ ಇಲ್ಲದ ಕಾರಣ ಇಂತಹ ಸಹಕಾರದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಭಾರತ ಹೇಳಿದೆ.

1963ರಲ್ಲಿ ಪಾಕಿಸ್ತಾನ ಮತ್ತು ಚೀನಾ ನಡುವೆ ನಡೆದ ಗಡಿ ಒಪ್ಪಂದವನ್ನು ಭಾರತ ಎಂದಿಗೂ ಮಾನ್ಯಗೊಳಿಸಿಲ್ಲ ಎಂದು ವಿದೇಶಾಂಗ ಸಚಿವಾಲಯ ಪುನರುಚ್ಚರಿಸಿದ್ದು, ಭಾರತದ ಭೌಗೋಳಿಕ ಅಖಂಡತೆ ಹಾಗೂ ಸಾರ್ವಭೌಮತ್ವದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂಬ ಸಂದೇಶವನ್ನು ಮತ್ತೊಮ್ಮೆ ವಿಶ್ವ ಸಮುದಾಯಕ್ಕೆ ರವಾನಿಸಿದೆ.

ಅಮೆರಿಕದ ಸ್ಯಾನ್ ಹೋಸೆಯಲ್ಲಿ 'ಬನ್ನಂಜೆ 90 ವಿಶ್ವ ನಮನ' ವೈಭವದ ರಥೋತ್ಸವದೊಂದಿಗೆ ಸಮಾರೋಪ



• **ಉಡುಪಿ:** ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಅನುಗ್ರಹದೊಂದಿಗೆ, ಶ್ರೀ ಬನ್ನಂಜೆ ಪ್ರತಿಷ್ಠಾನ ಹಾಗೂ ಅಮೆರಿಕದ ಶ್ರೀ ಪುತ್ತಿಗೆ ಮಠದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಬನ್ನಂಜೆ 90 ವಿಶ್ವ ನಮನ' ಕಾರ್ಯಕ್ರಮಗಳು ಸ್ಯಾನ್ ಹೋಸೆ ಶ್ರೀ ಪುತ್ತಿಗೆ ಮಠದಲ್ಲಿ ಶ್ರೀಕೃಷ್ಣಾಯುರುಗಳ ವೈಭವದ ರಥೋತ್ಸವದೊಂದಿಗೆ ಸಮಾಪನಗೊಂಡವು.

ವಿದ್ವಾಂಸ ಡಾ. ಗುರುರಾಜ ಕರ್ಜಗಿ ಸೇರಿದಂತೆ ಹಿರಿಯ ಗಣ್ಯರು ಹಾಗೂ ನೂರಾರು ಭಕ್ತರ ಸಮ್ಮುಖದಲ್ಲಿ, ದಾಸರ ಪದಗಳ ಗಾನ-ನೃತ್ಯ ಸಮ್ಮಿಲನದೊಂದಿಗೆ ಈ ವಿಶೇಷ ಸೇವೆಯನ್ನು ಶ್ರೀ ವೆಂಕಟಕೃಷ್ಣನಿಗೆ ಅರ್ಪಿಸಲಾಯಿತು.

ಮೊದಲ ದಿನ ಹರಿ ವಾಯು ಗುರುಗಳ ಭಾವಚಿತ್ರ ಮೆರವಣಿಗೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಡಾ. ಗುರುರಾಜ ಕರ್ಜಗಿ ಅವರು ದೀಪ ಬೆಳಗಿ ಚಾಲನೆ ನೀಡಿ, ಬನ್ನಂಜೆ ಆಚಾರ್ಯರ ಸಾಹಿತ್ಯ ಶೈಲಿ ಮತ್ತು ವಿದ್ವತ್ತಿನ ಕುರಿತು ಮಾತನಾಡಿದರು.

ಬನ್ನಂಜೆ ಆಚಾರ್ಯರ ಶಿಷ್ಯರು ಹಾಗೂ ಅಭಿಮಾನಿಗಳಾದ ವಿದ್ವಾನ್ ಗೋಪಿನಾಥ ಗಲಗಲಿ, ಪೂರ್ಣಪ್ರಸಾದ, ಬಾಲಚಂದ್ರ ಕೃಷ್ಣ ಪ್ರಭು ಮೂರ್ತಿ, ಪ್ರಸನ್ನ ಕೃಷ್ಣ ಹರೀಶ ವಾದಿರಾಜ, ಆನಂದ ದೇಶಪಾಂಡೆ, ಜಗನ್ನಾಥ್, ಎಮ್. ಎಸ್. ಸತ್ಯನಾರಾಯಣ, ಪರೀಕ್ಷಿತಕೃಷ್ಣ ಪ್ರಣವರಾಘವೇಂದ್ರ ಮತ್ತು ಸಮೀರಣ ಅವರು ಆಚಾರ್ಯರ ಆದರ್ಶ ವ್ಯಕ್ತಿತ್ವ, ಕೃತಿಗಳು ಮತ್ತು ಅವರು ಅಮೆರಿಕಕ್ಕೆ ಭೇಟಿ ನೀಡಿದ್ದಾಗ ನಡೆಸಿಕೊಟ್ಟ ಪ್ರವಚನಗಳ ನೆನಪು ಹಾಗೂ ಅನುಭವಗಳನ್ನು ಹಂಚಿಕೊಂಡರು.

ಸುಶ್ರಾವ್ಯ ಗಾಯನ, ಕಾವ್ಯ ವಾಚನ

ದಿವ್ಯಾ ರಮೇಶ ಮತ್ತು ಅವರ ವಿದ್ಯಾರ್ಥಿಗಳು ಬನ್ನಂಜೆಯವರ ಕೃತಿಗಳನ್ನು ಸುಂದರವಾಗಿ ಗಾಯನ ಮಾಡಿದರು. ಪ್ರಭು ನಂದನ್ ಮೂರ್ತಿ ಅವರು ಸಂಸ್ಕೃತದಲ್ಲಿ ಸ್ವಯಂ ರಚಿತ ಪದ್ಯಗಳನ್ನು ಪುಟಾಣಿ ಮಕ್ಕಳ ಮೂಲಕ ಹಾಡಿಸಿ ಅರ್ಪಿಸಿದರು. ಇದರೊಂದಿಗೆ ಕವಿತಾ ಉಡುಪ ಅವರಿಂದ ಕವಿತಾ ವಾಚನ ಹಾಗೂ ವಿಶೇಷ ಪ್ರಶ್ನೋತ್ತರ ಕಾರ್ಯಕ್ರಮಗಳು ಜರುಗಿದವು. ಸಭೆಯಲ್ಲಿ ಆಶಾ, ಶ್ರೀಧರ ಗೋಪಾಲ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಪುತ್ತಿಗೆ ಮಠದ ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನಾಚಾರ್ಯ ಸ್ವಾಗತಿಸಿದರು. ಡಾ. ವೀಣಾ ಬನ್ನಂಜೆ ವಂದಿಸಿದರು. ಸಪ್ತಪ್ತಿ ವಟ್ಟಂ, ಮುರಳಿ ಬಾಟ ಮತ್ತು ಸತೀಶ ಜಮಖಂಡಿ ಕಾರ್ಯಕ್ರಮ ನಿರ್ವಹಿಸಿದರು.

ಸ್ಯಾನ್ ಹೋಸೆ ಶ್ರೀಕೃಷ್ಣ ವೃಂದಾವನದ ಪ್ರಧಾನ ಅರ್ಚಕರಾದ ಶಂಕರ ನಾರಾಯಣ ಭಟ್ ಅವರ ನೇತೃತ್ವದಲ್ಲಿ, ಭಕ್ತಾದಿಗಳ ಸಹಕಾರದೊಂದಿಗೆ 'ಬನ್ನಂಜೆ ವಿಶ್ವ ನಮನ' ಕಾರ್ಯಕ್ರಮವು ಅತ್ಯಂತ ವೈಭವದಿಂದ ಸಂಪನ್ನಗೊಂಡಿತು.

ಮುಯಾಯ್ ಥಾಯ್ ಕಿಕ್ ಬಾಕ್ಸಿಂಗ್‌ನಲ್ಲಿ ಫೈಟರ್ ಅನಿಶ್ ಶೆಟ್ಟಿ ಅದ್ಭುತ ಗೆಲುವು



• **ಕುಂದಾಪುರ:** ಥೈಲ್ಯಾಂಡ್‌ನ ಪೌರಾಣಿಕ ರಾಜಡಮ್ನರ್ನ್ ಸ್ಟೇಡಿಯಂನಲ್ಲಿ ನಡೆದ ಮುಯಾಯ್ ಥಾಯ್ ಕಿಕ್ ಬಾಕ್ಸಿಂಗ್‌ನಲ್ಲಿ ಸ್ಪರ್ಧೆಯಲ್ಲಿ ಕುಂದಾಪುರದ ಯುವ ಫೈಟರ್ ಅನಿಶ್ ಶೆಟ್ಟಿ ಅದ್ಭುತ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ಇತಿಹಾಸ ಬರೆದಿದ್ದು, ಜಾಗತಿಕ ರಂಗದಲ್ಲಿ ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದಾರೆ.

ವಿಶ್ವದ ಮೊಟ್ಟ ಮೊದಲ ಮುಯಾಯ್ ಥಾಯ್ ಸ್ಟೇಡಿಯಂ ಎಂದೇ ಖ್ಯಾತವಾಗಿರುವ ರಾಜಡಮ್ನರ್ನ್ ಕ್ರೀಡಾಂಗಣದಲ್ಲಿ ಗೆಲುವು ಸಾಧಿಸಿದ 5ನೇ ಭಾರತೀಯ ಫೈಟರ್ ಎಂಬ ಗೌರವಕ್ಕೆ ಪಾತ್ರರಾದ ಅನಿಶ್, ಕುಂದಾಪುರದ ಕೀರ್ತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಸಂತಸ ವ್ಯಕ್ತಪಡಿಸಿದ್ದಾರೆ. ಥೈಲ್ಯಾಂಡ್‌ನ ರಾಷ್ಟ್ರೀಯ ಕ್ರೀಡೆಯಾದ ಮುಯಾಯ್ ಥಾಯ್‌ನಲ್ಲಿ ಈ ಸಾಧನೆ ಮಾಡಿರುವ ಅವರೊಬ್ಬ ಯುವ ಪ್ರತಿಭೆ ಅನಿಶ್ ಶೆಟ್ಟಿ ಅವರ ಈ ಸಾಧನೆಗೆ ಮೆಚ್ಚುಗೆ ಅವರು, ಅನಿಶ್ ಶೆಟ್ಟಿ ಅವರ ಈ ಗೆಲುವು ಕುಂದಾಪುರ ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆಯ ವಿಷಯ. ಮುಯಾಯ್ ಥಾಯ್ ನಂತಹ ಅಪರೂಪದ ಕ್ರೀಡೆಯಲ್ಲಿ ಜಾಗತಿಕ ಮಟ್ಟದಲ್ಲಿ ಮಿಂಚಿರುವ ಇವರ ಸಾಧನೆ ಮುಂದೆಯೂ ಹೀಗೆ ಮುಂದು ವರೆಯಲಿ. ಇವರ ಮೂಲಕ ಭಾರತದ ಕೀರ್ತಿ ಪತಾಕೆ ಜಗತ್ತಿನಾದ್ಯಂತ ಪಸರಿಸಲಿ ಎಂದು ಶುಭ ಹಾರೈಸಿದ್ದಾರೆ.

ಮೀನುಗಾರಿಕಾ ಬೋಟ್‌ಗೆ ಡಿಕ್ಕಿ ಹೊಡೆದು ನಿಲ್ಲಿಸದೆ ಪರಾರಿಯಾದ ಟಗ್ ಬೋಟ್

• **ಕಾಸರಗೋಡು:** ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಬೋಟ್‌ಗೆ ಕರ್ನಾಟಕದ ಟಗ್ ಬೋಟ್ ಡಿಕ್ಕಿ ಹೊಡೆದು ಹಾನಿಗೊಳಿಸಿದ ಬಳಿಕ ಟಗ್ ಬೋಟ್ ನಿಲ್ಲಿಸದೆ ಪರಾರಿಯದ ಬಗ್ಗೆ ನೀಡಿದ ದೂರಿನಂತೆ ಕುಂಬಳೆ ಕರಾವಳಿ ಪೊಲೀಸರು ಪ್ರಕರಣದ ದಾಖಲಿಸಿಕೊಂಡಿದ್ದಾರೆ.

ತಮಿಳುನಾಡು ಕನ್ಯಾಕುಮಾರಿ ಚಿನ್ನತುರೈ ನಿವಾಸಿ, ಮೀನುಗಾರಿಕಾ ದೋಣಿಯ (ಸ್ರಾಂಕ್) ಚಾಲಕ ಆ್ಯಂಟನಿ (51) ಎಂಬವರು ಈ ಬಗ್ಗೆ ದೂರು ನೀಡಿದ್ದು, ಅದರಂತೆ ಕರ್ನಾಟಕ ಬೀದರ್‌ನ ಒಶಿಯನ್ ರೇಡಿಯನ್ಸ್ ಎಂಎಂಎನ್ ಎಂಬ ಹೆಸರಿನ ಟಗ್ ಬೋಟ್‌ನ ವಿರುದ್ಧ ಕರಾವಳಿ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಸಮುದ್ರದಲ್ಲಿ ಮೀನುಗಾರಿಕೆ ನಡೆಸಿದ ಬಳಿಕ ತಾನು ಮೀನುಗಳೊಂದಿಗೆ ಬೋಟ್‌ನಲ್ಲಿ ಹಿಂತಿರುತ್ತಿದ್ದ ದಾರಿ ಮಧ್ಯೆ ಮಂಜೇಶ್ವರ ಮೀನುಗಾರಿಕಾ ಬಂದರಿನಿಂದ ಸುಮಾರು ಎಂಟು ನೋಟಿಕಲ್ ಮೈಲ್ ದೂರದ ಸಮುದ್ರಕ್ಕೆ ತಲುಪಿದಾಗ ಎದುರಿನಿಂದ ಬರುತ್ತಿದ್ದ ಬೀದರ್‌ನ ಟಗ್ ಬೋಟ್ ನಮ್ಮ ಬೋಟ್‌ಗೆ ಡಿಕ್ಕಿ ಹೊಡೆದು ಹಾನಿಗೊಂಡಿತ್ತೆಂದೂ ಆದರೆ ಡಿಕ್ಕಿ ಹೊಡೆದ ಆ ಟಗ್ ಬೋಟ್ ನಿಲ್ಲದೆ ಮಂಗಳೂರಿನತ್ತ ಸಾಗಿತ್ತೆಂದೂ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಮುಲ್ಕಿ: ಬೈಕ್ ಕಳ್ಳರಿಬ್ಬರ ಬಂಧನ





• **ಮುಲ್ಕಿ:** ಬಸ್ಸು ನಿಲ್ದಾಣದ ಬಳಿ ನಿಲ್ಲಿಸಿದ್ದ ಬೈಕ್ ಕಳವು ಮಾಡಿದ ಇಬ್ಬರು ಆರೋಪಿಗಳನ್ನು ಮುಲ್ಕಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಆರೋಪಿಗಳನ್ನು ಮುಕ್ಕ ಮಸೀದಿ ಬಳಿಯ ನಿವಾಸಿ ಮಹಮ್ಮದ್ ರಾಜಿಕ್ (38) ಹಾಗೂ ಬೈ ಕಂಪಾಡಿ ಅಂಗರಗುಂಡಿಯ ನಿವಾಸಿ ಉಬೈದ್ ಹೈದರ್ (40) ಎಂದು ಗುರುತಿಸಲಾಗಿದೆ.

ಮುಲ್ಕಿ ಬಸ್ ನಿಲ್ದಾಣದ ಬಳಿಯ ಅಪೋಲೋ ಫಾರ್ಮಸಿಯ ಎದುರು ಭಾಗದಲ್ಲಿ ನ ಮೋಹನ್ ಶೆಟ್ಟಿಯವರು ಮೇ 18 ರ ಸಂಜೆ ತಮ್ಮ ಅಳಿಯ ನಿರಂಜನ ಶೆಟ್ಟಿಯವರ ಯುನಿಕಾರ್ನ್ ಬೈಕನ್ನು ಬೀಗ ಸಹಿತ ಪಾರ್ಕ್ ಮಾಡಿ ಸಮೀಪದಲ್ಲಿದ್ದ ಕೋಳಿ ಅಂಗಡಿಗೆ ಹೋಗಿ ವಾಪಸು ಬಂದು ನೋಡಿದಾಗ ಸ್ಥಳದಲ್ಲಿ ಬೈಕ್ ನಾಪತ್ತೆಯಾಗಿತ್ತು. ಈ ಬಗ್ಗೆ ನಿರಂಜನ ಶೆಟ್ಟಿಗೆ ವಿಚಾರ ತಿಳಿಸಿ ಅನೇಕ ಕಡೆ ಹುಡುಕಾಡಿ ಬೈಕ್ ಸಿಗದೇ ಇದ್ದುದರಿಂದ ಮುಲ್ಕಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣದ ಬಗ್ಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ ಬೈಕ್ ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಹಣ್ಣುಗಳು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟಕ್ಕೆ ಲಭ್ಯ

ಮೇ 28-31: ಮಾವು ಮೇಳ

• **ಮಂಗಳೂರು:** ರಾಮನಗರ ಜಿಲ್ಲಾ ಮಾವು ತೋಟದ ಬೆಳೆಗಾರರ ಮಾರಾಟಸಂಘದವತಿಯಿಂದತೋಟ ಗಾರಿಕಾ ಇಲಾಖೆ ಸಹಕಾರದೊಂದಿಗೆ ಮೇ 28 ರಿಂದ 31ರವರೆಗೆ ನಗರದ ಕದ್ರಿ ಉದ್ಯಾನವನದಲ್ಲಿ ಮಾವು ಮೇಳ ಆಯೋಜಿಸಲಾಗಿದೆ.

ಈ ಮೇಳದಲ್ಲಿ ಉತ್ತಮ ಗುಣಮಟ್ಟದ ಹಾಗೂ ನೈಸರ್ಗಿಕವಾಗಿ ಮಾಗಿಸಲಾದ ಮಾವು ಬೆಳೆಯ ವಿವಿಧ ತಳಿಗಳಾದ ಆಲ್ಫಾನ್ಸೋ, ಬಾದಾಮಿ, ಮಲ್ಲಿಕಾ, ರಸಪುರಿ, ಮಲಗೋವಾ, ಸಿಂಧೂರ, ಕಾಲಪಾಡಿ, ತೋತಾಪುರಿ, ಬಂಗನಪಲ್ಲಿ, ಶುಗರ್ ಬೇಬಿ ಇತ್ಯಾದಿ ಹಣ್ಣುಗಳು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ ಎಂದು ಸಂಘದ ಅಧ್ಯಕ್ಷ ರಮೇಶ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತ ವಾಸು ಅವರು ಮಾತನಾಡಿ, ರಾಮನಗರದಿಂದ ಸುಮಾರು 25 ಮಾವು ಬೆಳೆಗಾರರು ಮೇಳಕ್ಕೆ ಆಗಮಿಸುವ ನಿರೀಕ್ಷೆ ಇದೆ. ಬೆಳಗ್ಗೆ 8 ರಿಂದ ರಾತ್ರಿ 8.30ರವರೆಗೆ ಮಾರಾಟ ಇರಲಿದೆ. ಈ ವರ್ಷ ಸುಮಾರು 25 ಟನ್ ಮಾವು ಮಾರಾಟ ಮಾಡುವ ನಿರೀಕ್ಷೆಯಲ್ಲಿದ್ದೇವೆ ಎಂದರು.

ಮೇ 28ರಂದು ಬೆಳಗ್ಗೆ 11ಕ್ಕೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾವು ಮೇಳ ಉದ್ಘಾಟಿಸಲಿದ್ದಾರೆ. ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಂಸದ ಕ್ಯಾ. ಬ್ರಿಜೇಶ್ ಚೌಟ, ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ತೋಟಗಾರಿಕಾ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ, ಜಿ.ಪಂ. ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ತೋಟಗಾರಿಕಾ ಇಲಾಖೆ ಅಪರ ನಿರ್ದೇಶಕ ಡಾ. ಎಸ್. ನಂದಾ, ದ.ಕ. ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷ ವಿಜಯ್ ಕುಮಾರ್ ರೈ ಭಾಗವಹಿಸಲಿದ್ದಾರೆ ಎಂದರು. ಸಂಘದ ನಿರ್ದೇಶಕ ಸಿದ್ಧರಾಜು ಉಪಸ್ಥಿತರಿದ್ದರು.

> **ಅನುದಾನದ ಕೊರತೆಯಿಂದಾಗಿ ಈ ವರ್ಷ ತೋಟಗಾರಿಕಾ ಇಲಾಖೆ ವತಿಯಿಂದ ಮಾವು ಮೇಳ ಆಯೋಜಿಸುತ್ತಿಲ್ಲ. ಬದಲಾಗಿ ಪ್ರೋತ್ಸಾಹ ನೀಡುತ್ತಿದ್ದೇವೆ. ಜಿಲ್ಲಾ ಪಂಚಾಯತ್ ಪ್ರಚಾರ ಸಾಹಿತ್ಯ ಯೋಜನೆಯಡಿ ಮಾವು ಮೇಳ ಆಯೋಜನೆಗೆ ಕಳೆದ ವರ್ಷ 75000 ರೂ.ಅನುದಾನ ಬಂದಿತ್ತು. ಆದರೆ ಈ ವರ್ಷ ಈ ಯೋಜನೆ ರದ್ದುಗೊಳಿಸಲಾಗಿದೆ.**
> ■ ಪ್ರವೀಣ್, ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ

ಪುತ್ತೂರು ಮಾರುಕಟ್ಟೆ ಧಾರಣೆ

26-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	415 - 450
ಚೋಲ್ ಅಡಿಕೆ	:	510 - 535
ಡಬಲ್ ಚೋಲ್	:	510 - 535
ಹೊಸ ಪಟೋರ	:	340 - 390
ಹಳೆ ಪಟೋರ	:	360 - 390
ಹೊಸ ಉಳ್ಳಿ	:	140 - 290
ಹಳೆ ಉಳ್ಳಿ	:	130 - 290
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	255 - 285
ಹಳೆ ಕರಿಗೋಟು	:	255 - 285
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	245.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	142.00
ಸ್ಕ್ರಾಪ್ 2	-	140.00

ಸಹಾಯಕ ಆಯುಕ್ತರು ಹಾಗೂ
ಉಪ ವಿಭಾಗ ದಂಡಾಧಿಕಾರಿಯವರು,
ಮಂಗಳೂರು ಉಪವಿಭಾಗ,
ಮಂಗಳೂರು ದ.ಕ. ಜಿಲ್ಲೆ ಇವರ
ನ್ಯಾಯಾಲಯದಲ್ಲಿ
ಸಂಖ್ಯೆ: ಆರ್.ಆರ್.ಟಿ.:
ಎಸ್.ಆರ್./161/ 2025

ಇವರೊಳಗೆ:
ಶ್ರೀಮತಿ ದುರ್ಗಮ್ಮ ಯಾನೆ ದುರ್ಗಾವತಿ
ಬಿನ್. ರಾಮಗೌಡ
ಅರ್ಜುನಕೋಡಿ ಕೊಂಪದವು ಗ್ರಾಮ,
ಮಂಗಳೂರು
...ಮೇಲ್ಮನವಿದಾರರು
ಮತ್ತು
ತಹಶೀಲ್ದಾರರು
ಮಂಗಳೂರು ಮತ್ತಿತರರು
...ಪ್ರತಿವಾದಿ

ನೋಟೀಸು

ಇವರಿಗೆ:
ರಾಧ
ಅರ್ಜುನಕೋಡಿ ಕೊಂಪದವು
ಗ್ರಾಮ ಮಂಗಳೂರು-574144.

ಮೇಲ್ಕಂಡ ಪ್ರಕರಣ RRT:161/2025 ಜಮೀನಿಗೆ ಸಂಬಂಧಿಸಿ ಮೇಲ್ಕಂಡ ಮೇಲ್ಮನವಿದಾರರು ಈ ನ್ಯಾಯಾಲಯ ದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದ್ರಿ ಮೇಲ್ಮನವಿಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ನೋಂದಾಯಿಸಲಾಗಿದೆ. ಸದ್ರಿ ಪ್ರಕರಣವನ್ನು ನಿಮ್ಮ ಹಾಜರಾತಿಗಾಗಿ **ದಿನಾಂಕ: 01/06/2026ಕ್ಕೆ ಅಪರಾಹ್ನ 3.00 ಗಂಟೆಗೆ** ಮುಂದೂಡಲಾಗಿದೆ.

ಸದ್ರಿ ದಿನ ನೀವು ಸ್ವತಃ ಅಥವಾ ನಿಮ್ಮ ವಕೀಲರು ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕ ಈ ನ್ಯಾಯಾಲಯಕ್ಕೆ ಹಾಜರಾಗಿ ವಾದ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸುವುದು. ಈ ದಿನಾಂಕದಂದು ಅಥವಾ ನ್ಯಾಯಾಲಯದಿಂದ ನಿಗದಿಪಡಿಸಲಾದ ತರುವಾಯದ ದಿನಾಂಕದಂದು ನೀವು ಹಾಜರಾಗಲು ತಪ್ಪಿದಲ್ಲಿ ಮತ್ತಷ್ಟು ನೋಟೀಸು ನೀಡದೇ ಪ್ರಕರಣವನ್ನು ನಿಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆ ಮಾಡಿ ಪ್ರಕರಣವನ್ನು ಅದರ ಅರ್ಹತೆಯಾಧಾರದಲ್ಲಿ ಇತ್ಯರ್ಥ ಪಡಿಸಲಾಗುವುದು.

ಸಹಿ/- ಸಹಾಯಕ ಆಯುಕ್ತರು
ಮಂಗಳೂರು ಉಪವಿಭಾಗ, ಮಂಗಳೂರು
ದಿನಾಂಕ: 04.05.2025.

PUBLIC NOTICE

I am investigating the title of land mentioned herebelow which originally belonged to M Shankara Upadyaya by virtue of the Deed of Sale registered as document No. 910/1968-69 and document No. 85/1981-82 registered before the Sub-Registrar, Mangalore Taluk. Terrence Clement Rego, who is the present owner, has handed over the certified copy of the aforesaid documents to me and represented that the original of the same are lost during transit. Hence, by this notice it is requested that any person who finds the lost documents or has got any claim or interest over the schedule property may place such claim with the undersigned with proof within 15 days of this publication.

SCHEDULE
Non-agricultural immovable property situated at Padukodi Village of Mangalore Taluk and comprised in: :-

Sy. No.	Kissam	Extent A.C
35/5C	Converted	0.18.50

With all mamool easementary rights of way, water appurtenant thereto..

Mangalore
26.05.2026
SD/- Mariamma K. Thomas, Advocate
Near Bunts Hostel, Mangaluru 575003Mob: 9448464673

ಕರ್ನಾಟಕ ಸರ್ಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ: ಗದಗ, ರಾಜ್ಯ: ಕರ್ನಾಟಕ
ದೂ: 08372-259932 ಇ-ಮೇಲ್: ka.gadag.betageri.cmc@gmail.com
ನಂ.ಗಬೆನಸ/ಶಾಂ.ವಿ/ವಹಿ/ ಟೆಂಡರ್/2026-27 ದಿನಾಂಕ: 26-05-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ **1999-2000ರ** ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ **2026-27** ನೇ ಸಾಲಿನ ನಗರಸಭೆ ಅನುದಾನದಲ್ಲಿ ಒಟ್ಟು **03** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.30.00ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, ಇಂಡೆಂಟ್ ನಂ:- **1)DMA/2026-27/OW/WORK_INDENT-58727, 2)DMA/2026-27/OW/WORK_INDENT-58726, 3)DMA/2026-27/OW/WORK_INDENT-58728. http://kppp.karnataka.gov.in** ರಲ್ಲಿ, ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು **Electronic** ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	08-06-2026 Up to 16.00 Hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	09-06-2026 Up to 16.30 Hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ
ವಾ.ಸಾ.ಸಂ.ಇ/ಗದಗ/89/ ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ: ಸಅಸಂ/ಟೆಂಡರ್-/ಸಿಆರ್-01/2026-27 ದಿ: 25.05.2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಕಾಲ್-2)
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ನೆಡುತೋಪು ರಚನೆ, ನೆಡುತೋಪ ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.06.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka. gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕಿಎಸ್‌ಎಂಸಿಎ/ಶಿ/26-27/109/05/277

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ KPP ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ KPP ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:194 ದಿನಾಂಕ : 26-05-2026. 1) DBOT ಮಾದರಿ ಅಡಿಯಲ್ಲಿ ಶಿಗ್ಗಾಂವ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ನಾಗನೂರ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT511.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:195 ದಿನಾಂಕ : 26-05-2026. 2) DBOT ಮಾದರಿ ಅಡಿಯಲ್ಲಿ ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಮೋತಿ ತಲಾಬ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT512.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:196 ದಿನಾಂಕ : 26-05-2026. 3) DBOT ಮಾದರಿ ಅಡಿಯಲ್ಲಿ ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ತೆವರಮಳ್ಳಿಹಳ್ಳಿ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT513. ಹೆಚ್ಚಿನ ವಿವರಗಳಿಗಾಗಿ KPP ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/230/2026-27

ನಗರಸಭಾ ಕಾರ್ಯಾಲಯ, ಸಾಗರ - 577401
Web: www.sagaracity.mrc.gov.in Phone: 08183-226021
Email: ka.sagar.cmc@gmail.com
ನಂ.ನಸಸಾ:ಎಇಇ:ಕಾಮಗಾರಿ:04/2026-27 ದಿನಾಂಕ: 21.05.2026

-ಟೆಂಡರ್ ಪ್ರಕಟಣೆ:- (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಾಗರ ನಗರದಲ್ಲಿ ತಾಲ್ಲೂಕು ರಂಗ ಮಂದಿರ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು KW4 ನಿಯಮಗಳನ್ವಯ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆಯಲ್ಲಿ ಗುತ್ತಿಗೆ ಪರವಾನಿಗೆ ಪಡೆದುಕೊಂಡಿರುವ ಗುತ್ತಿಗೆದಾರರು, ತಮ್ಮ ಕನಿಷ್ಠ ದರವನ್ನು ನಮೂದಿಸಿ ನಿಗಧಿಪಡಿಸಿದ ಇಎಂಡಿಯೊಂದಿಗೆ ತಮ್ಮ ಕನಿಷ್ಠ ದರವನ್ನು http://www.kppp.karnataka.gov.in portal ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ http://www.kppp.karnataka.gov.in ಪಡೆಯಬಹುದಾಗಿದೆ. (1) ಪೂರ್ವ ಬಾವಿ ಬಿಡ್ ಸಭೆ ದಿನಾಂಕ: 25.05.2026ರಂದು ಬೆಳಗ್ಗೆ 10.30 ಘಂಟೆಗೆ ಆಸಕ್ತ ಗುತ್ತಿಗೆದಾರರು ಭಾಗವಹಿಸತಕ್ಕದ್ದು, (2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 29.06.2026 ಸಂಜೆ 5.30 ಘಂಟೆಯವರೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.07.2026 ಸಂಜೆ 5.30 ಘಂಟೆಯವರೆಗೆ, (4) ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ 02.07.2026 ಸಂಜೆ 5.30 ಘಂಟೆಗೆ ಅನಿವಾರ್ಯ ಕಾರಣದಿಂದ ಸಾಧ್ಯವಾಗದೇ ಇದ್ದಲ್ಲಿ ಮುಂದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು.

ಕ್ರ.ಸಂ. 1. ಇಂಡೆಂಟ್ ನಂ: DMA/2025-26/BD/WORK_INDENT 56660 **ಇ.ಎಂ.ಡಿ ಮೊತ್ತ ರೂ.ಲಕ್ಷಗಳಲ್ಲಿ:** 6.10 **ಅಂದಾಜು ಮೊತ್ತ (ಲಕ್ಷಗಳಲ್ಲಿ):** 480.00

ಷರತ್ತುಗಳು: 1. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. 2. ಸರ್ಕಾರದ ನಿಯಮಾವಳಿಯಂತೆ ಜಿ.ಎಸ್.ಟಿಯನ್ನು ಪಾವತಿಸಲಾಗುವುದು. 3. ಹೆಚ್ಚಿನ ವಿವರಗಳನ್ನು ನಗರಸಭೆಯ ವೆಬ್ ಸೈಟ್ http://www.sagaracity.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಪೌರಾಯುಕ್ತರು ನಗರಸಭೆ ಸಾಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/110/05/280

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-521th) ಡ್ರಾ, ಮೇ 26ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SV 904465 (THIRUR)
Cons Prize-Rs: 5000/-
SN 904465 SO 904465 SP 904465 SR 904465 SS 904465 ST 904465 SU 904465 SW 904465 SX 904465 SY 904465 SZ 904465
2nd Prize Rs: 30,00,000/- [30 Lakhs]
SS 167747 (THRISSUR)
3d Prize Rs: 5,00,000/- [5 Lakhs]
SR 657509 (VAIKKOM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0382 2361 3131 3402 3518 3561 4082 4785 4950 5159 5495 6211 6275 6618 6850 6965 7082 8560 9770
5th Prize Rs.2,000/-
2599 3472 5259 5476 8801 9637
6th Prize Rs.1,000/-
0362 0715 0771 0864 1136 1761 2566 2634 3622 3738 4303 4449 4559 5290 5422 6305 6621 6920 7395 8125 8217 8834 9508 9596 9980
7th Prize Rs.500/-
0007 0026 0028 0498 0539 0573 0681 0824 0909 1046 1343 1504 1554 1663 1756 1816 1969 1977 2093 2336 2470 2546 2562 2772 2864 2901 2944 3212 3409 3630 3754 4030 4114 4120 4182 4324 4390 4502 4609 4696 4749 4942 5113 5132 5298 5311 5325 5329 6178 6202 6249 6401 6960 6978 7099 7103 7144 7449 7470 7475 7643 7752 8337 8367 8532 8634 8950 8969 8973 9028 9033 9607 9677 9710 9816 9837
8th Prize Rs.200/-
0000 0066 0280 0564 0565 0575 0682 0699 1128 1298 1440 1574 1803 1990 2041 2079 2143 2342 2536 2682 2707 2711 2807 3119 3469 3495 3521 3597 3942 4098 4118 4190 4240 4340 4361 4432 4459 4506 4788 4827 4853 4953 5019 5043 5091 5173 5371 5428 5669 5722 5847 5864 6251 6610 6678 6689 6728 6840 6998 7125 7280 7344 7454 7632 7668 7751 7774 7813 7884 7916 7934 7980 8027 8048 8052 8343 8434 8543 8673 8703 8754 9039 9136 9169 9194 9210 9379 9744 9774 9884
9th Prize Rs.100/-
0035 0085 0123 0156 0243 0334 0376 0403 0687 0849 0879 0896 0921 1004 1011 1024 1040 1072 1078 1115 1239 1290 1468 1684 1685 1698 1708 1721 1754 1776 1811 1832 1852 2063 2231 2270 2345 2386 2515 2544 2670 2762 2917 3007 3018 3083 3113 3454 3489 3509 3632 3688 3878 3879 3920 4001 4106 4193 4310 4585 4752 4979 5076 5077 5148 5233 5251 5265 5268 5334 5542 5550 5551 5571 5663 5678 5732 5735 5854 5976 6009 6037 6142 6162 6190 6240 6245 6400 6436 6495 6526 6576 6613 6780 6826 7076 7141 7156 7210 7302 7459 7474 7491 7694 7701 7779 7798 7831 7865 7882 8000 8183 8213 8221 8230 8235 8241 8245 8290 8359 8366 8527 8575 8586 8636 8642 8657 8683 8701 8867 8931 9044 9141 9150 9175 9326 9422 9459 9554 9581 9668 9671 9711 9719 9838 9887 9915 9945 9975 9979

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ.ಮಂ.ವಿ.ಟಿ.ಎನ್.ಡಿ:(09ಇ):2026-27:ಜೇ-1 ದಿನಾಂಕ: 25.05.2026

ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚದಡಿ ಇಂಡೆಂಟ್ ನಂ: 36106 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 02.06.2026, ಮತ್ತು ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 36124 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 09.06.2026 ಹಾಗೂ ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 35435 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 24.06.2026** ಆಗಿದ್ದು, ಈ ಕಾಮಗಾರಿಗಳಿಗೆ ಈ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಮೊತ್ತ ರೂ.100.00 ಮತ್ತು ಅಂದಾಜು ಮೊತ್ತ ಗರಿಷ್ಠ ಮೊತ್ತ ರೂ.300.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-3 & KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಬಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/277/26-27 dt.26.05.2026 **ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್**

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026-27/1198 ದಿನಾಂಕ:26.05.2026

-:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1,2,3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025-26 ನೇ ಸಾಲಿನ 5054-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 5054- ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 4059-ಮುಖ್ಯ ಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ, 4059-ಎಸ್.ಸಿ/ಟಿ.ಎಸ್.ಪಿ. 4059 ಇಲಾಖಾ ಕಟ್ಟಡಗಳು, 8443-ಠೇವಣಿ ವಂತಿಕೆ ಅಡಿಯಲ್ಲಿ ಸೇರಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 11.66 ಲಕ್ಷಗಳು ಹಾಗೂ ರೂ. 395.48 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 11,700/- ಹಾಗೂ ರೂ. 5,93,300 ಇರುತ್ತದೆ. ಭಾಗ-1:ಟೆಂಡರ ಸ್ವೀಕರಿಸುವ ದಿನಾಂಕ 05.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್ನನ್ನು ತೆರೆಯುವ ದಿನಾಂಕ 06.06.2026 ರ ಸಂಜೆ 4.45 ಘಂಟೆ ನಂತರ ಟೆಂಡರ ಆರ್ಥಿಕ ಬಿಡ್ನನ್ನು ತೆರೆಯುವ ದಿನಾಂಕ 08.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-2:ಟೆಂಡರ ಸ್ವೀಕರಿಸುವ ದಿನಾಂಕ 12.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್ನನ್ನು ತೆರೆಯುವ ದಿನಾಂಕ 15.06.2026 ರ ಸಂಜೆ 4.45 ಘಂಟೆ ನಂತರ, ಆರ್ಥಿಕ ಬಿಡ್ನನ್ನು ತೆರೆಯುವ ದಿನಾಂಕ 16.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-3: ಟೆಂಡರ ಸ್ವೀಕರಿಸುವ ದಿನಾಂಕ 16.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್ನನ್ನು ತೆರೆಯುವ ದಿನಾಂಕ 17.06.2026 ರ ಸಂಜೆ 4.45 ಘಂಟೆ ನಂತರ ಆರ್ಥಿಕ ಬಿಡ್ನನ್ನು ತೆರೆಯುವ ದಿನಾಂಕ 18.06.2026 ಬೆಳಿಗ್ಗೆ 11.00 ಘಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 26.05.2026 ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-313/KSMCA/2026-27

ಕಿರುಸುದ್ದಿ

ಮೇ 28: ಅಂತಾರಾಷ್ಟ್ರೀಯ ಋತುಸ್ರಾವ ದಿನಾಚರಣೆ

• **ಮಂಗಳೂರು:** ಮೇ 28ರಂದು ವಿಶ್ವದ್ಯಾದಂತ ಅಂತಾರಾಷ್ಟ್ರೀಯ ಋತುಸ್ರಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಋತುಚಕ್ರದ ಬಗ್ಗೆ ಗ್ರಾಮೀಣ ಪ್ರದೇಶದ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಾಚರಿಸುತ್ತಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಇಂದಿಗೂ ಋತುಚಕ್ರ ಸಮಯದಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಮಾತನಾಡಲು ಹಿಂಜರಿಯುತ್ತಿದ್ದಾರೆ. ಇಂತಹ ಮಹಿಳೆಯರನ್ನು ಮಾನಸಿಕವಾಗಿ ಸದೃಢ ಮಾಡುವ ಸಲುವಾಗಿ ಮೇ 28ನ್ನು ವಿಶ್ವದ್ಯಾದಂತ ಮೆನ್ಸ್ಟ್ರುವಲ್ ಹೈಜೀನ್ ಡೇ ಯನ್ನಾಗಿ ಆಚರಿಸಲಾಗುತ್ತಿದೆ. ಆದ್ದರಿಂದ ಎಲ್ಲಾ ತಾಲೂಕು, ಗ್ರಾಮ ಪಂಚಾಯತ್ ಮಟ್ಟದ ಅಧೀನ ಕಚೇರಿಗಳಲ್ಲಿ ಮೇ 28ರಂದು ಮೆನ್ಸ್ಟ್ರುವಲ್ ಹೈಜೀನ್ ಡೇ ಆಚರಿಸಬೇಕು. ಋತುಚಕ್ರವನ್ನು 28 ದಿನಗಳೆಂದು ಪರಿಗಣಿಸಲಾಗುತ್ತದೆ. ಈ ಸಲುವಾಗಿ 23 ಬಿಳಿ ಮಣಿ, 5 ಕೆಂಪು ಮಣಿಗಳನ್ನೊಂಡ ಬ್ರೇಸ್‌ಲೆಟ್ ಧರಿಸುವ ಮೂಲಕ ಆಚರಿಸಬೇಕು. ಮುಖ್ಯ ವಾಹಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ, ಅಂಗನವಾಡಿ, ಸ್ವಸಹಾಯ ಗುಂಪುಗಳ ಕಾರ್ಯಕರ್ತರ ಮೂಲಕ ಮನೆ ಮನೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು. ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು, ಛಾಯಚಿತ್ರ ವರದಿಯನ್ನು ಐ.ಇ.ಸಿ ಗ್ರೂಪ್ ಹಾಗೂ ಕಚೇರಿಗೆ ಸಲ್ಲಿಸಲು ದ.ಕ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಕ್ಕೆ: ವಿದ್ಯಾರ್ಥಿನಿಯರಿಗೆ ಆರೋಗ್ಯ, ಸ್ವಾಸ್ಥ್ಯ ತರಬೇತಿ

• **ಸುಬ್ರಹ್ಮಣ್ಯ:** ಆಧುನಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಮೊಬೈಲ್‌ನ ಬಗ್ಗೆ ಆಕರ್ಷಿತರಾಗುವುದು ಸರ್ವೇಸಾಮಾನ್ಯ. ಮೊಬೈಲ್ ವ್ಯಾಮೋಹ ತ್ವರಿತ ಗುರಿಯತ್ತ ಸಾಗದೆ ಬದುಕು ಉಜ್ವಲವಾಗುತ್ತದೆ. ಆಧುನಿಕ ತಂತ್ರಜ್ಞಾನಗಳನ್ನು ನಮ್ಮ ಜ್ಞಾನಾಭಿವೃದ್ಧಿಗೆ ಪೂರಕವಾಗಿ ಉಪಯೋಗಿಸುವತ್ತ ಯುವ ವಿದ್ಯಾರ್ಥಿಗಳು ಮುಂದಡಿಯಿಡಬೇಕು ಎಂದು ಹಿರಿಯ ಆಯ್ಕೆ ಶ್ರೇಣಿ ಉಪನ್ಯಾಸಕ ರೇಖಾರಾಣಿ ಸೋಮಶೇಖರ್ ಹೇಳಿದರು. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಎಸ್.ಎಸ್.ಪಿ.ಯು. ಕಾಲೇಜಿನಲ್ಲಿ ಮಂಗಳವಾರ ವಿದ್ಯಾರ್ಥಿನಿಯರಿಗೆ ನಡೆದ ಆರೋಗ್ಯ ಮತ್ತು ಸ್ವಾಸ್ಥ್ಯ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು. ಆರೋಗ್ಯ ಪ್ರವೃತ್ತಿ ಅನುಸರಿಸಬೇಕಾದ ಕ್ರಮ, ಮಹಿಳಾ ಸಬಲೀಕರಣ, ವಿದ್ಯಾರ್ಥಿನಿಯರ ಮತ್ತು ಆರೋಗ್ಯ, ಸ್ವಚ್ಛತೆ, ಗುರಿ ನಿರ್ಧಾರ ಇತ್ಯಾದಿಗಳ ಬಗ್ಗೆ ಸಂಪನ್ಮೂಲ ವ್ಯಕ್ತಿ ರೇಖಾರಾಣಿ ಸೋಮಶೇಖರ್ ಮಾಹಿತಿ ನೀಡಿದರು. ಉಪನ್ಯಾಸಕರಾದ ಸೌಮ್ಯಕೀರ್ತಿ, ಮಾನಸ ಭಟ್ ವೇದಿಕೆಯಲ್ಲಿದ್ದರು.

'ಕ್ಯಾಂಪಸ್ ಟು ಕಾರ್ಪೊರೇಟ್ - ಕೆರಿಯರ್ ರೆಡಿನೆಸ್ ಕಾರ್ಯಕ್ರಮ

• **ಕುಂದಾಪುರ:** ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಕಾಮರ್ಸ್ ಮ್ಯಾನೇಜ್‌ಮೆಂಟ್ ಮತ್ತು ಐಟಿ ಅಸೋಸಿಯೇಶನ್ ವತಿಯಿಂದ 'ಕ್ಯಾಂಪಸ್ ಟು ಕಾರ್ಪೊರೇಟ್ - ಕೆರಿಯರ್ ರೆಡಿನೆಸ್' ಕಾರ್ಯಕ್ರಮ ಕಾಲೇಜಿನ ಎ. ವಿ. ಹಾಲ್‌ನಲ್ಲಿ ಸೋಮವಾರ ನಡೆಯಿತು. ಸಂಪನ್ಮೂಲ ವ್ಯಕ್ತಿ ಕಾಲೇಜಿನ ವೃತ್ತಿಪರ ಆಡಳಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ರಿಶಬ್ ಬಂಗೇರ ಅವರು ವಿದ್ಯಾರ್ಥಿಗಳಿಗೆ ಉದ್ಯೋಗ ಕ್ಷೇತ್ರದ ಕೌಶಲ್ಯಗಳು, ಸಂದರ್ಶನ ಸಿದ್ಧತೆ ಹಾಗೂ ಕಾರ್ಪೊರೇಟ್ ಕ್ಷೇತ್ರಕ್ಕೆ ತಯಾರಾಗುವ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಸಂಯೋಜಕ ಪ್ರೀತಿ ಹೆಗ್ಡೆ ಸ್ವಾಗತಿಸಿದರು. ಮೇಘಾ ವಂದಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಕಾಮರ್ಸ್ ಮ್ಯಾನೇಜ್‌ಮೆಂಟ್ ಮತ್ತು ಐಟಿ ಅಸೋಸಿಯೇಶನ್‌ನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೇ 30ರಂದು ಪತ್ರಕರ್ತರ ಮಕ್ಕಳಿಗೆ ಕಲಿಕೋಪಕರಣ ವಿತರಣೆ

• **ಕಾಸರಗೋಡು:** ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಾಸರಗೋಡು ಜಿಲ್ಲಾ ಸಮಿತಿ ಇವುಗಳ ಆಶ್ರಯದಲ್ಲಿ ಪತ್ರಕರ್ತರ ಮಕ್ಕಳಿಗೆ ಕಲಿಕೋಪಕರಣ ವಿತರಣೆ, ಕೃತಿ ಪರಿಚಯ ಕಾರ್ಯಕ್ರಮವು ಮೇ 30ರಂದು ಬೆಳಗ್ಗೆ 10ರಿಂದ ಉಳಿಯ ವ್ಯಾಪಾರಿ ಭವನದಲ್ಲಿ ನಡೆಯಲಿದೆ. ಮೆಸ್ಕಾಂ ಮಂಗಳೂರು ಅಧ್ಯಕ್ಷ ಕೆ.ಹರೀಶ್ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಅಧ್ಯಕ್ಷತೆ ವಹಿಸುವರು. ಲೇಖಕ ಶಾಫಿ ಚಂಡಾಜಾಲ ಬರೆದ ಕವನ ಮನದ ಮಾತು ಕೃತಿ ಪರಿಚಯ, ಸ್ವಾಗತ ಕಾರ್ಯಕ್ರಮ ನಡೆಯಲಿದೆ. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಸ್ವಾಗತಿಸುವರು. ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ, ಸಾಹಿತಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಕೃತಿ ಪರಿಚಯಿಸುವರು. ಮಂಗಲ್ಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಕಾಸರಗೋಡು ಇದರ ಸಂಸ್ಥಾಪಕ ಎಸ್.ಪ್ರದೀಪ್ ಕುಮಾರ್ ಕಲ್ಕೂರ, ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಗಮಕ ಕಲಾ ಪರಿಷತ್‌ನ ಗಡಿನಾಡ ಘಟಕದ ಅಧ್ಯಕ್ಷ ಶಂಕರನಾರಾಯಣ ಭಟ್, ಸಾಮಾಜಿಕ ಕಾರ್ಯಕರ್ತೆ ಸುಜಾತ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ, ಸಂಘದ ಗೌರವಾಧ್ಯಕ್ಷ ಎ.ಆರ್.ಸುಬ್ಬಯ್ಯಕಟ್ಟೆ, ಪ್ರಧಾನ ಕಾರ್ಯದರ್ಶಿ ಕೆ.ಗಂಗಾಧರ ತೆಕ್ಕೆಮೂಲೆ, ಕೋಶಾಧಿಕಾರಿ ಶ್ರೀಕಾಂತ್ ಕೆ.ಎಸ್., ಪುರುಷೋತ್ತಮ ಭಟ್ ಕೆ. ಮತ್ತಿತರರು ಉಪಸ್ಥಿತರಿರುವರು.

ರಂಬೂಟಾನ್ ಕೊಯ್ಯುವಾಗ ಬಿದ್ದು ಗಾಯ

• **ಸುಬ್ರಹ್ಮಣ್ಯ:** ಹರಿಹರ ಪಲ್ಲತ್ತಡ್ಕದ ಯುವಕನೋರ್ವ ರಂಬೂಟಾನ್ ಕೊಯ್ಯುವಾಗ ಬಿದ್ದು ಗಾಯಗೊಂಡ ಘಟನೆ ನಡೆದಿದೆ. ಹರಿಹರ ಪಲ್ಲತ್ತಡ್ಕದ ಕಲ್ಲೆಮಠ ಬಳಿಯ ಮನೆ ಯೊಂದರಲ್ಲಿ ವಿನಯ್ ಎಂಬುವರು ರಂಬೂಟಾನ್ ಕೊಯ್ಯುತ್ತಿದ್ದಾಗ ಆಯ ತಪ್ಪಿ ಬಿದ್ದು ಗಾಯಗೊಂಡ ಘಟನೆ ನಡೆದಿದೆ. ಬಳಿಕ ಸುಳ್ಯದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿರುವುದಾಗಿ ತಿಳಿದು ಬಂದಿದೆ.



ಬಕ್ರೀದ್ ಹಬ್ಬ ಮೇ 28ರಂದು ನಡೆಯಲಿರುವ ಹಿನ್ನಲೆಯಲ್ಲಿ ಸುಳ್ಯ ಮತ್ತು ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆಯನ್ನು ಆಯೋಜಿಸಿ ಶಾಂತಿ ಕಾಪಾಡುವಂತೆ ಪೊಲೀಸ್ ಅಧಿಕಾರಿಗಳು ಪ್ರಮುಖರಿಗೆ ಸೂಚಿಸಿದರು. ಸುಳ್ಯ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಬಿ.ಪಿ. ಸಂತೋಷ್ ಹಾಗೂ ಬೆಳ್ಳಾರೆ ಪೊಲೀಸ್ ಠಾಣಾ ಉಪನಿರೀಕ್ಷಕ ಈರಯ್ಯ ದೂಂತೂರು ನೇತೃತ್ವದಲ್ಲಿ ಪ್ರತ್ಯೇಕವಾಗಿ ಎರಡು ಠಾಣೆಗಳಲ್ಲಿ ಶಾಂತಿ ಸಭೆ ನಡೆಯಿತು.

ಮಡಿಕೇರಿಯಲ್ಲಿ ಬಿಜೆಪಿ ಯುವಮೋರ್ಚಾ ಆಗ್ರಹ
ಅಕ್ರಮ ಕಟ್ಟಡವನ್ನು ಆಸ್ಪತ್ರೆಯನ್ನಾಗಿಸಿ

• **ಮಡಿಕೇರಿ:** ಸುಂಟಿಕೊಪ್ಪ ಸಮೀಪದ ಹೇರೂರು ಗ್ರಾಮದಲ್ಲಿ ಆದಿವಾಸಿಗಳು ವಾಸವಿರುವ ಪ್ರದೇಶದಲ್ಲಿ ಚರ್ಚ್ ನಡೆಸಲೆಂದು ಅಕ್ರಮವಾಗಿ ನಿರ್ಮಿಸಿರುವ ಕಟ್ಟಡವನ್ನು ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕೆಂದು ಬಿಜೆಪಿ ಯುವ ಮೋರ್ಚಾ ಮುಖಂಡ ಹಾಗೂ ಗ್ರಾಮಸ್ಥ ಚಂದ್ರಶೇಖರ್ ಹೇರೂರು ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಾರೋಗ್ಯಪೀಡಿತರಾಗುವ ಆದಿವಾಸಿಗಳನ್ನು ಗುಣ ಮುಖರನ್ನಾಗಿ ಮಾಡುವ ನೆಪದಲ್ಲಿ ಮನಪರಿವರ್ತಿಸಿ ಮತಾಂತರ ಮಾಡಲಾಗುತ್ತಿದೆ. ಅದಕ್ಕಾಗಿ ಅಕ್ರಮವಾಗಿ ಕಟ್ಟಡವನ್ನೂ ನಿರ್ಮಿಸಲಾಗಿದೆ. ಈ ಕಟ್ಟಡವನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ಪಡೆದು, ಸರಕಾರಿ ಕಾರ್ಯಚಟುವಟಿಕೆಗಳಿಗೆ ಬಳಸುವಂತೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿರುವುದನ್ನು ಸ್ವಾಗತಿಸುವುದಾಗಿ ನುಡಿದರು. ಆದಿವಾಸಿಗಳು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದರಿಂದ ಈ ಭಾಗದಲ್ಲಿರುವ ಹಾಡಿ ಜನರಿಗೆ ಆರೋಗ್ಯ ಸೇವೆಯನ್ನು ಕಲ್ಪಿಸಲು ಆಸ್ಪತ್ರೆಯನ್ನು ಆರಂಭಿಸಬೇಕು ಎಂದು ಮನವಿ ಮಾಡಿದ ಅವರು, ಹೇರೂರು ಹಾಡಿಯಲ್ಲಿ 300ಕ್ಕೂ ಹೆಚ್ಚು ಆದಿವಾಸಿಗಳು ನೆಲೆಸಿದ್ದಾರೆ. ಇಲ್ಲಿಗೆ ನಾಕೂರು ಶಿರಂಗಾಲ ಗ್ರಾ.ಪಂ.ನಿಂದ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೌಲಭ್ಯ, ಶೌಚಾಲಯಗಳನ್ನು ಒದಗಿಸಲಾಗಿದೆ. ಇವರುಗಳು ವಾಸಿಸುತ್ತಿರುವ ಪ್ರದೇಶ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ್ದಾಗಿದೆ. ಮುಗ್ಧ ಆದಿವಾಸಿಗಳಿಗೆ ಹಣಕಾಸಿನ ನೆರವನ್ನು ನೀಡುವ ಆಮಿಷಗಳನ್ನೊಡ್ಡಿ ಮತಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಈಗಾಗಲೇ ಅಲ್ಲಿರುವ ಬಹುತೇಕರು ಕ್ರಿಶ್ಚಿಯನ್ ಮತಕ್ಕೆ ಮತಾಂತರವಾಗಿದ್ದು, ಹೀಗಿದ್ದೂ ಅವರು ಪರಿಶಿಷ್ಟ ಪಂಗಡದ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು. ನಾಕೂರು ಶಿರಂಗಾಲ ಗ್ರಾ.ಪಂ. ಮಾಜಿ ಅಧ್ಯಕ್ಷ ಜಗನ್ನಾಥ ಎಂ.ಸಿ., ಹೇರೂರು ಗ್ರಾಮದ ಅಧ್ಯಕ್ಷ ಬಿ.ಎಸ್.ವಸಂತ, ಗ್ರಾಮಸ್ಥರಾದ ಕೆ.ಎಸ್.ರಮೇಶ್, ಚರಣ್ ತೆಕ್ಕಡೆ ಹಾಗೂ ಗಗನ್ ಉಪಸ್ಥಿತರಿದ್ದರು.

ಕಡಬ: ಹೆಗ್ಗಳಿಕೆಗೆ ಪಾತ್ರವಾಗಿದ್ದ ತ್ಯಾಜ್ಯ ಘಟಕಗಳ ಪರಿಸ್ಥಿತಿ ಅಧೋಗತಿ | ಅವ್ಯವಸ್ಥೆಯ ಆಗರ
ಕೆಲಸ ಸ್ಥಗಿತಗೊಳಿಸಿದ ದ್ರವತ್ಯಾಜ್ಯ ಘಟಕ

▸ ತುಳಸಿ ಕಡಬ

ದಿಗಂತ ವಿಶೇಷ

• **ಕಡಬ:** ಕಳೆದ ಕೆಲವು ವರ್ಷಗಳ ಹಿಂದೆ ಗ್ರಾಮ ಪಂಚಾಯತ್ ವ್ಯವಸ್ಥೆಯಡಿ ಇದ್ದಾಗ ಹೆಗ್ಗಳಿಕೆಗೆ ಕಾರಣವಾಗಿದ್ದ ಕಡಬದ ತ್ಯಾಜ್ಯ ವಿಲೇವಾರಿ ಘಟಕಗಳು ಇಂದು ಪಟ್ಟಣ ಪಂಚಾಯತ್ ವ್ಯಾಪ್ತಿಗೆ ಬಂದ ಬಳಿಕ ಅವ್ಯವಸ್ಥೆಯ ಆಗರವಾಗಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿರುವುದು ವಿಪರ್ಯಾಸವೇ ಸರಿ.

ಕೋಡಿಂಬಾಳ ಗ್ರಾಮದ ಕಕ್ಕೆತ್ತಿಮಾರ್‌ನಲ್ಲಿರುವ ಘನತ್ಯಾಜ್ಯ ಘಟಕ ನಿರ್ವಹಣೆಯಿಲ್ಲದೆ ಕೊರಗುತ್ತಿದೆ. ನಡೆದ ಕಾಮಗಾರಿಗಳು ಕಳಪೆಯಾಗಿವೆ ಎನ್ನುವ ಆರೋಪವೂ ಇದೆ. ಅಲ್ಲಿ ಲೋಡುಗಟ್ಟಲೆ ತ್ಯಾಜ್ಯ ರಾಶಿ ಬಿದ್ದು ಪರಿಸರದಲ್ಲಿ ದುರ್ವಾಸನೆ ಬೀರುತ್ತಿದೆ. ಕಡಬ ಪೇಟೆಯ ಅಂಗಡಿಮನೆ ಕಾಲನಿಯ ಪಕ್ಕದಲ್ಲಿರುವ ದ್ರವತ್ಯಾಜ್ಯ ನಿರ್ವಹಣಾ ಘಟಕ ಕೆಲಸ ನಿಲ್ಲಿಸಿ ವರ್ಷಗಳೇ ಕಳೆದಿವೆ. ಕಳೆದ ಕೆಲವು ದಿನಗಳ ಹಿಂದೆ ತ್ಯಾಜ್ಯ ಘಟಕದ ಅವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಸ್ಥಳೀಯ ಜನರು ಪಟ್ಟಣ ಪಂಚಾಯತ್ ಸದಸ್ಯೆ ಅಕ್ಷತಾ ಬಾಲಕೃಷ್ಣ ಅವರ ನೇತೃತ್ವದಲ್ಲಿ ತ್ಯಾಜ್ಯ ಸಾಗಾಟ ವಾಹನವನ್ನು ತಡೆದು ಪ್ರತಿಭಟಿಸಿದ್ದರು. ಬಳಿಕ ಅವರು ಪಟ್ಟಣ ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿದ ವೇಳೆ ಅಧ್ಯಕ್ಷೆ ತಮನ್ನಾ ಝುಬೀನ್ ಅವರು ತಿಂಗಳೊಳಗೆ ತ್ಯಾಜ್ಯ ತೆರವು ಮಾಡಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ತ್ಯಾಜ್ಯ ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ.





ಮಾದರಿಯಾಗಿದ್ದ ಘಟಕಗಳು

ಕಡಬ ಗ್ರಾಮ ಪಂಚಾಯತ್ ಕಾಲದಲ್ಲಿ ಕಕ್ಕೆತ್ತಿಮಾರ್‌ನಲ್ಲಿ 2.80 ಎಕ್ರೆ ಜಾಗದಲ್ಲಿ ಸುಮಾರು ರೂ.1 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಘನ ತ್ಯಾಜ್ಯ ಘಟಕ ಒಂದು ಕಾಲದಲ್ಲಿ ಉತ್ತಮ ನಿರ್ವಹಣೆಯೊಂದಿಗೆ, ಹಸಿ, ಒಣ ಕಸಗಳನ್ನು ಬೇರ್ಪಡಿಸಿ ತ್ಯಾಜ್ಯಗಳಿಂದ ವ್ಯವಸ್ಥಿತವಾಗಿ ಗೊಬ್ಬರ ತಯಾರಿಸಿ ಮಾರಾಟ ಮಾಡಿ ಪಂಚಾಯತ್‌ಗೆ ವರಮಾನ ಸಿಗುವಂತಾಗಿತ್ತು. ಸ್ವಚ್ಛತೆಯ ವಿಚಾರದಲ್ಲಿ ಪ್ರಶಸ್ತಿಗೂ ಭಾಜನವಾಗಿತ್ತು. ಬಳಿಕದ ದಿನಗಳಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ನೆರವಿನಿಂದ ದ್ರವ ತ್ಯಾಜ್ಯ ಘಟಕವನ್ನು ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಅನುಷ್ಠಾನ ಮಾಡಿದ ಹೆಗ್ಗಳಿಕೆಗೂ ಪಂಚಾಯತ್ ಪಾತ್ರವಾಗಿತ್ತು.

ಸ್ವಚ್ಛತೆಯ ರಾಯಭಾರಿ

ಅಂದು ಪಂಚಾಯತ್ ಅಧ್ಯಕ್ಷೆಯಾಗಿದ್ದ ಈಗಿನ ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ನೀಲಾವತಿ ಶಿವರಾಮ್ ಅವರು ಸ್ವಚ್ಛತೆಯ ರಾಯಭಾರಿ ಮಹಿಳಾ ಅಧ್ಯಕ್ಷೆ ಎನ್ನುವ ಮನ್ನಣೆಗೆ ಪಾತ್ರರಾಗಿದ್ದರು. ಘಟಕಗಳನ್ನು ವೀಕ್ಷಣೆ ಮಾಡಲು ಜಿಲ್ಲೆ, ರಾಜ್ಯ ಮಾತ್ರವಲ್ಲದೇ ಹೊರ ರಾಜ್ಯಗಳಿಂದಲೂ ಗ್ರಾ.ಪಂ. ಪ್ರತಿನಿಧಿಗಳು ಭೇಟಿ ನೀಡುವಷ್ಟರ ಮಟ್ಟಿಗೆ ಇಲ್ಲಿನ ಘಟಕಗಳು ಮಾದರಿ ಎನ್ನುವ ಹೆಸರು ಪಡೆದಿತ್ತು. ಬರಬರುತ್ತಾ ದ್ರವ ತ್ಯಾಜ್ಯ ಘಟಕ ನಿರ್ವಹಣೆಯಿಲ್ಲದೆ ಮೂಲೆಗುಂಪಾದರೆ, ಘನ ತ್ಯಾಜ್ಯ ಘಟಕ ದುಸ್ಥಿತಿಗೆ ಬಂದು ನಿಂತಿದೆ. ಘಟಕಕ್ಕೆ ಖರೀದಿಸಲಾಗಿರುವ ವಾಹನಗಳು ಹಾಗೂ ಸಲಕರಣೆಗಳು ಕೂಡ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಕೆಲವು ಸಲಕರಣೆಗಳು ತ್ಯಾಜ್ಯದಡಿ ಬಿದ್ದು ಮರೆಯಾಗಿವೆ. ಸ್ವಚ್ಛತಾ ಸಿಬ್ಬಂದಿಗಳು ಹಾಗೂ ಚಾಲಕರ ನೇಮಕಕ್ಕೆ ಹೊಸದಾಗಿ ಜನಪ್ರತಿನಿಧಿಗಳ ಆಡಳಿತ ಮಂಡಳಿ ಆಡಳಿತ ಬಂದರೂ ಸಾಧ್ಯವಾಗಿಲ್ಲ.

ಅಧಿಕಾರಿಗಳ ನಿರ್ಲಕ್ಷ್ಯ

ಗ್ರಾ.ಪಂ. ವ್ಯವಸ್ಥೆಯಿಂದ ಪಟ್ಟಣ ಪಂಚಾಯತ್ ವ್ಯವಸ್ಥೆಗೆ ಬಂದ ಬಳಿಕ ಸುಮಾರು 5 ವರ್ಷಗಳ ಕಾಲ ಜನಪ್ರತಿನಿಧಿಗಳಿಲ್ಲದೇ ಅಧಿಕಾರಿಗಳ ಪಾರುಪತ್ಯದ ಕಾಲದಲ್ಲಿ ತ್ಯಾಜ್ಯ ಘಟಕಗಳು ನಿರ್ಲಕ್ಷ್ಯಕ್ಕೊಳಗಾಗಿ ಇಂದು ಈ ಅವ್ಯವಸ್ಥೆಗೆ ಕಾರಣವಾಗಿದೆ. ನಮ್ಮ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದು ಕೇವಲ 8 ತಿಂಗಳಷ್ಟೇ ಆಗಿದೆ. ತ್ಯಾಜ್ಯ ಘಟಕದ ಸಮಸ್ಯೆ ಬಗೆಹರಿಸುವ ಹೊಣೆ ನಮ್ಮ ಮೇಲೆ ಬಂದಿದೆ

■ **ಕೆ.ಎಂ. ಹನೀಫ್,** ಅಧ್ಯಕ್ಷ, ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿ

ತೆರವು ಕಾರ್ಯ ಆರಂಭ

ಪೌರ ಕಾರ್ಮಿಕರ ಕೊರತೆಯಿಂದಾಗಿ ಘನ ತ್ಯಾಜ್ಯ ಘಟಕದಲ್ಲಿ ಅವ್ಯವಸ್ಥೆ ಆಗಿದೆ. 13 ಮಂದಿ ಬೇಕಾದಲ್ಲಿ ಕೇವಲ 3 ಮಂದಿ ಕಾರ್ಮಿಕರು ಮಾತ್ರ ಇದ್ದಾರೆ. ಕಾರ್ಮಿಕರ ನೇಮಕಾತಿಗೆ ಅನುಮತಿ ಕೂಡಾ ದೊರೆಯುತ್ತಿಲ್ಲ. ಅದೆತದೆಗಳ ನಡುವೆಯೂ ಘಟಕದಲ್ಲಿ ರಾಶಿ ಬಿದ್ದಿರುವ ಕಸದ ರಾಶಿಯನ್ನು ತೆರವು ಮಾಡುವ ಕಾರ್ಯ ಭರದಿಂದ ಸಾಗುತ್ತಿದೆ. ಎಲ್ಲಾ ತ್ಯಾಜ್ಯವನ್ನು ತೆರವು ಮಾಡಿ ಘಟಕದ ವ್ಯವಸ್ಥಿತ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

■ **ಲೀಲಾವತಿ ಇ.,** ಮುಖ್ಯಾಧಿಕಾರಿ ಕಡಬ ಪಟ್ಟಣ ಪಂಚಾಯತ್

ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಮಂಗಳೂರು ಲೀಜನ್
ಬೃಹತ್ ಜಲಧಾರಾ ಯೋಜನೆ ಲೋಕಾರ್ಪಣೆ



• **ಮಂಗಳೂರು:** ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಮಂಗಳೂರು ಲೀಜನ್ ವತಿಯಿಂದ ಎಫ್‌ಟಿಆರ್ ಕಂಪೆನಿ ಸಹಯೋಗದೊಂದಿಗೆ ಶುದ್ಧೀಕರಿಸಿದ ಕುಡಿಯುವ ನೀರಿನ ಘಟಕ ಬೃಹತ್ ಜಲಧಾರಾ ಯೋಜನೆ ನಂತೂರು ಸಮೀಪದ ಪದುವ ಆಟೋರಿಕ್ಷಾ ಸ್ಟ್ಯಾಂಡ್‌ನ ಬಳಿ ಉದ್ಘಾಟನೆಗೊಂಡಿತು.

ಸ್ಥಳೀಯ ನಿಕಟಪೂರ್ವ ಕಾರ್ಪೊರೇಟರ್ ಶಕೀಲಾ ಕಾವ ಮತ್ತು ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಪೂರ್ವ ಅಂತಾರಾಷ್ಟ್ರೀಯ ಅಧ್ಯಕ್ಷ ಹಾಗೂ ಎಸ್‌ಸಿಐ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಡಾ.ಕೇದಿಗೆ ಅರವಿಂದ ರಾವ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಶಕೀಲಾ ಕಾವ, ಸುಮಾರು 1.5 ಲಕ್ಷ ರೂ. ವೆಚ್ಚದ 500 ಲೀಟರ್ ಸಾಮರ್ಥ್ಯದ ಈ ಶಾಶ್ವತ ಮತ್ತು ಸುಸ್ಥಿರ ಮೆಗಾ ಜಲಧಾರಾ ಯೋಜನೆ ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಮಂಗಳೂರಿನ ಪ್ರಮುಖ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮವಾಗಿದೆ ಎಂದು ಶ್ಲಾಘಿಸಿದರು.

ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಮಂಗಳೂರಿನ ಅಧ್ಯಕ್ಷ ಹರೀಶ ಎ. ಅಧ್ಯಕ್ಷತೆ ವಹಿಸಿದ್ದರು. ಎಫ್‌ಟಿಆರ್ ಕಂಪನಿಯ ಮುಖ್ಯಸ್ಥ ಮುರಳೀಧರ್, ಸ್ಥಳೀಯ ಹಿರಿಯರಾದ ಶಿವಪ್ಪ ನಂತೂರ್, ಆಟೋರಿಕ್ಷಾ ಸಂಘದ ಅಧ್ಯಕ್ಷ ಜಯಕುಮಾರ್ ಮತ್ತು ಸದಸ್ಯರು, ಎಸ್‌ಸಿಐ ಸದಸ್ಯರು ಉಪಸ್ಥಿತರಿದ್ದರು.

ಎಸ್‌ಸಿಐ ಮಂಗಳೂರು ಘಟಕದ ಕಾರ್ಯದರ್ಶಿ ಸುಭಾಷ್ ರೈ ವಂದಿಸಿದರು.

'ಬಾಲವಿಕಾಸ ಶಿಬಿರ' ಸಮಾರೋಪ | ಸನ್ಮಾನ ಕಾರ್ಯಕ್ರಮ
ಶಿಬಿರದಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ವೃದ್ಧಿ

• **ಕಿನ್ನಿಗೋಳಿ:** ಪುನರೂರು ಪ್ರತಿಷ್ಠಾನದ ಆಶ್ರಯದಲ್ಲಿ ಹಾಗೂ ಜನವಿಕಾಸ ಸಮಿತಿ ಮೂಲ್ಕಿಯ ಸಹಕಾರದಲ್ಲಿ ಮಕ್ಕಳ ಬೌದ್ಧಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಾಗಿ ಆಯೋಜಿಸಿರುವ ಉಚಿತ ಬೇಸಿಗೆ ಶಿಬಿರ 'ಬಾಲವಿಕಾಸ ಶಿಬಿರ-2026' ರ ಸಮಾರೋಪ ಸಮಾರಂಭವು ಪುನರೂರು ಶ್ರೀ ವಿಶ್ವನಾಥ ದೇವಳದಲ್ಲಿ ಜರುಗಿತು.



ಫಾದರ್ ಮುಲ್ಲರ್ ಸೇವಾ ಸಂಸ್ಥೆ ಕಂಕನಾಡಿಯ ಮನೋವೈದ್ಯಕೀಯ ಆಪ್ತ ಸಮಾಲೋಚಕರಾದ ಕೆ.ಎಸ್. ತ್ರಿಪತಿ ಭಟ್ ಶಿಮಂತೂರು ಅವರು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ಮಕ್ಕಳಲ್ಲಿ ಬಾಲ್ಯದಲ್ಲಿಯೇ ಉತ್ತಮ ಸಂಸ್ಕಾರ, ಆತ್ಮವಿಶ್ವಾಸ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವ ಪುನರೂರು ಪ್ರತಿಷ್ಠಾನ ಆಯೋಜಿಸಿರುವ ಬಾಲವಿಕಾಸ ಶಿಬಿರವು ಸಮಾಜಕ್ಕೆ ಆದರ್ಶವಾಗಿದೆ ಎಂದು ಅಭಿಪ್ರಾಯಪಟ್ಟರು. ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಪೋಷಕರ ಹಾಗೂ ಸಮಾಜದ ಪಾತ್ರ ಮಹತ್ವದ್ದೆಂದರು.

ಪುನರೂರು ಪ್ರತಿಷ್ಠಾನದ ಗೌರವ ಅಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಮಾತನಾಡಿ, ಕಳೆದ 10 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಬಾಲವಿಕಾಸ ಶಿಬಿರವು ಮಕ್ಕಳ ಪ್ರತಿಭೆ ಅನಾವರಣಗೊಳಿಸುವ ವೇದಿಕೆಯಾಗಿದ್ದು, ಸಂಸ್ಕಾರಯುತ ಸಮಾಜ ನಿರ್ಮಾಣಕ್ಕೆ ಇಂತಹ ಶಿಬಿರಗಳು ಅಗತ್ಯವೆಂದರು. ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಕಲ್ಪ ವ್ಯಕ್ತಪಡಿಸಿದರು.

ಶಿಬಿರಾರ್ಥಿಗಳಿಗೆ ಯೋಗ ತರಬೇತಿ ನೀಡಿದ ಖ್ಯಾತ ಯೋಗಗುರು ಜಯಮುದ್ದು ಶೆಟ್ಟಿ ಕೆಂಚನಕೆರೆ ಹಾಗೂ ನಾರಾಯಣ ಕುಬೆವೂರು, ಶ್ಲೋಕ ಕಂಠಪಾಠ ಮಾಡಿಸಿದ ಶ್ರೀ ಶಾರದಾ ಸೆಂಟ್ರಲ್ ಸ್ಕೂಲ್‌ನ ಪ್ರಾಂಶುಪಾಲ ಜಿತೇಂದ್ರ ವಿ.ರಾವ್ ಹೆಜಮಾಡಿ, ಅಭಿನಯ ತರಬೇತಿ ನೀಡಿದ ಖ್ಯಾತ ರಂಗನಟ ಹಾಗೂ ನಿರ್ದೇಶಕ ತಾರನಾಥ್ ಉರ್ವ, ಆವೆ ಮಣ್ಣಿನ ಕಲಾಕೃತಿ ಹಾಗೂ ಕರಕುಶಲ ತರಬೇತಿ ನೀಡಿದ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೆಂಕಿ ಪಲಿಮಾರು ಹಾಗೂ ಭಜನಾ ತರಬೇತಿ ನೀಡಿದ ಖ್ಯಾತ ಗಾಯಕ ಸುರೇಶ್ ಆಚಾರ್ಯ ಹಳೆಯಂಗಡಿ ಅವರನ್ನು ಸನ್ಮಾನಿಸಲಾಯಿತು.

ಪುನರೂರಿನ ಶ್ರೀ ವಿಶ್ವನಾಥ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಪಟೇಲ್ ವಾಸುದೇವರಾವ್, ಮೂಲ್ಕಿ ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಶಾಖಾ ಪ್ರಬಂಧಕರಾದ ಅಖಿಲ್ ಕುಮಾರ್ ಆಳ್ವ, ಪುನರೂರು ಪ್ರತಿಷ್ಠಾನದ ಗೌರವ ಅಧ್ಯಕ್ಷೆ ಎಚ್.ಕೆ. ಉಷಾರಾಣಿ, ಕೋಶಾಧಿಕಾರಿ ಚಂದ್ರಿಕಾ ಸುಧೀರ್, ಜನವಿಕಾಸ ಸಮಿತಿ ಮೂಲ್ಕಿಯ ಅಧ್ಯಕ್ಷ ಸುರೇಶ್ ರಾವ್ ಟಿ.ಎಸ್. ಹಾಗೂ ಪದಾಧಿಕಾರಿಗಳಾದ ಗೀತಾ ಶೆಟ್ಟಿ ಮತ್ತು ಶೋಭಾ ರಾವ್ ಉಪಸ್ಥಿತರಿದ್ದರು.

ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು ಸ್ವಾಗತಿಸಿದರು. ಪ್ರಾಣೇಶ್ ಭಟ್ ದೇಂದಡ್ಕ ವಂದಿಸಿದರು. ಹಿತಾ ಉಮೇಶ್ ನಿರೂಪಿಸಿದರು.

ಕೊಡಗಿನ ದೇವರಪುರ ಗ್ರಾಮದ ಅಯ್ಯಪ್ಪ ಭದ್ರಕಾಳಿ ದೇವಸ್ಥಾನದಲ್ಲಿ ಬೇಡು ಹಬ್ಬ | ಪೊಲೀಸ್ ಇಲಾಖೆ ಖಡಕ್ ಎಚ್ಚರಿಕೆ
ಅಸಭ್ಯ ವರ್ತನೆ ತೋರಿದರೆ ನಿರ್ದಾಕ್ಷಿಣ್ಯ ಕಾನೂನು ಕ್ರಮ

• **ಮಡಿಕೇರಿ:** ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ದೇವರಪುರ ಗ್ರಾಮದಲ್ಲಿನ ಅಯ್ಯಪ್ಪ ಭದ್ರಕಾಳಿ ದೇವಸ್ಥಾನದಲ್ಲಿ ಮೇ 28ರಂದು ಆಚರಿಸುವ ಬೇಡು ಹಬ್ಬದಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳು ಹಾಗೂ ವೇಷಧಾರಿಗಳು ಅಸಭ್ಯವಾಗಿ ವರ್ತಿಸದಂತೆ ಜಿಲ್ಲಾ ಪೊಲೀಸ್ ಇಲಾಖೆ ಕಟ್ಟಪ್ಪಣೆ ವಿಧಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು, ಹಬ್ಬದಲ್ಲಿ ಜಿಲ್ಲೆಯ ವಿವಿಧ ಸ್ಥಳಗಳಿಂದ ಹಾಗೂ ನೆರೆಯ ಜಿಲ್ಲೆಗಳಿಂದ ಭಕ್ತಾದಿಗಳು ಬಂದು ದೇವಸ್ಥಾನದಲ್ಲಿ ಹರಕೆ ತೀರಿಸುವ ಆಚರಣೆಯಿದ್ದು, ಕೆಲವು ಭಕ್ತಾದಿಗಳು/ವೇಷಧಾರಿಗಳು ಮದ್ಯ ಸೇವನೆ ಮಾಡಿ ಅಂಗಡಿ ಮಳಿಗೆಗಳಿಗೆ ತೆರಳಿ ಒತ್ತಾಯವಾಗಿ ಹಣವನ್ನು ನೀಡುವಂತೆ ಪೀಡಿಸುವುದು, ವಿವಿಧ ವೈಯಕ್ತಿಕ ಕೆಲಸ-ಕಾರ್ಯಗಳಿಗಾಗಿ ನಗರಕ್ಕೆ ಭೇಟಿ ನೀಡಿರುವ ಸಾರ್ವಜನಿಕರು/ವಾಹನಗಳನ್ನು ಅಡ್ಡಗಟ್ಟುವುದು ಹಾಗೂ ವಿಶೇಷವಾಗಿ ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸಿ ಕೆಟ್ಟ ಪದಗಳಿಂದ ಬೈಯುತ್ತಾ ತೊಂದರೆ ನೀಡುವುದು ಬೆಳೆದು ಬಂದಿದೆ.

ಆದ್ದರಿಂದ ಬೇಡು ಹಬ್ಬದ ಭಕ್ತಾದಿಗಳು/ವೇಷಧಾರಿಗಳು ಈ ಬಾರಿ ಇಲಾಖೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತಪ್ಪಿದಲ್ಲಿ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಫೈಲ್ ಚಿತ್ರ



- ವೇಷಧಾರಿ ಭಕ್ತಾದಿಗಳು ಸಾರ್ವಜನಿಕರನ್ನು/ ವಾಹನಗಳನ್ನು ಬಲವಂತವಾಗಿ ಅಡ್ಡಗಟ್ಟಿ ಹಣವನ್ನು ನೀಡುವಂತೆ ಒತ್ತಾಯಿಸುವುದು, ಅಂಗಡಿಗಳಿಗೆ ತೆರಳಿ ಬಲವಂತವಾಗಿ ಹಣವನ್ನು ನೀಡುವಂತೆ ಒತ್ತಾಯಿಸುವುದನ್ನು ನಿಷೇಧಿಸಲಾಗಿದೆ.
- ವೇಷಧಾರಿ ಭಕ್ತಾದಿಗಳು ಮಹಿಳೆಯರು ಮತ್ತು ಮಕ್ಕಳೊಂದಿಗೆ ಸೌಜನ್ಯದಿಂದ ವರ್ತಿಸಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಮದ್ಯಪಾನ ಮಾಡಿ ಅಸಭ್ಯವಾಗಿ ವರ್ತಿಸಿ ಅವಾಚ್ಯ ಪದಗಳಿಂದ ಬೈಯುತ್ತಾ ಸಾರ್ವಜನಿಕರಿಗೆ ತೊಂದರೆ ನೀಡುವುದನ್ನು ನಿಷೇಧಿಸಲಾಗಿದೆ.
- ಅಯ್ಯಪ್ಪ ದೇವಸ್ಥಾನದ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಭಾರೀ ವಾಹನಗಳ ನಿಲುಗಡೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಅಲ್ಲದೆ ದೇಹದ ಮೇಲೆ ಎಣ್ಣೆಯನ್ನು ಸುರಿದುಕೊಂಡು ದೊಣ್ಣೆ ಮತ್ತು ಇತರ ಮಾರಕಾಯುಧಗಳನ್ನು ಹಿಡಿದುಕೊಂಡು ದೇವಸ್ಥಾನದ ಒಳಗೆ ಹಾಗೂ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಸಂಚರಿಸುವುದನ್ನು, ದೇವಸ್ಥಾನದ ಆವರಣದಲ್ಲಿ ಸಜೀವ ಕೋಳಿಗಳನ್ನು ಎಸೆಯುವುದನ್ನು ಹಾಗೂ ಪ್ರಾಣಿ ಹಿಂಸೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಬಿಂದುಮಣಿ ವಿವರಿಸಿದ್ದಾರೆ.
- ಇಲಾಖೆಯ ಈ ಸೂಚನೆಗಳನ್ನು ಬೇಡು ಹಬ್ಬ ಆಚರಣೆಗಾಗಿ ಆಗಮಿಸಿರುವ ಭಕ್ತಾದಿಗಳು/ ವೇಷಧಾರಿಗಳು ಉಲ್ಲಂಘಿಸಿದಲ್ಲಿ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಕಾಸರಗೋಡು: ಕಾಸರಗೋಡಿನ ಎಲ್‌ಬಿಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಟೆಕ್ ಎನ್‌ಆರ್‌ಐ ಸೀಟುಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 1ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9447375156 ಕರೆ ಮಾಡಬಹುದು.

ನಿಧನ ಸುದ್ದಿ

ಚಂದ್ರಶೇಖರ ಭಂಡಾರಿ



ಕುಂಬಳೆ: ಕಂಚಿಕಟ್ಟೆ ನಿವಾಸಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತ, ಬಿಎಂಎಸ್ ಸದಸ್ಯ, ಕಾಸರಗೋಡು ಹೊಸ ಬಸ್ ನಿಲ್ದಾಣದಲ್ಲಿ ಬಸ್‌ಗಳ ಟೈಂ ಕೀಪರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಚಂದ್ರಶೇಖರ ಭಂಡಾರಿ (63) ಹೃದಯಾಘಾತದಿಂದ ನಿಧನ ಹೊಂದಿದರು. ಸೋಮವಾರ ರಾತ್ರಿ ಊಟ ಮಾಡಿ ಮಲಗಿದ್ದ ಅವರು ಮಂಗಳವಾರ ಮುಂಜಾನೆ ನೋಡಿದಾಗ ನಿಶ್ಚಲವಾಗಿರುವುದು ಕಂಡುಬಂದಿದೆ. ಕೂಡಲೇ ಅವರನ್ನು ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಗೆ ತಲುಪಿಸಲಾಯಿತ್ತಾದರೂ ಅಲ್ಲಿ ವೈದ್ಯರು ನಡೆಸಿದ ತಪಾಸಣೆಯಲ್ಲಿ ಅಸುನೀಗಿರುವುದು ತಿಳಿದು ಬಂದಿದೆ. ಈ ಹಿಂದೆ ಬಸ್ ನಿರ್ವಾಹಕರಾಗಿ ಕೆಲಸ ನಿರ್ವಹಿಸುತ್ತಿದ್ದ ಚಂದ್ರಶೇಖರ ಭಂಡಾರಿ ಅವರು ಆರ್ ಎಸ್‌ಎಸ್ ಮತ್ತು ಬಿಎಂಎಸ್‌ನಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ ಮೀನಾಕ್ಷಿ, ಮಕ್ಕಳಾದ ನಿಶಾ, ನಿತೇಶ್ ಅವರನ್ನು ಅಗಲಿದ್ದಾರೆ.

ಟಿ.ವಿ.ಬಾಲಕೃಷ್ಣನ್



ಕಾಸರಗೋಡು: ಮಧೂರು ಸಮೀಪದ ವಿರಿಕ್ಕಳ ನಿವಾಸಿ ಟಿ.ವಿ.ಬಾಲಕೃಷ್ಣನ್ (62) ಅಲ್ಪಕಾಲದ ಅನಾರೋಗ್ಯದಿಂದಾಗಿ ಮಂಗಳವಾರ ನಿಧನ ಹೊಂದಿದರು. ಮೃತರು ಪತ್ನಿ ರಮಾದೇವಿ, ಮಕ್ಕಳಾದ ಧನಂಜಯ ಮಧೂರು (ಯುವಮೋರ್ಚಾ ಜಿಲ್ಲಾ ಮಾಜಿ ಅಧ್ಯಕ್ಷ), ಮಹೇಶ್ ಅವರನ್ನು ಅಗಲಿದ್ದಾರೆ.

ಲಕ್ಷ್ಮೀ ದೇವಧರ್



ಬೆಳ್ತಂಗಡಿ: ನಿಡ್ಲೆ ಮುಳಂಪಾಯ ಮನೆಯ ದಿ.ಗಣಪತಿ ಭಟ್ ದೇವಧರ್ ರವರ ಪತ್ನಿ ಲಕ್ಷ್ಮಿ ದೇವಧರ್ (82) ಮೇ 26 ರಂದು ಬೆಳಿಗ್ಗೆ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಮೃತರು ಮೂವರು ಗಂಡು, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ವಿದ್ಯಾ ಗೋಖಲೆ



ಬೆಳ್ತಂಗಡಿ: ಶಿಶಿಲ ಗ್ರಾಮದ ವೇರಿಕೆ ನಿವಾಸಿ, ವಿಷ್ಣು ಗೋಖಲೆಯವರ ಪತ್ನಿ ವಿದ್ಯಾ ಗೋಖಲೆ (70) ಮೇ 24 ರಂದು ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪುತ್ರ ಬೆಂಗಳೂರಿನ ಲೆಕ್ಕಪರಿಶೋಧಕ ಶಶಾಂಕ ಗೋಖಲೆ ಹಾಗೂ ಪುತ್ರಿ ಮೂಡುಬಿದರೆಯ ವೈದ್ಯೆ ಡಾ. ವೃಂದಾ ಬೇಡೇಕರ್ ಅವರನ್ನು ಅಗಲಿದ್ದಾರೆ.

ಮೋಹಿನಿ



ಮಂಜೇಶ್ವರ: ಪೈವಳಿಕೆ ಚಿಪ್ಪಾರು ತಜಿವ ನಿವಾಸಿ ಅಣ್ಣು ಮೂಲ್ಯರ ಪತ್ನಿ ಮೋಹಿನಿ (53) ನಿಧನರಾದರು. ಅವರು ಅಸೌಖ್ಯಾಧಿಸಿ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತಿ, ಮಕ್ಕಳಾದ ಆದರ್ಶ್, ಅಖಿಲೇಶ್ ಅವರನ್ನು ಅಗಲಿದ್ದಾರೆ.

ಜಗನ್ನಾಥ ಎನ್.

ಕಾಸರಗೋಡು: ಮೂಲತಃ ನೆಲ್ಲಿಕುಂಜೆ ನಿವಾಸಿಯಾಗಿದ್ದ ಪ್ರಸ್ತುತ ಮಧೂರು ಚೇನೆಕ್ಕೋಡಿನಲ್ಲಿ ವಾಸವಾಗಿದ್ದ ಜಗನ್ನಾಥ ಎನ್. (85) ನಿಧನರಾದರು. ಅವರು ಮಂಗಳೂರಿನ ಕುಳಾಯಿ ಐಸ್ ಫ್ಯಾಕ್ಟರಿಯಲ್ಲಿ ದೀರ್ಘಕಾಲ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸುತ್ತಿದ್ದರು. ನೆಲ್ಲಿಕುಂಜೆ ಶ್ರೀ ಕೋಮರಾಡಿ ದೈವಸ್ಥಾನ ಸಮಿತಿಯ ಸದಸ್ಯರಾಗಿದ್ದರು. ಮೃತರು ಪತ್ನಿ ಸುಮತಿ, ಮಕ್ಕಳಾದ ವಾಣಿ ಟೀಚರ್, ವೀಣಾ ಅವರನ್ನು ಅಗಲಿದ್ದಾರೆ.

ಚಂದ್ರಾವತಿ

ಬದಿಯಡ್ಕ: ನೆಕ್ರಾಜೆ ಪೊಯ್ಯೆಕಂಡ ನಿವಾಸಿ ದಿ.ಕಣ್ಣಪ್ಪ ಆಚಾರ್ಯರ ಪತ್ನಿ ಚಂದ್ರಾವತಿ (85) ಸೋಮವಾರ ರಾತ್ರಿ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಮಕ್ಕಳಾದ ಪುರುಷೋತ್ತಮ, ಸುಬ್ರಹ್ಮಣ್ಯ, ಸುರೇಶ, ಗಣೇಶ, ದಿನೇಶ, ವೇಣುಗೋಪಾಲ, ಗಾಯತ್ರಿ ಅವರನ್ನು ಅಗಲಿದ್ದಾರೆ.

ಕೆ.ನರಸಿಂಹ ಐತಾಳ್



ಕೋಟ: ಇಲ್ಲಿನ ಸಾಲಿಗ್ರಾಮದ ಕಾರ್ಕಡ ನಿವಾಸಿ ಸಂಬಂಧ ಕೆ. ನರಸಿಂಹ ಐತಾಳ (82) ಸೋಮವಾರ ಅನಾರೋಗ್ಯದಿಂದ ನಿಧನರಾದರು. ಸಾಲಿಗ್ರಾಮದಲ್ಲಿ ವಧುವರರ ವಿವಾಹದ ನಿಮಿತ್ತ 'ಸಂಬಂಧ' ಎಂಬ ಸಂಸ್ಥೆ ಸ್ಥಾಪಿಸಿ ಪ್ರಸಿದ್ಧಿ ಹೊಂದಿದ ಅವರು ಬಡ ವರ್ಗದವರಿಗೆ ವಿವಾಹಕ್ಕೆ ಸಹಾಯಹಸ್ತ ಚಾಚಿದ್ದಾರೆ. ಕೃಷಿಕರಾಗಿ , ಕಲಾ ಪ್ರೋತ್ಸಾಹಕರಾಗಿ ಗುರುತಿಸಿಕೊಂಡಿದ್ದ ಇವರು ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಭವಾನಿಶಂಕರ್ ಬೇಕಲ್



ಕುಂದಾಪುರ: ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘದ ನಿವೃತ್ತ ವ್ಯವಸ್ಥಾಪಕ ಭವಾನಿಶಂಕರ್ (85) ಅವರು ಅಸೌಖ್ಯದಿಂದ ಮಂಗಳವಾರ ಬೆಳಿಗ್ಗೆ ಕೋಟೇಶ್ವರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಶ್ರೀರಾಮ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾಗಿ, ರಾಮ ಕ್ಷತ್ರೀಯ ಯುವಕ ಮಂಡಲ ಹಾಗೂ ರಾಮ ಕ್ಷತ್ರೀಯ ಸಮಾಜ ಸೇವಾ ಸಂಘದಲ್ಲಿಯೂ ಸೇವೆ ಸಲ್ಲಿಸಿದ್ದರು. ಮೃತರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ.

ರುಕ್ಮಿಣಿ ದೇವಾಡಿಗ



ಕುಂದಾಪುರ: ಬೀಜಾಡಿ ಗ್ರಾಮದ ದೊಡ್ಡೋಣಿ ನಿವಾಸಿ ರುಕ್ಮಿಣಿ ದೇವಾಡಿಗ (61) ನಿಧನ ಹೊಂದಿದರು. ಇವರು ನಾಲ್ವರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

ಗಣಪ ಭಂಡಾರಿ



ಕುಂದಾಪುರ: ಬೀಜಾಡಿ ಗ್ರಾಮದ ದೊಡ್ಡೋಣಿ ನಿವಾಸಿ ಗಣಪ ಭಂಡಾರಿ (75) ನಿಧನ ಹೊಂದಿದ್ದಾರೆ. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.



ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವಲಯ ಮಟ್ಟದ ಮುಖ್ಯ ಇಂಜಿನಿಯರ್ ಭೀಮಾ ನಾಯಕ್ ಹಾಗೂ ತಂಡದವರು ಹಾರಂಗಿ ಅಣೆಕಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಹಾರಂಗಿ ಅಧೀಕ್ಷಕ ಅಭಿಯಂತರ ಸತೀಶ್, ಅಭಿಯಂತರ ಐ.ಕೆ.ಪುಟ್ಟಸ್ವಾಮಿ, ಸಹಾಯಕ ಇಂಜಿನಿಯರ್‌ಗಳಾದ ಕಿರಣ್ ದೇವಯ್ಯ, ಸೌಮ್ಯ, ಸಿಬ್ಬಂದಿ ವರ್ಗದವರು ಇದ್ದರು.

ವಿಶ್ವ ಪರಿಸರ ದಿನಾಚರಣೆ–2026ರ ಅಂಗವಾಗಿ

ವಿಶೇಷ ರೀಲ್ಸ್ ಸ್ಪರ್ಧೆ ಘೋಷಣೆ

ಮಂಗಳೂರು: ವಿಶ್ವ ಪರಿಸರ ದಿನಾಚರಣೆ–2026ರ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಂಗಳೂರಿನ ಪ್ರಾದೇಶಿಕ ಕಚೇರಿಯು ಪರಿಸರ ಜಾಗೃತಿ ಹಾಗೂ ಹವಾಮಾನ ಕ್ರಮಗಳಿಗೆ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶೇಷ ರೀಲ್ಸ್ ಸ್ಪರ್ಧೆಯನ್ನು ಘೋಷಿಸಿದೆ.

ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ; ನಮ್ಮ ಭವಿಷ್ಯಕ್ಕಾಗಿ ಎಂಬ ಧ್ಯೇಯವಾಕ್ಯದಡಿ ನಡೆಯಲಿರುವ ಈ ಸ್ಪರ್ಧೆಯ ಮೂಲಕ ಪರಿಸರ ಸಂರಕ್ಷಣೆ, ಸುಸ್ಥಿರ ಜೀವನಶೈಲಿ, ಹವಾಮಾನ ಬದಲಾವಣೆಯ ಬಗ್ಗೆ ಅರಿವು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ಹೊಂದಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಸೃಜನಶೀಲತೆಯನ್ನು ಬಳಸಿಕೊಂಡು 30 ರಿಂದ 120 ಸೆಕೆಂಡುಗಳ ಅವಧಿಯ ಮೂಲ ರೀಲ್ಸ್ ವೀಡಿಯೊಗಳನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಸಲ್ಲಿಕೆಯಾಗುವ ವಿಡಿಯೊಗಳು ಸ್ಪರ್ಧೆಯ ಅಧಿಕೃತ ವಿಷಯ ವಸ್ತುವಿಗೆ ಹೊಂದಿಕೆಯಾಗಿರಬೇಕು. ಅಸಭ್ಯ, ಆಕ್ರಮಣಕಾರಿ, ಮಾನಹಾನಿಕಾರಕ ಅಥವಾ ಧಾರ್ಮಿಕವಾಗಿ ಸೂಕ್ಷ್ಮ ವಿಷಯಗಳನ್ನು ಒಳಗೊಂಡಿರಬಾರದು ಎಂದು ಮಂಡಳಿ ಸ್ಪಷ್ಟಪಡಿಸಿದೆ. ಭಾಗವಹಿಸಲು ಆಸಕ್ತರು ತಾವು ಸಿದ್ಧಪಡಿಸಿದ ರೀಲ್ಸ್‌ಗಳನ್ನು ಇನ್‌ಸ್ಟಾಗ್ರಾಂ ಅಥವಾ ಇತರೆ ಸಾಮಾಜಿಕ



ಜಾಲತಾಣಗಳಲ್ಲಿ ರೀಲ್ಸ್ ರೂಪದಲ್ಲೇ ಅಪ್‌ಲೋಡ್ ಮಾಡಬೇಕು. ಸ್ಪರ್ಧೆಯ ಅವಧಿಯಲ್ಲಿ ಖಾತೆಯನ್ನು ಸಾರ್ವಜನಿಕ ಸ್ಥಿತಿಯಲ್ಲಿ ಇರಿಸಬೇಕು. ಬಳಿಕ ಹೆಸರು, ವಯಸ್ಸು, ಸಂಪರ್ಕ ಸಂಖ್ಯೆ ಹಾಗೂ ಸ್ಥಳದ ವಿವರಗಳೊಂದಿಗೆ ರೀಲ್ಸ್ ಲಿಂಕ್ ಅನ್ನು ಸಲ್ಲಿಸಬೇಕು. ರೀಲ್ಸ್‌ಗಳ ಲಿಂಕ್‌ಗಳನ್ನು manglore@kspcb.gov.in ಅಥವಾ romangalore21@gmail.com ಮೇಲ್ ವಿಳಾಸಗಳಿಗೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ 9741632289 ಸಂಖ್ಯೆಗೆ ವಾಟ್ಸಾಪ್ ಮೂಲಕ ಸಂಪರ್ಕಿಸಬಹುದು. ಜೂನ್ 2 ರೀಲ್ಸ್ ಸಲ್ಲಿಕೆಗೆ ಕೊನೆಯ ದಿನ.

ಉದ್ಯಮಿಗಳ ಆರ್ಥಿಕ ಸಂಕಷ್ಟ ಎದುರಿಸಲು ಸಹಾಯ

ಕೇಂದ್ರದಿಂದ ತುರ್ತು ಸಾಲ

ಮಂಗಳೂರು: ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ಆರ್ಥಿಕ ಸಂಕಷ್ಟವನ್ನು ಎದುರಿಸಲು ಉದ್ಯಮಿಗಳಿಗೆ ಕೇಂದ್ರ ಸರಕಾರ ತುರ್ತು ಸಾಲ ಯೋಜನೆಯನ್ನು ಘೋಷಿಸಿದೆ. ಎಂಎಸ್‌ಎಂಇ ಹಾಗೂ ಎಂಎಸ್‌ಎಂಇಗಳಲ್ಲದ ಹಾಗೂ ವಿಮಾನ ಯಾನ ವಲಯಕ್ಕೆ 2,55,000 ಕೋಟಿರೂ.ಗಳ ಹೆಚ್ಚುವರಿ ಸಾಲದ ಯೋಜನೆ ಇದಾಗಿದೆ ಎಂದು ಬಿಜೆಪಿ ಆರ್ಥಿಕ ಪ್ರಕೋಷ್ಠ ದ.ಕ. ಜಿಲ್ಲಾ ಸಂಚಾಲಕ ಸಿಎ ಎಸ್.ಎಸ್. ನಾಯಕ್ ತಿಳಿಸಿದರು.



ತುರ್ತು ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆ ಕೇಂದ್ರ ಸರಕಾರ ಬೆಂಬಲಿತ ಕ್ರೆಡಿಟ್ ಗ್ಯಾರಂಟಿ ಕಾರ್ಯಕ್ರಮವಾಗಿದೆ. ಹಣಕಾಸು ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ನ್ಯಾಷನಲ್ ಕ್ರೆಡಿಟ್ ಗ್ಯಾರಂಟಿ ಟ್ರಸ್ಟಿ ಕಂಪನಿ ಈ ಯೋಜನೆಯನ್ನು ನಿರ್ವಹಿಸುತ್ತದೆ. ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿಗಳು ಅರ್ಹ ಸಾಲಗಾರರಿಗೆ ಮೇಲಾಧಾರವಿಲ್ಲದೆ ಹೆಚ್ಚುವರಿ ಕಾರ್ಯನಿರತ ಬಂಡವಾಳ ಸಾಲವನ್ನು ವಿಸ್ತರಿಸಲು ಈ ಯೋಜನೆಯ ಮೂಲಕ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ರಾಜ್ಯ ಸರಕಾರಕ್ಕೆ ಒತ್ತಾಯ

ಈ ಸಾಲಕ್ಕೆ ಕೇಂದ್ರ ಸರಕಾರ ಯಾವುದೇ ಗ್ಯಾರಂಟಿ ಶುಲ್ಕ, ದಸ್ತಾವೇಜು ಶುಲ್ಕ, ತಪಾಸಣೆ ಶುಲ್ಕ ವಿಧಿಸುತ್ತಿಲ್ಲ. ಆದರೆ, ಕೇಂದ್ರದ ಸರಕಾರದ ಈ ತುರ್ತು ಸಾಲಕ್ಕೆ ರಾಜ್ಯ ಸರಕಾರ ಶೇ. 1ರಷ್ಟು ಮುದ್ರಾಂಕ ಶುಲ್ಕ ವಿಧಿಸುತ್ತಿದೆ. ದೇಶದ ಆರ್ಥಿಕ ಸಂಕಷ್ಟದ ಸಮಯದಲ್ಲಿ ಈ ಮುದ್ರಾಂಕ ಶುಲ್ಕ ಸಂಪೂರ್ಣ ವಿನಾಯಿತಿ ನೀಡಬೇಕು ಎಂದು ಎಸ್.ಎಸ್. ನಾಯಕ್ ರಾಜ್ಯ ಸರಕಾರವನ್ನು ಒತ್ತಾಯಿಸಿದರು.

2026ರ ಮಾರ್ಚ್ 31ರ ವೇಳೆಗೆ ಅಸ್ತಿತ್ವದಲ್ಲಿರುವ ಕಾರ್ಯನಿರತ ಬಂಡವಾಳ ಮಿತಿ ಹೊಂದಿರುವ ಎಂಎಸ್‌ಎಂಇ ಹಾಗೂ ಇತರ ಸಂಸ್ಥೆಗಳು ಹಾಗೂ ಸಲ ಸೌಲಭ್ಯ ಹೊಂದಿರುವ ವಿಮಾನ ಯಾನ ಸಂಸ್ಥೆಗಳು ಈ ಯೋಜನೆಯ ಪ್ರಯೋಜನ ಪಡೆಯಬಹುದು. ಈ ಮೇಲಿನ ಅವಧಿಗೆ ಬ್ಯಾಂಕ್ ಸಾಲಖಾತೆಯನ್ನು 'ಗೀ'ಕರಿಸಿದ್ದಲ್ಲಿ ಈ ಸಾಲ ಯೋಜನೆ ಅನ್ವಯವಾಗಲಿದೆ. ಬಡ್ಡಿ ದರ ಬ್ಯಾಂಕ್‌ಗಳಲ್ಲಿ ಶೇ. 0.75ರಿಂದ ಗರಿಷ್ಠ ಶೇ. 9 ಹಾಗೂ ಎನ್‌ಬಿಎಫ್‌ಸಿಗಳಿಂದ ಗರಿಷ್ಠ ಶೇ. 13. ಒಂದು ವರ್ಷದ ಸಾಲ ಮರುಪಾವತಿಗೆ ವಿನಾಯಿತಿ (ಬಡ್ಡಿ ಪಾವತಿಸಬೇಕು)ಯೊಂದಿಗೆ ಸಾಲವನ್ನು ಒದಗಿಸಲಾಗುತ್ತದೆ. ಎಂದು ಅವರು ಹೇಳಿದರು.

ಸಾಲವನ್ನು 2027ರ ಮಾರ್ಚ್ 31ರೊಳಗೆ ಮಂಜೂರು ಮಾಡಿ, ಆ ವರ್ಷದ ಜೂ. 30ರೊಳಗೆ ವಿತರಿಸಬೇಕಿದೆ. ಇದಕ್ಕಾಗಿ ಬ್ಯಾಂಕ್‌ಗೆ ತೆರಳಬೇಕಿಲ್ಲ. ಉದ್ದಿಮೆದಾರರು ಈಗಲೇ ತಮ್ಮ ಅರ್ಜಿಯನ್ನು 'ಜನ ಸಮರ್ಥ್' ಪೋರ್ಟಲ್ ಮೂಲಕ ಸಲ್ಲಿಸಬಹುದು ಎಂದರು.

ಬಿಜೆಪಿ ಆರ್ಥಿಕ ಪ್ರಕೋಷ್ಠ ದ.ಕ. ಜಿಲ್ಲಾ ಸಹ ಸಂಚಾಲಕ ಯೋಗೀಶ್ ಪೈ, ಸದಸ್ಯರಾದ ರಾಜೇಶ್ ರಾವ್ ಎಂ., ವಸಂತ ಶೆಟ್ಟಿ, ಡಾ.ಎಸ್.ಎಂ. ಶಿವಪ್ರಕಾಶ್, ರಘುನಾಥ್ ಪೈ ಉಪಸ್ಥಿತರಿದ್ದರು.

ಗಲ್ಫ್‌ಮೆಡಿಕಲ್ ಯೂನಿವರ್ಸಿಟಿಯಿಂದ ಲೋಕಾರ್ಪಣೆ

ಅತಿ ದೊಡ್ಡ 'ಕ್ಲಿನಿಕಲ್ ಸ್ಕಿಲ್ಸ್, ಸಿಮ್ಯುಲೇಶನ್ ಕೇಂದ್ರ'

ಮಂಗಳೂರು: ತುಂಬೆ ಗ್ರೂಪ್‌ನ ಅಂಗಸಂಸ್ಥೆಯಾಗಿರುವ ಗಲ್ಫ್ ಮೆಡಿಕಲ್ ಯೂನಿವರ್ಸಿಟಿ, ಪ್ರಾದೇಶಿಕವಾಗಿ ಆರೋಗ್ಯ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಮುನ್ನುಡಿ ಬರೆದಿದೆ. ಮಧ್ಯಪ್ರಾಚ್ಯದಲ್ಲೇ ಅತಿ ದೊಡ್ಡದಾದ, ಸಂಯೋಜಿತ 'ಕ್ಲಿನಿಕಲ್ ಸ್ಕಿಲ್ಸ್ ಮತ್ತು ಸಿಮ್ಯುಲೇಶನ್ ಕೇಂದ್ರಗಳ' ಜಾಲವನ್ನು ಅಧಿಕೃತವಾಗಿ ಉದ್ಘಾಟಿಸಲಾಗಿದೆ.

ಜಿಎಂಯುನ ಅಜ್ಮಾನ್ ಕ್ಯಾಂಪಸ್‌ನಲ್ಲಿ ಈ ಆರು ಪ್ರತ್ಯೇಕ ತರಬೇತಿ ಕೇಂದ್ರಗಳನ್ನು ಒಂದೇ ಸೂರಿನಡಿ ತರಲಾಗಿದೆ. ಇದು ವೈದ್ಯಕೀಯ, ದಂತವೈದ್ಯಕೀಯ, ಫಾರ್ಮಸಿ, ಫಿಸಿಯೋಥೆರಪಿ ಹಾಗೂ ಅಲೈಡ್ ಸೈನ್ಸಸ್ ವಿದ್ಯಾರ್ಥಿಗಳಿಗೆ ನೈಜ ರೋಗಿಗಳಿಗೆ ಚಿಕಿತ್ಸೆ ನೀಡುವ ಮುನ್ನ, ಯಾವುದೇ ತಪ್ಪುಗಳಿಂದ ರೋಗಿಗಳಿಗೆ ಅಪಾಯವಾಗದಂತಹ ಸುರಕ್ಷಿತ ವಾತಾವರಣದಲ್ಲಿ ಪ್ರಾಯೋಗಿಕ ಜ್ಞಾನ ಮತ್ತು ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಲು ನೆರವಾಗಲಿದೆ.

ಉದ್ಘಾಟನಾ ಸಮಾರಂಭ

ಕ್ಯೂಎಸ್ ಇಂಡಿಯಾದ ಅಧ್ಯಕ್ಷ ಹಾಗೂ 'ಕ್ಯೂಎಸ್ ಕ್ವಾಕ್ವಾರೆಲ್ಲಿ ಸೈಮಂಡ್ಸ್' ಸಂಸ್ಥೆಯ ಸ್ಟ್ರಾಟಜಿಕ್ ಮತ್ತು ಇಂಟರ್‌ನ್ಯಾಷನಲ್ ಎಂಗೇಜ್‌ಮೆಂಟ್‌ನ ಉಪಾಧ್ಯಕ್ಷರಾದ ಡಾ. ಅಶ್ವಿನ್ ಫೆರ್ನಾಂಡಿಸ್ ಅವರು ಈ ಕೇಂದ್ರಗಳನ್ನು ಉದ್ಘಾಟಿಸಿದರು. ತುಂಬೆ ಗ್ರೂಪ್‌ನ ಸ್ಥಾಪಕ ಅಧ್ಯಕ್ಷ ಡಾ. ತುಂಬೆ ಮೊಯ್ದಿನ್, ವಿವಿಧ ವಿಭಾಗಗಳ ಡೀನ್‌ಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು. ಜಿಎಂಯುನ ಚಾನ್ಸಲರ್ ಪ್ರೊ. ಮಂದಾ ವೆಂಕಟರಮಣ ಅವರು ಮಾತನಾಡಿ, ರೋಗಿಗಳ ಸುರಕ್ಷತೆಯೇ ನಮ್ಮ ಅಂತಿಮ ಗುರಿ. ನೈಜ ರೋಗಿಗಳಿಗೆ ಚಿಕಿತ್ಸೆ ನೀಡುವ ಮುನ್ನ ವಿದ್ಯಾರ್ಥಿಗಳು ಯಾವುದೇ ತಪ್ಪುಗಳಿಗೆ ಅವಕಾಶವಿಲ್ಲದ ಇಂತಹ ಕೃತಕ ವಾತಾವರಣದಲ್ಲಿ ತರಬೇತಿ ಪಡೆಯುವುದರಿಂದ, ಮುಂದೆ ಅವರು ರೋಗಿಗಳಿಗೆ ನೀಡುವ ಚಿಕಿತ್ಸೆಯ ಫಲಿತಾಂಶಗಳು ಅತ್ಯುತ್ತಮವಾಗಿರಲಿವೆ ಎಂದರು.

ಈ ಬೃಹತ್ ಜಾಲ ಒಳಗೊಂಡಿರುವ ಪ್ರಮುಖ ಕೇಂದ್ರಗಳು

ತುಂಬೆ ಇನ್‌ಸ್ಟಿಟ್ಯೂಟ್ ಆಫ್ ಕ್ಲಿನಿಕಲ್ ಸಿಮ್ಯುಲೇಶನ್, ತುಂಬೆ ಇನ್‌ಸ್ಟಿಟ್ಯೂಟ್ ಆಫ್ ಸರ್ಜಿಕಲ್ ಸ್ಕಿಲ್ಸ್, ತುಂಬೆ ಡೆಂಟಲ್ ಸಿಮ್ಯುಲೇಶನ್, ತುಂಬೆ ಫಾರ್ಮಸಿ ಪ್ರಾಕ್ಟೀಸ್ ಲ್ಯಾಬ್ - ಸಿಮ್ಯುಲೇಶನ್, ತುಂಬೆ ಫಿಸಿಯೋಥೆರಪಿ ಸ್ಕಿಲ್ಸ್ ಟ್ರೈನಿಂಗ್ ಲ್ಯಾಬ್, ತುಂಬೆ ವೆಟರಿನರಿ ಕ್ಲಿನಿಕಲ್ ಸ್ಕಿಲ್ಸ್ ಲ್ಯಾಬ್ -ಶೀಘ್ರದಲ್ಲೇ ಆರಂಭ, ತುಂಬೆ ಸಿಮ್ಯುಲೇಶನ್ ಸೆಂಟರ್, ದುಬೈ - ಶೀಘ್ರದಲ್ಲೇ ಆರಂಭ.

ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ ಹುಂಡಿಯಲ್ಲಿ ರೂ.1.94 ಕೋ. ಕಾಣಿಕೆ



ಉಡುಪಿ: ಪ್ರಸಿದ್ಧ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳದ ಹುಂಡಿ ಎಣಿಕೆ ಕಾರ್ಯ ಸೋಮವಾರ ನಡೆಯಿತು. ದೇವಸ್ಥಾನದ 41 ಹುಂಡಿಗಳನ್ನು ತೆರೆಯಲಾಗಿದ್ದು, ಭಕ್ತರಿಂದ ಅಪಾರ ಪ್ರಮಾಣದ ಕಾಣಿಕೆ ಸಂಗ್ರಹವಾಗಿದೆ.

ದೇವಸ್ಥಾನ ಮೂಲಗಳ ಪ್ರಕಾರ, ಹುಂಡಿಗಳಲ್ಲಿ ಒಟ್ಟು ರೂ 1,90,43,819 ನಗದು ಮೊತ್ತ ಲಭಿಸಿದೆ. ಇನ್ನು ಇತರೆ ಕಾಣಿಕೆಗಳನ್ನು ಸೇರಿಸಿ ಒಟ್ಟು ಸಂಗ್ರಹ ಮೊತ್ತ ರೂ 1,94,44,173ಕ್ಕೆ ಏರಿಕೆಯಾಗಿದೆ. ಇದಲ್ಲದೆ, ಭಕ್ತರು ಕಾಣಿಕೆಯಾಗಿ ಸಲ್ಲಿಸಿದ್ದ 0.325 ಗ್ರಾಂ ಚಿನ್ನ ಹಾಗೂ 2.370 ಕೆ.ಜಿ ಬೆಳ್ಳಿಯೂ ಲಭ್ಯವಾಗಿದೆ.

ಹುಂಡಿ ಎಣಿಕೆ ಕಾರ್ಯ ದೇವಸ್ಥಾನದ ಅಧಿಕಾರಿಗಳ ಸಮ್ಮುಖದಲ್ಲಿ ಭದ್ರತಾ ಕ್ರಮಗಳೊಂದಿಗೆ ನಡೆಯಿತು. ದೇವಸ್ಥಾನಕ್ಕೆ ರಾಜ್ಯದ ವಿವಿಧ ಭಾಗಗಳಲ್ಲದೇ ಹೊರರಾಜ್ಯಗಳಿಂದಲೂ ಸಾವಿರಾರು ಭಕ್ತರು ಆಗಮಿಸುತ್ತಿದ್ದು, ಕಾಣಿಕೆ ಸಂಗ್ರಹದಲ್ಲೂ ನಿರಂತರ ಏರಿಕೆ ಕಂಡುಬರುತ್ತಿದೆ.

- ದೇವಸ್ಥಾನ ಮೂಲಗಳ ಪ್ರಕಾರ, ಹುಂಡಿಗಳಲ್ಲಿ ಒಟ್ಟು ರೂ 1,90,43,819 ನಗದು ಮೊತ್ತ ಲಭಿಸಿದೆ.
- ಇನ್ನು ಇತರೆ ಕಾಣಿಕೆಗಳನ್ನು ಸೇರಿಸಿ ಒಟ್ಟು ಸಂಗ್ರಹ ಮೊತ್ತ ರೂ 1,94,44,173ಕ್ಕೆ ಏರಿಕೆಯಾಗಿದೆ.
- ಇದಲ್ಲದೆ, ಭಕ್ತರು ಕಾಣಿಕೆಯಾಗಿ ಸಲ್ಲಿಸಿದ್ದ 0.325 ಗ್ರಾಂ ಚಿನ್ನ ಹಾಗೂ 2.370 ಕೆ.ಜಿ ಬೆಳ್ಳಿಯೂ ಲಭ್ಯವಾಗಿದೆ.

ಕುಕ್ಕೆ ಕ್ಷೇತ್ರದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಆಶ್ಲೇಷ ಬಲಿ ಸೇವೆ

ನದಿ ಮಲಿನಗೊಳಿಸಿದರೆ ಕ್ರಿಮಿನಲ್ ಮೊಕದ್ದಮೆ

ಸುಬ್ರಹ್ಮಣ್ಯ: ನಾಗಾರಾಧನೆಯ ಪುಣ್ಯ ತಾಣ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಮಂಗಳವಾರ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಭೇಟಿ ನೀಡಿ ಸಂಕಲ್ಪ ನೆರವೇರಿಸಿ ಆಶ್ಲೇಷ ಬಲಿ ಸೇವೆ ಸಮರ್ಪಿಸಿದರು. ಬಳಿಕ ಶ್ರೀ ದೇವರ ದರುಶನ ಮಾಡಿದ ಅವರಿಗೆ ಅರ್ಚಕ ರಮೇಶ್ ನೂರಿತ್ತಾಯರು ಶಾಲು ಹೊದಿಸಿ ಮಹಾಪ್ರಸಾದ ನೀಡಿದರು.



ಆದಿ ದೇವಳಕ್ಕೆ ಭೇಟಿ

ನಂತರ ದೇವಳದ ಆಡಳಿತ ಕಚೇರಿಗೆ ತೆರಳಿದ ಸಚಿವರನ್ನು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಗೌರವಿಸಿ ದೇವರ ಪ್ರಸಾದ ನೀಡಿದರು. ಬಳಿಕ ಸಚಿವರು ಆದಿಸುಬ್ರಹ್ಮಣ್ಯ ದೇವಳಕ್ಕೆ ಭೇಟಿ ಮಾಡಿ ದೇವರ ದರುಶನ ಮಾಡಿ ಮೃತ್ತಿಕಾ ಪ್ರಸಾದ ಸ್ವೀಕರಿಸಿದರು.

ಈ ಸಂದರ್ಭ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ದೇವಳದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಸುಧೀರ್ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಲೀಲಾ ಮನಮೋಹನ್, ಸೌಮ್ಯ ಭರತ್, ಪ್ರವೀಣ ರೈ ಮರುವಂಜ, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯ ಲೋಲಾಕ್ಷ ಕೈಕಂಬ, ಪ್ರಮುಖರಾದ ಅಭಿಲಾಶ್, ಗೋಪಾಲ್ ಎಣ್ಣೆಮಜಲು, ಶಿವರಾಮ ರೈ, ಅರಣ್ಯ ಸಂರಕ್ಷಣಾಧಿಕಾರಿ ಕರಿಕಾಲನ್, ಕುದುರೆಮುಖ ವನ್ಯಜೀವಿ ವಿಭಾಗದ ಡಿಸಿಎಫ್ ಶಿವರಾಮ್ ಬಾಬು, ಮಂಗಳೂರು ವಿಭಾಗದ ಡಿ.ಸಿ.ಎಫ್. ಶಶಿಕಾಂತ್ ವಿಭೂತೆ, ಸುಳ್ಯ ಎಸಿಎಫ್ ಪ್ರಶಾಂತ್ ಕುಮಾರ್ ಪೈ, ವಿಜಿಲೆನ್ಸ್ ಡಿಎಫ್‌ಒ ರೋಷನಿ, ಸುಳ್ಯ ವಲಯಾರಣ್ಯಾಧಿಕಾರಿ ಮಂಜುನಾಥ್, ಸುಬ್ರಹ್ಮಣ್ಯ ವಲಯಾರಣ್ಯಧಿಕಾರಿ ವಿಮಲ್ ಬಾಬು, ಪಂಜ ವಲಯಾರಣ್ಯಾಧಿಕಾರಿ ಸಂಧ್ಯಾ, ಬೆಳ್ತಂಗಡಿ ವಲಯಾರಣ್ಯಾಧಿಕಾರಿ ತ್ಯಾಗರಾಜ್, ಉಪವಲಯಾರಣ್ಯಾಧಿಕಾರಿ ಅಪೂರ್ವ ಅಚ್ರಪ್ಪಾಡಿ, ಶ್ರೀ ದೇವಳದ ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್ ಎಸ್. ಮತ್ತಿತರರು ಉಪಸ್ಥಿತರಿದ್ದರು.

ಹೆಚ್ಚಿನ ಬೋನ್ ವ್ಯವಸ್ಥೆ

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕುಕ್ಕೆ ಸುಬ್ರಹ್ಮಣ್ಯಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಅವರ ಮೇಲೆ ವನ್ಯಜೀವಿ ದಾಳಿ ಮಾಡದಂತೆ ಎಚ್ಚರ ವಹಿಸಲು ಮತ್ತು ಚಿರತೆ ಸಮಸ್ಯೆ ಇರುವ ಕಡೆಗೆ ಹೆಚ್ಚಿನ ಬೋನು ನಿಯೋಜಿಸಲು ಆದೇಶಿಸಲಾಗಿದೆ. ಆನೆಗಳು ಬಾರದಂತೆ ಕಂದಕ ಕಾಮಗಾರಿ ಪೂರ್ಣಗೊಳಿಸಲು ಮತ್ತು ಸೌರ ತಂತಿ ಬೇಲಿ ಅಳವಡಿಸಲು ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಕ್ರಿಮಿನಲ್ ಮೊಕದ್ದಮೆ

ನದಿಗೆ ಸಂಸ್ಕರಿಸದೆ ತ್ಯಾಜ್ಯ ಹರಿಸಿದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ಕುಮಾರಧಾರಾ ನದಿಗೆ ತ್ಯಾಜ್ಯವನ್ನು ನೇರವಾಗಿ ಹರಿಯಬಿಡುತ್ತಿರುವವರ ಮೇಲೆ ಕ್ರಮ ವಹಿಸಲು ಸೂಚಿಸಲಾಗಿದೆ. ಸ್ಥಳೀಯ ಸಂಸ್ಥೆಗಳು ಈ ಬಗ್ಗೆ ನಿಗಾ ಇಡಬೇಕು, ತ್ಯಾಜ್ಯ ಜಲ ಸಂಸ್ಕರಣಾ ಘಟಕಗಳ ಪರಿಶೀಲನೆ ಮಾಡಬೇಕು. ಯಾರೇ ಸಂಸ್ಕರಿಸದೆ ತ್ಯಾಜ್ಯ ನದಿಗೆ ಬಿಟ್ಟಿದ್ದರೆ ಮೊದಲಿಗೆ ಎಚ್ಚರಿಕೆ ನೀಡಬೇಕು. ಪದೇ ಪದೇ ಇದೇ ತಪ್ಪು ಮಾಡಿದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಖಂಡ್ರೆ ತಿಳಿಸಿದರು.

ಎಸ್.ಡಿ.ಎಂ. ಸಂಸ್ಥೆಗಳ ಸಾಧನೆಗಳ ಅನಾವರಣ । ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಂದ ಲೋಕಾರ್ಪಣೆ

Institutions of Legacy ಕಾಫಿ ಟೇಬಲ್ ಪುಸ್ತಕ ಬಿಡುಗಡೆ

ಧರ್ಮಸ್ಥಳ : ಶ್ರೀ ಕ್ಷೇತ್ರ ಧರ್ಮಸ್ಥಳದ ಎಸ್‌ಡಿಎಂ ಸಂಸ್ಥೆಗಳ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಯಣವನ್ನು ದಾಖಲಿಸುವ Institutions of Legacy ಕಾಫಿ ಟೇಬಲ್ ಪುಸ್ತಕವು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಬಿಡುಗಡೆಗೊಂಡಿತು. ಅಕಾಡೆಮಿಕ್ ಇನ್‌ಸೈಟ್ಸ್ ಸಂಸ್ಥೆಯ ವತಿಯಿಂದ ಪ್ರಕಟಿತ ಈ ಕೃತಿಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಲೋಕಾರ್ಪಣೆಗೊಳಿಸಿ ಮಾತನಾಡಿ, ರತ್ನವರ್ಮ ಹೆಗ್ಗಡೆಯವರ ದೂರದೃಷ್ಟಿಯ ನಾಯಕತ್ವದಲ್ಲಿ ಆರಂಭವಾದ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳು ಕಳೆದ ಐದು ದಶಕಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗಳನ್ನು ದಾಖಲಿಸಿದ್ದು, ರಾಜ್ಯದ ಮಾದರಿ ಶಿಕ್ಷಣ ಸಂಸ್ಥೆಗಳಾಗಿ ಗುರುತಿಸಿಕೊಂಡಿವೆ ಎಂದು ಹೇಳಿದರು. ಸಂಸ್ಥೆಗಳ ಬೆಳವಣಿಗೆಯಲ್ಲಿ ಶ್ರಮಿಸಿದ ಸಿಬ್ಬಂದಿ, ಶಿಕ್ಷಕರು ಹಾಗೂ ತಂಡದ ಸದಸ್ಯರ ಸೇವೆಯನ್ನು ಅವರು ಈ ಸಂದರ್ಭದಲ್ಲಿ ಶ್ಲಾಘಿಸಿದರು.



ಹೇಮಾವತಿ ವಿ. ಹೆಗ್ಗಡೆ ಮಾತನಾಡಿ, ಪುಸ್ತಕವು ಅತ್ಯಂತ ಆಕರ್ಷಕವಾಗಿ ಮೂಡಿಬಂದಿದ್ದು, ಅದರ ಸಂಪಾದಕೀಯ ಹಾಗೂ ನಿರ್ಮಾಣ ತಂಡದ ಪರಿಶ್ರಮ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಮಾತನಾಡಿ, ಕಾಫಿ ಟೇಬಲ್ ಪುಸ್ತಕವು ಶ್ರೀಕ್ಷೇತ್ರ ಧರ್ಮಸ್ಥಳದ ವಿವಿಧ ಕಾರ್ಯಕ್ಷೇತ್ರಗಳನ್ನು ಸಂಕ್ಷಿಪ್ತವಾಗಿ ಹಾಗೂ ಮನೋಜ್ಞ ಛಾಯಾಚಿತ್ರಗಳ ಮೂಲಕ ಪರಿಚಯಿಸುತ್ತದೆ. 'ಚತುರ್ದಾನ' ಪರಂಪರೆಯಿಂದ ಆರಂಭಗೊಂಡು 'ವಿದ್ಯಾದಾನ'ದ ಮಹತ್ವವನ್ನು ಸಾರುವ ಶಿಕ್ಷಣ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ ಎಂದು ಹೇಳಿದರು.

- ಕಾಫಿ ಟೇಬಲ್ ಪುಸ್ತಕವು ಶ್ರೀ ಕ್ಷೇತ್ರ ಧರ್ಮಸ್ಥಳದ ವಿವಿಧ ಕಾರ್ಯಕ್ಷೇತ್ರಗಳನ್ನು ಸಂಕ್ಷಿಪ್ತವಾಗಿ ಹಾಗೂ ಮನೋಜ್ಞ ಛಾಯಾಚಿತ್ರಗಳ ಮೂಲಕ ಪರಿಚಯಿಸುತ್ತದೆ.
- 'ಚತುರ್ದಾನ' ಪರಂಪರೆಯಿಂದ ಆರಂಭಗೊಂಡು 'ವಿದ್ಯಾದಾನ'ದ ಮಹತ್ವವನ್ನು ಸಾರುವ ಶಿಕ್ಷಣ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ

Institutions of Legacy ಪುಸ್ತಕದಲ್ಲಿ ಧರ್ಮಸ್ಥಳದ ಅಭಿವೃದ್ಧಿ, ಸಾಮಾಜಿಕ ಸೇವೆ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಶಿಕ್ಷಣ ಕ್ಷೇತ್ರದ ಸಾಧನೆಗಳ ಸಮಗ್ರ ಚಿತ್ರಣವನ್ನು ದಾಖಲಿಸಲಾಗಿದೆ. ಇದರೊಂದಿಗೆ ಎಸ್.ಕೆ.ಡಿ.ಆರ್.ಡಿ.ಪಿ., ಸಿರಿ, ರುಡ್‌ಸೆಟ್, ಎಸ್.ಡಿ.ಎಮ್. ಧರ್ಮೋತ್ಥಾನ ಟ್ರಸ್ಟ್ ಸೇರಿದಂತೆ ವಿವಿಧ ಸಂಸ್ಥೆಗಳ ಕಾರ್ಯಚಟುವಟಿಕೆಗಳು, ಸಾಧನೆಗಳು ಮತ್ತು ಇತಿಹಾಸವನ್ನು ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಪ್ರಾಂಶುಪಾಲರಾದ ಡಾ. ವಿಶ್ವನಾಥ್, ಡಾ. ಅಶೋಕ್ ಕುಮಾರ್, ಧನ್ಯಕುಮಾರ್, ಪ್ರಶಾಂತ್ ಬಿ.ಆರ್., ಅರವಿಂದ್ ಹಾಗೂ ಅಕಾಡೆಮಿಕ್ ಇನ್‌ಸೈಟ್ಸ್ ತಂಡದ ಪ್ರತಿನಿಧಿಗಳಾದ ಮೊನಿಶಾ ರಾಕೇಶ್, ಮೊಯಿನ್, ಅಗಸ್ಟಿನ್ ಎಸ್. ನಿಯೋಲ್ ಮತ್ತು ಮಧು ಉಪಸ್ಥಿತರಿದ್ದರು.

ಈ ಕೃತಿ ಎಸ್‌ಡಿಎಂ ಸಂಸ್ಥೆಗಳ ಪರಂಪರೆ, ಸಾಧನೆ ಮತ್ತು ಸಮಾಜಮುಖಿ ಸೇವೆಯ ದಾಖಲೆಯಾಗಿ ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶಕವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.



ಕಿರುಸುದ್ದಿ

ಪ್ರಜ್ಞಾನಂದ, ಗುಕೇಶ್, ದಿವ್ಯಾಗೆ ಶುಭಾರಂಭ

ಒಸ್ಲೋ (ನಾರ್ವೆ): ಸೋಮವಾರ ಶುರುವಾದ ನಾರ್ವೆ ಚೆಸ್ ಓಪನ್ ಪಂದ್ಯಾವಳಿಯಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಮೊದಲ ದಿನದ ಪ್ರಮುಖ ಫಲಿತಾಂಶದಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ, ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಕ್ಲಾಸಿಕ್ ಪಂದ್ಯದಲ್ಲಿ ಮಣಿಸಿದರು. ಬಹುತೇಕ ಸಮಯ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದ ಕಾರ್ಲ್ಸನ್, ಸಮಯದ ಒತ್ತಡದಲ್ಲಿ ಮಾಡಿದ ಒಂದು ದೊಡ್ಡ ತಪ್ಪಿನಿಂದ ಸಂಕಷ್ಟಕ್ಕೆ ಸಿಲುಕಿದರು. ಭಾರತದ ಎರಡನೇ ಶ್ರೇಯಾಂಕದ ಆಟಗಾರ ಆರ್. ಪ್ರಜ್ಞಾನಂದ ಹಾಗೂ ವೆಸ್ಲೀ ಸೊ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರ ನಡೆದ ಆರ್ಮಗೆಡನ್ ಹಣಾಹಣಿಯಲ್ಲಿ ಪ್ರಜ್ಞಾನಂದ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡರು. ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್, ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ವಿರುದ್ಧ ಕಠಿಣ ಪೈಪೋಟಿ ನಡೆಸಿದರು. ಅಂತಿಮ ಹಂತದಲ್ಲಿ ಕೈಮರ್ ಮೇಲುಗೈ ಸಾಧಿಸಿ ಗೆಲುವಿನ ಅಂಚಿನಲ್ಲಿದ್ದರು. ಆದರೆ ಗುಕೇಶ್ ಅದ್ಭುತ ರಕ್ಷಣಾತ್ಮಕ ಆಟವಾಡಿ ಪಂದ್ಯವನ್ನು ಸಮಬಲಕ್ಕೆ ತಂದರು. ಬಳಿಕ ನಡೆದ ಆರ್ಮಗೆಡನ್ ಪಂದ್ಯದಲ್ಲಿ ಗೆದ್ದು ಅಮೂಲ್ಯ ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಮೊದಲ ಸುತ್ತಿನ ನಂತರ ಕ್ಲಾಸಿಕ್ ವಿಭಾಗದಲ್ಲಿ ಏಕೈಕ ಗೆಲುವು ದಾಖಲಿಸಿದ ಫಿರೋಜ್ಜಾ ಅಂಕಪಟ್ಟಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮಹಿಳೆಯರ ವಿಭಾಗ: ಮಹಿಳಾ ವಿಭಾಗದಲ್ಲೂ ಆರಂಭದ ದಿನವೇ ಕುತೂಹಲಕರ ಪೈಪೋಟಿ ಕಂಡುಬಂದಿತು. ಕಝಾಕಿಸ್ತಾನದ ಬಿಬಿಸಾರಾಭಾರತದ ಅಗ್ರ ಆಟಗಾರ್ತಿ ಕೊನೆರು ಹಂಪಿ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಅನ್ನಾ ಹಾಗೂ ಝು ಜಿನರ್ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರದ ಆರ್ಮಗೆಡನ್‌ನಲ್ಲಿ ಝು ಜಿನರ್ ಮೇಲುಗೈ ಸಾಧಿಸಿ ಹೆಚ್ಚುವರಿ ಅಂಕ ಪಡೆದರು. ಇನ್ನೊಂದು ಪಂದ್ಯದಲ್ಲಿ ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆಂಜುನ್ ಹಾಗೂ ಭಾರತದ ದಿವ್ಯಾ ದೇಶಮುಖ್ ಹಣಾಹಣಿ ಡ್ರಾದಲ್ಲಿ ಅಂತ್ಯವಾಯಿತು.

ಪಾಟಿದಾರ್ ಅಬ್ಬರಕ್ಕೆ ಗುಜರಾತ್ ತತ್ತರ | ಫೈನಲ್‌ಗೇರಲು ಗುಜರಾತ್‌ಗಿದೆ ಇನ್ನೊಂದು ಅವಕಾಶ

ಸತತ 2ನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಹೊಸ ಆರ್‌ಸಿಬಿ ತಂಡಕ್ಕೆ ತಡೆಯೊಡ್ಡುವವರೇ ಯಾರಿಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಕಪ್ ಬರ ಕಳೆದ ಬಾರಿಯೇ ನೀಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲೀಗ್ ಮೇಲೆ ಪ್ರಾಬಲ್ಯ ಸಾಧಿಸುತ್ತಾ ಎರಡನೇ ಕಪ್ ಗೆಲ್ಲುವುದಕ್ಕೆ ಅಣಿಯಾಗಿದೆ.

ಇಲ್ಲಿನ ಎಚ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರದಂದು ಕ್ವಾಲಿಫೈಯರ್ ಪಂದ್ಯ ನಡೆಯಿತು. ಪಾಟಿದಾರ್ ಬ್ಯಾಟಿಂಗ್ ಅಬ್ಬರಕ್ಕೆ ತತ್ತರಿಸಿದ ನಂತರ ಗುಜರಾತ್ ಟೈಟಾನ್ಸ್ ಆರ್‌ಸಿಬಿ ವೇಗಿಗಳ ದಾಳಿಗೆ ಕುಸಿಯಿತು. ಎಲ್ಲೆಲ್ಲೂ ಆರ್‌ಸಿಬಿ ಅಭಿಮಾನಿಗಳ ಹರ್ಷ, ಆಟಗಾರರ ಸಂಭ್ರಮ ಕಂಡುಬಂದಿತು. ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 254 ರನ್‌ಗಳಿಸಿತು. ಪಾಟಿದಾರ್ 93★, ಕೊಹ್ಲಿ 43 ಮತ್ತು ಕೃಣಾಲ್ 43 ರನ್ ಗಳಿಸಿದರು. ಗುಜರಾತ್ ಪರ ಹೋಲ್ಡರ್, ರಬಾಡ ತಲಾ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತುವಾಗ ಗುಜರಾತ್ ಪರ ಯಾರೊಬ್ಬರೂ ಕ್ರೀಜ್‌ನಲ್ಲಿ ನಿಲ್ಲಲಿಲ್ಲ. ಪರಿಣಾಮ ಸರ್ವಪತನಗೊಂಡ ಜಿಟಿ ಸೋಲೊಪ್ಪಿಕೊಂಡಿದೆ. ಆರ್‌ಸಿಬಿ ಪರ ವೇಗಿಗಳು ಮಿಂಚಿದರು.

ಕೊಹ್ಲಿ-ಪಡಿಕ್ಕಲ್ ಕಮಾಲ್: ವೆಂಕಟೇಶ್ ಅಯ್ಯರ್ ಬಾರಿಸಿದ ಬೌಂಡರಿಯೊಂದಿಗೆ ಇನ್ನಿಂಗ್ಸ್ ಆರಂಭವಾಯಿತು. ಮೊದಲ ಓವರ್‌ನಲ್ಲಿ 3 ಭರ್ಜರಿ ಬೌಂಡರಿ ಬಾರಿಸಿದ ಅವರು, 19 ರನ್‌ಗೆ ಆಟ ನಿಲ್ಲಿಸಿಬಿಟ್ಟರು. ಮೂರನೇ ವಿಕೆಟ್‌ಗೆ ಒಂದಾದ ವಿರಾಟ್ ಕೊಹ್ಲಿ ಮತ್ತು ಪಡಿಕ್ಕಲ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪಡಿಕ್ಕಲ್ ಕೂಡ ಬರುತ್ತಲೇ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 76 ರನ್ ಬಾರಿಸಿತು. ಪಡಿಕ್ಕಲ್ ಮತ್ತು ಕೊಹ್ಲಿ 72 ರನ್‌ಗಳ ಜೊತೆಯಾಟ ನಿರ್ಮಿಸಿದರು. ವಿರಾಟ್ ಕೊಹ್ಲಿ 25 ಬಾಲ್‌ಗಳಲ್ಲಿ 43 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಹಿಂದೆಯೇ ಪಡಿಕ್ಕಲ್ ಕೂಡ ಪೆವಿಲಿಯನ್ ಹೊರಟರು.



ಪಾಟಿದಾರ್ ಅಬ್ಬರ

ಮಧ್ಯಮ ಓವರ್‌ಗಳ ಅಂತ್ಯದವರೆಗೆ ಆರ್‌ಸಿಬಿ ಕೊಂಚ ಹೊತ್ತು ವಿಕೆಟ್ ಉಳಿಸಿಕೊಂಡು ಆಡಿತು. ಪಾಟಿದಾರ್ ಮೊದಲಿನ 9 ಬಾಲ್‌ಗಳಲ್ಲಿ 9 ರನ್ ಗಳಿಸಿದರ. ಕೃಣಾಲ್ ಮತ್ತೊಂದು ಬದಿಯಲ್ಲಿ ನಿಂತುಕೊಂಡಂತೆ ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ಶುರುವಾಯಿತು. ಬಾಲಿಗೆ ಪ್ರತಿಯೊಂದು ದಿಕ್ಕು ತೋರಿಸಿದ ಅವರು, 21 ಬಾಲ್ ಅನ್ನುವಷ್ಟರಲ್ಲಿ ಸ್ಫೋಟಕ ಅರ್ಧಶತಕ ಬಾರಿಸಿದರು. ತಮ್ಮ ಅಬ್ಬರ ಹಾಗೇ ಮುಂದುವರಿಸಿ ಡೆತ್ ಓವರ್‌ಗೆ ವಿಸ್ತರಿಸಿತು. ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ನಿಲ್ಲಲೇ ಇಲ್ಲ. ಡೆತ್ ಓವರ್‌ನಲ್ಲಿ ಪಾಟಿದಾರ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್ ಮಾಡಿದರು. ಬಂದ ಬಾಲ್‌ಗಳನ್ನೆಲ್ಲಾ ಸಿಕ್ಸರ್‌ಗಟ್ಟಿದರು. ಆಡಿದ 33 ಬಾಲ್‌ಗಳಲ್ಲಿ ಪಾಟಿದಾರ್ 9 ಸಿಕ್ಸರ್ ಚಚ್ಚಿದರು. 5 ಬೌಂಡರಿ ಬಾರಿಸಿದರು. ಔಟಾಗದೇ 93 ರನ್ ಬಾರಿಸಿದರು. ಕೃಣಾಲ್ 43ಕ್ಕೆ ಔಟಾದರೆ, ಜಿತೇಶ್ 15 ರನ್ ಗಳಿಸಿದರು.

ಗುಜರಾತ್ ತತ್ತರ

ಗುರಿ ಬೆನ್ನತ್ತುವಾಗ ಯಥಾಪ್ರಕಾರ ವೇಗಿ ಭುವನೇಶ್ವರ್ ಕುಮಾರ್ ಮಿಂಚಿದರು. ಮೂರನೇ ಓವರ್‌ನಲ್ಲಿ ಡಫಿ ಬೌಲಿಂಗ್‌ನಲ್ಲಿ ಸಾಯಿ ಸುದರ್ಶನ್ ಹಿಟ್ ವಿಕೆಟ್‌ಗೆ ಔಟಾದರು. ಬಳಿಕ ಮತ್ತೊಮ್ಮೆ ಭುವನೇಶ್ವರ್ ಕುಮಾರ್ ಮಿಂಚಿದರು. ಗಿಲ್ 2 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಜಾಸ್ ಬಟ್ಲರ್ ಕೊಂಚ ಹೊತ್ತು ಪ್ರಯತ್ನ ಪಟ್ಟರೂ ಆರ್‌ಸಿಬಿ ಯಾವುದೇ ಅವಕಾಶ ಕೊಡಲಿಲ್ಲ. ನಿಶಾಂತ್ ಸಿಂಧು 5, ಜೇಸನ್ ಹೋಲ್ಡರ್ ಶೂನ್ಯಕ್ಕೆ ಔಟಾದರು. ಬಟ್ಲರ್ ಕೂಡ 29 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನುಳಿದ ಬ್ಯಾಟಿಗರು ಹೇಳಿಕೊಳ್ಳುವ ಪ್ರದರ್ಶನ ನೀಡಲೇ ಇಲ್ಲ.

ಐದನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಈ ಗೆಲುವಿನೊಂದಿಗೆ ಆರ್‌ಸಿಬಿ ನಾಲ್ಕನೇ ಬಾರಿ ಫೈನಲ್‌ಗೇರಿತು. ಈ ಹಿಂದೆ 2009, 2011, 2016 ಮತ್ತು 2025ರಲ್ಲಿ ಫೈನಲ್‌ಗೇರಿದ ಆರ್‌ಸಿಬಿ 2025ರಲ್ಲಿ ಚಾಂಪಿಯನ್ ಪಟ್ಟಕ್ಕೇರಿದೆ.

ಎರಡು ಸತತ ಫೈನಲ್; 4ನೇ ತಂಡ: ಆರ್‌ಸಿಬಿ ಐಪಿಎಲ್ ಪಂದ್ಯಾವಳಿಯ ಇತಿಹಾಸದಲ್ಲಿ ಸತತ ಎರಡು ಬಾರಿ ಫೈನಲ್‌ಗೇರಿದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ದಾಖಲೆಗಳನ್ನು ಚೆನ್ನೈ ಸೂಪರ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮಾಡಿವೆ. 2025ರಲ್ಲಿ ಫೈನಲ್‌ಗೇರಿರುವ ಆರ್‌ಸಿಬಿಗೆ ಇದು ಎರಡನೇ ಫೈನಲ್.

ದಾಖಲೆಯ ಗುರಿ

255 ರನ್ ಗುರಿ ಐಪಿಎಲ್ ಇತಿಹಾಸದಲ್ಲಿ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ. 2023ರಲ್ಲಿ ಗುಜರಾತ್ 233 ರನ್ ಗಳಿಸಿತ್ತು. ಇದು ಈವರೆಗಿನ ಅತಿ ಹೆಚ್ಚು ಸ್ಕೋರ್ ಆಗಿತ್ತು. ಪಾಟಿದಾರ್, ಕೊಹ್ಲಿ ಮತ್ತು ಕೃಣಾಲ್ ಅಬ್ಬರದೊಂದಿಗೆ ಆರ್‌ಸಿಬಿ 254 ರನ್ ಬಾರಿಸಿದ್ದು, ಇದು ಪಂದ್ಯಾವಳಿಯ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ.

ಓಟದಲ್ಲಿ ಕನ್ನಡಿಗರೇ ಟಾಪ್

ಬೆಂಗಳೂರು: ಮಹಿಳೆಯರ 100 ಮೀ. ಟಿ37 ಸ್ಪರ್ಧೆಯಲ್ಲಿ ಕನ್ನಡಿಗರಾದ ಭಾರತಿ ಭಾರತೇಶ್ ಮತ್ತು ಹರ್ಷಿತಾ ಟಾತೆರ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು. ಕೂಟದ ವಿವಿಧ ಸ್ಪರ್ಧೆಯಲ್ಲಿ ಕರ್ನಾಟಕ ಅಥ್ಲೀಟ್‌ಗಳು ಪಾರುಪತ್ಯ ಸಾಧಿಸಿದರು. ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಸಂಸ್ಥೆಯಿಂದ ಮಾನ್ಯತೆ ಪಡೆದ ಇಂಡಿಯಾ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರದಂದು ಶುರುವಾಯಿತು. 16.99 ಸೆಕೆಂಡುಗಳಲ್ಲಿ ಓಟ ಮುಗಿಸಿದ ಭಾರತಿ ಮೊದಲ ಸ್ಥಾನ ಪಡೆದುಕೊಂಡರೆ, 17.73 ಸೆಕೆಂಡುಗಳಲ್ಲಿ ಕ್ರಮಿಸಿದ ಹರ್ಷಿತಾ ಎರಡನೇ ಸ್ಥಾನ ಪಡೆದುಕೊಂಡರು. ಚಂಡೀಗಢದ ಬಬ್ಲಿಪ್ರೀತ್ ಕೌರ್ ಮೂರನೇ ಸ್ಥಾನ ಪಡೆದರು. ಓಟದ ಸ್ಪರ್ಧೆಯಲ್ಲಿ ಕರ್ನಾಟಕ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದರು. ಪುರುಷರ 100 ಮೀ. ಟಿ47 ವಿಭಾಗದಲ್ಲಿ ಬಾಬು ಜಾನು ಮೂರನೇ ಸ್ಥಾನ ಪಡೆದುಕೊಂಡರು. ಪ್ರಿಲಿಮ್ಸ್‌ನಲ್ಲಿ 11.36 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಪಡೆದು ಫೈನಲ್ಸ್‌ಗೆ ಅರ್ಹತೆ ಪಡೆದ ಅವರು, ಅಲ್ಲಿ 11.19 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಗಳಿಸಿದರು. ಮೊಹಮ್ಮದ್ ಬಾಸಿಲ್ 10.63 ಸೆಕೆಂಡುಗಳಲ್ಲಿ ಓಡಿ ಚಿನ್ನ ಗೆದ್ದರೆ, ದಿಲೀಪ್ ಎರಡನೇ ಸ್ಥಾನ ಗಳಿಸಿದರು.

ರಕ್ಷಿತಾ, ಶರತ್‌ಗೆ ಮೊದಲ ಸ್ಥಾನ

ಮಹಿಳೆಯರ 1500 ಮೀ. ಟಿ11 ಸ್ಪರ್ಧೆಯಲ್ಲಿ ಕರ್ನಾಟಕದ ರಕ್ಷಿತಾ ರಾಜು ಮೊದಲ ಸ್ಥಾನ ಪಡೆದರು. 5:17.45 ನಿಮಿಷಗಳಲ್ಲಿ ಗುರಿ ಕ್ರಮಿಸಿದ ಕನ್ನಡತಿ, ರಾಜಸ್ಥಾನದ ಶಾಲಿನಿ ಅವರನ್ನು ಹಿಂದಿಕ್ಕಿದರು. 6:7.55 ನಿಮಿಷಗಳಲ್ಲಿ ಓಟ ಮುಗಿಸಿದ ಶಾಲಿನಿ ಬೆಳ್ಳಿ, ಕರ್ಗಿಸ್ತಾನದ ಗುಲ್ನಾಜ್ 6:19.58 ಮೂರನೇ ಸ್ಥಾನ ಪಡೆದರು. ಇನ್ನು ಪುರುಷರ 1500ಮೀ. ಟಿ13 ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದರು. ಸಾಮಾನ್ಯವಾಗಿ ಟಿ12 ವಿಭಾಗದಲ್ಲಿ ಸ್ಪರ್ಧಿಸುವ ಅವರು, 4:11.25 ನಿಮಿಷಗಳಲ್ಲಿ ಓಟ ಮುಗಿಸಿದರು. ಚಿರಾಗ್, ಬಳವಂತ ನಂತರದ ಸ್ಥಾನ ಗಳಿಸಿದರು. ಪುರುಷರ 100 ಮೀ. ಟಿ38 ವಿಭಾಗದಲ್ಲಿ 13.44ಸೆಕೆಂಡುಗಳಲ್ಲು ಗುರಿ ಕ್ರಮಿಸಿದ ದೇವ ಸಚ್ಚಿದಾನಂದ ಅವರು ಎರಡನೇ ಸ್ಥಾನ ಗಳಿಸಿದರು. ಇಷ್ಟೇ ಅಲ್ಲದೆ, ಕರ್ನಾಟಕಕ್ಕೆ ವಿವಿಧ ಪದಕಗಳು ದೊರಕಿದವು. ಮಹಿಳೆಯರ ಎಫ್-57 ಶಾಟ್‌ಪುಟ್ ಸ್ಪರ್ಧೆಯಲ್ಲಿ ಶಿಲ್ಪಾ ಅವರಿಗೆ ಎರಡನೇ ಸ್ಥಾನ ದೊರಕಿತು. 6.67ಮೀ. ದೂರ ಎಸೆದ ಅವರು, ಮೂರನೇ ಸ್ಥಾನದ ಪೂನಂ ಅವರನ್ನು ಹಿಂದಿಕ್ಕಿದರು. ಶರ್ಮಿಳಾ 9.86 ಮೀ. ದೂರ ಎಸೆದು ಮೊದಲ ಸ್ಥಾನ ಪಡೆದರು.

ಪ್ರಶಸ್ತಿ ವಿಜೇತರು

ಪ್ರಮೋದ್ ಭಗತ್: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತ
ದೀಪ್ತಿ ಜೀವನ್‌ಜಿ: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತೆ
ಅಭಿಲಾಶಾ ಚೌಧರಿ: 2026ರ ವರ್ಷದ ಪ್ಯಾರಾ ಕ್ರೀಡಾ ಕೋಚ್
ಇಂಡಿಯನ್ ಆಯಿನ್: 2026ರ ವರ್ಷದ ಸಂಸ್ಥೆ ಪ್ರಶಸ್ತಿ
ದೀಪ್ತಿ ಬೋಪಯ್ಯ: ಪ್ಯಾರಾ ಕ್ರೀಡೆ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದ ವ್ಯಕ್ತಿ ಪ್ರಶಸ್ತಿ, **ಪಾಯಲ್ ನಾಗ್:** 2026ರ ವರ್ಷದ ಉದಯೋನ್ಮುಖ ಪ್ಯಾರಾ ಕ್ರೀಡಾಪಟು. ಅ**ಸತ್ಯಪ್ರಕಾಶ್ ಸಾಂಗ್ವಾನ್:** ಪ್ಯಾರಾ ಕ್ರೀಡೆಗೆ ಬೆಂಬಲ ನೀಡಿದ ಚಾಂಪಿಯನ್ ಪ್ರಶಸ್ತಿ,**ಮಹಾವಿ ೀರ್ ಸಿಂಗ್ ರಾವತ್:** ವರ್ಷದ ಮಾಧ್ಯಮ ವ್ಯಕ್ತಿ ಪ್ರಶಸ್ತಿ
ಪ್ಯಾರಾಲಿಂಪಿಕ್ಸ್ ಸೇರಿ ಪ್ಯಾರಾ ಕ್ರೀಡೆಗಳಲ್ಲಿ ಅಪ್ರತಿಮ ಸಾಧನೆ ತೋರಿದ, ಪ್ಯಾರಾ ಕ್ರೀಡೆಗೆ ಬೆನ್ನೆಲುಬಾಗಿ ನಿಂತ ಸಾಧಕರಿಗೆ ಭಾರತೀಯ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಲಿಮಿಟ್‌ಲೆಸ್ ಇಂಪ್ಯಾಕ್ಟ್ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿತು.

ಇಂದು ಎಲಿಮಿನೇಟರ್ ಪಂದ್ಯ| ಸೋತವರು ಮನೆಗೆ | ಗೆದ್ದವರು ಸೆಮಿಫೈನಲ್‌ಗೆ

ಹೈದರಾಬಾದ್-ಆರ್‌ಆರ್ ನಡುವೆ ಕ್ವಾರ್ಟರ್

ಚಂಡೀಗಢ: ಐಪಿಎಲ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಕ್ಕಾಗಿ ರಾಜಸ್ಥಾನ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಎಲಿನೇಟರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಂದ್ಯಾವಳಿಯಲ್ಲಿ ವಿಭಿನ್ನ ಮಾದರಿಯ ಪ್ಲೇಆಫ್ ಇದ್ದು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳು ಎಲಿಮಿನೇಟರ್ ಪಂದ್ಯಗಳಲ್ಲಿ ಎದುರಾಗುತ್ತವೆ. ಅದು ಕ್ವಾರ್ಟರ್‌ಫೈನಲ್ ರೀತಿಯಲ್ಲೇ ನಡೆಯುತ್ತದೆ. ಸೋತವರು ಮನೆ ಹಾದಿ ಹಿಡಿದರೆ, ಗೆದ್ದವರು ಕ್ವಾಲಿಫೈಯರ್ 2 ಅಂದರೆ ಸೆಮಿಫೈನಲ್‌ಗೇರುತ್ತಾರೆ. 18 ಅಂಕ ಗಳಿಸಿದರೂ ರನ್‌ರೇಟ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಲೀಗ್ ಪಂದ್ಯಗಳನ್ನು ಮುಗಿಸಿತ್ತು. ಅತ್ತ ರಾಜಸ್ಥಾನ 16 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತವರಲ್ಲಿ ಈ ಪಂದ್ಯ ನಡೆಯಲಿದೆ.

ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಅವರ ಅದ್ಭುತ ಲಯದ ಬಲದೊಂದಿಗೆ ಹೈದರಾಬಾದ್ ಕೂಟದಲ್ಲಿ ಮಿಂಚಿದೆ. ಇತ್ತ ರಾಜಸ್ಥಾನ ತಂಡದ ಪರ ವೈಭವ್ ಸೂರ್ಯವಂಶಿ,



ಯಶಸ್ವಿ ಜೈಸ್ವಾಲ್ ಮತ್ತು ಜೋಫ್ರಾ ಆರ್ಚರ್ ಅವರ ಬಲದೊಂದಿಗೆ ರಾಜಸ್ಥಾನ ಮಿಂಚಿದೆ.

ಕೂಟದಲ್ಲಿ ಹೈದರಾಬಾದ್: ಐಪಿಎಲ್ ಆರಂಭಕ್ಕೂ ಮುನ್ನವೇ ದೊಡ್ಡ ಹೊಡೆತ. ತಂಡದ ಪ್ರಮುಖ ಬೌಲರ್, ನಾಯಕ ಪ್ಯಾಟ್ ಕಮ್ಮಿನ್ಸ್ ಗಾಯದಿಂದ ಹೊರಬಿದ್ದಿದ್ದರು. ಅಭಿಷೇಕ್ ಶರ್ಮ, ಇಶಾನ್ ಕಿಶನ್ ವಿಶ್ವಕಪ್ ಗೆದ್ದ ಭಾರತ ತಂಡದಿಂದ ನೇರವಾಗಿ ಮೈದಾನಕ್ಕಿಳಿದಿದ್ದರು. ಆದರೆ ಒಂದು ಹಂತದಲ್ಲಿ ಬೌಲಿಂಗ್‌ನಲ್ಲಿ ದೊಡ್ಡ ಹಿನ್ನಡೆಯನ್ನೇ ಎದುರಿಸಿದ್ದ ಹೈದರಾಬಾದ್ ಮೊದಲ ಪಂದ್ಯದಲ್ಲೇ ಸೋತಿತ್ತು. ಮೊಹಮ್ಮದ್ ಶಮಿ ಅವರನ್ನು ಬಿಟ್ಟುಕೊಟ್ಟ ಪರಿಣಾಮ ಆರಂಭದಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಆದರೆ ಇಶಾನ್ ಕಿಶನ್ ಅವರ ನಾಯಕತ್ವದಲ್ಲಿ ಹೊಸ ಆಟಗಾರರು ಕಣಕ್ಕಿಳಿದರು. ಸಾಕೀಬ್ ಹುಸೈನ್, ಪ್ರಫುಲ್ ಹಿಂಗೆ ಸೇರಿದಂತೆ ಇದೇ ಮೊದಲ ಬಾರಿಗೆ ಐಪಿಎಲ್ ಆಡಿದ ಆಟಗಾರರೊಂದಿಗೆ ಗೆಲ್ಲುವ ಸವಾಲನ್ನು ಹೈದರಾಬಾದ್ ಹೊಂದಿತ್ತು. ಆದರೆ ಕ್ಲಾಸೆನ್, ಕಿಶನ್ ಮತ್ತು ಅಭಿಷೇಕ್ ಬೇರೊಂದು ಪ್ಲಾನ್‌ನಲ್ಲಿದ್ದರು. ಪ್ರತಿ ಪಂದ್ಯದಲ್ಲಿ ಮಿಂಚಿ ಗೆಲುವಿನ ನಗಾಲೋಟ ಶುರು ಮಾಡಿತು. ಮಧ್ಯಮ ಐಪಿಎಲ್‌ನಲ್ಲಿ ಹೈದರಾಬಾದ್ ಒಂದೂ ಪಂದ್ಯದಲ್ಲಿ ಸೋಲಲೇ ಇಲ್ಲ. ಪ್ಲೇಆಫ್ ಫೈಟ್‌ನಲ್ಲಿ ಶಕ್ತಿಯುತ ತಂಡವಾಗಿ ಹೊರಹೊಮ್ಮಿತು. ಮೊದಲೆರಡು ಸ್ಥಾನಕ್ಕೂ ಬಲಿಷ್ಠ ಪೈಪೋಟಿ ನೀಡಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಮುಗಿಸಿದೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಹೆನ್ರಿಕ್ ಕ್ಲಾಸೆನ್: 606 ರನ್
- ಇಶಾನ್ ಕಿಶನ್: 569 ರನ್
- ಅಭಿಷೇಕ್ ಶರ್ಮ: 563 ರನ್
- ಟ್ರಾವಿಸ್ ಹೆಡ್: 393 ರನ್

ಬೌಲಿಂಗ್
- ಇಶಾನ್ ಮಾಲಿಂಗಾ: 19 ವಿಕೆಟ್
- ಸಾಕೀಬ್ ಹುಸೈನ್: 15 ವಿಕೆಟ್
- ಪ್ರಫುಲ್ ಹಿಂಗೆ: 11 ವಿಕೆಟ್
- ಪ್ಯಾಟ್ ಕಮ್ಮಿನ್ಸ್, ಶಿವಾಂಗ್ ಕುಮಾರ್: 8 ವಿಕೆಟ್

ಕೂಟದಲ್ಲಿ ರಾಜಸ್ಥಾನ

ಹರಾಜಿಗು ಮುನ್ನವೇ ತಂಡದ ಪ್ರಮುಖ ಆಟಗಾರ ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟಿದ್ದ ರಾಜಸ್ಥಾನ ರಾಯಲ್ಸ್ ಜಡೇಜಾ ಅವರನ್ನು ಖರೀದಿಸಿತ್ತು. ಪ್ರಮುಖ ಬದಲಾವಣೆಯಲ್ಲಿ ಹಸ್ರಂಗಾ ಅವರನ್ನೂ ಬಿಟ್ಟಿತ್ತು. ಈ ನಡುವೆ ಪಂದ್ಯಾವಳಿಗೆ ಬರುವ ಮುನ್ನವೇ ಸ್ಯಾಮ್ ಕರ್ರನ್ ಅವರು ಗಾಯದಿಂದ ಹೊರಬಿದ್ದರು. ವೈಭವ್ ಸೂರ್ಯವಂಶಿ ಮತ್ತು ಜೈಸ್ವಾಲ್ ಆಟದೊಂದಿಗೆ ಮಿಂಚಿದ ತಂಡವು ಗೆಲುವಿನ ನಾಗಾಲೋಟದಲ್ಲಿ ಮೆರೆಯಿತು. ಮೊದಲಿನ ಪಂದ್ಯಗಳಲ್ಲಿ ಮಿಶ್ರ ಫಲ ಪಡೆದ ರಾಜಸ್ಥಾನ ಮಧ್ಯಮ ಕೂಟದಲ್ಲಿ ಮಿಂಚಿತು. ರಿಯಾನ್ ಪರಾಗ್ ನೇತೃತ್ವದಲ್ಲಿ ಆಡಿದ ಪಂದ್ಯಗಳಲ್ಲಿ ಆರ್‌ಆರ್ ಪ್ರಮುಖವಾಗಿ ಜೋಫ್ರಾ ಆರ್ಚರ್ ಬಲ ಪಡೆಯಿತು. ಪ್ರತಿ ಪಂದ್ಯದಲ್ಲೂ ಮಿಂಚಿದ ಆರ್ಚರ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ವಿಶೇಷ ಪ್ರದರ್ಶನ ನೀಡಿದ್ದಾರೆ.

ಕೀ ಪ್ಲೇಯರ್ಸ್-ಪ್ರದರ್ಶನ

ಬ್ಯಾಟಿಂಗ್
- ವೈಭವ್ ಸೂರ್ಯವಂಶಿ: 583 ರನ್
- ಧ್ರುವ್ ಜುರೇಲ್: 458 ರನ್
- ಯಶಸ್ವಿ ಜೈಸ್ವಾಲ್: 397 ರನ್
- ರಿಯಾನ್ ಪರಾಗ್: 272 ರನ್

ಬೌಲಿಂಗ್
- ರವೀಂದ್ರ ಜಡೇಜಾ: 209 ರನ್, 8 ವಿಕೆಟ್
- ಜೋಫ್ರಾ ಆರ್ಚರ್: 21 ವಿಕೆಟ್
- ಬ್ರಿಜೇಶ್ ಶರ್ಮ: 13 ವಿಕೆಟ್
- ರವಿ ಬಿಷ್ಣೋಯ್: 11 ವಿಕೆಟ್

ಹೈದರಾಬಾದ್ ಪ್ರದರ್ಶನ

- ಪಂದ್ಯ 14
- ಗೆಲುವು 9
- ಸೋಲು 5
- ಅಂಕ 18
- ರನ್‌ರೇಟ್ +0.524

ಪಿಚ್ ರಿಪೋರ್ಟ್

ಹೊಸ ಚಂಡೀಗಢದಲ್ಲಿ ಪಂದ್ಯ ನಡೆಯಲಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತಂಡದ ತವರಾಗಿದ್ದು ಬ್ಯಾಟಿಂಗ್ ಪಿಚ್ ಅನ್ನುವ ಹೆಸರೂ ಪಡೆದಿದೆ. ಹೆಚ್ಚಿನ ಬೌನ್ಸ್, ಫ್ಲಾಟ್ ಪಿಚ್ ಮತ್ತು ಹತ್ತಿರದ ಬೌಂಡರಿ ಬ್ಯಾಟರ್‌ಗಳಿಗೆ ಲಾಭ ತಂದಿವೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಕೂಡ ಇರಬಹುದು. ಆದಾಗ್ಯೂ ಸ್ಪಿನ್ನರ್‌ಗಳಾದ ಜಡೇಜಾ, ಶಿವಾಂಗ್ ಕುಮಾರ್ ಅಂಥವರಿಗೆ ಅಲ್ಪ ಲಾಭ ಕೂಡ ನೀಡಲಿದೆ.





ಕೂಟದಲ್ಲಿ ಪ್ರದರ್ಶನ

- ಪಂದ್ಯ: 14
- ಗೆಲುವು: 8
- ಸೋಲು: 6
- ರನ್‌ರೇಟ್: +0.189

ಮುಖಾಮುಖಿ

- ಪಂದ್ಯ: 23, ಹೈದರಾಬಾದ್: 14
- ರಾಜಸ್ಥಾನ: 9, ಅಧಿಕ ಸ್ಕೋರ್: ಹೈದರಾಬಾದ್ 286, ಕನಿಷ್ಠ ಸ್ಕೋರ್: ರಾಜಸ್ಥಾನ 102/10

ಪಂದ್ಯದ ವಿವರ

ಯಾವಾಗ: ಬುಧವಾರ
ಎಲ್ಲಿ: ಚಂಡೀಗಢ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಸಬಲೆಂಕಾ ಗೆಲುವಿನಾರಂಭ

ಪ್ಯಾರಿಸ್: ಸ್ವಾಭಾವಿಕ ಪ್ರದರ್ಶನ ನೀಡಿರುವ ವಿಶ್ವದ ನಂಬರ್ 1 ಟೆನಿಸ್ ಆಟಗಾರ್ತಿ ಅರ್ನಾ ಸಬಲೆಂಕಾ ನಿರೀಕ್ಷೆಯಂತೆ ರೋಲ್ಯಾಂಡ್ ಗ್ಯಾರೋಸ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು. ಮಂಗಳವಾರ ನಡೆದ ಪಂದ್ಯದಲ್ಲಿ ಬೌಝುಾಚ್ ಮಾನೇರಿಯೋ ಅವರೊಂದಿಗೆ ಆಡಿದ ಅವರು, ನೇರ ಸೆಟ್‌ಗಳ ಸುಲಭ ಜಯ ಸಾಧಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ 4 ಅಂಕಗಳ ಮುನ್ನಡೆ ಸಾಧಿಸಿದ ಸಬಲೆಂಕಾ ಸರ್ವ್ ಹಾಗೂ ಏಸ್ ಪಾಯಿಂಟ್‌ಗಳೊಂದಿಗೆ ಮಿಂಚಿದರು. ಆರಂಭದಿಂದಲೂ ಒತ್ತಡ ಹೇರುತ್ತಾ, ಮುನ್ನಡೆ ಸಾಧಿಸಿದರು. ಎದುರಾಳಿ ಒಂದಿಷ್ಟು ಪ್ರಯತ್ನ ಪಟ್ಟ ನಂತರ ಒಂದು ಅಂಕ ಗಳಿಸಿದ್ದಲ್ಲದೆ, 5-1ರೊಂದಿಗೆ ಪಂದ್ಯದಲ್ಲಿ ಕಂಬ್ಯಾಕ್ ಮಾಡಿದರು. ಮುಂದಿನ ಆಟದಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಬೌಝುಾಚ್ ಸತತ ಮೂರು ಅಂಕ ಗಳಿಸಿದರು. ಸಬಲೆಂಕಾ ಪ್ರತಿರೋಧಕ್ಕೆ ಉತ್ತರ ಕೊಡುತ್ತಾ, ಸರ್ವ್ ಪಾಯಿಂಟ್‌ಗಳನ್ನು ಬ್ರೇಕ್ ಮಾಡುತ್ತಾ ಸಾಗಿದ ಎದುರಾಳಿ ಪಂದ್ಯವನ್ನು 5-4ಕ್ಕೆ ತಂದಿತ್ತರು. ಆದರೆ ಮುಂದಿನ ಸೆಟ್‌ನಲ್ಲಿ ಗೆಲುವು ಸಾಧಿಸಿದ ಸಬಲೆಂಕಾ ಸುತ್ತಿನ ಮುನ್ನಡೆ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಸಬಲೆಂಕಾ ಅಗ್ರೆಸ್ಸಿವ್ ಆಟವಾಡಿದರು. ಮೊದಲಿನಿಂದಲೂ ಆಕ್ರಮಣಕಾರಿ ಹೊಡೆತಗಳ ಮೂಲಕ ಮಿಂಚಿದ ಅವರು, 5-0ರಿಂದ ಮುನ್ನಡೆ ಸಾಧಿಸಿದರು. ಎದುರಾಳಿ ಮತ್ತೆ ಕಂಬ್ಯಾಕ್ ಮಾಡಿ 2 ಅಂಕ ಗಳಿಸಿದರು. ಆದರೆ ಸಬಲೆಂಕಾ 6-2ರಿಂದ ಪಂದ್ಯ ಗೆದ್ದರು. ಮತ್ತೊಂದು ಪಂದ್ಯದಲ್ಲಿ ಅನ್ ಲಿ, ಚೀನಾದ ಝೂಂಗ್ ಅವರೊಂದಿಗೆ 6-4, 6-2ರಿಂದ ಗೆದ್ದರು. ಜೋವಿಕ್ ಎಲಾಲಾ ಅವರೊಂದಿಗೆ 6-4, 6-2ರಿಂದ ಗೆಲುವು ಸಾಧಿಸಿದರು.

ಮುಲ್ಲರ್ ವಾಕೋವರ್: ಪ್ರಮುಖ ಆಟಗಾರ ಅಲೆಕ್ಸಾಂಡರ್ ಮುಲ್ಲರ್ ಅವರು ಸ್ಟೆಫಾನೋಸ್ ಸಿಟ್ಸಿಪಾಸ್ ವಿರುದ್ಧದ ಪಂದ್ಯದಲ್ಲಿ ಹೊರನಡೆದರು. ಮಂಗಳವಾರದ ಪಂದ್ಯದಲ್ಲಿ ಅವರು, ಹಿನ್ನಡೆ ಅನುಭವಿಸಿದ್ದರು. ಆರಂಭಿಕ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಸ್ಟೆಫಾನೋಸ್ ಸಿಟ್ಸಿಪಾಸ್ 6-2ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಕೂಡ ಮುನ್ನಡೆ ಕಾಯ್ದುಕೊಂಡರು. ಸ್ಟೆಫಾನೋಸ್ ಸಿಟ್ಸಿಪಾಸ್ 3 ಅಂಕ ಗಳಿಸಿದ್ದರು. ಮುಲ್ಲರ್ ಯಾವುದೇ ಅಂಕ ಗಳಿಸಿರಲಿಲ್ಲ. ಈ ನಡುವೆ ಗಾಯಗೊಂಡ ಮುಲ್ಲರ್ ವಾಕೋವರ್ ಕೊಟ್ಟರು.

ಕಾಮನ್‌ವೆಲ್ತ್ ಚಿನ್ನ ಗೆದ್ದ 8ರ ತಾಮಿಝ್

ಹೊಸದಿಲ್ಲಿ: ತಮಿಳುನಾಡಿನ 8 ವರ್ಷದ ಬಾಲಕ ತಾಮಿಝ್ ಅಮುಧನ್ ಎಸ್. ಕಾಮನ್‌ವೆಲ್ತ್ ಚೆಸ್ ಚಾಂಪಿಯನ್‌ಶಿಪ್‌ನ ಮೂರೂ ವಿಭಾಗದ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದ್ದಾನೆ. ಶ್ರೀಲಂಕಾದ ಕಾಲುತಾರಾದಲ್ಲಿ ನಡೆದ ಅಂಡರ್-10 ಓಪನ್ ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್ ಆಫ್ ಚೆಸ್ ಪಂದ್ಯಾವಳಿಯಲ್ಲಿ ಈ ಸಾಧನೆ ಮಾಡಿದ್ದು, ಸ್ಟ್ಯಾಂಡರ್ಡ್, ರ್ಯಾಪಿಡ್ ಮತ್ತು ಬ್ಲಿಟ್ಜ್ ಮೂರೂ ವಿಭಾಗದಲ್ಲಿ ಪದಕ ಗೆದ್ದಿದ್ದಾನೆ. ಒನ್ ಪ್ಲೇಯರ್ ಕೆಟಗೇರಿಯಲ್ಲಿ ಮೂರು ವಿಭಾಗಗಳಲ್ಲಿ ಚಾಂಪಿಯನ್‌ಶಿಪ್ ಪಂದ್ಯಗಳು ನಡೆಯುತ್ತವೆ. ಇದರಲ್ಲಿ ಕ್ಲೀನ್ ಸ್ವೀಪ್ ಮಾಡಿರುವ ಬಾಲಕ, 9 ಸುತ್ತಿನ ರ್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ 8.5 ಅಂಕಗಳನ್ನು ಗಳಿಸಿ ವಿಶ್ವ ಚೆಸ್ ಕ್ಷೇತ್ರದಲ್ಲಿ ವಿಶೇಷ ಗಮನ ಸೆಳೆದಿದ್ದಾನೆ.



- ಸ್ಟ್ಯಾಂಡರ್ಡ್, ರ್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಚಿನ್ನ
- ಅಂಡರ್-10 ಚಾಂಪಿಯನ್‌ಶಿಪ್‌ನಲ್ಲಿ ದಾಖಲೆ

ಈಗಾಗಲೇ ಐದು ಏಷ್ಯನ್ ಪದಕ: ಚೆಸ್‌ನಲ್ಲಿ ಈಗಾಗಲೇ ಐದು ಏಷ್ಯನ್ ಪದಕ ಗೆದ್ದಿರುವ ತಾಮಿಝ್ ದಾಖಲೆಗಳನ್ನು ಮಾಡಿದ್ದಾನೆ. ಅಂಡರ್-19 ಕಟ್ ಆಫ್‌ನಲ್ಲಿ ಬರುವ ಚೆಸ್ ಪಟು, ಈಎಲ್‌ಒ ರೇಟಿಂಗ್‌ನಲ್ಲಿ 2000 ಅಂಕಗಳನ್ನೂ ದಾಟಿರುವುದು ವಿಶೇಷ. ಇದಲ್ಲದೆ, ಈ ಹಿಂದೆ ನಡೆದಿದ್ದ ಆನ್‌ಲೈನ್ ಬ್ಲಿಟ್ಜ್ ಪಂದ್ಯದಲ್ಲಿ ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದ.

ಭಾರತ ವಿರುದ್ಧದ ಸರಣಿಗೆ ಅಫ್ಘಾನ್ ತಂಡ

ಹೊಸದಿಲ್ಲಿ: ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿ ಮಂಗಳವಾರ ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಜೂನ್‌ನಲ್ಲಿ ನಡೆಯಲಿರುವ ಏಕೈಕ ಟೆಸ್ಟ್‌ಗೆ ತನ್ನ ತಂಡಗಳನ್ನು ಪ್ರಕಟಿಸಿದೆ.


ಎಡಗೈ ಬ್ಯಾಟ್ಸ್‌ಮನ್ ಹಶ್ಮತುಲ್ಲಾ ಶಾಹಿದಿ ಎರಡೂ ತಂಡಗಳನ್ನು ಮುನ್ನಡೆಸಲಿದ್ದಾರೆ, ಇದರಲ್ಲಿ ರಹಮಾನಲ್ಲಾ ಗುರ್ಬಾಜ್ ಮತ್ತು ಅಜ್ಮತುಲ್ಲಾ ಒಮರ್‌ಜೈ ಕೂಡ ಇದ್ದಾರೆ. ಆದಾಗ್ಯೂ, ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರನ್ನು ಟೆಸ್ಟ್ ತಂಡದಲ್ಲಿ ಮಾತ್ರ ಸೇರಿಸಿಕೊಳ್ಳಲಾಗಿದೆ. ಟೆಸ್ಟ್ ಜೂನ್ 6 ರಿಂದ 10 ರವರೆಗೆ ನ್ಯೂ ಚಂಡೀಗಢದಲ್ಲಿ ನಡೆಯಲಿದ್ದು, ಏಕದಿನ ಸರಣಿ ಜೂನ್ 14 ರಿಂದ 20 ರವರೆಗೆ ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ನಡೆಯಲಿದ್ದು, ಪಂದ್ಯಗಳು ನಡೆಯಲಿವೆ.

ಅಫ್ಘಾನಿಸ್ತಾನ ತಂಡಗಳು: ಟೆಸ್ಟ್ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ಸೆಡಿಕುಲ್ಲಾ ಅಟಲ್, ರಹಮತ್ ಶಾ, ರಹಮಾನಲ್ಲಾ ಗುರ್ಬಾಜ್, ರಹಮಾನಲ್ಲಾ ಜದ್ರಾನ್, ಅಫ್ಸರ್ ಜಜೈ (ವಿಕೆ), ಇಕ್ರಮ್ ಅಲಿಖಿಲ್ (ವಿಕೆ), ಅಜ್ಮತುಲ್ಲಾ ಒಮರ್‌ಜೈ, ಶರಫುದ್ದೀನ್ ಅಶ್ರಫ್, ನಂಗ್ಯಾಲ್ ಖರೋಟೈ, ಖೈಸ್ ಅಹ್ಮದ್, ಬಿಲಾಲ್ ಸಮಿ, ಜಿಯಾ ಶರೀಫಿ, ಸಲೀಮ್ ಸಫಿ.

ಏಕದಿನ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆ), ಇಬ್ರಾಹಿಂ ಝದ್ರಾನ್, ಸೇದಿಕುಲ್ಲಾ ಅಟಲ್, ದರ್ವಿಶ್ ರಸೂಲಿ, ರಹಮತ್ ಷಾ, ಇಕ್ರಮ್ ಅಲಿಖಿಲ್, ಮೊಹಮ್ಮದ್ ನಬಿ, ಅಜ್ಮತುಲ್ಲಾ ಒಮರ್ಜಾಯ್, ರಶೀದ್ ಖಾನ್, ನಂಗ್ಯಾಲ್ ಎಎಮ್ ಗ್ರೋತಾರ್ಝಾಯ್, ಶರೀಫಿ, ಫರೀದ್ ಮಲಿಕ್, ಬಿಲಾಲ್ ಸಮಿ. ಮೀಸಲು ಪೂಲ್: ಖೈಸ್ ಅಹ್ಮದ್, ಸಲೀಮ್ ಸಫಿ, ಬಶೀರ್ ಅಹ್ಮದ್.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5996

ಎಡದಿಂದ ಬಲಕ್ಕೆ
2.ಕಸೂತಿ ಮಾಡಿದ ಮೇಲುಹಾಸಿದು (3)
5.ಮೃತದೇಹ ತಿನ್ನುವ ದೊಡ್ಡ ಪಕ್ಷಿ (4)
6.ನಡತೆಗೆಡು ಎಂಬರ್ಥದ ನುಡಿಗಟ್ಟು (4)
7.ಗ್ರಾಮಸ್ಥರ ಕೈಕೆಳಗಿನ ಸೇವಕ (4)
9.ತನ್ನ ನಾಡಿನ ಮೇಲಿರುವ ಅಭಿಮಾನ (4)
11.ಹೊಟ್ಟೆಬಾಕನನ್ನು ಹೀಗೂ ಹೇಳಬಹುದು (4)
13.ಬಡಗಿಯ ಕೆಲಸ (4)
14.ಈತ ಅರ್ಜುನನ ಮೊಮ್ಮಗ (4)
15.ಪುರಾವೆ ಇಲ್ಲದೆ ಹರಡುವ ವದಂತಿ (4)
17.ಪಕ್ಕ-ಬದಿ ಎಂಬರ್ಥದ ಶಬ್ದ (3)

ಮೇಲಿನಿಂದ ಕೆಳಕ್ಕೆ
1.ಕೊರಳಲ್ಲಿ ಧರಿಸುವ ಅಲಂಕಾರಿಕ ವಸ್ತು (2)
2.ತಪ್ಪು-ದೋಷವನ್ನು ಸರಿಮಾಡುವ ಕೆಲಸ (4)
3.ಜಯಂತಿ-ಉದಯಕುಮಾರ ಅಭಿನಯದ ಚಿತ್ರ ತಲೆಕೆಳಗಾಗಿದೆ (4)
4. ಜಾತ್ರೆಯಲ್ಲಿ ಸಿಗುವ ಪೊಳ್ಳು ಎಂಬರ್ಥದ ಸಿಹಿತಿಂಡಿ (2)
8.ಮಲ್ಲಯುದ್ಧದ ಪಟ್ಟಿನ ಕಡೆಯಲ್ಲಿ ಎಲ್ಲೆಯಿದೆ (3)
10.ಇದು ಪ್ರಚೋದನೆ ನೀಡುವಂಥಾದ್ದು (3)
12.ಮತ-ತರ ಒಳಗೊಂಡ ಮೇಲುಕೀಳು (4)
13.ದೂರ-ದೂರಕ್ಕೆ ಇಡುವ ಹೆಜ್ಜೆ (4)
14.ಗೊತ್ತು ಹಚ್ಚುವಿಕೆ-ಪರಿಶೋಧನೆಯಿದು (2)
16.ಒಂದು ವಸ್ತುವಿನ ಅಗ್ರಭಾಗ (2)

5995 ಉತ್ತರ

ಎಡದಿಂದ ಬಲಕ್ಕೆ:
1.ತ್ರಿಪುರ 2.ಕಾರ್ತಿಕ
4.ಆದೇಶ 6.ಜಲಾಶಯ
7.ಕುಲಗೋತ್ರ
8.ತೋಯಾಶಯ
10.ಚಲಾಚಲ
13.ಕದನರಾಗಿ
16.ರಸಾಂಜನ
17.ಕರಾಮತ್ತು

ಮೇಲಿನಿಂದ ಕೆಳಕ್ಕೆ:
1. ತ್ರಿಭುಜ 3.ಕಳತ್ರ
4.ಆಯವ್ಯಯ 5.ಲವಕುಶ
8.ತೋರಣದ್ವಾರ 9.ಶತಕ
11.ಚನ್ನಂಗಿ 12.ಚಕಾರವೆತ್ತು
14.ದಲನ 15.ರಾಜಕ

ಕಿರುಸುದ್ದಿ

ಧರ್ಮಸ್ಥಳಕ್ಕೆ ಉಪರಾಷ್ಟ್ರಪತಿ

ಮಂಗಳೂರು: ಭಾರತದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮೇ 30 ಮತ್ತು 31 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಮೇ 30 ಸಂಜೆ 4.25ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 5.05ಕ್ಕೆ ಧರ್ಮಸ್ಥಳ ಹೆಲಿಪ್ಯಾಡ್‌ಗೆ ಆಗಮನ, ಬಳಿಕ ಧರ್ಮಸ್ಥಳ ಅತಿಥಿಗೃಹದಲ್ಲಿ ವಾಸ್ತವ್ಯ.



ಮೇ 31 ಬೆಳಿಗ್ಗೆ 8 ಗಂಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯ ಭೇಟಿ, 11 ಗಂಟೆಗೆ ಬೆಳ್ತಂಗಡಿಯಲ್ಲಿ ಸಿರಿ ಇಂಡಸ್ಟ್ರಿಯಲ್ ಪಾರ್ಕ್ ಉದ್ಘಾಟನಾ ಕಾರ್ಯಕ್ರಮ, ಮಧ್ಯಾಹ್ನ 2.25ಕ್ಕೆ ಧರ್ಮಸ್ಥಳ ಹೆಲಿಪ್ಯಾಡ್, 3.05ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ, 3.15ಕ್ಕೆ ಉಪರಾಷ್ಟ್ರಪತಿಗಳು ಮಂಗಳೂರಿನಿಂದ ಕೇರಳ ಕಣ್ಣೂರಿಗೆ ನಿರ್ಗಮಿಸಲಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ತೀವ್ರಗೊಂಡ ಮಾದಕ ವಸ್ತುಗಳ ಬೇಟೆ: 1600ಕ್ಕೂ ಹೆಚ್ಚು ಮಂದಿ ಸೆರೆ

ಕಾಸರಗೋಡು: ಜಿಲ್ಲೆಯಲ್ಲಿ ಮಾದಕ ವಸ್ತು ಮಾಫಿಯಾ ವಿರುದ್ಧ ವ್ಯಾಪಕ ಕ್ರಮಕ್ಕೆ ಪೊಲೀಸರು ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಎನ್‌ಡಿಪಿಎಸ್ ಮತ್ತು ಪಿಐಟಿ ಎನ್‌ಡಿಪಿಎಸ್ ಕಾಯ್ದೆಗಳಡಿ ಪೊಲೀಸರು ಕಠಿಣ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದು, ಮಾದಕ ವಸ್ತುಗಳ ಕಳ್ಳಸಾಗಣೆ ಮಾಡಿದ 45 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ. 2026ರಲ್ಲಿ 1224 ಎನ್‌ಡಿಪಿಎಸ್ ಪ್ರಕರಣಗಳು ದಾಖಲಾಗಿವೆ. 1363 ಆರೋಪಿಗಳನ್ನು ಬಂಧಿಸಲಾಗಿದೆ. ಇವುಗಳಲ್ಲಿ 22 ಪ್ರಕರಣಗಳು ಬೃಹತ್ ಪ್ರಮಾಣದ್ದಾಗಿದ್ದು, 50 ಮಧ್ಯಮ ಮತ್ತು 116 ಪ್ರಕರಣಗಳು ಸಣ್ಣ ಪ್ರಮಾಣದವುಗಳಾಗಿವೆ. ಉಳಿದ ಪ್ರಕರಣಗಳು ಮಾದಕ ವಸ್ತುಗಳ ಬಳಕೆಗೆ ಸಂಬಂಧಿಸಿದ್ದು ಎಂದು ಸಂಬಂಧಿತ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಾನಸಿಕ ಖಿನ್ನತೆ: ಯುವಕ ಆತ್ಮಹತ್ಯೆ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಕೆಎಸ್ ರಾವ್ ನಗರದ ವಿಜಯಪುರ ಕಾಲೋನಿಯಲ್ಲಿ ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತ ಯುವಕನನ್ನು ಕಲ್ಬುರ್ಗಿ ಜಿಲ್ಲೆಯ ಎಡ್ರಾಮಾ ತಾಲೂಕು ಕುಕ್ಕುನೂರು ನಿವಾಸಿ ಭೀಮಾ ಶಂಕರ್ (32) ಎಂದು ಗುರುತಿಸಲಾಗಿದೆ. ಭೀಮಾ ಶಂಕರ್ ಕೂಲಿ ಕೆಲಸ ಮಾಡಿಕೊಂಡಿದ್ದು ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಎನ್ನಲಾಗಿದೆ. ಸೋಮವಾರ ರಾತ್ರಿ ತನ್ನ ಮನೆಯ ಕೋಣೆಯ ಪಕ್ಕಾಸಿಗೆ ಬೈರಾಸಿನಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತನ ಮಾವ ಸಿದ್ದಣ್ಣ ನೀಡಿದ ದೂರಿನಂತೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಮುಲ್ಕಿ ನಗರ ಪಂಚಾಯತ್ ಮಾಜೀ ಸದಸ್ಯ ಮಂಜುನಾಥ ಕಂಬಾರ, ಗೋಳಾಲಪ್ಪ, ಭೀಮಾ ಶಂಕರ್ ಆರ್.ಕೆ. ಸಾಮಾಜಿಕ ಕಾರ್ಯಕರ್ತ ಪ್ರಸಾದ್ ಪೂಜಾರಿ ಭೇಟಿ ನೀಡಿ ಅಂತಿಮ ವಿಧಿ ವಿಧಾನಗಳಿಗೆ ಸಹಕರಿಸಿದ್ದಾರೆ.



ಬುಡಕಟ್ಟು ಸಮಾವೇಶಕ್ಕೆ ತೆರಳಿದ ವ್ಯಕ್ತಿ ಹೃದಯಾಘಾತದಿಂದ ಸಾವು

ಕುಶಾಲನಗರ: ದಿಲ್ಲಿಯಲ್ಲಿ ನಡೆದ ಬುಡಕಟ್ಟು ಸಮಾವೇಶಕ್ಕೆ ತೆರಳಿದ್ದ ಕೊಡಗಿನ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಸಾವಿಗೀಡಾದ ಘಟನೆ ನಡೆದಿದೆ. ಇಲ್ಲಿಗೆ ಸಮೀಪದ ಕೂಡುಮಂಗಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡತ್ತೂರು ಗ್ರಾಮದ ಮತ್ತಾರಿ ಭೋಜಪ್ಪ ಎಂಬವರ ಪುತ್ರ ಮಾತ್ತಾರಿ ಹರ್ಷ (37) ಸಾವಿಗೀಡಾದವರು. ದಿಲ್ಲಿಯ ಬುಡಕಟ್ಟು ಸಮಾವೇಶಕ್ಕೆ ಕೊಡಗಿನ ನೂರಕ್ಕೂ ಅಧಿಕ ಪ್ರತಿನಿಧಿಗಳು ತೆರಳಿದ್ದು, ಕಾರ್ಯಕ್ರಮ ಮುಗಿಸಿ ಬರುವಾಗ ಮಧ್ಯಪ್ರದೇಶದ ಇಂಧೋರ್ ರೈಲು ನಿಲ್ದಾಣದಲ್ಲಿ ಎದೆ ನೋವು ಕಾಣಿಸಿಕೊಂಡಿದೆ. ನೋವಿನಿಂದ ನರಳುತ್ತಿದ್ದ ಹರ್ಷ ಅವರನ್ನು ಜೊತೆಯಲ್ಲಿದ್ದವರು ರೈಲ್ವೆ ನಿಲ್ದಾಣದ ವೈದ್ಯಾಧಿಕಾರಿಯವರ ಬಳಿ ತಪಾಸಣೆ ಮಾಡಿಸುವಷ್ಟರಲ್ಲಿ ಅವರ ಪ್ರಾಣ ಪಕ್ಷಿ ಹಾರಿ ಹೋಗಿದೆ.ಮೃತರು ಪತ್ನಿ ಮತ್ತು ಒಂದು ಮಗುವನ್ನು ಅಗಲಿದ್ದಾರೆ.



ಆಂತರಿಕ ದೂರು ಸಮಿತಿ ರಚನೆ ಕಡ್ಡಾಯ: ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ

ಮಹಿಳೆಯರ ಸಮಸ್ಯೆಗೆ ತುರ್ತು ಸ್ಪಂದಿಸಿರಿ

ಉಡುಪಿ: ಮಹಿಳೆಯರು ಕೆಲಸ ನಿರ್ವಹಿಸುತ್ತಿರುವ ಸಂಸ್ಥೆ, ಕಚೇರಿಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದಲ್ಲಿ ದೂರು ಸಲ್ಲಿಸಲು ಅನುಕೂಲವಾಗುವಂತೆ ಆಂತರಿಕ ದೂರು ಸಮಿತಿಯನ್ನು ರಚಿಸಿ, ದೂರುಗಳು ಬಂದಾಗ ಸಕ್ರಿಯವಾಗಿ ಕಾರ್ಯನಿರ್ವಹಿಸಿ, ಮಹಿಳೆಯರಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಮಂಗಳವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ.ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರಕ್ಷಕ ಇಲಾಖೆ ಹಾಗೂ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಉಡುಪಿ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಮಹಿಳಾ ಸ್ಪಂದನಾ ಮತ್ತು ಮಹಿಳಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ

ಉದ್ಯೋಗಸ್ಥ ಮಹಿಳೆಯರು ತಮ್ಮ ಕಾರ್ಯ ನಿರ್ವಹಿಸುತ್ತಿರುವ ಜಾಗದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದಲ್ಲಿ ದೂರುಗಳನ್ನು ನೀಡಲು ಅನುಕೂಲವಾಗುವಂತೆ, ಸರಕಾರದ ಆದೇಶದಂತೆ 10 ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರಕಾರಿ, ಖಾಸಗಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು. ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ನಡೆಸಬೇಕು. ಆಂತರಿಕ ಸಮಿತಿಯ ಕಾರ್ಯ ನಿರ್ವಹಣೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು. ಈ ಸಮಿತಿಯ ರಚಿಸುವುದರೊಂದಿಗೆ ಸಮಿತಿಯ ಅಧ್ಯಕ್ಷರು, ಇತರೆ ಸದಸ್ಯರ ಹೆಸರಗಳನ್ನು ಕಡ್ಡಾಯವಾಗಿ ಫಲಕಗಳಲ್ಲಿ ಪ್ರದರ್ಶಿಸಬೇಕು ಎಂದರು.



ಸಮಾಜದಲ್ಲಿ ದುರ್ಬಲರಾದ ಮಹಿಳೆಯರು ಸಮಸ್ಯೆಯ ಸುಳಿಯಲ್ಲಿ ಸಿಕ್ಕಿ ನ್ಯಾಯಕ್ಕಾಗಿ ಪೊಲೀಸ್ ಠಾಣೆಗಳಿಗೆ ಬಂದಾಗ, ಅವರ ಸಮಸ್ಯೆಗಳನ್ನು ಸಂಯಮದಿಂದ ಕೇಳಿ ತಿಳಿದು ಅವರಿಗೆ ನ್ಯಾಯ ಒದಗಿಸುವ ಕಾರ್ಯಗಳನ್ನು ಮಾಡುವುದರೊಂದಿಗೆ ಸ್ಪಂದಿಸಬೇಕು.

ಪೊಲೀಸ್ ಠಾಣೆ ಜನಸ್ನೇಹಿಯಾಗಲಿ

ಕಾಲೇಜಿನ ಸಮೀಪದಲ್ಲಿ ಮಾದಕ ವಸ್ತುಗಳ ತಡೆಗೆ ಕ್ರಮ ವಹಿಸಬೇಕು. ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಮಹಿಳೆಯರು ಹೋದಾಗ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ದೂರುಗಳು ಕೇಳಿ ಬರುತ್ತಿವೆ ಹಾಗೂ ಜಿಲ್ಲೆಯಲ್ಲಿ ಕೆಲವು ಮಹಿಳೆಯರ ಮೇಲೆ ಎಫ್.ಐ.ಆರ್. ಆಗಿರುವುದು ಕಂಡು ಬಂದಿದೆ. ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದು ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಡಾ. ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ಜಿಲ್ಲೆಯಲ್ಲಿ 345 ಸರಕಾರಿ ಕಚೇರಿಗಳು ಹಾಗೂ 444 ಖಾಸಗಿ ಕಚೇರಿ ಸೇರಿದಂತೆ 789 ಆಂತರಿಕ ದೂರು ಸಮಿತಿಗಳ ರಚನೆಯಾಗಿದೆ. ಶೀ ಬಾಕ್ಸ್ ಪೋರ್ಟಲ್‌ನಲ್ಲಿ 346 ಸಮಿತಿಯ ಮಾಹಿತಿಯನ್ನು ನಮೂದಿಸಲಾಗಿದೆ. ಬಾಕಿ ಉಳಿದಿರುವ 443 ಸಮಿತಿಗಳ ಮಾಹಿತಿಯನ್ನು ಇಂಡೀಕರಿಸುವಂತೆ ಸೂಚಿಸಿದ ಅವರು, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ -2013 ಕೇವಲ ಕಾಗದಕ್ಕೆ ಸೀಮಿತವಾಗದೇ ಅನುಷ್ಠಾನ ಕಾರ್ಯವು ಸರಿಯಾದ ರೀತಿಯಲ್ಲಿ ಮಹಿಳೆಯರ ಸಮಸ್ಯೆಗೆ ಸ್ಪಂದಿಸುವಂತಾಗಬೇಕು ಎಂದರು.

ಸರಕಾರ ಜನಸಾಮಾನ್ಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತವೆ. ಇವು ಅರ್ಹ ಪ್ರತಿಯೊಬ್ಬ ಫಲಾನುಭವಿಗಳಿಗೂ ತಲುಪಬೇಕು. ಮಂಗಳವಾರ ಬೆಳಗ್ಗೆ ಮಲ್ಪೆ ಬಂದರಿನಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರನ್ನು ಸಂದರ್ಶಿಸಿದಾಗ ಅವರುಗಳಲ್ಲಿ ನೈಜ ಫಲಾನುಭವಿಗಳಾಗುವಂತಿದ್ದರೂ ಸಹ ಸರಕಾರದ ಸೌಲಭ್ಯದಿಂದ ವಂಚಿತರಾಗಿದ್ದಾರೆ.

> **ಶಿಕ್ಷಕರಿಗೆ ಗೌರವ ಧನ ಕೊಡಿಸಿ**
>
> **ವಿಶೇಷಚೇತನ ಶಾಲೆಗಳಲ್ಲಿ ವಿಶೇಷ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ಗೌರವಧನಗಳು ಸಿಗುತ್ತಿಲ್ಲ ಎಂಬ ದೂರುಗಳು ಬರುತ್ತಿದೆ. ಇದಕ್ಕೆ ಕೂಡಲೇ ಸ್ಪಂದಿಸಬೇಕು. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಋತು ಚಕ್ರ ರಜೆ, ಹೆರಿಗೆ ರಜೆ ಸೌಲಭ್ಯ ಸೇರಿದಂತೆ ಮತ್ತಿತರ ನಿಯಮಾನುಸಾರ ಸಿಗುವ ಸೌಲಭ್ಯಗಳನ್ನು ಕಲ್ಪಿಸಬೇಕು.**
>
> ■ ಡಾ. ನಾಗಲಕ್ಷ್ಮಿ ಚೌಧರಿ

ಕಾರಣ ಅವರಿಗೆ ಅರಿವಿನ ಕೊರತೆ ಇದೆ. ಸರಕಾರದ ಸೌಲಭ್ಯ ತಿಳಿಸುವ ವಿಶೇಷ ಶಿಬಿರ ಆಯೋಜಿಸುವುದರೊಂದಿಗೆ ಅವರುಗಳಿಗೆ ಸೌಲಭ್ಯ ತಲುಪಿಸಿ, ಆಯೋಗಕ್ಕೆ ವರದಿ ಮಾಡುವಂತೆ ಸೂಚಿಸಿದರು.

ಮಲ್ಪೆ ಬಂದರು ವ್ಯಾಪ್ತಿಯಲ್ಲಿ ಶುಚಿತ್ವಕ್ಕೆ ಒತ್ತು ನೀಡಬೇಕು. ಸಿ.ಸಿ.ಟಿವಿಗಳನ್ನು ಅಳವಡಿಸಬೇಕು. ಶೌಚಾಲಯಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು ಎಂದ ಅವರು, ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ವೇತನ ಲಭ್ಯ ವಾಗುವಂತೆ ನೋಡಿಕೊಳ್ಳಬೇಕು ಎಂದು ಬಂದರು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪರಿಶಿಷ್ಟ ಜಾತಿ, ಪಂಗಡದವರಿಗೆ ಸರಕಾರದ ಯೋಜನೆಗಳ ಬಗ್ಗೆ ಮಾಹಿತಿ ಕೊರತೆಯಿಂದಾಗಿ ಸೌಲಭ್ಯಗಳು ದೊರೆಯುತ್ತಿಲ್ಲ ಎಂಬ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸರಕಾರದ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡುವುದರೊಂದಿಗೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯಗಳು ದೊರಕುವಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೇರ್ಪಡೆಗೆ ಅವಕಾಶಗಳು ದೊರೆಯುತ್ತಿಲ್ಲ ಎಂಬ ಬಗ್ಗೆ ಕೇಳಿಬರುತ್ತಿದೆ. ಈ ಬಗ್ಗೆ ಸರಕಾರದ ಗಮನಕ್ಕೆ ತಂದು ಹೊಸ ಹಾಸ್ಟೆಲ್‌ಗಳ ಪ್ರಾರಂಭಕ್ಕೆ ಪ್ರಯತ್ನಿಸಲಾಗುವುದು ಎಂದ ಅವರು, ಪ್ರಸ್ತುತ ಹಾಸ್ಟೆಲ್‌ಗಳು ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ದೈನಂದಿನ ಆರೋಗ್ಯ ಸೇವೆಗಳ ಚಟುವಟಿಕೆಗಳು ನಡೆಯಲು ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಆದ್ಯತೆಯ ಮೇಲೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದರು.

ಕಾರ್ಕಳ ತಾಲೂಕು ಆಸ್ಪತ್ರೆಯಲ್ಲಿ ಹೆರಿಗೆ ತಜ್ಞರ ಕೊರತೆಯಿಂದಾಗಿ ಕಳೆದ ಒಂದು ವರ್ಷದಿಂದ ಹೆರಿಗೆಗಾಗಿ ಹೆಣ್ಣು ಮಕ್ಕಳು ಇತರೆ ತಾಲೂಕು ಅಥವಾ ಜಿಲ್ಲೆಗೆ ಹೋಗುವಂತಹ ಅನಿವಾರ್ಯತೆ ಉಂಟಾಗಿದೆ. ಕೂಡಲೇ ಹೆರಿಗೆ ತಜ್ಞರನ್ನು ನೇಮಕ ಮಾಡಿಕೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಆಯೋಗದಲ್ಲಿ ದಾಖಲಾಗಿರುವ ಸುಮಾರು 54 ಪ್ರಕರಣಗಳ ವಿಚಾರಣೆ ನಡೆಸುವುದರೊಂದಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಪರಿಹರಿಸಲು ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಆಯೋಗದ ಕಾರ್ಯದರ್ಶಿ ರೂಪ ಆರ್, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಕುಮಾರ್ ಶೆಟ್ಟಿ, ವಿವಿಧ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪತ್ತನಾಜೆ ಉತ್ಸವ ಸಮಾಪ್ತಿ: ಧರ್ಮಸ್ಥಳದಲ್ಲಿ ವಿಶೇಷ ಪೂಜೆಗಳು

ಯಕ್ಷಗಾನ ಮೇಳದ ತಿರುಗಾಟಕ್ಕೆ ಮಂಗಳ

ಧರ್ಮಸ್ಥಳ: ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪತ್ತನಾಜೆ ಪ್ರಯುಕ್ತ ಸೋಮವಾರ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ವಿಶೇಷ ರಂಗಪೂಜೆ ನೆರವೇರಿತು. ಬಳಿಕ ಶ್ರೀ ದೇವರ ಉತ್ಸವಮೂರ್ತಿಯ ಬಲಿ ಉತ್ಸವ, ವಸಂತ ಪೂಜೆ, ಅಷ್ಟಾವಧಾನ ಸೇವೆ ಹಾಗೂ ಧ್ವಜಮರ ಅವರೋಹಣ ವಿಧಿವಿಧಾನಗಳೊಂದಿಗೆ ಉತ್ಸವಮೂರ್ತಿಯು ಗರ್ಭಗುಡಿಗೆ ಪ್ರವೇಶಿಸುವ ಮೂಲಕ ಪ್ರಸಕ್ತ ಸಾಲಿನ ವಾರ್ಷಿಕ ವಿಶೇಷ ಸೇವೆಗಳು ಮತ್ತು ಉತ್ಸವಗಳು ಸಮಾಪ್ತಿಗೊಂಡವು.

ಕಾರ್ತಿಕ ಮಾಸದ ದೀಪೋತ್ಸವದೊಂದಿಗೆ ಎಂದಿನಂತೆ ವಿಶೇಷ ಸೇವೆಗಳು ಹಾಗೂ ಉತ್ಸವಗಳು ಪುನರಾರಂಭಗೊಳ್ಳಲಿವೆ. ಸೋಮವಾರದ ಕಾರಣ ಕ್ಷೇತ್ರದಲ್ಲಿ ಭಕ್ತರ ದಟ್ಟಣೆ ಹೆಚ್ಚಾಗಿದ್ದು, ಊರು–ಪರಊರುಗಳಿಂದ ಆಗಮಿಸಿದ ಸಾವಿರಾರು ಭಕ್ತರು ಉತ್ಸವಗಳಲ್ಲಿ ಪಾಲ್ಗೊಂಡರು.



ಯಕ್ಷಗಾನದ ತಿರುಗಾಟ ಸಮಾಪ್ತಿ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಪ್ರಸಕ್ತ ಸಾಲಿನ ವಾರ್ಷಿಕ ತಿರುಗಾಟವೂ ಇದೇ ಸಂದರ್ಭದಲ್ಲಿ ಸಮಾಪ್ತಿಗೊಂಡಿತು. ಈ ಅಂಗವಾಗಿ ಮೇಳದ ಶ್ರೀ ಮಹಾಗಣಪತಿ ದೇವರಿಗೆ ಧರ್ಮಸ್ಥಳದ ಮಂಜುಕೃಪಾದಲ್ಲಿ ಮಧ್ಯಾಹ್ನ ಗಣಯಾಗ ಹಾಗೂ ಮಹಾಪೂಜೆ ನೆರವೇರಿಸಲಾಯಿತು.

ಸಂಜೆ ಮಹಾಪೂಜೆಯ ನಂತರ ಕ್ಷೇತ್ರದ ಸಕಲ ಗೌರವಗಳೊಂದಿಗೆ ಶ್ರೀ ಮಹಾಗಣಪತಿ ದೇವರನ್ನು ಭವ್ಯ ಶೋಭಾಯಾತ್ರೆಯ ಮೂಲಕ ಕ್ಷೇತ್ರಕ್ಕೆ ಬರಮಾಡಿಕೊಳ್ಳಲಾಯಿತು. ಕ್ಷೇತ್ರದ ಆನೆಗಳು, ಬಸವ, ಕೇರಳದ ಚೆಂಡೆ ವಾದ್ಯ, ಬಳಗ, ಜಾಗಟೆ ಹಾಗೂ ವಿವಿಧ ವಾದ್ಯಮೇಳಗಳ ವೈಭವದ ನಡುವೆ ನಡೆದ ಮೆರವಣಿಗೆಯಲ್ಲಿ ಭಕ್ತರು ಭಕ್ತಿಭಾವದಿಂದ ಪಾಲ್ಗೊಂಡರು. ಬಳಿಕ ಶ್ರೀ ದೇವರ ದರ್ಶನ ಸೇವೆ ನೆರವೇರಿಸಿ, ಛತ್ರ ಗಣಪತಿ ಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ವಿ. ಹೆಗ್ಗಡೆ, ಮೇಳದ ಯಜಮಾನ ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಪಾರುಪತ್ಯೆದಾರ ಲಕ್ಷ್ಮೀನಾರಾಯಣ ರಾವ್, ಮೇಳದ ವ್ಯವಸ್ಥಾಪಕ ಗಿರೀಶ್ ಹೆಗ್ಡೆ, ಯಕ್ಷಗಾನ ಕಲಾವಿದರು, ಕ್ಷೇತ್ರದ ಸಿಬ್ಬಂದಿ ವರ್ಗ ಹಾಗೂ ಭಕ್ತರು ಭಾಗವಹಿಸಿದ್ದರು.

> **ಮಂಗಳ ಹಾಡಲಿದ್ದಾರೆ...**
>
> **ಮಂಗಳವಾರದಿಂದ ಮೂರು ದಿನಗಳ ಕಾಲ ಕ್ಷೇತ್ರದ ಅಮೃತ ವರ್ಷಿಣಿ ಸಭಾಭವನದಲ್ಲಿ ಸೇವೆಯಾಟಗಳು ನಡೆಯಲಿದ್ದು, ಕಲಾವಿದರು ಸಂಪ್ರದಾಯ ಬದ್ಧವಾಗಿ ಗೆಜ್ಜೆ ಬಿಚ್ಚುವ ಮೂಲಕ ಪ್ರಸಕ್ತ ಸಾಲಿನ ವಾರ್ಷಿಕ ತಿರುಗಾಟಕ್ಕೆ ಮಂಗಳ ಹಾಡಲಿದ್ದಾರೆ.**

ಕೂದಲು ದಾನ ಮಾಡಿ ಮಾದರಿಯಾದ ಸಂಗೀತ ಶಿಕ್ಷಕಿ

ಕಾಸರಗೋಡು: ಸುಮಧುರ ಸಂಗೀತದಿಂದ ವಿದ್ಯಾರ್ಥಿಗಳ ಹೃದಯವನ್ನು ತುಂಬುವ ಸಂಗೀತ ಶಿಕ್ಷಕಿ ಸ್ವಾತಿ ಟೀಚರ್ ಅವರು ತಮ್ಮ ಕೂದಲು ದಾನಗೈದು ಮಾದರಿಯಾಗಿದ್ದಾರೆ. ಕ್ಯಾನ್ಸರ್ ರೋಗಿಗಳನ್ನು ಬೆಂಬಲಿಸುವ ಉದ್ದೇಶದಿಂದ ಶಿಕ್ಷಕಿ ತಮ್ಮ ಉದ್ದನೆಯ ಕೂದಲನ್ನು ದಾನ ಮಾಡುವ ಮೂಲಕ ಸಮಾಜಕ್ಕೆ ಈ ಮಹಾನ್ ಸಂದೇಶವನ್ನು ನೀಡಿದ್ದಾರೆ.

ಕ್ಯಾನ್ಸರ್ ಚಿಕಿತ್ಸೆಯ ಭಾಗವಾಗಿ ಕಿಮೊಥೆರಪಿಯಿಂದ ಕೂದಲು ಕಳೆದುಕೊಳ್ಳುವವರು ಅನುಭವಿಸುವ ಮಾನಸಿಕ ಯಾತನೆ ಸಣ್ಣದಲ್ಲ. ಅವರಿಗೆ ಆತ್ಮವಿಶ್ವಾಸ ತುಂಬುವ ಸಲುವಾಗಿ ಸ್ವಾತಿ ಟೀಚರ್ ಅವರು ವಿಗ್ ತಯಾರಿಸಲು ತಮ್ಮ ಕೂದಲನ್ನು ದಾನ ಮಾಡಿದರು.



ಸ್ವಾತಿ ಟೀಚರ್ ತಮ್ಮ ವಿದ್ಯಾರ್ಥಿಗಳಿಗೆ ಮತ್ತು ಸಮಾಜಕ್ಕೆ ಸಂಗೀತದಂತೆಯೇ ಇತರರ ಜೀವನವನ್ನು ಸಂತೋಷದಿಂದ ತುಂಬಬಹುದು ಎಂಬ ಉತ್ತಮ ಪಾಠವನ್ನು ನಿರೂಪಿಸಿಕೊಟ್ಟಿದ್ದಾರೆ.

ಶಿಕ್ಷಕಿಯಾಗಿ ಮಕ್ಕಳಿಗೆ ಉತ್ತಮ ಅಭ್ಯಾಸಗಳನ್ನು ಕಲಿಸುವುದರ ಜೊತೆಗೆ ತಮ್ಮದೇ ಆದ ಜೀವನದಿಂದ ಮಾದರಿಯಾಗಿರುವ ಸ್ವಾತಿ ಟೀಚರ್ ಅವರ ಈ ಕಾರ್ಯವು ಅತ್ಯಂತ ಶ್ಲಾಘನೀಯ. ಅವರು ರವಿವರ್ಮ ಶಾಲೆಯ ಸಂಗೀತ ಶಿಕ್ಷಕಿಯಾಗಿದ್ದಾರೆ. ಕುಂಡಂಗುಳಿ ಸಹೃದಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಂಥಾಲಯದ ಕಾರ್ಯದರ್ಶಿ ಕೆ.ವಿನೋದ್ ಅವರು ಕೂದಲನ್ನು ಪಡೆದುಕೊಂಡರು.

ಮಾದಕ ದ್ರವ್ಯ ಜಾಲ ನಿರ್ಮೂಲನೆಗೆ ಕ್ರಮ

ಜೂ.1ರಿಂದ ‘ಆಪರೇಷನ್ ತೂಫಾನ್’: ಚೆನ್ನಿತ್ತಲ

ಕಾಸರಗೋಡು: ಕೇರಳದಲ್ಲಿ ಹೆಚ್ಚುತ್ತಿರುವ ಮಾದಕ ದ್ರವ್ಯ ಜಾಲವನ್ನು ನಿಯಂತ್ರಿಸಲು ರಾಜ್ಯ ಸರಕಾರವು ಆಪರೇಷನ್ ತೂಫಾನ್ ಮಾದಕ ದ್ರವ್ಯ ವಿರೋಧಿ ಕಾರ್ಯಾಚರಣೆ ಎಂಬ ಹೆಸರಿನ ವಿಶೇಷ ಅಭಿಯಾನ ಆರಂಭಿಸಲು ನಿರ್ಧರಿಸಿದೆ ಎಂದು ಗೃಹ ಸಚಿವ ರಮೇಶ್ ಚೆನ್ನಿತ್ತಲ ಹೇಳಿದ್ದಾರೆ.

ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ತಿರುವನಂತಪುರದಲ್ಲಿ ನಡೆಸಿದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮುಂದಿನ ಶೈಕ್ಷಣಿಕ ವರ್ಷದ ಆರಂಭದ ದಿನವಾದ ಜೂನ್ 1ರಿಂದ ಈ ಅಭಿಯಾನ ಜಾರಿಯಾಗಲಿದೆ ಎಂದರು.

ಮಾದಕ ವಸ್ತುಗಳ ಬಳಕೆ ಕೇರಳದಲ್ಲಿ ಗಂಭೀರ ಸಮಸ್ಯೆಯಾಗಿದೆ. ಕಾಸರಗೋಡಿನಿಂದ ತಿರುವನಂತಪುರ ಜಿಲ್ಲೆ ತನಕವೂ ಮಾದಕ ದ್ರವ್ಯಗಳ ಜಾಲ ಹರಡಿದೆ. ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಮಾಫಿಯಾ ಕಾರ್ಯನಿರ್ವಹಿಸುತ್ತಿದೆ. ಈ ಜಾಲವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಆಪರೇಷನ್ ತೂಫಾನ್ ಆರಂಭಿಸಲಾಗುತ್ತಿದೆ ಎಂದು ಹೇಳಿದರು.



ಮಾದಕ ವಸ್ತುಗಳ ಮೂಲವನ್ನು ಪತ್ತೆಹಚ್ಚಲು ವಿಶೇಷ ಕಾರ್ಯಾಚರಣೆ ನಡೆಯಲಿದೆ. ಅಂತಾರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಮಾದಕ ದ್ರವ್ಯ ಜಾಲದ ವಿರುದ್ಧ ಕ್ರಮ ಕೈಗೊಳ್ಳಲು ಕೇರಳ ಡಿಜಿಪಿಯವರು ಇತರ ರಾಜ್ಯಗಳ ಪೊಲೀಸ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರಲಿದ್ದಾರೆ ಎಂದು ಅವರು ತಿಳಿಸಿದರು.

ಪೊಲೀಸ್ ಠಾಣೆ ಇನ್ನು ಮುಂದೆ ಜನ ಸೇವಾ ಕೇಂದ್ರವಾಗಿ ಮಾರ್ಪಾಡು

ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳನ್ನು ಜನ ಸೇವಾ ಕೇಂದ್ರಗಳಾಗಿ ಪರಿವರ್ತಿಸಲಾಗುವುದು ಎಂದು ಸಚಿವರು ಹೇಳಿದರು. ಠಾಣೆಗೆ ಬರುವ ಸಾರ್ವಜನಿಕರನ್ನು ಗೌರವದಿಂದ ಸ್ವಾಗತಿಸಲಾಗುವುದು. ಜನರ ದೂರುಗಳನ್ನು ಸಮರ್ಪಕವಾಗಿ ಆಲಿಸಲಾಗುವುದು. ಠಾಣೆಗಳ ಕಾರ್ಯವಿಧಾನದಲ್ಲಿ ಭಾರೀ ಬದಲಾವಣೆ ತರಲಾಗುವುದು ಎಂದು ನುಡಿದರು.

ಇದೇ ವೇಳೆ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವೈಯಕ್ತಿಕ ಭದ್ರತಾ ಸಿಬ್ಬಂದಿ ವಿರುದ್ಧದ ಪ್ರಕರಣದ ತನಿಖೆ ಕುರಿತು ಪ್ರತಿಕ್ರಿಯಿಸಿದ ಅವರು, ವಿಶೇಷ ತನಿಖಾ ತಂಡ ವರದಿ ಸಲ್ಲಿಸಿದ ಬಳಿಕ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಪಿಣರಾಯಿ ವಿಜಯನ್ ಸರಕಾರದ ರಾಜಕೀಯ ಪ್ರವಾಸದ ವೇಳೆ ಕಪ್ಪು ಬಾವುಟ ಪ್ರದರ್ಶಿಸಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧದ 2024ರ ದಾಳಿ ಪ್ರಕರಣವನ್ನು ಸಮಗ್ರವಾಗಿ ಮರು ತನಿಖೆಗೆ ಒಳಪಡಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಕಳೆದ ವರ್ಷ ವಿರೋಧ ಪಕ್ಷದ ಶಾಸಕರಾಗಿದ್ದ ವೇಳೆ ರಮೇಶ್ ಚೆನ್ನಿತ್ತಲ ಅವರು ಮಾದಕ ವಸ್ತುಗಳ ವಿರುದ್ಧ ನಡಿಗೆ ಹೆಸರಿನಲ್ಲಿ ರಾಜ್ಯವ್ಯಾಪಿ ಜಾಗೃತಿ ಅಭಿಯಾನ ಕೈಗೊಂಡಿದ್ದರು. 2014ರಿಂದ 2016ರ ವರೆಗೆ ಉಮ್ಮನ್ ಚಾಂಡಿ ಸರಕಾರದಲ್ಲಿ ಗೃಹ ಸಚಿವರಾಗಿದ್ದಾಗ ಅಕ್ರಮ ಹಣಕಾಸು ಸಂಸ್ಥೆಗಳ ವಿರುದ್ಧ ಆಪರೇಷನ್ ಕುಬೇರ ಕಾರ್ಯಾಚರಣೆ ನಡೆಸಿದ್ದರು.

ಉಡುಪಿ ಜಿಲ್ಲೆಯ ಹೆದ್ದಾರಿಗಳಲ್ಲಿ ‘ಧೂಮ್ ಮಚಾಲೇ’ ಸವಾರರಿಗೆ ಸಿಂಹಸ್ವಪ್ನವಾಗಿ ಪರಿಣಮಿಸಿದೆ ಪೊಲೀಸ್ ಇಲಾಖೆಯ ‘ಸ್ಪೀಡ್ ರಾಡಾರ್’

ಒಂದೇ ವಾರದಲ್ಲಿ 46 ಸಾವಿರಕ್ಕೂ ಹೆಚ್ಚು ಸಂಚಾರ ನಿಯಮ ಉಲ್ಲಂಘನೆ ಪತ್ತೆ!

ಉಡುಪಿ: ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಅತಿವೇಗ ಹಾಗೂ ಅಜಾಗರೂಕ ಚಾಲನೆಗೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ಕೈಗೊಂಡಿರುವ ಹೈಟೆಕ್ ಕಣ್ಗಾವಲು ಪ್ರಕ್ರಿಯೆ ಭರ್ಜರಿ ಫಲಿತಾಂಶ ನೀಡಲಾರಂಭಿಸಿದೆ. ಜಿಲ್ಲೆಯ ಆರು ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಅಳವಡಿಸಲಾಗಿರುವ ಅತ್ಯಾಧುನಿಕ ಸ್ಪೀಡ್ ರಾಡಾರ್ ಮತ್ತು ಆಟೋಮೆಟಿಕ್ ನಂಬರ್ ಪ್ಲೇಟ್ ರೀಡರ್ (ಅಫೆಕ್ರ) ಕ್ಯಾಮೆರಾಗಳು ಸಂಚಾರಿ ನಿಯಮ ಉಲ್ಲಂಘಿಸುವ ವಾಹನ ಸವಾರರ ಪಾಲಿಗೆ ಸಿಂಹಸ್ವಪ್ನವಾಗಿ ಪರಿಣಮಿಸಿದ್ದು, ಕೇವಲ ಒಂದೇ ವಾರದಲ್ಲಿ ಬರೋಬ್ಬರಿ 46,753 ವಾಹನಗಳ ನಿಯಮ ಉಲ್ಲಂಘನೆಯನ್ನು ರೆಡ್‌ಹ್ಯಾಂಡ್ ಆಗಿ ಹಿಡಿದಿಟ್ಟಿವೆ.

ಜಿಲ್ಲಾ ಪೊಲೀಸ್ ಕಚೇರಿಯ ಅತ್ಯಾಧುನಿಕ ನಿಯಂತ್ರಣ ಕೊಠಡಿಯಿಂದ ನೇರವಾಗಿ ಮಾನಿಟರ್ ಮಾಡಲಾಗುತ್ತಿರುವ ಈ ತಂತ್ರಜ್ಞಾನದ ಕಾರ್ಯಾಚರಣೆ ಕುರಿತು ಕಂಟ್ರೋಲ್ ರೂಂ ಎಎಸ್‌ಐ ಅಜ್ಜಲ್ ಇಬ್ರಾಹಿಂ ಮಂಗಳವಾರ ಮಾಧ್ಯಮಗಳಿಗೆ ಸವಿಸ್ತಾರವಾದ ತಾಂತ್ರಿಕ ಮಾಹಿತಿ ಹಂಚಿಕೊಂಡಿದ್ದಾರೆ. ಮೇ 21 ರಿಂದ ಅಧಿಕೃತವಾಗಿ ಕಾರ್ಯಾರಂಭ ಮಾಡಿರುವ ಈ ಕ್ಯಾಮೆರಾಗಳು ಇರುವ ವಲಯದಲ್ಲಿ ಕಳೆದ ಏಳು ದಿನಗಳಲ್ಲಿ ಒಟ್ಟು 3,99,319 ವಾಹನಗಳು ಸಂಚರಿಸಿದ್ದು, ಇವುಗಳಲ್ಲಿ ಶೇಕಡಾ 11 ಕ್ಕೂ ಹೆಚ್ಚು ವಾಹನಗಳು ಕಾನೂನು ಮುರಿದಿರುವುದು ತಂತ್ರಜ್ಞಾನದಿಂದ ಸಾಬೀತಾಗಿದೆ. ಸದ್ಯ ತಪ್ಪು ಮಾಡಿದ ಮೊದಲ ಹಂತದ 235 ಮಂದಿ ಸವಾರರಿಗೆ ಈಗಾಗಲೇ ಅಧಿಕೃತ ನೋಟೀಸ್ ಜಾರಿಗೊಳಿಸಲಾಗಿದೆ.

ಆರು ಆಯಕಟ್ಟಿನ ಕೇಂದ್ರಗಳಲ್ಲಿ ಹೈಟೆಕ್ ಕಣ್ಗಾವಲು

ಜಿಲ್ಲೆಯ ಸಂಚಾರ ದಟ್ಟಣೆ ಹಾಗೂ ಅಪಘಾತ ವಲಯಗಳನ್ನು ಗುರುತಿಸಿ ಈ ಇಂಟೆಲಿಜೆಂಟ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ 66ರ ವ್ಯಾಪ್ತಿಯ ಪಡುಬಿದ್ರಿ ಠಾಣೆಯ ಉಚ್ಚಿಲ, ಕಾಪು ಠಾಣೆಯ ದಂಡತೀರ್ಥ, ಕೋಟ ಠಾಣಾ ವ್ಯಾಪ್ತಿಯ ತೆಕ್ಕಟ್ಟೆ ಗಂಗೊಳ್ಳಿ ವ್ಯಾಪ್ತಿಯ ತ್ರಿಶೂಲಪ್ರಾಯದತ್ರಾಸಿ ಹಾಗೂ ಬೈಂದೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೆರ್ಗಾಲ್‌ನಲ್ಲಿ ಇವು ಹಗಲಿರುಳು ಕಣ್ಣಿಟ್ಟಿವೆ. ಇದರೊಂದಿಗೆ ಪಡುಬಿದ್ರೆ–ಬೆಳ್ಮಣ್ ರಾಜ್ಯ ಹೆದ್ದಾರಿಯ ಕಾರ್ಕಳ ಗ್ರಾಮಾಂತರ ಠಾಣಾ ವ್ಯಾಪ್ತಿಯ ದೂಪದಕಟ್ಟೆಯಲ್ಲೂ ಒಂದು ಕ್ಯಾಮೆರಾ ಅಳವಡಿಸಿ ಇಡೀ ಹೆದ್ದಾರಿ ಜಾಲವನ್ನು ಡಿಜಿಟಲ್ ನಿಗಾಕ್ಕೆ ಒಳಪಡಿಸಲಾಗಿದೆ. ಈ ಕೇಂದ್ರಗಳ ಪೈಕಿ ಪಡುಬಿದ್ರೆಯಲ್ಲಿ ಗರಿಷ್ಠ ಅಂದರೆ 13,681 ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗಿದ್ದರೆ, ಕಾರ್ಕಳದಲ್ಲಿ 9,696, ಕಾಪುವಿನಲ್ಲಿ 8,005, ಕೋಟಾದಲ್ಲಿ 7,857, ಬೈಂದೂರಿನಲ್ಲಿ 7,713 ಮತ್ತು ಗಂಗೊಳ್ಳಿ ವ್ಯಾಪ್ತಿಯಲ್ಲಿ 5,206 ಪ್ರಕರಣಗಳು ಡಿಜಿಟಲ್ ವರದಿಯ ಮೇಲೆ ಪತ್ತೆಯಾಗಿವೆ.



» ಒಟ್ಟು ಉಲ್ಲಂಘನೆಗಳ ಪೈಕಿ 29,484 ದ್ವಿಚಕ್ರ, ತ್ರಿಚಕ್ರ ಹಾಗೂ ಲಘು ವಾಹನಗಳು ಮತ್ತು 2,279 ಭಾರೀ ಘನ ವಾಹನಗಳು ನಿಗದಿತ ಮಿತಿಗಿಂತಲೂ ಅತಿವೇಗವಾಗಿ ಚಲಿಸಿ ಕ್ಯಾಮೆರಾಗೆ ಸಿಕ್ಕಿಬಿದ್ದಿವೆ.

ಅತಿವೇಗ, ಹೆಲ್ಮೆಟ್ ರಹಿತ ಚಾಲನೆಯದ್ದೇ ಸಿಂಹಪಾಲು

ಸಂಗ್ರಹವಾಗಿರುವ ಡಿಜಿಟಲ್ ದತ್ತಾಂಶಗಳ ಪ್ರಕಾರ, ಇಲಾಖೆಗೆ ಅತಿ ದೊಡ್ಡ ತಲೆನೋವಾಗಿ ಪರಿಣಮಿಸಿರುವುದು ಹೆದ್ದಾರಿಗಳಲ್ಲಿನ ರೇಸ್ ಚಾಲನೆ. ಒಟ್ಟು ಉಲ್ಲಂಘನೆಗಳ ಪೈಕಿ 29,484 ದ್ವಿಚಕ್ರ, ತ್ರಿಚಕ್ರ ಹಾಗೂ ಲಘು ವಾಹನಗಳು ಮತ್ತು 2,279 ಭಾರೀ ಘನ ವಾಹನಗಳು ನಿಗದಿತ ಮಿತಿಗಿಂತಲೂ ಅತಿವೇಗವಾಗಿ ಚಲಿಸಿ ಕ್ಯಾಮೆರಾಗೆ ಸಿಕ್ಕಿಬಿದ್ದಿವೆ. ಇದರ ನಂತರದ ಸ್ಥಾನದಲ್ಲಿ ಹೆಲ್ಮೆಟ್ ಧರಿಸದ ಚಾಲನೆ ಇದ್ದು, ಒಟ್ಟು 11,396 ದ್ವಿಚಕ್ರ ಸವಾರರು ಸುರಕ್ಷಾ ಕವಚವಿಲ್ಲದೆ ಸಿಕ್ಕಿಬಿದ್ದಿದ್ದಾರೆ. ಸುರಕ್ಷತೆಯ ದೃಷ್ಟಿಯಿಂದ ಇಷ್ಟೇ ಗಂಭೀರವಾಗಿರುವ ಸೀಟ್ ಬೆಲ್ಟ್ ಧರಿಸದ 12,184 ಪ್ರಕರಣಗಳು, ಒನ್–ವೇ ಅಥವಾ ವಿರುದ್ಧ ದಿಕ್ಕಿನಲ್ಲಿ ಅಪಾಯಕಾರಿಯಾಗಿ ಚಲಿಸಿದ 2,677 ಪ್ರಕರಣಗಳು ಹಾಗೂ ಬೈಕ್‌ನಲ್ಲಿ ತ್ರಿಪಲ್ ರೈಡಿಂಗ್ ಮಾಡಿದ 2,393 ಪ್ರಕರಣಗಳು ಇಲಾಖೆಯ ನಿಯಂತ್ರಣ ಕೊಠಡಿಯಲ್ಲಿ ದಾಖಲಾಗಿವೆ.

> **ಯಾವ ನಿಯಮ ಉಲ್ಲಂಘನೆಗೆ ಎಷ್ಟಿದೆ ದಂಡದ ಬಿಸಿ?**
>
> ಹೊಸ ನಿಯಮಾವಳಿಗಳ ಪ್ರಕಾರ ದಂಡದ ಮೊತ್ತ ಅತ್ಯಂತ ದುಬಾರಿಯಾಗಿದ್ದು, ಸವಾರರ ಜೇಬಿಗೆ ಕತ್ತರಿ ಬೀಳುವುದು ಖಚಿತವಾಗಿದೆ. ಹೆದ್ದಾರಿಯಲ್ಲಿ ಅತಿವೇಗದ ಚಾಲನೆ ಮಾಡಿದರೆ ದ್ವಿಚಕ್ರ ವಾಹನಗಳಿಗೆ 1,000 ರೂಪಾಯಿ ಹಾಗೂ ಲಘು ಮತ್ತು ಘನ ಸರಕು ಸಾಗಣೆ ವಾಹನಗಳಿಗೆ 2,000 ರೂಪಾಯಿ ದಂಡ ನಿಗದಿಯಾಗಿದೆ. ಇನ್ನು ಬೈಕ್ ಚಾಲನೆ ವೇಳೆ ಹೆಲ್ಮೆಟ್ ಧರಿಸದಿದ್ದರೆ, ಟ್ರಿಪಲ್ ರೈಡಿಂಗ್ ಮಾಡಿದರೆ ಹಾಗೂ ಕಾರುಗಳಲ್ಲಿ ಸೀಟ್ ಬೆಲ್ಟ್ ಧರಿಸದಿದ್ದರೆ ತಲಾ 500 ರೂಪಾಯಿ ದಂಡ ತೆರಬೇಕಾಗುತ್ತದೆ. ಅತ್ಯಂತ ಅಪಾಯಕಾರಿ ಎನಿಸುವ ಚಾಲನೆ ವೇಳೆ ಮೊಬೈಲ್ ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದ್ವಿಚಕ್ರ ವಾಹನಗಳಿಗೆ 1,000 ರೂಪಾಯಿ, ಲಘು ವಾಹನಗಳಿಗೆ 3,000 ರೂಪಾಯಿ ಹಾಗೂ ಘನ ವಾಹನಗಳಿಗೆ ಗರಿಷ್ಠ 5,000 ರೂಪಾಯಿಗಳವರೆಗೆ ಭಾರಿ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದ್ದು, ಸವಾರರು ಹೆದ್ದಾರಿಗೆ ಇಳಿಯುವ ಮುನ್ನ ಎಚ್ಚರ ವಹಿಸುವುದು ಅತ್ಯಗತ್ಯವಾಗಿದೆ.

ಮನೆಬಾಗಿಲಿಗೆ ಬರಲಿದೆ ಡಿಜಿಟಲ್ ಚಲನ್; ತಪ್ಪಿದರೆ ಕ್ರಮ

ಸದ್ಯ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಗರಿಷ್ಠ ವೇಗದ ಮಿತಿಯನ್ನು ಗಂಟೆಗೆ 80 ಕಿಲೋಮೀಟರ್ ಹಾಗೂ ರಾಜ್ಯ ಹೆದ್ದಾರಿಯಲ್ಲಿ ಗಂಟೆಗೆ 60 ಕಿಲೋಮೀಟರ್ ಎಂದು ನಿಗದಿಪಡಿಸಲಾಗಿದೆ. ಈ ಮಿತಿಯನ್ನು ಮೀರುವ ಹಾಗೂ ಇತರೆ ನಿಯಮ ಮುರಿಯುವ ವಾಹನಗಳ ಮಾಲೀಕರ ವಿಳಾಸಗಳಿಗೆ ನಿಯಂತ್ರಣ ಕೊಠಡಿಯಿಂದ ಪ್ರತಿದಿನ ಸರಾಸರಿ 150 ಕ್ಕೂ ಅಧಿಕ ಇ-ಚಲನ್‌ಗಳನ್ನು ನೇರವಾಗಿ ರವಾನಿಸಲಾಗುತ್ತಿದೆ. ನೋಟೀಸ್ ತಲುಪಿದ ಕೇವಲ 7 ದಿನಗಳ ಒಳಗಾಗಿ ಸವಾರರು ತಮ್ಮ ಸಮೀಪದ ಯಾವುದೇ ಪೊಲೀಸ್ ಠಾಣೆಗೆ ತೆರಳಿ ದಂಡದ ಮೊತ್ತವನ್ನು ಕಟ್ಟಿ ರಶೀದಿ ಪಡೆಯಬೇಕಾಗುತ್ತದೆ. ವಿಶೇಷವೆಂದರೆ, ಕೇವಲ ಸ್ಥಳೀಯ ವಾಹನಗಳಷ್ಟೇ ಅಲ್ಲದೆ ಜಿಲ್ಲೆಯ ಹೆದ್ದಾರಿಗಳಲ್ಲಿ ಸಂಚರಿಸುವ ಹೊರರಾಜ್ಯದ ನೋಂದಣಿಯ ವಾಹನಗಳು ನಿಯಮ ಉಲ್ಲಂಘಿಸಿದರೂ ಈ ಆಟೋಮೆಟಿಕ್ ವ್ಯವಸ್ಥೆಯು ದಂಡದ ನೋಟೀಸ್ ಜಾರಿ ಮಾಡುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 32° 27° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 27, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2

ಕೋವಿ ಪರವಾನಗಿ, ನವೀಕರಣಕ್ಕೆ ಗೃಹ ಸಚಿವರಿಗೆ ಮನವಿ


ಪುಟ 6

ಮೇ 28ರಂದು ಉಡುಪಿಯಲ್ಲಿ 'ಬೊಗಸೆ ಭತ್ತ ಬೀಜ ಪ್ರದಾನ'

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಜಯ ಮಂಗಳಂ... ಶುಭ ಮಂಗಳಂ... ನಿತ್ಯ ಮಂಗಳಂ... ಭದ್ರಂ ಶುಭಂ ಮಂಗಳಂ



ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಏಳೂ ಮೇಳಗಳ ತಿರುಗಾಟ ಮಂಗಳವಾರ ಸಂಪನ್ನಗೊಂಡಿತು. ಸಂಜೆ ಆರು ಗಂಟೆಗೆ ದೇವರ ಚೌಕಿ ಪೂಜೆ ನಡೆದು ಯಕ್ಷಗಾನದ ಪೂರ್ವರಂಗವನ್ನು ಏಳೂ ಮೇಳಗಳ ಕಲಾವಿದರು ಪ್ರದರ್ಶಿಸಿದರು. ಇದಕ್ಕೂ ಮುನ್ನ ಶ್ರೀ ಕ್ಷೇತ್ರಕ್ಕೆ ಆಗಮಿಸಿದ ಏಳೂ ಮೇಳಗಳನ್ನು ರಥಬೀದಿಯಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಭಾರೀ ಸಂಖ್ಯೆಯಲ್ಲಿ ಜನ ಸಮೂಹ ಕಂಡುಬಂತು.

ಸುತ್ತಮುತ್ತ

ಮುಲ್ಕಿ ಕಾರ್ನಾಡ್ ಅಂಚೆ ಪೆಟ್ಟಿಗೆಯಲ್ಲಿ ಜ್ಯೂಸ್ ಲೋಟ ಪತ್ತೆ!

ಮುಲ್ಕಿ: ಕಾರ್ನಾಡ್ ಪೂಂಜಾ ಕಟ್ಟಡದಲ್ಲಿರುವ ಅಂಚೆ ಪೆಟ್ಟಿಗೆಯಲ್ಲಿ ಕಿಡಿಗೇಡಿಗಳು ಜ್ಯೂಸ್ ಬಾಟಲಿಗಳನ್ನು ಹಾಕಿದ್ದಾರೆ. ಮುಲ್ಕಿ ಅಂಚೆ ಕಚೇರಿಯ ಅಂಚೆಪಾಲಕ ದಿನೇಶ್ ಅವರು ಅಂಚೆ ಪೆಟ್ಟಿಗೆ ತೆರೆಯುವಾಗ ಎರಡು ಪ್ಲಾಸ್ಟಿಕ್ ಜ್ಯೂಸ್‌ನ ಲೋಟಗಳು ಪತ್ತೆಯಾಗಿದೆ. ಯಾರೋ ಕಿಡಿಗೇಡಿಗಳು ಜ್ಯೂಸ್ ಕುಡಿದು ಅಂಚೆ ಪೆಟ್ಟಿಗೆಯಲ್ಲಿ ಪ್ಲಾಸ್ಟಿಕ್ ಲೋಟವನ್ನು ಹಾಕಿದ್ದಾರೆ. ಪೂಂಜಾ ಕಟ್ಟಡದಲ್ಲಿ ಸಿಸಿ ಕ್ಯಾಮರಾ ಅಳವಡಿಸಿದ್ದು, ಕಿಡಿಗೇಡಿಗಳ ಪತ್ತೆ ಕಾರ್ಯ ನಡೆಯುತ್ತಿದೆ.



ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ: ಓರ್ವ ಸವಾರ ಗಂಭೀರ

ಕುಂದಾಪುರ: ಎರಡು ಬೈಕ್‌ಗಳು ಡಿಕ್ಕಿ ಹೊಡೆದು ಬೈಕ್ ಸವಾರನೋರ್ವ ಗಂಭೀರವಾಗಿ ಗಾಯಗೊಂಡ ಘಟನೆ ಕುಂದಾಪುರ– ಸಿದ್ದಾಪುರ ರಾಜ್ಯ ಹೆದ್ದಾರಿ 52 ರಲ್ಲಿ ನಡೆದಿದೆ. ರಾಧಾಕೃಷ್ಣ ಎಂಬುವರು ಉಳ್ಳೂರು ಕಡೆಯಿಂದ ಕುಂದಾಪುರ ಸಿದ್ದಾಪುರ ರಾಷ್ಟ್ರೀಯ ಹೆದ್ದಾರಿ 52 ರಸ್ತೆಯಲ್ಲಿ ಬೈಕಿನಲ್ಲಿ ಹೋಗುತ್ತಿರುವ ಸಂದರ್ಭ ಶ್ರೀ ಮಾಸ್ತಿ ಯಕ್ಷಿ ಅಮ್ಮನವರ ಸನ್ನಿಧಿ ದೇವಸ್ಥಾನದ ಎದುರು ಬೈಕನ್ನು ಬಲಕ್ಕೆ ಒಮ್ಮೆಲೆ ತಿರುಗಿಸಿದಾಗ ಎದುರುಗಡೆಯಿಂದ ಬಸ್ರೂರು ಕಡೆಯಿಂದ ಕುಂದಾಪುರ ಕಡೆಗೆ ಕಾರ್ತಿಕ್ ಎಂಬುವವರು ಸವಾರಿ ಮಾಡಿಕೊಂಡು ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಗಾಯಗೊಂಡಿದ್ದು, ಗಾಯಾಳುಗಳನ್ನು ಕುಂದಾಪುರದ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ದಾಖಲಿಸಿದ್ದು, ರಾಧಾಕೃಷ್ಣ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಕೆಎಂಸಿ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರಾವಳಿ ಜಿಲ್ಲೆಯಲ್ಲಿ 'ಮಳೆ ಮುನ್ಸೂಚನೆ': ಮೋಡದ್ದೇ ದರ್ಬಾರ್!

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಸತತವಾಗಿ ಮುನ್ಸೂಚನೆ ನೀಡುತ್ತಿದ್ದರೂ ದಟ್ಟ ಮೋಡಗಳಿಗಷ್ಟೇ ಬಾನು ಸೀಮಿತವಾಗುತ್ತಿದೆ. ಈ ನಡುವೆ ಮಂಗಳವಾರ ಕೆಲವು ಕಡೆಗಳಲ್ಲಿ ತುಂತುರು ಮಳೆಯಾಗಿದೆ. ಇಲಾಖೆ ಮುನ್ಸೂಚನೆ ಪ್ರಕಾರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಗುಡುಗು ಸಹಿತ ಮಳೆಯಾಗಲಿದೆ. ಮಳೆಯ ಜೊತೆ ಗಾಳಿಯ ತೀವ್ರತೆಯೂ ಹೆಚ್ಚಾಗಿರಲಿದೆ.

ಸುಪ್ರೀಂ ಆದೇಶ ಜಾರಿಗೆ ನೂರೆಂಟು ವಿಘ್ನ

ಇಲ್ಲಿಲ್ಲ ಶ್ವಾನ ಶೆಲ್ಟರ್

ಕಾಸರಗೋಡು ಜಿಲ್ಲೆಗೆ ಹೊಸ ಸವಾಲು

ಕಾಸರಗೋಡು: ಬೀದಿನಾಯಿಗಳ ವಿಚಾರದಲ್ಲಿ ಸುಪ್ರೀಂಕೋರ್ಟ್‌ನ ನೂತನ ಆದೇಶವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲೆಯು ಹಲವಾರು ಸವಾಲುಗಳನ್ನು ಎದುರಿಸುವಂತಾಗಿದೆ. ಶೈಕ್ಷಣಿಕ ಸಂಸ್ಥೆಗಳ ಪರಿಸರಗಳಲ್ಲಿ ಹಾಗೂ ಇನ್ನಿತರ ಸಂಸ್ಥೆಗಳ ವಠಾರಗಳಲ್ಲಿ ಅಲೆದಾಡುವ ಬೀದಿನಾಯಿಗಳನ್ನು ಶೀಘ್ರ ಸೆರೆಹಿಡಿಯುವ ಆದೇಶವನ್ನು ಜಿಲ್ಲೆಯಲ್ಲಿ ಕಾರ್ಯಗತಗೊಳಿಸುವಲ್ಲೂ ಅನೇಕ ಸಮಸ್ಯೆಗಳಿವೆ.

ಡಾಗ್ ಆಶ್ರಯ ಕೇಂದ್ರ ಇಲ್ಲ...

ಇನ್ನೊಂದೆಡೆ ಸೆರೆಹಿಡಿಯುವ ಬೀದಿ ನಾಯಿಗಳನ್ನು ಸಂತಾನ ಶಕ್ತಿ ಹರಣ ನಡೆಸಿದ ಬಳಿಕ ಶೆಲ್ಟರ್‌ಗಳಿಗೆ (ನಾಯಿ ಆಶ್ರಯ ಕೇಂದ್ರಗಳಿಗೆ) ಸ್ಥಳಾಂತರಿಸಬೇಕು ಎಂಬ ನಿರ್ದೇಶನವನ್ನು ಕಾಸರಗೋಡಿನಲ್ಲಿ ಅನುಷ್ಠಾನಕ್ಕೆ ತರಬೇಕಾಗಿದೆ. ಆದರೆ ಜಿಲ್ಲೆಯ ಸ್ಥಳೀಯಾಡಳಿತ ಸಂಸ್ಥೆಗಳ ಅಧೀನದಲ್ಲಿ ಒಂದೇ ಒಂದು ಡಾಗ್ ಆಶ್ರಯ ಕೇಂದ್ರ ಇಲ್ಲ. ಸ್ಥಳೀಯಾಡಳಿತ ಇಲಾಖೆಯ ನಿರ್ದೇಶಕರು ನಾಲ್ಕು ವರ್ಷಗಳ ಹಿಂದೆ ಶೆಲ್ಟರ್ ಹೋಮ್‌ಗಳನ್ನು ಸ್ಥಾಪಿಸಲು ಸ್ಥಳೀಯಾಡಳಿತ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದರು. ಪ್ರತಿಯೊಂದು ಗ್ರಾಮ ಪಂಚಾಯತ್‌ನಲ್ಲಿ ಕನಿಷ್ಠ ಎರಡು ಶೆಲ್ಟರ್ ಹೋಮ್‌ಗಳನ್ನು ನಿರ್ಮಿಸಲು ನಿರ್ದೇಶಿಸಲಾಗಿತ್ತು. ಆದರೆ ಬಹುತೇಕ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಶೆಲ್ಟರ್ ಹೋಮ್ ವ್ಯವಸ್ಥೆಗೊಳಿಸಲಾಗಿಲ್ಲ. »ಪುಟ 6



ಯಾವಾಗ? ಎಲ್ಲಿ ಎಬಿಸಿ ಆರಂಭ?

ಕಾಸರಗೋಡಿನಲ್ಲಿ 2016ರಲ್ಲಿ ಮತ್ತು ತೃಕ್ಕರೀಪ್ಪುರದಲ್ಲಿ 2019 ರಲ್ಲಿ ಜಿ.ಪಂ. ಅಧೀನದಲ್ಲಿ ಎಬಿಸಿ ಕೇಂದ್ರವು ಕಾರ್ಯಾರಂಭಗೊಂಡಿದ್ದವು. ಎಬಿಸಿ ಕಾನೂನಿನ ತಿದ್ದುಪಡಿ ಕಾರಣ 2022ರ ಜುಲೈನಿಂದ ಕಾರ್ಯಾಚರಣೆ ರಹಿತವಾದ ತೃಕ್ಕರೀಪ್ಪುರ ಎಬಿಸಿ ಕೇಂದ್ರವನ್ನು 2023ರಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿ ನವೀಕರಿಸಲಾಗಿತ್ತು.

ಯೋಜನೆ ರೂಪಿಸಬೇಕಿದೆ

ಕಾಸರಗೋಡು ಮತ್ತು ತೃಕ್ಕರೀಪ್ಪುರ ಎಬಿಸಿ ಕೇಂದ್ರಗಳು ಕಾರ್ಯಾಚರಿಸುತ್ತಿಲ್ಲ. ಕಾಸರಗೋಡು ರೈಲು ನಿಲ್ದಾಣ ರಸ್ತೆ ಬಳಿಯ ಮತ್ತು ತೃಕ್ಕರೀಪ್ಪುರ ಕೊಯೋಂಗರೆಯಲ್ಲಿ ಎಬಿಸಿ ಕೇಂದ್ರಗಳಿವೆ. ಈ ತಾತ್ಕಾಲಿಕ ಕೇಂದ್ರಗಳು ಕಾರ್ಯಾಚರಿಸುತ್ತಿಲ್ಲವಾದರೂ ತುರ್ತು ಪರಿಸ್ಥಿತಿಗಳಲ್ಲಿ ಉಪಯೋಗಕ್ಕೆ ಸಜ್ಜುಗೊಳಿಸಲು ಯೋಜನೆ ರೂಪಿಸಬೇಕಾಗಿದೆ.

ಕಡಬದಲ್ಲಿ ಶುರುವಾಗಿದೆ ತಪಾಸಣೆ

'ಕರ' ಪಾವತಿಸದಿದ್ದರೆ ನೀರು ಸಂಪರ್ಕ ಕಟ್

ನಿರಾಸಕ್ತಿಗೆ ಪಂಚಾಯತ್ ಮದ್ದು

ಕಡಬ: ಇಲ್ಲಿನ ಪಟ್ಟಣ ಪಂಚಾಯತ್‌ನಿಂದ ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ನೀರಿನ ಕರ ಪಾವತಿಸಲು ಬಾಕಿ ಇರಿಸಿಕೊಂಡವರ ನೀರಿನ ಸಂಪರ್ಕ ಕಡಿತ ಮಾಡಲು ಪಟ್ಟಣ ಪಂಚಾಯತ್ ನಿರ್ಧಾರ ಮಾಡಿದ್ದು ಈಗಾಗಲೇ ಎರಡು ವಾರ್ಡ್‌ಗಳಲ್ಲಿ ಈ ಕಾರ್ಯಾಚರಣೆ ನಡೆದಿದೆ.

ರಿಯಾಯಿತಿ ನೀಡಲಾಗಿತ್ತು

ಈ ಕುರಿತು ಹೇಳಿಕೆ ನೀಡಿರುವ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್, ನೀರಿನ ಕರ ಪಾವತಿಗೆ ರಿಯಾಯಿತಿ ನೀಡಿ 6 ತಿಂಗಳಾದರೂ ಕೆಲವರು ಮಾತ್ರ ಪಾವತಿಸಿರುವುದರಿಂದ ನೀರಿನ ಸಂಪರ್ಕ ಕಡಿತ ಮಾಡುವ ಕಠಿನ ನಿರ್ಧಾರಕ್ಕೆ ಬರಲಾಗಿದೆ ಎಂದಿದ್ದಾರೆ.

ರೂ. 36 ಲಕ್ಷ ಬಾಕಿ ಇತ್ತು

ನಮ್ಮ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರುವಾಗ ಪಂಚಾಯತ್ ವ್ಯಾಪ್ತಿಯ ಒಟ್ಟು ನೀರಿನ ಬಿಲ್ ರೂ.36 ಲಕ್ಷ ಬಾಕಿ ಇತ್ತು. ನಾವು ನೀರಿನ ಕರ ಬಾಕಿ ಇರಿಸಿಕೊಂಡವರಿಗೆ ರಿಯಾಯಿತಿಯ ಕೊಡುಗೆ ನೀಡಿ, ನೀರಿನ ಕರ ಬಾಕಿ ಇರಿಕೊಂಡವರಲ್ಲಿ ಎಸ್‌ಸಿ ಹಾಗೂ ಎಸ್‌ಟಿ »ಪುಟ 6



ಸೋಮವಾರ ದಿಂದ ಕಾರ್ಯಾಚರಣೆ ಪ್ರಾರಂಭ

ನೀರಿನ ಕರ ಪಾವತಿಗೆ ಅವಕಾಶ ನೀಡಿ 6 ತಿಂಗಳಾಗುತ್ತಾ ಬಂತು. ಇದಕ್ಕೂ ಮೊದಲು ಡಿಸೆಂಬರ್ ತನಕ ಕೊನೆಯ ಅವಕಾಶ ನೀಡಲಾಗಿತ್ತು. ಮತ್ತೆ 3-4 ತಿಂಗಳು ರಿಯಾಯಿತಿಯನ್ನು ವಿಸ್ತರಣೆ ಮಾಡಲಾಗಿತ್ತು. ಆದರೂ ಇನ್ನೂ ಸಂಗ್ರಹಕ್ಕೆ ಬಾಕಿ ಇದೆ. ಹಾಗಾಗಿ ಪಂಚಾಯತ್ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತಿದೆ. ಸೋಮವಾರ ದಿಂದ ಕಾರ್ಯಾಚರಣೆ ಪ್ರಾರಂಭವಾಗಿದ್ದು ಪ್ರಥಮವಾಗಿ ನನ್ನ ವಾರ್ಡ್‌ನಿಂದಲೇ ನೀರಿನ ಸಂಪರ್ಕ ಕಡಿತಗೊಳಿಸುವ ಪ್ರಕ್ರಿಯೆ ನಡೆದಿದೆ. ಅತೀ ಹೆಚ್ಚು ಬಾಕಿ ಉಳಿಸಿಕೊಂಡಿರುವ 10 ಜನರ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗಿದೆ ಎಂದು ಪಟ್ಟಣ ಪಂಚಾಯತ್ ಆಡಳಿತ ಮಾಹಿತಿ ನೀಡಿದೆ..

ಕಲ್ಲಿದ್ದಲು ಗಣಿ ಕಾರ್ಮಿಕರ ಸುರಕ್ಷತೆಗೆ ಸ್ಮಾರ್ಟ್ ಹೆಲ್ಮೆಟ್ ಅಭಿವೃದ್ಧಿ

ಎಲ್ಲರ ಗಮನ ಸೆಳೆದಿದೆ ಬಂಟಕಲ್ಲು ಕಾಲೇಜ್

ಶಿರ್ವ: ಇಲ್ಲಿನ ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಅನ್ನಪೂರ್ಣ ಶೆಣೈ, ದಿವ್ಯಾಂತ್, ಹ್ಯಾನ್ಸ್ಲಿ ಲೂಯಿಸ್ ಮತ್ತು ಕಾರ್ತಿಕ್ ಪಾಟೀಲ್ ಅವರು ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಪ್ರಾಧ್ಯಾಪಕಿ ಯೋಗೇಶ್ವರಿ ಬಿ.ಎಚ್. ಮಾರ್ಗದರ್ಶನದಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರ ಸುರಕ್ಷತೆಗೆ ಸ್ಮಾರ್ಟ್ ಹೆಲ್ಮೆಟನ್ನು ಅಭಿವೃದ್ಧಿ ಪಡಿಸಿದ್ದಾರೆ.

ಅಪಾಯಗಳನ್ನು ತಪ್ಪಿಸಲು ಉಪಾಯ

ಕಲ್ಲಿದ್ದಲು ಗಣಿಗಾರಿಕೆಯಲ್ಲಿ ವಿಷಕಾರಿ ಅನಿಲಗಳು, ಹೆಚ್ಚಿನ ಉಷ್ಣಾಂಶ ಮತ್ತು ಕಡಿಮೆ ಆಮ್ಲಜನಕ ಮಟ್ಟ ಮುಂತಾದ ಅಪಾಯಗಳು ಹೆಚ್ಚಾಗಿ ಇರುವುದರಿಂದ ಅವುಗಳನ್ನು ಗಮನಿಸಿ ಕಾರ್ಮಿಕರ ಮೇಲ್ವಿಚಾರಣೆಗೆ ಈ ಸ್ಮಾರ್ಟ್ ಹೆಲ್ಮೆಟ್ ಅನ್ನು ಇಲ್ಲಿ ಅಭಿವೃದ್ಧಿಪಡಿಸಿದ್ದಾರೆ.



ಏನೇನಿದೆ ಹೆಲ್ಮೆಟ್‌ನಲ್ಲಿ ವಿಶೇಷತೆ?

ಈ ಸ್ಮಾರ್ಟ್ ಹೆಲ್ಮೆಟ್ ಪರಿಸರದ ಸ್ಥಿತಿಗತಿಗಳನ್ನು ಮೇಲ್ವಿಚಾರಣೆ ಮಾಡಿ ಅಪಾಯಕಾರಿ ಪರಿಸ್ಥಿತಿಗಳಲ್ಲಿ ಎಚ್ಚರಿಕೆ ನೀಡುತ್ತದೆ. ತುರ್ತು ಪರಿಸ್ಥಿತಿಗಳಲ್ಲಿ ಗಣಿ ಕಾರ್ಮಿಕರಿಗೆ ಸಂಕೇತ ಕಳುಹಿಸಲು ಸಹಾಯಕವಾಗುವ ವಿಶೇಷ ತುರ್ತು ಸೌಲಭ್ಯವನ್ನೂ ಇದರಲ್ಲಿ ಅಳವಡಿಸಲಾಗಿದೆ. ಇದು ಭೂಗರ್ಭ ಗಣಿಗಳಲ್ಲಿ ಬಳಸಲು ಸೂಕ್ತವಾಗಿದೆ.

ಈ ನವೀನ ಆವಿಷ್ಕಾರವು ಮುನ್ನೆಚ್ಚರಿಕೆ ಮತ್ತು ತ್ವರಿತ ತುರ್ತು ಪ್ರತಿಕ್ರಿಯೆ ವ್ಯವಸ್ಥೆಗಳ ಮೂಲಕ ಗಣಿಗಾರಿಕೆಯಲ್ಲಿ ಸುರಕ್ಷತಾ ಕ್ರಮಗಳನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ ಅಲ್ಲದೆ ನಿರ್ಮಾಣ, ಸುರಂಗ ಕಾಮಗಾರಿಗಳು ಮತ್ತು ರಾಸಾಯನಿಕ ಕೈಗಾರಿಕೆಗಳಂತಹ ಹೆಚ್ಚಿನ ಅಪಾಯವಿರುವ ಇತರ ಕ್ಷೇತ್ರಗಳಲ್ಲಿಯೂ ಕಾರ್ಮಿಕರ ರಕ್ಷಣೆಗೆ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದಾಗಿದೆ.

ರಸ್ತೆಯಲ್ಲೇ ಮಿನಿ ಲಾರಿ ಟೈರ್ ಸ್ಫೋಟ



ಮಂಗಳೂರಿನಿಂದ ಮೀನು ಸಾಗಿಸಿಕೊಂಡು ಬರುತ್ತಿದ್ದ ಲಾರಿಯೊಂದು ಟೈರ್ ಸ್ಫೋಟಗೊಂಡ ಪರಿಣಾಮ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಪಲ್ಟಿಯಾದ ಘಟನೆ ಮಂಗಳವಾರ ಉಡುಪಿ ಅಂಬಾಗಿಲು ಸಮೀಪ ಸಂಭವಿಸಿದೆ.

ಬಂಟ್ವಾಳ ತಹಶೀಲ್ದಾರ್ ಖಡಕ್ ಆದೇಶ | ತಾಲೂಕು ಕಚೇರಿ ಆವರಣದಲ್ಲಿ ಫಲಕ

ಗೇಟ್‌ನ ಒಳಗೆ ಪ್ರತಿಭಟನೆಗಳಿಗೆ ಇನ್ನಿಲ್ಲ ಅವಕಾಶ


ಬಂಟ್ವಾಳ: ತಾಲೂಕಾಡಳಿತ ಸೌಧದ ಗೇಟ್ ಒಳಭಾಗದಲ್ಲಿ ಇನ್ನುಮುಂದೆ ಯಾವುದೇ ರೀತಿಯ ಪ್ರತಿಭಟನೆ ನಡೆಸಲು ಹಾಗೂ ಬ್ಯಾನರ್, ಧ್ವಜ ಅಳವಡಿಸಲು ಅವಕಾಶ ಇರುವುದಿಲ್ಲ ಎಂದು ಬಂಟ್ವಾಳ ತಾಲೂಕು ತಹಶೀಲ್ದಾರ್ ಮಂಜುನಾಥ್, ತಾಲೂಕು ಕಚೇರಿ ಆವರಣದಲ್ಲಿ ಫಲಕ ಅಳವಡಿಸಿ ಸಾರ್ವಜನಿಕರ ಗಮನಕ್ಕೆ ತಂದಿದ್ದಾರೆ.

ಆಡಳಿತಾತ್ಮಕ ಹಿತದೃಷ್ಟಿಯಿಂದ ಕ್ರಮ

ಸಾರ್ವಜನಿಕರ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಂಡು ಅವರು ಆದೇಶ ಹೊರಡಿಸಿದ್ದಾರೆ.

ಇತ್ತೀಚೆಗೆ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಂಟ್ವಾಳ ತಾಲೂಕಿಗೆ ಒಳಪಟ್ಟ ಮೂರು ಕುಟುಂಬಗಳ ಹಕ್ಕು ಪತ್ರ ವಿತರಣೆಗೆ ಸಂಬಂಧಿಸಿದಂತೆ ಪುತ್ತೂರು ಕ್ಷೇತ್ರ ಹಾಗೂ ಬಂಟ್ವಾಳ ಮಂಡಲದ ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ಬಿ.ಸಿ. ರೋಡ್ ಮಿನಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಒಟ್ಟು ನಾಲ್ಕು ದಿನಗಳ ಕಾಲ ಪ್ರತಿಭಟನೆ ನಡೆಸಿ ನಿರಂತರ ಘೋಷಣೆಗಳನ್ನು ಕೂಗಿದ್ದರು. ಇಲ್ಲಿ ಕಚೇರಿಯ ಕೆಲಸದ ಅವಧಿಯಲ್ಲಿ ನಿರಂತರ ಅಹೋರಾತ್ರಿ ಧರಣಿ ನಡೆಸಿದ ಕಚೇರಿಯ ಮೆಟ್ಟಿಲುಗಳನ್ನು ಬ್ಲಾಕ್ ಮಾಡಿದ್ದರಿಂದ ಕಚೇರಿಯ ಕೆಲಸ ಕಾರ್ಯಗಳಿಗೆ ಬರುವ ಸಾರ್ವಜನಿಕರಿಗೆ ಹಾಗೂ ಕಚೇರಿ ಸಿಬ್ಬಂದಿಗಳ ಕೆಲಸಕಾರ್ಯಗಳಿಗೆ ತೊಂದರೆಯಾಗಿದೆ ಎಂಬ ಬಗ್ಗೆ ಸಾರ್ವಜನಿಕರು ತಹಶೀಲ್ದಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೆನ್ನಲಾಗಿದೆ.

ಇದೀಗ ಇದರ ಮುಂದುವರಿದ ಭಾಗವಾಗಿ ತಾಲೂಕು ತಹಶೀಲ್ದಾರ್ ಮಂಜುನಾಥ್, ತಾಲೂಕು ಆಡಳಿತ ಸೌಧದ ಆವರಣದೊಳಗೆ ಪ್ರತಿಭಟನೆ ನಡೆಸದಂತೆ ಬ್ಯಾನರ್, ಧ್ವಜ, ಫ್ಲೆಕ್ಸ್ ಅಳವಡಿಸಲು ಸಂಪೂರ್ಣ ನಿರ್ಬಂಧಿಸಿ ಈಗ ಆದೇಶವನ್ನು ಹೊರಡಿಸಿದ್ದಾರೆ.



ಹೊರಭಾಗದಲ್ಲಿದೆ ಪ್ರತಿಭಟನೆಗೆ ಅನುಮತಿ

ತಾಲೂಕು ಆವರಣದ ಹೊರಭಾಗದಲ್ಲಿ ನಿಯಮಾನುಸಾರ ಅನುಮತಿ ಪಡೆದುಕೊಂಡು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಪ್ರತಿಭಟನೆ ನಡೆಸಲು ಅವಕಾಶವಿರುತ್ತದೆ ಎಂದವರು ಆದೇಶದಲ್ಲಿ ಪ್ರತಿಭಟನಾ ಸ್ವಾತಂತ್ರ್ಯಕ್ಕೂ ಅವಕಾಶ ನೀಡಿದ್ದಾರೆ.

ಪಿಡಿಒ, ಘಟಕ ಮುಖ್ಯಸ್ಥೆ ಕಾರ್ಯವೈಖರಿಗೆ ಬಹುಪರಾಕ್

ಕಸ ಎಸೆದವರಿಂದಲೇ ಕಸ ಹೆಕ್ಕಿಸಿದ್ರು!

ಕೋಟ: ಉಡುಪಿ ಜಿಲ್ಲಾ ಪಂಚಾಯತ್ ತ್ಯಾಜ್ಯ ಎಸೆಯುವರಿಗೆ ಕಠಿಣ ಕ್ರಮಗಳನ್ನು ಇತ್ತೀಚಿಗೆ ಕೈಗೊಂಡಿದ್ದು, ಇದರಿಂದ ಪಂಚಾಯತ್ ವ್ಯಾಪ್ತಿಯಲ್ಲಿ ಕಸ ಎಸೆದವರಿಗೆ ದಂಡ ವಿಧಿಸಲಾಗುತ್ತಿದೆ. ಅಲ್ಲದೇ ಕೆಲವೆಡೆ ಕಸ ಎಸೆದವರಿಂದಲೇ ಕಸ ಹೆಕ್ಕಿಸಿ ಜಾಗೃತಿ ಮೂಡಿಸಲಾಗುತ್ತಿದೆ.

ಪ್ರವಾಸಿ ಬಸ್‌ಗೆ ಬಿಸಿ ಮುಟ್ಟಿಸಿದ ಕಸ!

ಸೋಮವಾರ ಇಲ್ಲಿನ ತೆಕ್ಕಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಡ್ಯ ಮೂಲದ ಮಿನಿ ಪ್ರವಾಸಿ ಬಸ್ ತ್ಯಾಜ್ಯ ಎಸೆದು ಸ್ವಲ್ಪ ದೂರದಲ್ಲೆ ನಿಂತಿತ್ತು. ಇದನ್ನು ಗಮನಿಸಿದ ತೆಕ್ಕಟ್ಟೆ ನಾಗರಿಕರೋರ್ವರು ಸಂಬಂಧಿಸಿದ ಗ್ರಾಮ ಪಂಚಾಯತ್ ಎಸ್‌ಎಲ್‌ಆರ್‌ಎಂ ಘಟಕದ ಮುಖ್ಯಸ್ಥೆ ರೇವತಿ ತೆಕ್ಕಟ್ಟೆ ಇವರಿಗೆ ಮಾಹಿತಿ ನೀಡಿ ಎಸೆದ ಪ್ರವಾಸಿಗರಿಂದಲೇ ಕಸ ತೆರವು ಕಾರ್ಯ ಮಾಡಿಸಲಾಗಿದೆ. »ಪುಟ 6



ಇನ್ನೆಂದೂ ಕಸ ಎಸೆಯಲ್ಲ ಎಂದು ಪ್ರವಾಸಿರ ಪ್ರತಿಜ್ಞೆ!

ತೆಕ್ಕಟ್ಟೆ ಪಂಚಾಯತ್‌ನ ವ್ಯಾಪ್ತಿಯಲ್ಲಿ ತ್ಯಾಜ್ಯ ಎಸೆದ ಬಸ್‌ನಲ್ಲಿದ್ದ ಪ್ರವಾಸಿಗರಿಗ ಪಿಡಿಒ ಸಂತೋಷ್ ಕುಮಾರ್, ಸ್ವಚ್ಛತಾ ಪಾಠ ಹೇಳಿದರು. ಮನವರಿಕೆ ಮಾಡಿಕೊಂಡ ಬಸ್‌ನಲ್ಲಿದ್ದ ಎಲ್ಲಾ ಪ್ರವಾಸಿಗರು ಇನ್ನೆಂದೂ ಎಲ್ಲಿಯೂ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಸೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದು, ಇದೂ ಕೂಡಾ ನಾಗರಿಕರ ಮೆಚ್ಚುಗೆ ಗಳಿಸಿತು.


ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ದಡ್ಡಲ್ ಪಲ್ಕೆ, ಮಾಂಟ್ರಾಡಿ, ಜೋಗೊಟ್ಟು ಕೊಣಾಜೆ, ದರೆಗುಡ್ಡೆ, ಮಕ್ಕಿ ಕಜೆ, ಶಿರ್ತಾಡಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಶಿರ್ತಾಡಿ, ಕೊಯಕುಡೆ, ಪಿದಮಲೆ, ಭೈಲರ್ಚ್, ಬೋರುಗುಡ್ಡೆ ಕರ್ನಲ್ ಗುಡ್ಡೆ ಹೊಂಪಟ್ಟು, ಅನೆಗುಡ್ಡೆ, ಕುಕ್ಕುದಕಟ್ಟೆ, ಮರ್ಗಾರ್ ಕಲ್, ಪಡುಕೊಣಾಜೆ, ಮೆಕಾರು ದ್ವಾರ, ಅರಸುಕಟ್ಟೆ, ಶುಭಮಂಗಳ, ವಿದ್ಯಾನಗರ, ಕಜೆ, ಕಾಶಿಪಟ್ಣ ಕಾನ, ಕಲ್ಲೋಳಿ, ನಡಿಗುಡ್ಡೆ, ಕಾಂತಾವರ ಕ್ರಾಸ್, ಬೆಳುವಾಯಿ, ಬನ್ನಡ್ಕ ಕಾಯರ್ ಕಟ್ಟೆ, ಅಜಾದ್ ನಗರ, ಕರಿಯನಂಗಡಿ, ಮಲೆಬೆಟ್ಟು, ಮಂಜನಕಟ್ಟೆ, ಕಾಯದೆ, ಕೆಸರಗದ್ದೆ, ಪೆಲತಂಡಿ, ಮೂಡಾಯಿಕಾಡು, ಬೆಳುವಾಯಿ ಚರ್ಚ್, ಇರ್ವತ್ತೂರು ಕ್ರಾಸ್, ಗುಂಡುಕಲ್ಲು, ಮೂಡುಮಾರ್ನಾಡು, ಕೆಲ್ಲಪುತ್ತಿಗೆ ದರೆಗುಡ್ಡೆ, ಅರಸುಕಟ್ಟೆ, ಪಣಪಿಲ, ಅಳಿಯೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 27ರಂದು ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಶಿಕ್ಷಕರ ಸಂಘ: ದಕ್ಷಿಣ ಕನ್ನಡ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ

ಬಂಟ್ವಾಳ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಶಿವಪ್ರಸಾದ್ ಶೆಟ್ಟಿ ಹಾಗೂ





ಬಂಟ್ವಾಳ ತಾಲೂಕು ಘಟಕದ ಅಧ್ಯಕ್ಷರಾಗಿ ಜಯರಾಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿ ಉಮಾನಾಥ ರೈ ಮೇರಾವು ಅವರು ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟರು. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ವಿಮಲ್ ಕುಮಾರ್ ಕೆ ಎ, ಗೌರವಾಧ್ಯಕ್ಷರಾಗಿ ವಾಣಿ, ಉಪಾಧ್ಯಕ್ಷರಾಗಿ ಸಂತೋಷ್ ಕುಮಾರ್, ಆರತಿ ಕುಮಾರಿ, ಕೋಶಾಧಿಕಾರಿಯಾಗಿ ಸುರೇಶ್ ಎಂ, ಸಹಕಾರ್ಯದರ್ಶಿಗಳಾಗಿ ಸಂದೇಶ್ ಎಂ.ಎಸ್., ಹೇಮಲತಾ ಪಿ, ಸಂಘಟನಾ ಕಾರ್ಯದರ್ಶಿಗಳಾಗಿ ಜಯಂತ ಕೆ ಹಾಗೂ ನೀತಾ ಗಟ್ಟಿ ಅವರು ಅವಿರೋಧ ಆಯ್ಕೆಯಾಗಿದಾರೆ.

ಬಂಟ್ವಾಳ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಯತೀಶ ಪಿ, ಉಪಾಧ್ಯಕ್ಷೆಯಾಗಿ ಶಶಿ ಬಿ, ಕೋಶಾಧಿಕಾರಿಯಾಗಿ ಇಸ್ಮಾಲಿ ಪಿ, ಸಹ ಕಾರ್ಯದರ್ಶಿಗಳಾಗಿ ಮಮತಾ ಪಿ ಹಾಗೂ ಪುಟ್ಟು ರಂಗನಾಥ ಟಿ, ಸಂಘಟನಾ ಕಾರ್ಯದರ್ಶಿಯಾಗಿ ಪುಷ್ಪಾವತಿ ವೈ, ನಿರ್ದೇಶಕರುಗಳಾಗಿ ಶಿವಪ್ರಸಾದ್ ಶೆಟ್ಟಿ, ಫ್ರಾನ್ಸಿಸ್ ಡೇಸಾ, ಸುನಿಲ್ ಸಿಕ್ವೇರಾ, ಸಂತೋಷ್ ಕುಮಾರ್ ತುಂಬೆ, ರವಿಕುಮಾರ್, ಸಂದೇಶ ಎಂ.ಎಸ್., ನೀತಾ ಗಟ್ಟಿ ಎಂ. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೀರಕಂಭ ಒಕ್ಕೂಟದ ನೂತನ ಅಧ್ಯಕ್ಷರಾಗಿ ಸುನಿಲ್ ನಾಯ್ಕ ಆಯ್ಕೆ


ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವಿಟ್ಲ ಇದರ ಕಲ್ಲಡ್ಕ ವಲಯದ ವೀರಕಂಭ ಒಕ್ಕೂಟದ ನೂತನ ಅಧ್ಯಕ್ಷರಾಗಿ ಸುನಿಲ್ ನಾಯ್ಕ ಆಯ್ಕೆಯಾಗಿದ್ದಾರೆ. ವೀರಕಂಭ ಮಜಿ



ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಒಕ್ಕೂಟದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಪ್ರೇಮ ಕಾಣೆಕೋಡಿ, ಕಾರ್ಯದರ್ಶಿಯಾಗಿ ಅಖಿಲ ಮೈರಾ, ಜೊತೆ ಕಾರ್ಯದರ್ಶಿಯಾಗಿ ಸುರೇಶ್ ಮಜಿ, ಕೋಶಾಧಿಕಾರಿಯಾಗಿ ನೋಣಯ್ಯ ಎಂಆರ್ ಮಜಿ ಅವರನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಲ್ಲಡ್ಕ ವಲಯ ಮೇಲ್ವಿಚಾರಕ ಶುಕರಾಜ್, ಒಕ್ಕೂಟ ಸೇವಾ ಪ್ರತಿನಿಧಿಗಳಾದ ವಿಜಯ, ರೇವತಿ, ನಿಕಟ ಪೂರ್ವ ಅಧ್ಯಕ್ಷ ಶಾಂಭವಿ ಆಚಾರ್ಯ, ಕಾರ್ಯದರ್ಶಿ ಆನಂದ ಮಜಿ, ಉಪಸಮಿತಿಯ ಸದಸ್ಯೆ ವೇದಾವತಿ ಉಪಸ್ಥಿತರಿದ್ದರು.

ಬಪ್ಪನಾಡು ದೇವಳದಲ್ಲಿ ಪತ್ತನಾಜೆಯ ಶ್ರೀ ದೇವರ ಉತ್ಸವ, ವಿಶೇಷ ಪೂಜೆ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಪತ್ತನಾಜೆಯ ಶ್ರೀ ದೇವರ ಉತ್ಸವ ಬಲಿ, ಶ್ರೀರಂಗ ಪೂಜೆ, ವಸಂತ ಪೂಜೆ ಯು



ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕರಾದ ನರಸಿಂಹ ಭಟ್, ಶ್ರೀಪತಿ ಉಪಾಧ್ಯಾಯ ನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭ ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಪ್ರಸಾದ ಭಟ್, ಗೋಪಾಲಕೃಷ್ಣ ಭಟ್, ಶ್ರೀನಾಥ್ ಭಟ್, ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ, ಅತುಲ್ ಕುಡ್ವ, ಸತೀಶ್ ಭಂಡಾರಿ, ರಂಗಕರ್ಮಿ ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್ , ಹರ್ಷರಾಜ ಶೆಟ್ಟಿ, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು ಅಕೌಂಟೆಂಟ್ ಶಿವಶಂಕರ್, ಗಿರೀಶ್ ಮೆಂಡನ್, ಕಾರ್ತಿಕ್ ಕೋಟ್ಯಾನ್, ಮತ್ತಿತರರಿದ್ದರು.

ಬೆಳ್ತಂಗಡಿ ತಾಲೂಕು ಪಂಚಾಯತ್‌ನಲ್ಲಿ ಪ್ರಾಕೃತಿಕ ವಿಕೋಪ ಮುನ್ನೆಚ್ಚರಿಕಾ ಸಭೆ | ತಹಶೀಲ್ದಾರ್ ಸೂಚನೆ

ಭೂ ಕುಸಿತ, ನದಿಪಾತ್ರದಲ್ಲಿ ನೆರೆ ಬಗ್ಗೆ ಜನರು ಎಚ್ಚರಿಕೆ ವಹಿಸಿ

ಬೆಳ್ತಂಗಡಿ: ಮುಂಗಾರು ಮಳೆಯ ಪೂರ್ವ ಸಿದ್ಧತೆ ಹಾಗೂ ಪ್ರಾಕೃತಿಕ ವಿಕೋಪದ ತುರ್ತು ಪರಿಹಾರೋಪಾಯಗಳನ್ನು ಕೈಗೊಳ್ಳುವ ಕುರಿತು ಬೆಳ್ತಂಗಡಿ ತಾಲೂಕು ಪಂಚಾಯ್ ಕಾರ್ಯನಿರ್ವಹಣಾಧಿಕಾರಿ ಅವರ ಆದೇಶದಂತೆ ಬೆಳ್ತಂಗಡಿ ತಾಲೂಕು ಪಂಚಾಯತ್‌ನಲ್ಲಿ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ತಹಸೀಲ್ದಾರ್ ಪೃಥ್ವಿ ಸಾನಿಕಂ ಮಾತನಾಡಿ, ಮಳೆಗಾಲದ ಸಂದರ್ಭ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ತಾಲೂಕು ಆಡಳಿತವು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದ ಅವರು, ಎಲ್ಲಾ ಗ್ರಾಮ ಪಂಚಾಯತ್‌ಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.



ಭೂ ಕುಸಿತದ ಬಗ್ಗೆ ಎಚ್ಚರಿಕೆ ಇರಲಿ

ಮನೆಗಳ ಸಮೀಪ ಮಣ್ಣು ಅಗೆಯುವುದನ್ನು ಮಾಡಬಾರದು. ಇದು ಭೂ ಕುಸಿತಕ್ಕೆ ಕಾರಣವಾಗಬಹುದು. ಈ ನಿಟ್ಟಿನಲ್ಲಿ ಮಳೆಗಾಲದಲ್ಲಿ ಇಂತಹ ಕಾಮಗಾರಿ ನಡೆಸದಂತೆ ಸೂಚನೆ ನೀಡಿದರು. ನದಿಗಳತ್ತ ತೆರಳುವ ಜನರು ಹಾಗೂ ನದಿ ಪರಿಸರದಲ್ಲಿ ವಾಸಿಸುವವರು ಹೆಚ್ಚಿನ ಮುಂಜಾಗ್ರತೆಯನ್ನು ಕೈಗೊಳ್ಳಬೇಕು. ಯಾವುದೇ ರೀತಿಯ ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣ ಸಂಬಂಧಪಟ್ಟ ಇಲಾಖೆಗೆ ತಕ್ಷಣ ಮಾಹಿತಿ ನೀಡಬೇಕು. ಜನರು ಯಾವುದೇ ರೀತಿಯ ಅಪಾಯಗಳನ್ನು ಆಹ್ವಾನಿಸುವ ಕೆಲಸಗಳನ್ನು ಮಾಡಬಾರದು ಎಂದು ಸೂಚಿಸಿದರು.

ತಾಲೂಕು ಆರೋಗ್ಯ ಅಧಿಕಾರಿ ಡಾ. ಸಂಜಾತ್ ಮಾತನಾಡಿ, ಜನರು ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತೆ ವಹಿಸಬೇಕು. ತೋಟಗಳಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರಿಕೆ ವಹಿಸಬೇಕು. ಮನೆಗಳ ಸುತ್ತ ಸ್ವಚ್ಛತೆಯನ್ನು ಕಾಪಾಡುವುದು ಅತಿ ಅವಶ್ಯಕ. ಜ್ವರ ಇನ್ನಿತರ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರ ಸಲಹೆ ಪಡೆಯಬೇಕು ಎಂದು ಹೇಳಿದರು.

ಎಚ್ಚರಿಕೆ ಫಲಕ ಅಳವಡಿಸಿ

ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ವಿಪತ್ತು ನಿರ್ವಹಣಾ ಟಾಸ್ಕ್ ಫೋರ್ಸ್ ಸಭೆಯನ್ನು ಮಾಡಬೇಕು, ಸಮಸ್ಯೆ ಇರುವ ಸ್ಥಳಗಳನ್ನು ಗುರುತಿಸಿ ಭೇಟಿ ನೀಡಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು. ಅಪಾಯಕಾರಿ ಮರ, ವಿದ್ಯುತ್ ಕಂಬಗಳ ಬಗ್ಗೆ ಮೆಸ್ಕಾಂ, ಅರಣ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸಬೇಕು. ಗ್ರಾಮ ಪಂಚಾಯತ್ ಮಟ್ಟದ ಚರಂಡಿಗಳನ್ನು ದುರಸ್ತಿಗೊಳಿಸಬೇಕು. ಅಗತ್ಯ ಪ್ರದೇಶದಲ್ಲಿ ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ಮೂಲಗಳನ್ನು ಗುರುತಿಸಿ ಸ್ವಚ್ಛತೆ ನಿರ್ವಹಿಸಬೇಕು. ಕಿಂಡಿ ಅಣೆಕಟ್ಟು ಪರಿಸರದಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು. ಅಪಾಯಕಾರಿ ರಸ್ತೆ, ಸೇತುವೆಗಳಲ್ಲಿ ಸಂಚಾರ ನಿರ್ಬಂಧ ಹೇರುವ ಕುರಿತು ಪರಿಶೀಲಿಸಿ ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕು. ಪ್ರವಾಹ ಪೀಡಿತ ಮತ್ತು ಭೂಕುಸಿತ ಸ್ಥಳಗಳಲ್ಲಿ ವಾಸಿಸುವ ಜನರಿಗೆ ಸ್ಥಳಾಂತರಗೊಳಿಸುವ ಬಗ್ಗೆ ಮನವೊಲಿಸಿ ನೋಟಿಸ್ ಜಾರಿ ಮಾಡಿ ಸ್ವೀಕೃತಿ ಪಡೆಯಬೇಕು. ಜಿಲ್ಲಾಧಿಕಾರಿಗಳ ಆದೇಶದಂತೆ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಯಾವುದೇ ಅಪಾಯದ ಸಂದರ್ಭ ತಕ್ಷಣ ಸೇವೆಗೆ ಸಿದ್ಧರಿರಬೇಕು ಮೊದಲಾದ ಕಾರ್ಯಸೂಚಿಗಳ ಕುರಿತು ಸಭೆಯ ಗಮನಕ್ಕೆ ತರಲಾಯಿತು.

ತಾಲೂಕು ಪಂಚಾಯತ್ ಇ.ಒ. ಭವಾನಿ ಶಂಕರ್, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ರಾಜೇಶ್, ಪಿ.ಡಬ್ಲ್ಯೂ.ಡಿ. ಎ.ಇ.ಇ. ಬಕಪ್ಪ ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾ.ಪಂ. ಪಿ.ಡಿ.ಒ.ಗಳು ಹಾಗೂ ಗ್ರಾಮ ಕರಣಿಕರು ಉಪಸ್ಥಿತರಿದ್ದರು.

ಟಾಸ್ಕ್ ಫೋರ್ಸ್ ಸಭೆ ನಡೆಸಿ

ಬೆಳ್ತಂಗಡಿ ತಾಲೂಕಿನಲ್ಲಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುವ ಸಂದರ್ಭ ಹಲವು ಸಂದರ್ಭ ಭೂ ಕುಸಿತ, ಪ್ರವಾಹದ ಸನ್ನಿವೇಶಗಳು ನಿರ್ಮಾಣವಾಗಿದೆ. ಈ ನಿಟ್ಟಿನಲ್ಲಿ ತಾಲೂಕು ಆಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ವಿಪತ್ತು ನಿರ್ವಹಣಾ ಟಾಸ್ಕ್ ಫೋರ್ಸ್ ಸಭೆಯನ್ನು ಮಾಡಬೇಕು, ಸಮಸ್ಯೆ ಇರುವ ಸ್ಥಳ ಗುರುತಿಸಿ ಭೇಟಿ ನೀಡಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದು ತಹಸೀಲ್ದಾರ್ ಪೃಥ್ವಿ ಸಾನಿಕಂ ಸೂಚಿಸಿದರು.

ಅಂಚೆ ಜನ ಸಂಪರ್ಕ ಅಭಿಯಾನ, ಆಧಾರ್ ನೋಂದಣಿ, ತಿದ್ದುಪಡಿ ಶಿಬಿರ



ಮಂಗಳೂರು: ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್ ಮತ್ತು ಭಾರತೀಯ ಅಂಚೆ ಇಲಾಖೆ ಮಂಗಳೂರು ವಿಭಾಗದ ಸಹಯೋಗದಲ್ಲಿ ನಗರದ ಉರ್ವದ ಕಬಡ್ಡಿ ಒಳಾಂಗಣ ಕ್ರೀಡಾಂಗಣದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ, ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರ ನಡೆಯಿತು.

ಕರ್ನಾಟಕ ಅಮೆಚೂರು ಕಬಡ್ಡಿ ಅಸೋಸಿಯೇಶನ್ ಅಧ್ಯಕ್ಷ ರಾಕೇಶ್ ಮಲ್ಲಿ ಕಾರ್ಯಕ್ರಮ ಉದ್ಘಾಟಿಸಿದರು. ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್‌ನ ಅಧ್ಯಕ್ಷ ದಿನಕರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿದ್ದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜ ಮಾತನಾಡಿ, ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಮಕ್ಕಳಿಗೆ ಉಚಿತ ಕಬಡ್ಡಿ ತರಬೇತಿ ಶಿಬಿರ ಸಂಘಟಿಸುವ ಮೂಲಕ ಎಳೆಯ ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿತ್ತು. ಈಗ ಸಾರ್ವಜನಿಕರಿಗೆ ಅನುಕೂಲವಾಗಲು ಅಂಚೆ ಜನಸಂಪರ್ಕ ಮತ್ತು ಅಪಘಾತ ವಿಮೆ ಹಾಗೂ ಆಧಾರ್ ತಿದ್ದುಪಡಿಯ ಶಿಬಿರ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಅಮೆಚೂರು ಕಬಡ್ಡಿ ಅಸೋಸಿಯೇಶನ್‌ನ ಗೌರವ ಸಲಹೆಗಾರ ಪುರುಷೋತ್ತಮ್ ಪೂಜಾರಿ ಮತ್ತು ರತನ್ ಶೆಟ್ಟಿ ಮುಖ್ಯ ಅತಿಥಿಗಳಾಗಿದ್ದರು. ಬಿಲ್ಲವ ಸಂಘದ ಉಪಾಧ್ಯಕ್ಷ ವೆಂಕಟೇಶ್‌ದಾಸ್, ಯೋಗೀಶ್ ಬೋಳೂರು, ಸಚಿನ್ ಬಂಗೇರ, ಯಶವಂತ ಮಾಡ, ವಿಕ್ರಂ ಹೊಯ್ಗೆಬೈಲ್, ಜೀವನ್ ಪೂಜಾರಿ ಹೊಯ್ಗೆಬೈಲ್, ಕಬೀರ್ ಕೊಂಚಾಡಿ, ರಂಜನ್ ಶೆಟ್ಟಿ ಉಪಸ್ಥಿತರಿದ್ದರು. ಮಂಗಳೂರು ತಾಲೂಕು ಅಮೆಚೂರು ಕಬಡ್ಡಿ ಅಸೋಸಿಯೇಶನ್‌ನ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಅಶೋಕನಗರ ನಿರೂಪಿಸಿದರು.

ವಿದ್ಯಾರಶ್ಮಿ ಕಾಲೇಜಿನಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ವಿದಾಯಕೂಟ



ಪುತ್ತೂರು: ಸವಣೂರಿನ ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ಬಿ.ಎ., ಬಿ.ಕಾಂ., ಬಿ.ಸಿ.ಎ. ವಿದ್ಯಾರ್ಥಿಗಳಿಗೆ ವಿದಾಯಕೂಟ ಸಮಾರಂಭ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ, ವಿದ್ಯೆಯನ್ನು ಕಲಿಸಿದ ಸಂಸ್ಥೆಯನ್ನು ಮರೆಯದೆ ದೇಶದ ಸತ್ಪ್ರಜೆಯಾಗಿ ಬಾಳುವಂತೆ ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಅಡ್ವಕೇಟ್ ಅಶ್ವಿನ್ ಎಲ್. ಶೆಟ್ಟಿ ಪ್ರತಿಯೊಬ್ಬರು ತಮ್ಮ ಗುರಿಯನ್ನು ತಲುಪುವವರೆಗೆ ತಮ್ಮ ಭಾವನಾತ್ಮಕ ವಿಚಾರಗಳನ್ನು ಬದಿಗಿಟ್ಟು ಶ್ರಮಪಟ್ಟು ಕಾರ್ಯವನ್ನು ನಿರ್ವಹಿಸಬೇಕೆಂದರು. ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಹಾಗೂ ಬಿ.ಎ., ಬಿಕಾಂ., ಬಿ.ಸಿ.ಎ. ವಿಭಾಗದ ಮುಖ್ಯಸ್ಥೆ ಪ್ರತಿಭಾ ಎಸ್., ನಿರಂಜನ್ ಎ., ಪ್ರತಿಭಾ ಭಟ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ವಿದ್ಯಾರ್ಥಿಗಳಾದ ಪವನ್, ಪ್ರಮೋದ್, ಸಝ್ನಾನ, ಪವನ್ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಉಪಪ್ರಾಂಶುಪಾಲೆ ರಂಜಿತಾ ಬಿ.ಆರ್. ಉಪಸ್ಥಿತರಿದ್ದರು. ಸಫಾ ಫಾತಿಮಾ ಸ್ವಾಗತಿಸಿ, ದ್ವಿತೀಯ ಬಿ.ಕಾಂ.ನ ಪುಣ್ಯ ವಂದಿಸಿದರು. ದ್ವಿತೀಯ ಬಿ.ಸಿ.ಎ.ಯ ಪವಿತ್ರಾ ಕೆ. ಕಾರ್ಯಕ್ರಮ ನಿರ್ವಹಿಸಿದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ಪತ್ತನಾಜೆ ಉತ್ಸವ, ಬಲಿ



ಪುತ್ತೂರು: ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸೋಮವಾರ ರಾತ್ರಿ ಪೂರ್ವಶಿಷ್ಟ ಸಂಪ್ರದಾಯದಂತೆ ಪತ್ತನಾಜೆ ಉತ್ಸವ ನೆರವೇರಿತು.

ಉತ್ಸವದಲ್ಲಿ ಮೂರು ಹೊತ್ತಿನ ಬಲಿ ನೆರವೇರಿತು. ಉಡಿಕೆ, ಚೆಂಡೆ, ವಾದ್ಯ ಸುತ್ತಿನ ಸೇವೆ ನಡೆದು ಬಲಿ ಉತ್ಸವದ ಅಂತಿಮದಲ್ಲಿ ಒಳಗೆ ಗರ್ಭಗುಡಿಯ ಪಾಣಿಪೀಠದಲ್ಲಿರುವ ಬಲಿಮೂರ್ತಿಯ ಸ್ವಸ್ಥಾನಕ್ಕೆ ಸ್ಪರ್ಶಿಸಿ ಬಂದು ಗರ್ಭಗುಡಿಯ ಎದುರಿನ ದ್ವಾರದಲ್ಲಿ ಭಕ್ತರಿಗೆ ದೇವರನ್ನು ತೋರಿಸಿ ಇದೇ ರೀತಿ ಮೂರು ಬಾರಿ ನಡೆದು ದೇವರನ್ನು ಸ್ವಸ್ಥಾನದಲ್ಲಿರಿಸಲಾಯಿತು. ವಸಂತ ಕಟ್ಟೆಯಲ್ಲಿ ದೇವರಿಗೆ ಫಲವಸ್ತುಗಳನ್ನು ಸಮರ್ಪಿಸಿ ಭಕ್ತರಿಗೆ ವಿತರಿಸಲಾಯಿತು. ಭಕ್ತರು ದೇವರಿಗೆ ಪತ್ತನಾಜೆಯ ವಸಂತ ಪೂಜೆ ಸಮರ್ಪಿಸಿ ಪ್ರಸಾದ ಸ್ವೀಕರಿಸಿದರು.

ಪ್ರಧಾನ ಅರ್ಚಕ ವೇ.ಮೂ. ವಸಂತ ಕೆದಿಲಾಯ ಧಾರ್ಮಿಕ ವಿಧಿ ನೆರವೇರಿಸಿದರು. ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಸದಸ್ಯರಾದ ಬಿ. ಈಶ್ವರ ಬೆಡೇಕರ್, ನಳಿನಿ ಪಿ. ಶೆಟ್ಟಿ, ಮಹಾಬಲ ರೈ ವಳತ್ತಡ್ಕ, ದಿನೇಶ್ ಪಿ.ವಿ., ಕೃಷ್ಣವೇಣಿ, ಸುಭಾಷ್ ರೈ ಬೆಳ್ಳಿಪ್ಪಾಡಿ, ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್ ಮತ್ತಿತರರಿದ್ದರು.

ಕುಕ್ಕೆ: ಅರಣ್ಯ ಸಚಿವ ಈಶ್ವರ ಖಂಡ್ರೆಗೆ ಶಾಸಕಿ ಮುರುಳ್ಯರಿಂದ ಮನವಿ ಸಲ್ಲಿಕೆ



ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಮಂಗಳವಾರ ಆಗಮಿಸಿದ ಅರಣ್ಯ ಮತ್ತು ಪರಿಸರ ಜೀವಶಾಸ್ತ್ರ ಸಚಿವ ಈಶ್ವರ ಖಂಡ್ರೆ ಅವನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಸ್ವಾಗತಿಸಿ, ಸಚಿವರಿಗೆ ವಿವಿಧ ಬೇಡಿಕೆಗಳ ಮನವಿ ಸಲ್ಲಿಸಿದರು.

ಬೇಡಿಕೆಗಳು

ಕಡಮಕಲ್ಲು–ಗಾಳಿಬೀಡು–ಮಡಿಕೇರಿ ರಸ್ತೆ ಮತ್ತು ತೋಡಿಕಾನ–ಪಟ್ಟಿ–ಭಾಗಮಂಡಲ ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಬೇಕಾದ ಸಹಕಾರ ನೀಡಬೇಕು, ಅರಣ್ಯ ಮತ್ತು ಕಂದಾಯ ಇಲಾಖೆಯ ಜಂಟಿ ಸರ್ವೆಯ ವರದಿಗಳನ್ನು ಶೀಘ್ರವಾಗಿ ಪ್ರಕಟಿಸಬೇಕು, ಅರಣ್ಯ ಪ್ರದೇಶದಲ್ಲಿ ವಾಸಿಸುವ ಜನರನ್ನು ಒಕ್ಕಲೆಬ್ಬಿಸದೆ ಸದರಿ ಜಾಗದಲ್ಲಿ ವಾಸಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಹಕ್ಕುಪತ್ರವನ್ನು ಒದಗಿಸಬೇಕು, ಕೃಷಿಕರ ತೋಟಗಳಿಗೆ ಇಲಾಖೆಯ ಅನುದಾನದಲ್ಲಿ ಸೋಲಾರ್ ಬೇಲಿ ನಿರ್ಮಾಣಕ್ಕೆ ಪ್ರಸ್ತುತ ಒದಗಿಸುವ ಶೇ.50–50 ಅನುದಾನದ ಬದಲಿಗೆ 75/25 ಅನುದಾನವನ್ನು ಒದಗಿಸಬೇಕು, ಕೃಷಿ ತೋಟಗಳಿಗೆ ಹಾನಿಯಾದ ಪರಿಹಾರ ಮೊತ್ತವನ್ನು ಹೆಚ್ಚಿಸಿ ಶೀಘ್ರ ಬಿಡುಗಡೆಗೊಳಿಸಿ ಸಂಕಷ್ಟದಲ್ಲಿರುವ ರೈತರಿಗೆ ನೇರವಾಗಬೇಕು ಎಂಬ ಬೇಡಿಕೆಗಳ ಮನವಿ ಸಲ್ಲಿಸಿದರು.

ಈ ಸಂದರ್ಭ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಮತ್ತು ಕೇಂದ್ರಿಯ ರಬ್ಬರ್ ಮಂಡಳಿಯ ನಿರ್ದೇಶಕ ಮುಳಿಯ ಕೇಶವ ಭಟ್, ಪ್ರಮುಖರಾದ ಕೃಷ್ಣಯ್ಯ ಮೂಲೆತೋಟ, ರಾಕೇಶ ಮೆಟ್ಟಿನಡ್ಕ, ದೇವಾಲಯದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ ಉಪಸ್ಥಿತರಿದ್ದರು.

ಪುನರ್ ನಿರ್ಮಾಣಗೊಂಡ ಕೆರೆಕಾಡು ಹಿಂದೂ ರುದ್ರಭೂಮಿ ಲೋಕಾರ್ಪಣೆ




ಕಿನ್ನಿಗೋಳಿ: ಸಾರ್ವಜನಿಕ ಹಿಂದೂ ರುದ್ರಭೂಮಿ ಕೆರೆಕಾಡು ಇದರ ಆಶ್ರಯದಲ್ಲಿ ಪುನರ್ ನಿರ್ಮಾಣಗೊಂಡ ಸಾರ್ವಜನಿಕ ಹಿಂದೂ ರುದ್ರಭೂಮಿಯ ಲೋಕಾರ್ಪಣೆ ಭಾನುವಾರ ನಡೆಯಿತು.

ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಹಿಂದೂ ರುದ್ರಭೂಮಿಯನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸುತ್ತಿರುವ ಕೆರೆಕಾಡಿನ ಸಮಿತಿ ಮಾದರಿಯಾಗಿದೆ. ಪ್ರತಿಯೊಂದು ಗ್ರಾಮದಲ್ಲಿ ಸುಸಜ್ಜಿತ ರುದ್ರಭೂಮಿಯ ಅಗತ್ಯ ಇದೆ ಎಂದರು.

ಪಾವಂಜೆ ನಾಗವ್ರಜ ಕ್ಷೇತ್ರದ ಆಡಳಿತ ಮೊಕ್ತೇಸರ ಶಶೀಂದ್ರ ಕುಮಾರ್, ಕಸಾಪದ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಶ್ರೀ ಕ್ಷೇತ್ರ ಧ.ಗ್ರಾ.ಯೋ. ಅಧಿಕಾರಿ ಗಿರೀಶ್ ಕುಮಾರ್ ಎಂ., ಪುನರೂರು ದೇವಸ್ಥಾನದ ಆಡಳಿತ ಮೊಕ್ತೇಸರ ಪಟೇಲ್ ವಾಸುದೇವ ರಾವ್, ಶ್ರೀ ಶಕ್ತಿದರ್ಶನ ಯೋಗಾಶ್ರಮದ ದೇವದಾಸ್ ರಾವ್, ಲೋಕಮುಖಿ ಟ್ರಸ್ಟ್‌ನ ಸೋಂದಾ ಭಾಸ್ಕರ ಭಟ್ ಕಟೀಲ್, ಯುಗಪುರುಷ ಭುವನಾಭಿರಾಮ ಉಡುಪ, ಹರಿದಾಸ್ ಭಟ್ ತೋಕೂರು, ಸುರೇಖ, ರಂಗನಾಥ ಶೆಟ್ಟಿ ಮೂಲ್ಕಿ, ವಿಕಾಸ್ ಶೆಟ್ಟಿ ವಿನೋದ್ ಬೊಳ್ಳೂರು, ಪ್ರಮುಖರಾದ ಪೂರ್ಣಿಮಾ, ಮೋಹನ್‌ದಾಸ್ ಪಡುಪಣಂಬೂರು, ಪುರಂದರ ಶೆಟ್ಟಿಗಾರ್, ಪುರುಷೋತ್ತಮ ಕೋಟ್ಯಾನ್, ಸವಿತಾ ಬೆಳ್ಳಾಯರು, ಪ್ರವೀಣ್ ಶೆಟ್ಟಿ, ನವೀನ್ ರಾಜ್, ಸಂತೋಷ್‌ಕುಮಾರ್, ಸುರೇಶ್ ಶೆಟ್ಟಿ, ವಿನೋದ್ ಸುವರ್ಣ ತೋಕೂರು, ಸಂತೋಷ್ ದೇವಾಡಿಗ, ಪರಮೇಶ್ವರ್ ಶೆಟ್ಟಿಗಾರ್, ಹೇಮಂತ್ ಅಮೀನ್, ಸಂಜೀವ ಭಂಡಾರಿ, ಕೃಷ್ಣಮೂರ್ತಿ ರೆಡ್ಡಿ, ಜಾನಕಿ ಶೆಟ್ಟಿಗಾರ್, ಹಳೆಯಂಗಡಿ ಪಂ. ಮಾಜಿ ಅಧ್ಯಕ್ಷೆ ಪೂರ್ಣಿಮ, ಲಲಿತಾ ಭಾಸ್ಕರ, ಅಜಿತ್, ಮೋಹನ್ ದಾಸ್ ಪಡುಪಣಂಬೂರು, ರುದ್ರ ಭೂಮಿ ಸಮಿತಿ ಅಧ್ಯಕ್ಷ ಲಕ್ಷ್ಮಣ್ ಸಾಲ್ಯಾನ್, ಗೌರವಾಧ್ಯಕ್ಷ ವಿನೋದ್ ಸಾಲ್ಯಾನ್ ಬೆಳ್ಳಾಯರು, ರಾಜಶೇಖರ್ ರಾವ್, ಉಪಾಧ್ಯಕ್ಷ ಪಿ.ಆರ್ ರಾಜೇಶ್, ಶ್ರೀನಿವಾಸ್ ಆಚಾರ್ಯ, ರಾಜೇಶ್ ದಾಸ್ ಪಕ್ಷಿಕೆರೆ ಇದ್ದರು. ಲಕ್ಷ್ಮಣ್ ಸಾಲಿಯಾನ್ ಪುನರೂರು ಸ್ವಾಗತಿಸಿ, ಸಮಿತಿಯ ಕಾರ್ಯದರ್ಶಿ ಮಾಧವ ಶೆಟ್ಟಿಗಾರ್, ಪ್ರಸ್ತಾವನೆಗೈದರು. ರಾಜೇಶ್ ಕೆರೆಕಾಡು ನಿರೂಪಿಸಿದರು.

ವಾಮದಪದವು ಸರಕಾರಿ ಪದವಿ ಕಾಲೇಜಿನ ಅಭಿವೃದ್ಧಿ ಸಮಿತಿ ಸಭೆ



ಬಂಟ್ವಾಳ: ವಾಮದಪದವು ಸರಕಾರಿ ಪದವಿ ಕಾಲೇಜಿನ ಅಭಿವೃದ್ಧಿ ಸಮಿತಿ ಸಭೆ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರ ಅಧ್ಯಕ್ಷತೆಯಲ್ಲಿ ಕಾಲೇಜಿನಲ್ಲಿ ನಡೆಯಿತು.

ಈ ಸಂದರ್ಭ ಮಾತನಾಡಿದ ಶಾಸಕರು ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗ್ರಾಮಸ್ಥರ ಸಹಕಾರ ಪಡೆದು ಕಾಲೇಜು ಅಭಿವೃದ್ಧಿ ಸಮಿತಿ ಶ್ರಮವಹಿಸಬೇಕು ಎಂದರು.

ಕೆಲಸ ಪೂರ್ಣಗೊಳಿಸಿ

ಕಾಲೇಜಿನ ಆವರಣ ಗೋಡೆ, ಅರ್ಧದಲ್ಲಿ ನಿಂತಿರುವ ಕಾಲೇಜಿನ ಸಭಾ ಭವನದ ಕಾಮಗಾರಿ ಹಾಗೂ ಆದ್ಯತೆಯ ನೆಲೆಯಲ್ಲಿ ಮಾಡಬೇಕಾದ ಕೆಲಸ ಪೂರ್ಣಗೊಳಿಸುವ ಭರವಸೆಯನ್ನು ಶಾಸಕರು ನೀಡಿದರು. ಕಾಲೇಜಿನ ಪ್ರಾಂಶುಪಾಲ ಕೆ.ಜಿ ಮಹೇಶ್ ಪ್ರಸಾದ್, ಉಪನ್ಯಾಸಕ ಚಂದ್ರ, ಉದಯ್, ಪ್ರಮುಖರಾದ ಚಂದ್ರಶೇಖರ ಶೆಟ್ಟಿ ಪುರುಷೋತ್ತಮ ಶೆಟ್ಟಿ ವಾಮದಪದವು, ದಿನೇಶ್ ಶೆಟ್ಟಿ ದಂಬೆದಾರ್, ರವಿರಾಮ ಶೆಟ್ಟಿ ನವೀನ್ ಚಂದ್ರ ಶೆಟ್ಟಿ ಉದಯಕುಮಾರ್ ಶೆಟ್ಟಿ ಅನಂತ್ ಪೈ, ಶ್ರೀಧರ್ ಪೈ, ಆನಂದ್ ಆಚಾರ್ಯ, ಮೋಹನ್ ದಾಸ್ ಗಟ್ಟಿ ರಾಜೀವ್ ಗಟ್ಟಿ ಅಮ್ಮು ರೈ ಹರ್ಕಾಡಿ, ಪ್ರವೀಣ್ ಗಟ್ಟಿ ವಿನಾಯಕ ಪ್ರಭು ಮತ್ತಿತರರು ಉಪಸ್ಥಿತರಿದ್ದರು.




ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಸೋಮವಾರ ರಾತ್ರಿ ಪತ್ತನಾಜೆ ಬಲಿ ನಡೆಯಿತು. ನೂರಾರು ಭಕ್ತರು ಹಾಜರಿದ್ದರು.

ಶಾಸಕ ಅಶೋಕ್ ರೈ ಕಚೇರಿಯಲ್ಲಿ ಪುತ್ತೂರು, ಸುಳ್ಯ, ಬೆಳ್ತಂಗಡಿ, ಬಂಟ್ವಾಳ, ಕಡಬ ಭಾಗದ ಕೋವಿ ಬಳಕೆದಾರರ ಸಭೆ

ಕೋವಿ ಪರವಾನಗಿ, ನವೀಕರಣಕ್ಕಾಗಿ ಗೃಹ ಸಚಿವರಿಗೆ ಮನವಿಗೆ ನಿರ್ಧಾರ

ಪುತ್ತೂರು: ಕೋವಿ ಪರವಾನಗಿ ಮತ್ತು ಕೋವಿ ನವೀಕರಣ ವಿಚಾರಕ್ಕೆ ಸಂಬಂಧಿಸಿದಂತೆ ಇರುವ ಗೊಂದಲ ಇನ್ನೂ ನಿವಾರಣೆಯಾಗದೇ ಇರುವ ಹಿನ್ನೆಲೆಯಲ್ಲಿ ಮಂಗಳವಾರ ಪುತ್ತೂರು ಶಾಸಕ ಅಶೋಕ್ ರೈ ಅವರ ಕಚೇರಿಯಲ್ಲಿ ಪುತ್ತೂರು, ಸುಳ್ಯ, ಬೆಳ್ತಂಗಡಿ, ಬಂಟ್ವಾಳ ಹಾಗೂ ಕಡಬ ಭಾಗದ ಕೋವಿ ಬಳಕೆದಾರರ ಸಭೆ ನಡೆಯಿತು.

ಶಾಸಕ ಅಶೋಕ್ ಕುಮಾರ್ ರೈ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯಲ್ಲಿ ಕೋವಿ ಪರವಾನಿಗೆ ಸಿಗದಿರುವುದು ಮತ್ತು ಇರುವ ಕೋವಿಯ ಪರವಾನಿಗೆ ನವೀಕರಣ ಮಾಡದೆ ಇರುವ ವಿಚಾರದ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಈ ಹಿನ್ನಲೆಯಲ್ಲಿ ಮುಂದೆ ಕೈಗೊಳ್ಳಬೇಕಾದ ತೀರ್ಮಾನ, ಈ ವಿಚಾರದಲ್ಲಿ ಸರಕಾರಕ್ಕೆ ಮನವಿ ಮಾಡುವುದು



ಮತ್ತು ನ್ಯಾಯಾಲಯದಲ್ಲಿ ಪ್ರಶ್ನಿಸುವುದು ಮೊದಲಾದ ವಿಚಾರಕ್ಕೆ ಸಂಬಂಧಿಸಿ ಚರ್ಚೆ ನಡೆಯಿತು. ಸಭೆಯಲ್ಲಿ ಮಾತನಾಡಿದ ಜಯಪ್ರಕಾಶ್ ಜೋಶಿ, ಜಿಲ್ಲೆಯ ಕೋವಿ ಬಳಕೆದಾರರ ಪರವಾಗಿ ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿದ್ದು ಪುತ್ತೂರು ಶಾಸಕ ಅಶೋಕ್ ರೈ ಅವರು ಒಬ್ಬರೇ. ಇತರ ಶಾಸಕರು ಸೇರಿ ಒಟ್ಟಾಗಿ ಈ ವಿಚಾರದಲ್ಲಿ ಮಾತನಾಡಿದ್ದರೆ ಇನ್ನೂ ಅದಕ್ಕೆ ಶಕ್ತಿ ಬರುತ್ತಿತ್ತು ಎಂದು ಹೇಳಿದರು. ದ.ಕ. ಜಿಲ್ಲೆಯಲ್ಲಿ ಮಾತ್ರ ಯಾಕೆ ಈ ಸಮಸ್ಯೆ? ಶಾಸಕರು ಅಧಿವೇಶನದಲ್ಲಿ ಈ ವಿಚಾರವಾಗಿ ಪ್ರಶ್ನೆ ಎತ್ತಿದಾಗ ಗೃಹ ಸಚಿವರು ಸಮಸ್ಯೆ ಬಗೆಹರಿಸುವ ಮಾತುಗಳನ್ನಾಡಿದ್ದರು. ಕೋವಿ ಪರವಾನಿಗೆ ನವೀಕರಣವಾಗದವರ ಪಟ್ಟಿ ಸಲ್ಲಿಸುವಂತೆ ಗೃಹ ಸಚಿವರು ಕೇಳಿಕೊಂಡಾಗ ಶಾಸಕರ ಮೂಲಕ ಅದನ್ನು ನೀಡಲಾಗಿದೆ. ಆದರೆ, ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಲ್ಲ ಎಂದು ಹೇಳಿದರು. ಸಭೆಯಲ್ಲಿ 50ಕ್ಕೂ ಮಿಕ್ಕಿ ಕೋವಿ ಬಳಕೆದಾರರು ಉಪಸ್ಥಿತರಿದ್ದರು.

ಮತ್ತೊಮ್ಮೆ ಮಾತುಕತೆ

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಗೃಹ ಸಚಿವರ ಜೊತೆ ಮತ್ತೊಮ್ಮೆ ಮಾತುಕತೆ ನಡೆಸುತ್ತೇನೆ. ಕೋವಿ ಬಳಕೆದಾರರ ಮನವಿಯನ್ನು ಸಚಿವರಿಗೆ ನೀಡುವುದಲ್ಲದೆ ಇದಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಚರ್ಚೆ ನಡೆಸುತ್ತೇನೆ ಎಂದು ಶಾಸಕ ಅಶೋಕ್ ರೈ ಹೇಳಿದರು. ಜಿಲ್ಲೆಯಲ್ಲಿ ಕೃಷಿಕರಿಗೆ ಕೋವಿ ಅಗತ್ಯವಾಗಿದೆ. ಇಲ್ಲಿನ ಕಾಡು ಪ್ರಾಣಿಗಳ ಕಾಟದಿಂದ ಕೃಷಿ ಬೆಳೆ ನಾಶವಾಗುತ್ತಿದೆ.ಈ ಬಗ್ಗೆ ಸಚಿವರಿಗೆ ಮತ್ತೊಮ್ಮೆ ವಿವರಣೆ ನೀಡುತ್ತೇನೆ. ಗೃಹ ಇಲಾಖೆಯ ಕಾರ್ಯದರ್ಶಿ ಜೊತೆಗೂ ಮಾತನಾಡುತ್ತೇನೆ ಎಂದು ತಿಳಿಸಿದರು.

ಸುತ್ತಮುತ್ತ

ಕಡಬ: ಮಾದಕ ದ್ರವ್ಯ ವಿರೋಧಿ ಜಾಗೃತಿ ಕಾರ್ಯಾಗಾರ

ಕಡಬ: ಇಲ್ಲಿನ ಕಡಬ ಕ್ರಿಶ್ಚಿಯನ್ ಲೈಟಿಂಗ್ ಕ್ಲಬ್‌ನ ಆಶ್ರಯದಲ್ಲಿ 2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದ ಕಡಬ ವಲಯದ ವಿವಿಧ ಚರ್ಚ್‌ಗಳ ವಿದ್ಯಾರ್ಥಿಗಳಿಗಾಗಿ ಅಭಿನಂದನಾ ಕಾರ್ಯಕ್ರಮ ಮತ್ತು ಮಾದಕ ದ್ರವ್ಯ ವಿರೋಧಿ ಜಾಗೃತಿ ಕಾರ್ಯಾಗಾರ ಮರ್ದಾಳದ ಬೆಥನಿ ಜೀವನ್ ಜ್ಯೋತಿ ವಿಶೇಷ ಶಾಲೆಯಲ್ಲಿ ಜರಗಿತು. ಮುಖ್ಯ ಅತಿಥಿಗಳಾಗಿ ಫಾ. ಕುರಿಯಾಕೋಸ್ ಕವನಾಟೆಲ್ ಕೋರ್-ಎಪಿಸ್ಕೋಪ ಭಾಗವಹಿಸಿದರು. ಕಡಬ ಕ್ನಾನಾಯ ಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲೆ ಸಿಸ್ಟರ್ ಉಷಾ ಸಿ.ಎಂ.ಸಿ. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿ, ಕಡಬ ಆರಕ್ಷಕ ಠಾಣೆಯ ಉಪ ನಿರೀಕ್ಷಕ ಜಂಬೂರಾಜ್ ಮಹಾಜನ್ ಮಾಹಿತಿ ನೀಡಿದರು. ಬೆಥನಿ ಜೀವನ್ ಜ್ಯೋತಿ ವಿಶೇಷ ಶಾಲೆಯ ನಿರ್ದೇಶಕ ಫಾ. ಝಕರಿಯಾಸ್ ನಂದಿಯಾಟ್ಟ್ ಉಪಸ್ಥಿತರಿದ್ದರು. ಡಾಕ್ಟರೇಟ್ ಪದವಿ ಪಡೆದ ಕ್ಲಬ್‌ನ ಸಕ್ರಿಯ ಸದಸ್ಯೆ ಉಷಾ ಎಂ.ಎಲ್. ಅವರನ್ನು ಕ್ಲಬ್ ವತಿಯಿಂದ ಗೌರವಿಸಿ, ಸನ್ಮಾನಿಸಲಾಯಿತು. 2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ಕಡಬ ವಲಯದ ಚರ್ಚ್‌ಗಳ ಎಲ್ಲಾ ವಿದ್ಯಾರ್ಥಿಗಳನ್ನು ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಕ್ಲಬ್‌ನ ಕಾರ್ಯದರ್ಶಿ ಕೆವಿಯರ್ ಬೇಬಿ ಸ್ವಾಗತಿಸಿ, ಅಧ್ಯಕ್ಷ ಮನೋಜ್ ವಂದಿಸಿದರು. ಸದಸ್ಯರಾದ ಉಷಾ ಎಂ.ಎಲ್. ಮತ್ತು ಸುಸ್ಮಿತಾ ಶಾಜಿ ಕಾರ್ಯಕ್ರಮ ನಿರ್ವಹಿಸಿದರು.

ಕಡಬ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ

ಕಡಬ: ಬಕ್ರೀದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸುವ ಮೂಲಕ ಸಮಾಜದಲ್ಲಿ ಸೌಹಾರ್ದತೆ ಕಾಪಾಡಬೇಕು. ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಯಾವುದೇ ಘಟನೆಗಳಿಗೆ ಅವಕಾಶ ನೀಡಬಾರದು ಎಂದು ಕಡಬ ಪೊಲೀಸ್ ಠಾಣೆಯ ಉಪನಿರೀಕ್ಷಕ ಜಂಬೂರಾಜ್ ಮಹಾಜನ್ ಹೇಳಿದರು.

ಬಕ್ರೀದ್ ಹಬ್ಬದ ಅಂಗವಾಗಿ ಕಡಬ ಪೊಲೀಸ್ ಠಾಣೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಅವರು ಮಾತನಾಡಿದರು. ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮಾಜದಲ್ಲಿ ಶಾಂತಿ ಹಾಗೂ ಸೌಹಾರ್ದತೆ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು. ಯಾವುದೇ ಅನುಮಾನಾಸ್ಪದ ಘಟನೆಗಳು ಕಂಡುಬಂದಲ್ಲಿ ಕೂಡಲೇ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಅವರು ಸೂಚಿಸಿದರು.

ಹಬ್ಬದ ಸಂಭ್ರಮದಲ್ಲಿ ಸಂಚಾರ ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡಬಾರದು. ನಿಯಮ ಉಲ್ಲಂಘಿಸುವವರ ವಿರುದ್ಧ ಇಲಾಖೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು ಅವರು ಎಚ್ಚರಿಸಿದರು. ಕಡಬ ಟೌನ್ ಜುಮಾ ಮಸೀದಿಯ ಉಪಾಧ್ಯಕ್ಷ ಕೆ.ಎಂ. ಹನೀಫ್, ಜತೆ ಕಾರ್ಯದರ್ಶಿ ಅಶ್ರಫ್ ಶೇಡಿಗುಂಡಿ, ಮರ್ದಾಳ ಜುಮಾ ಮಸೀದಿಯ ಅಧ್ಯಕ್ಷ ಯೂನುಸ್, ಕಡಬ ಕೇಂದ್ರ ಜುಮಾ ಮಸೀದಿಯ ಅಧ್ಯಕ್ಷ ಮಹಮ್ಮದ್ ಶರೀಫ್ ಸಾಹೇಬ್ ಕೇಪು, ನೆಕ್ಕರೆ ಜುಮಾ ಮಸೀದಿಯ ಆರ್ಶಾದ್, ಕುಂಡಾಜೆ ಜುಮಾ ಮಸೀದಿಯ ಸಾಹುಲ್ ಹಮೀದ್ ಮತ್ತಿತರರಿದ್ದರು.

ಫಿಲೋಮಿನಾ ಪ. ಪೂ ಕಾಲೇಜಿನಲ್ಲಿ ಮಾಹಿತಿ ಕಾರ್ಯಾಗಾರ

ಪುತ್ತೂರು: ನಗರದ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜ್ ಹಾಗೂ ವೃತ್ತಿ ಮಾರ್ಗದರ್ಶನ ವಿಭಾಗದ ಆಶ್ರಯದಲ್ಲಿ ಮಂಗಳವಾರ ಕಾಲೇಜಿನ ಸಭಾಂಗಣದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಕುರಿತು ಮಾಹಿತಿ ಕಾರ್ಯಾಗಾರ ನಡೆಯಿತು. ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿ ಕ್ಷೇಮಪಾಲನಾ ಡೀನ್ ಡಾ. ಪ್ರಶಾಂತ ರಾವ್ ಭಾಗವಹಿಸಿ, ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತಾ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕ ರವಿಪ್ರಸಾದ್ ಬಿ.ಜಿ. ಉಪಸ್ಥಿತರಿದ್ದರು. ವೃತ್ತಿ ಮಾರ್ಗದರ್ಶನ ವಿಭಾಗದ ನಿರ್ದೇಶಕರಾದ ನಿರಂಜನ್ ಜಿ.ಯು., ಕವಿತಾ ಕೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ವಿದ್ಯಾರ್ಥಿಗಳಾದ ಜೋಸ್ವಿಟ ಅತಿಥಿಗಳನ್ನು ಪರಿಚಯಿಸಿದರು. ಖದೀಜತ್ ಆಸ್ನ ಸ್ವಾಗತಿಸಿ, ಶ್ಯಾನ್ ಅಬ್ಬಾಸ್ ವಂದಿಸಿದರು. ಸವಿಯ ಪ್ರೀಶಲ್ ಡಿ'ಸೋಜಾ ಕಾರ್ಯಕ್ರಮವನ್ನು ನಿರ್ವಹಿಸಿದರು.

ವೈಜ್ಞಾನಿಕ ಘನತ್ಯಾಜ್ಯ ಸಂಸ್ಕರಣಾ ಘಟಕ ಪಕ್ಕದಲ್ಲೇ ಇದ್ದರೂ ದೈವಸ್ಥಾನ ಸಮೀಪ ತ್ಯಾಜ್ಯಗಳ ಡಂಪಿಂಗ್

ಬನ್ನೂರಿನಲ್ಲಿ ತ್ಯಾಜ್ಯ ಸಾಗಾಟ ಲಾರಿಗೆ ಸ್ಥಳೀಯರಿಂದ ತಡೆ!

ಪುತ್ತೂರು: ಬನ್ನೂರಿನಲ್ಲಿರುವ ವೈಜ್ಞಾನಿಕ ಘನತ್ಯಾಜ್ಯ ಸಂಸ್ಕರಣಾ ಘಟಕ ಪಕ್ಕದಲ್ಲೇ ಇದ್ದರೂ ದೈವಸ್ಥಾನಕ್ಕೆ ಹೋಗುವ ದಾರಿಯಲ್ಲೇ ತ್ಯಾಜ್ಯಗಳ ರಾಶಿಯನ್ನು ಹಾಕಿರುವುದರಿಂದ ಆಕ್ರೋಶಿತರಾದ ಸ್ಥಳೀಯರು ದಿಢೀರ್ ಪ್ರತಿಭಟನೆ ನಡೆಸಿದ ಘಟನೆ ಮೇ 25ರಂದು ನಡೆದಿದೆ.

ಮೇ 25ರಂದು ಬನ್ನೂರಿನಲ್ಲಿ ಸ್ಥಳೀಯರು ಕಸ ಸಾಗಾಟದ ಲಾರಿ ತಡೆದು ಪ್ರತಿಭಟನೆ ನಡೆಸಿದರು. ಈ ಸಂದರ್ಭ ಸ್ಥಳಕ್ಕೆ ಆಗಮಿಸಿದ ಪೌರಾಯುಕ್ತರು ಮೂರು ದಿನದೊಳಗೆ ಕಸವನ್ನು ತೆರವು ಮಾಡುವ ಭರವಸೆಯೊಂದಿಗೆ ಪ್ರತಿಭಟನೆ ತಾತ್ಕಾಲಿಕವಾಗಿ ಹಿಂಪಡೆದ ಘಟನೆ ನಡೆದಿದೆ.



ಸ್ಥಳೀಯರ ಆಕ್ರೋಶ

ಕಳೆದ 6 ತಿಂಗಳಿನಿಂದ ಈ ಭಾಗದಲ್ಲಿ ಹಲವಾರ ಮನೆಗಳಿಗೆ, ನಾಗರಕೇಶ್ವರಿ ದೈವಸ್ಥಾನಕ್ಕೆ ಹೋಗುವ ದಾರಿಯಲ್ಲಿ ತ್ಯಾಜ್ಯಗಳ ರಾಶಿ ಹಾಕಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ಘನತ್ಯಾಜ್ಯ ಘಟಕದದಲ್ಲಿನ ಕಸವನ್ನು ಸಿಮೆಂಟ್ ಫ್ಯಾಕ್ಟರಿಗೆ ಕೊಂಡೊಯ್ಯುವ ಪ್ರಕ್ರಿಯೆಯಿಂದ ಘನತ್ಯಾಜ್ಯ ಘಟಕಕ್ಕೆ ತೆರಳುವಲ್ಲಿ ತೊಂದರೆ ಆಗಿರುವ ಹಿನ್ನೆಲೆಯಲ್ಲಿ ತ್ಯಾಜ್ಯಗಳನ್ನು ಸಾರ್ವಜನಿಕ ಸರಕಾರಿ ಸ್ಥಳದಲ್ಲಿ ಹಾಕಲಾಗಿತ್ತು. ಇದು ಸ್ಥಳೀಯ ಮನೆಗಳಿಗೆ, ದೈವಸ್ಥಾನಕ್ಕೆ ಹೋಗುವ ದಾರಿಯಾದ ಕಾರಣ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿ ತ್ಯಾಜ್ಯ ತೆರವು ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಸ್ಥಳೀಯರಾದ ಕಾರ್ತಿಕ್ ಕುಲಾಲ್ ನೆಕ್ಕಿಲ ಮಾತನಾಡಿ, ದೈವಸ್ಥಾನಕ್ಕೆ ಅಶೌಚ ಮಾಡುವ ಕೆಲಸ ಮಾಡುತ್ತಿದ್ದಾರೆ. ಕಳೆದ ಆರು ತಿಂಗಳಿನಿಂದ ಘಟಕದ ಹೊರಭಾಗಕ್ಕೆ ಕಸ ಹಾಕುತ್ತಿದ್ದಾರೆ. ಈ ಕುರಿತು ನಗರಸಭೆ ಪೌರಾಯುಕ್ತರಿಗೆ ನಾವು ದೂರು ನೀಡಿದ್ದೇವೆ. ಅವರು ಘಟಕದ ಒಳಗಿನ ಯಾವುದೇ ಕಸವನ್ನು ಹೊರಗಡೆ ಹಾಕುವುದಿಲ್ಲ ಎಂದು ಭರವಸೆ ನೀಡಿದ್ದರೂ ಅವರು ಮತ್ತೆ ಮತ್ತೆ ಘಟಕದ ಒಳಗಿನಿಂದ ಕಸವನ್ನು ಹೊರಗೆ ತಂದು ಸುರಿಯುತ್ತಿದ್ದಾರೆ. ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಲಿದೆ ಎಂದರು. ಅಲ್ಲದೆ, ಖಾಸಗಿ ಲಾರಿಗಳು ರಾಜ ಕಾಲುವೆಯಿಂದ ತಂದಿರುವ ತ್ಯಾಜ್ಯಗಳನ್ನೂ ಕೂಡಾ ಇಲ್ಲೇ ಸುರಿದು ಹೋಗುತ್ತಿದ್ದಾರೆ. ಈ ಕುರಿತು ನಗರಸಭೆ ಇಂಜಿನಿಯರ್ ಅವರಲ್ಲಿ ಮಾತನಾಡಿದರೆ ಅವರು ಸ್ಥಳೀಯರನ್ನು ಗದರಿಸಿ ಸಾಧ್ಯವಾದರೆ ಪೊಲೀಸ್ ದೂರು ನೀಡಿ ಎಂದು ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಯಾವುದೋ ಖಾಸಗಿ ವಾಹನ ಇಲ್ಲಿ ಬಂದು ಕಸ ಸುರಿಯುತ್ತಾರೆ ಎಂದಾದರೆ ನಗರಸಭೆಗೆ ಅವರ ಜಾಗದಲ್ಲಿ ಜವಾಬ್ದಾರಿ ಇಲ್ಲವಾ ಎಂದು ಪ್ರಶ್ನಿಸಿದ ಅವರು, ನಗರಸಭೆ ಅಧಿಕಾರಿಗಳು ಬರುವ ತನಕ ಇಲ್ಲಿಂದ ಕದಲುವುದಿಲ್ಲ, ಸಂಸ್ಕರಣಾ ಘಟಕಕ್ಕೆ ಹೋಗುವ ವಾಹನ ತಡೆಯುತ್ತೇವೆ ಎಂದು ಪಟ್ಟು ಹಿಡಿದರು.

ಸ್ವಚ್ಛ ಭಾರತ ಅನ್ನುವ ಕನಸು ಇಲ್ಲಿ ಕನಸಾಗಿಯೇ ಉಳಿದಿದೆ. ಅಧಿಕಾರಿಗಳು ಇತ್ತ ಕಡೆ ಗಮನಿಸಬೇಕೆಂದು ರಾಮಚಂದ್ರ ಭಟ್ ಅಧಿಕಾರಿಗಳಿಗೆ ವಿವಿಧ ಮಾಹಿತಿ ನೀಡಿದರು. ಬಳಿಕ ಪೌರಾಯುಕ್ತರಾದ ವಿದ್ಯಾಕಾಳೆ ಸ್ಥಳಕ್ಕೆ ಆಗಮಿಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಹಿನ್ನಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಯಿತು.

> **“** ನಗರಸಭೆ ಘನ ತ್ಯಾಜ್ಯ ಸಂಸ್ಕರಣಾ ಘಟಕದಿಂದ ಈ ಭಾಗದ ಜನರು ಬಹಳಷ್ಟು ನೋವು ಅನುಭವಿಸುತ್ತಿದ್ದಾರೆ. ಇತ್ತೀಚೆಗಿನ ಮೂರ್ನಾಲ್ಕು ತಿಂಗಳಲ್ಲಿ ಘಟಕದ ಹೊರಗಡೆ ಬೇಕಾಬಿಟ್ಟಿ ಕಸಗಳನ್ನು ಹಾಕುತ್ತಿದ್ದಾರೆ. ನಗರಸಭೆ ರಾಜಕಾಲುವೆಯ ತ್ಯಾಜ್ಯವನ್ನೂ ಕೂಡಾ ಇಲ್ಲೇ ಹಾಕುತ್ತಿದ್ದಾರೆ. ಈ ತ್ಯಾಜ್ಯವನ್ನು ಕಾಗೆಗಳು ಸ್ಥಳೀಯ ಮನೆಯಂಗಳಕ್ಕೆ ಹಾಕಿ ಅನಾರೋಗ್ಯಕ್ಕೆ ದಾರಿ ಮಾಡಿ ಕೊಡುತ್ತಿದೆ. ನಗರಸಭೆಯ ಅಧ್ಯಕ್ಷರಾಗಿ ಈಗ ಜಿಲ್ಲಾಧಿಕಾರಿಗಳಿದ್ದಾರೆ. ಈಗಾಲೇ ಎಲ್ಲಾ ಮನವಿ ನೀಡಲಾಗಿದ್ದರೂ ಮನವಿಗೆ ಯಾವುದೇ ಸ್ಪಂದನೆಯಿಲ್ಲ.
>
> ● **ಗೌರಿ ಬನ್ನೂರು,** ನಗರಸಭೆ ನಿಕಟಪೂರ್ವ ಸದಸ್ಯೆ

ಮೇ 31ರಂದು ಕಾರ್ಯಕ್ರಮ | ವಿವಿಧ ಪುಸ್ತಕ ಬಿಡುಗಡೆ, ಗುರುವಂದನೆ

ಕಿದಿಯೂರು ಮಧುಶ್ರೀ ಪ್ರಕಾಶನದ ಸಂಭ್ರಮ

ಉಡುಪಿ: ತುಳು ರಂಗಭೂಮಿ, ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಕಿದಿಯೂರು 'ಮಧುಶ್ರೀ ಪ್ರಕಾಶನ' ಸಂಸ್ಥೆಯ ನಲವತ್ತನೇ ವರ್ಷದ ಸಂಭ್ರಮಾಚರಣೆಯು ಮೇ 31ಕ್ಕೆ ಸಂಜೆ 3:30ಕ್ಕೆ ಉಡುಪಿ ಕಿದಿಯೂರು ಹೋಟೆಲ್‌ನ ಅನಂತಶಯನ ಸಭಾಂಗಣದಲ್ಲಿ ಜರುಗಲಿದೆ ಎಂದು ಉಡುಪಿ ತುಳುಕೂಟದ ಅಧ್ಯಕ್ಷ ಬಿ. ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದರು.

ಉಡುಪಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಳುಕೂಟ ಉಡುಪಿ ಮತ್ತು ವಿಶ್ವಪ್ರಭ ಪ್ರತಿಷ್ಠಾನ ಇವುಗಳ ಜಂಟಿ ಸಹಯೋಗದೊಂದಿಗೆ ಈ ಸಾಧನಾ ಸಂಭ್ರಮ ಆಯೋಜಿಸಲಾಗಿದೆ. ಹಿರಿಯ ಸಾಹಿತಿ, ಮಿಲಾಗ್ರಿಸ್ ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲ ಎಸ್. ಎನ್.ಡಿ. ಪೂಜಾರಿ ಅವರು ಬರೆದಿರುವ 'ತುಳುವ ದೈವ ಸಂಪ್ರದಾಯ' ಎಂಬ ವಿಶಿಷ್ಟ ಅಧ್ಯಯನ ಗ್ರಂಥವನ್ನು ಉಡುಪಿ ತುಳುಕೂಟದ ಸ್ಥಾಪಕಾಧ್ಯಕ್ಷ ಡಾ. ಭಾಸ್ಕರಾನಂದ ಕುಮಾರ್ ಬಿಡುಗಡೆ ಮಾಡಲಿದ್ದಾರೆ. ಜಾನಪದ ವಿದ್ವಾಂಸರಾದ ಡಾ. ಗಣನಾಥ ಎಕ್ಕಾರು ಈ ಕೃತಿಯ ಪುಸ್ತಕ ಪರಿಚಯ ಮಾಡಲಿದ್ದಾರೆ. ಅಲ್ಲದೆ, ತುಳುಕೂಟದ ಪ್ರಧಾನ ಕಾರ್ಯದರ್ಶಿ ಹಾಗೂ ಮಧುಶ್ರೀ ಪ್ರಕಾಶನ ಸಂಸ್ಥೆಯ ಮುಖ್ಯಸ್ಥರಾದ ಸಾಹಿತಿ ಗಂಗಾಧರ ಕಿದಿಯೂರು ಅವರು ಬರೆದಿರುವ ತುಳು ನಾಟಕ 'ಪಿಂಗಾರದ ಬಾಲೆ ಸಿರಿ' ಕೃತಿಯ ಇಂಗ್ಲಿಷ್ ಆವೃತ್ತಿಯನ್ನು ಜಾನಪದ ವಿದ್ವಾಂಸ ಡಾ. ಗಣೇಶ್ ಅಮೀನ್ ಸಂಕಮಾರ್ ಬಿಡುಗಡೆಗೊಳಿಸಲಿದ್ದಾರೆ. ಈ ಕೃತಿಯನ್ನು ಎಸ್.ಎನ್.ಡಿ. ಪೂಜಾರಿ ಅವರು ಇಂಗ್ಲಿಷಿಗೆ ಅನುವಾದಿಸಿದ್ದು, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕಿ ಹಾಗೂ ಲೇಖಕಿ ಡಾ. ಪಾರ್ವತಿ ಜಿ. ಐತಾಳ್ ಪುಸ್ತಕ ಪರಿಚಯ ಮಾಡಲಿದ್ದಾರೆ.

ಸಂಸ್ಥೆಗಳಿಗೆ ಗೌರವಾರ್ಪಣೆ

ಮಧುಶ್ರೀ ಪ್ರಕಾಶನದೊಂದಿಗೆ ನಿರಂತರವಾಗಿ ಬೆನ್ನೆಲುಬಾಗಿ ನಿಂತಿರುವ ಉಡುಪಿಯ ರಂಗಭೂಮಿ, ಸುಮನಸಾ ಕೊಡವೂರು, ಕಲಾಕಿರಣ ಕ್ಲಬ್ ಬೈಲೂರು, ನವಸುಮ ರಂಗಮಂಚ್ ಕೊಡವೂರು, ಯೂತ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಕ್ಲಬ್ ಅಂಬಲಪಾಡಿ, ಸಂಸ್ಕೃತಿ ವಿಶ್ವಪ್ರತಿಷ್ಠಾನ ಉಡುಪಿ, ವಿಠೋಬಾ ಭಜನಾ ಮಂದಿರ ಅಂಬಲಪಾಡಿ, ತುಳುಕೂಟ ಉಡುಪಿ, ನಂದಗೋಕುಲ ಯುವಕ ಮಂಡಲ ಮಾರ್ಪಳ್ಳಿ ಹಾಗೂ ಬ್ರೈಟ್ ಸಂಶೋಧನಾ ಕೇಂದ್ರ ಆದಿ ಉಡುಪಿ ಸಂಸ್ಥೆಗಳಿಗೆ ಈ ನೆನಪಿನ ಸಂಭ್ರಮದಲ್ಲಿ ಗೌರವಾರ್ಪಣೆ ನೆರವೇರಲಿದೆ. ಮುಖ್ಯ ಅತಿಥಿಗಳಾಗಿ ಉಡುಪಿಯ ಹಿರಿಯ ಉದ್ಯಮಿ ಯು. ವಿಶ್ವನಾಥ ಶೆಣೈ ಭಾಗವಹಿಸಲಿದ್ದಾರೆ ಎಂದು ಜಯಕರ ಶೆಟ್ಟಿ ತಿಳಿಸಿದರು.

ಗಂಗಾಧರ ಕಿದಿಯೂರು, ಪ್ರಮುಖರಾದ ವಿಶ್ವನಾಥ ಶೆಣೈ ಉಡುಪಿ, ಬಿ. ಪ್ರಭಾಕರ ಭಂಡಾರಿ ಹಾಗೂ ಪ್ರಕಾಶ್ ಸುವರ್ಣ ಕಟಪಾಡಿ ಉಪಸ್ಥಿತರಿದ್ದರು.

> **ಗುರುವಂದನೆ, ಪ್ರತಿಭಾ ಪುರಸ್ಕಾರ**
>
> ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿದ ನಿವೃತ್ತ ಪ್ರಾಂಶುಪಾಲ ಪ್ರೊ. ಎಂ. ಎಲ್. ಸಾಮಗ, ನಿವೃತ್ತ ಶಿಕ್ಷಕ ಸರಳಾ ಶೆಟ್ಟಿ ಮತ್ತು ಧನಲಕ್ಷ್ಮಿ ಹಾಗೂ ಹಿರಿಯಡಕದ ಮತ್ತಕ ಅವರಿಗೆ ಸಾರ್ವಜನಿಕವಾಗಿ 'ಗುರುವಂದನೆ' ಸಲ್ಲಿಸಿ ಗೌರವಿಸಲಾಗುವುದು. ಜೊತೆಗೆ, ಪ್ರತಿಭಾವಂತ ವಿದ್ಯಾರ್ಥಿ ತನ್ಮಯ್ ಪಿ.ಪೂಜಾರಿ, ಸಂಹಿತಾ ಜಿ. ಪಿ., ಯಶನ್ ಪಿ. ಸುವರ್ಣ ಕಟಪಾಡಿ, ಶಾರ್ವರಿ ಯು. ಅಂಚನ್, ಆದ್ಯ ಶ್ರೀನಾಥ್, ಆದಿತಿ ಶ್ರೀನಾಥ್, ಸಮರ್ಥ್ ಎಂ. ಸಿ., ತನ್ವಿ ಎಂ. ಕಿದಿಯೂರು ಹಾಗೂ ವೈಷ್ಣವಿ ವಿಶ್ವನಾಥ್ ಅವರಿಗೆ 'ಪ್ರತಿಭಾ ಪುರಸ್ಕಾರ' ನೀಡಲಾಗುವುದು ಎಂದು ಬಿ. ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದರು.

ಪುತ್ತೂರು ಶಾಸಕರ ಕಚೇರಿಯಲ್ಲಿ ಬೀಡಿ ಗುತ್ತಿಗೆದಾರರ ಸಭೆಯಲ್ಲಿ ಸೂಚನೆ

ಸರಕಾರ ನಿಗದಿ ಮಾಡಿದ ಮಜೂರಿ ಸಿಗಲೇಬೇಕು

ಪುತ್ತೂರು: ಯಾರೆಲ್ಲಾ ಬೀಡಿ ಕಟ್ಟುತ್ತಾರೋ ಅವರಿಗೆ ಸಿಗಬೇಕಾದ ಸರಕಾರ ನಿಗದಿ ಮಾಡಿದ ಮಜೂರಿ ಸಿಗಲೇಬೇಕು. ಅದರಲ್ಲಿ ಯಾವುದೇ ರಾಜಿಯಿಲ್ಲ. ಸರಕಾರ ಎಷ್ಟು ನಿಗದಿ ಮಾಡಿದೆಯೋ ಅದನ್ನು ಬೀಡಿ ಕಂಪನಿಯವರು ಕೊಡಬೇಕು. ಎಲ್ಲಾ ಕಡೆ ಒಂದೇ ರೀತಿ ಮಜೂರಿ ಸಿಗಬೇಕು. ಈ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ ಎಂದು ಪುತ್ತೂರು ಶಾಸಕ ಅಶೋಕ್ ರೈ ಹೇಳಿದರು.



ಶಾಸಕರ ಕಚೇರಿಯಲ್ಲಿ ಮಂಗಳವಾರ ನಡೆದ ಬೀಡಿ ಗುತ್ತಿಗೆದಾರರ ಸಭೆಯಲ್ಲಿ ಅವರು ಮಾತನಾಡಿದರು. ಕಳೆದ ವಾರ ಬೀಡಿ ಕಂಪನಿ ಮಾಲಕರ ಜೊತೆ ಸಭೆ ನಡೆದಿದ್ದು ಶಾಸಕರು ಸರಕಾರ ನಿಗದಿ ಮಾಡಿದ ಮಜೂರಿ ಗುತ್ತಿಗೆದಾರರಿಗೆ ಕಂಪೆನಿ ನೀಡಬೇಕು. ಕಂಪೆನಿ ನೀಡಿದರೆ ಅದನ್ನು ಗುತ್ತಿಗೆದಾರರು ಕಾರ್ಮಿಕರಿಗೆ ನೀಡಬೇಕು ಎಂದು ಸೂಚನೆ ನೀಡಿದ್ದರು. ಇಂದು ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಬೀಡಿ ಗುತ್ತಿಗೆದಾರರು ಸಭೆಯಲ್ಲಿ ಭಾಗವಹಿಸಿದ್ದರು.

ಬೀಡಿ ಗುತ್ತಿಗೆದಾರರ ಪರವಾಗಿ ಮಾತನಾಡಿದ ಗುತ್ತಿಗೆದಾರ ಸಂಪ್ಯ ಜಲೀಲ್, ಸಂಜೀವ ಪೂಜಾರಿ ಕೂರೇಲು, ಬೀಡಿ ಕಂಪೆನಿ ಸರಕಾರ ನಿಗದಿ ಮಾಡಿದ ಮಜೂರಿಯನ್ನು ಗುತ್ತಿಗೆದಾರರಿಗೆ ನೀಡಿದ್ದಲ್ಲಿ ನಾವು ಅದನ್ನು ಕಾರ್ಮಿಕರಿಗೆ ನೀಡುತ್ತೇವೆ. ನಮ್ಮದೇನು ಅಭ್ಯಂತರವಿಲ್ಲ. ಕಂಪನಿ ಎಷ್ಟು ಕೆಲಸ ಕೊಡುತ್ತದೋ ಅದಕ್ಕೆ ನಾವು ಸಿದ್ಧರಾಗಿದ್ದೇವೆ. ಕಾರ್ಮಿಕರಿಗೆ ಹೆಚ್ಚು ಕೆಲಸ ಕೊಡಬೇಕಾದರೆ ಕಂಪನಿ ನಮಗೆ ಸಹಕರಿಸಬೇಕು. ಕಂಪನಿ ಸಹಕಾರವಿಲ್ಲದೆ ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಬೀಡಿ ಗುತ್ತಿಗೆದಾರರ ಕಮಿಷನ್ ಕೂಡಾ ಕಂಪನಿ ಹೆಚ್ಚು ಮಾಡಬೇಕು ಎಂದು ಶಾಸಕರಲ್ಲಿ ಗುತ್ತಿಗೆದಾರರ ಪರ ಮನವಿ ಮಾಡಿದರು.

ಪಶ್ಚಿಮ ಬಂಗಾಳದಿಂದ ಬೀಡಿ

ಪಶ್ಚಿಮ ಬಂಗಾಳದಿಂದ ವಾರಕ್ಕೆ ಎರಡು ಕೋಟಿ ಬೀಡಿ ಜಿಲ್ಲೆಗೆ ಬರುತ್ತಿದೆ. ಅಲ್ಲಿ ಬೀಡಿ ಮಜೂರಿ ಕಮ್ಮಿ ಇದೆ. ಈ ಕಾರಣಕ್ಕೆ ಅಲ್ಲಿಂದ ಬೀಡಿ ಖರೀದಿ ಮಾಡಿ ಇಲ್ಲಿಗೆ ತಂದು ಇಲ್ಲಿ ಲೇಬಲ್ ಮಾಡಲಾಗುತ್ತದೆ. ಅಲ್ಲಿಂದ ಬೀಡಿ ಬಂದರೆ ಇಲ್ಲಿನ ಬೀಡಿ ಕಟ್ಟುವವರಿಗೆ ಕಾರ್ಮಿಕರಿಗೆ ಕೆಲಸ ಕೊಡಿಸಲು ಕಷ್ಟವಾಗುತ್ತದೆ. ಈ ಬಗ್ಗೆ ಕಂಪನಿಗೆ ಹೊರರಾಜ್ಯದಿಂದ ಬೀಡಿ ಖರೀದಿ ಮಾಡದಂತೆ ಸೂಚನೆಯನ್ನು ನೀಡಬೇಕು. ನಮ್ಮ ಕಾರ್ಮಿಕರಿಗೆ ತೊಂದರೆಯಾಗುವ ಯಾವುದೇ ಕ್ರಮಕ್ಕೂ ನಮ್ಮ ವಿರೋಧವಿದೆ ಎಂದು ಗುತ್ತಿಗೆದಾರರು ಶಾಸಕರಲ್ಲಿ ವಿನಂತಿಸಿದರು.

ಅಂತಿಮ ತೀರ್ಮಾನ

ಬೀಡಿ ಕಾರ್ಮಿಕರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕಳೆದ ವಾರ ಬೀಡಿ ಕಂಪನಿದಾರರ ಸಭೆ ನಡೆಸಿ ಒಂದಷ್ಟು ಸೂಚನೆ ನೀಡಿದ್ದೆ. ಇಂದು ಬೀಡಿ ಗುತ್ತಿಗೆದಾರರನ್ನು ಕರೆದು ಸಭೆ ನಡೆಸಿದ್ದೇನೆ. ಬೀಡಿ ಕಾರ್ಮಿಕರಿಗೆ ಸರಕಾರ ನಿಗದಿ ಮಾಡಿದ ಮಜೂರಿ, ಬೋನಸ್ ಸಿಗಬೇಕು, ಹೆಚ್ಚು ಕೆಲಸ ಕೊಡಬೇಕು, ಮಳೆಗಾಲದಲ್ಲಿ ಹೆಚ್ಚು ಕೆಲಸ ಕೊಡಬೇಕು. ಕಾರ್ಮಿಕರ ನ್ಯಾಯಕ್ಕಾಗಿ ಇನ್ನು ಮುಂದೆಯೂ ಸಭೆಗಳನ್ನು ಕರೆದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅಶೋಕ್ ರೈ ತಿಳಿಸಿದರು.

ಕಜೆಕಾರು ಕೃಷಿ ಪತ್ತಿನ ಸಹಕಾರಿ ಸಂಘದ ಆಶ್ರಯದಲ್ಲಿ ಆರೋಗ್ಯ ಶಿಬಿರ



ಬಂಟ್ವಾಳ: ಕಜೆಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಪಾಂಡವರಕಲ್ಲು ಇದರ ಆಶ್ರಯದಲ್ಲಿ ಸ್ವರ್ಣ ಸಂಜೀವಿನಿ ಸೇವಾ ಟ್ರಸ್ಟ್ ಮಡವು ಇದರ ಸಹಯೋಗದೊಂದಿಗೆ ಕೆ.ಎಂ.ಸಿ ಆಸ್ಪತ್ರೆ ಅತ್ತಾವರ, ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮಂಗಳೂರು, ಮತ್ತು ಬ್ಲಡ್ ಸೆಂಟರ್ ಕೆ.ಎಂ.ಸಿ ಮಂಗಳೂರು, ಇಲ್ಲಿನ ನುರಿತ ತಜ್ಞವೈದ್ಯ ತಂಡದವರಿಂದ ಉಚಿತ ವೈದ್ಯಕೀಯ ತಪಾಸಣೆ, ದಂತ ಚಿಕಿತ್ಸಾ ಹಾಗೂ ಸಾರ್ವಜನಿಕ ರಕ್ತದಾನ ಶಿಬಿರ ಸಂಘದ ಸಭಾಭವನದಲ್ಲಿ ನಡೆಯಿತು.

ಸಹಕಾರಿ ಸಂಘದ ಅಧ್ಯಕ್ಷ ಸತೀಶ್ ಬಂಗೇರ ಕಜೆಕಾರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ಮೋಹನಂದ ಪಾಂಡವರಕಲ್ಲು,ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಸುಧಾಕರ ಐಂಬಲೋಡಿ, ನಿವೃತ್ತ ಮುಖ್ಯ ಉಪಾಧ್ಯಾಯ ಹಮೀದ್ ಪಿ., ಬಡಗಕಜೆಕಾರು ಗ್ರಾ.ಪಂ. ನಿಕಟಪೂರ್ವ ಉಪಾಧ್ಯಕ್ಷ ಡೀಕಯ್ಯ ಬಂಗೇರ ಕರ್ಲ, ಡಾ.ಅರವಿದ್, ಡಾ. ಅವಿನಾಶ್, ಅತ್ತಾವರ ಕೆಎಂಸಿ ಆಸ್ಪತ್ರೆಯ ಪಿಆರ್‌ಒ ಅಲ್ಬರ್ಟ್, ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಅರ್ಜುನ್ ಭಂಡಾರ್ಕರ್ ಇದ್ದರು. ಇದೇ ವೇಳೆ ಸ್ವರ್ಣ ಸಂಜೀವಿನಿ ಮಡವು ಇದರ ಮೇ ತಿಂಗಳ ಸೇವಾ ಯೋಜನೆಯಾಗಿ 5 ಬಡ ಕುಟುಂಬಗಳಿಗೆ ಸಹಾಯಹಸ್ತದ ಚೆಕ್‌ನ್ನು ಹಸ್ತಾಂತರಿಸಲಾಯಿತು. ಯಶವಂತ ಕೊಡ್ಯೇಲು ಸ್ವಾಗತಿಸಿ, ಪ್ರೇಮನಾಥ ಕಿಜನಾರು ವಂದಿಸಿದರು, ತಾರಾನಾಥ್ ಕಜೆಕಾರ್ ನಿರೂಪಿಸಿದರು. ಸುಮಾರು 250ಕ್ಕೂ ಹೆಚ್ಚು ಮಂದಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು. ಸುಮಾರು 80 ಮಂದಿ ರಕ್ತದಾನಗೈದರು. ಕಜೆಕಾರು ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ, ಸದಸ್ಯರು, ಸ್ವರ್ಣ ಸಂಜೀವಿನಿ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಪಡುಪೆರಾರದಲ್ಲಿ ಸರಕಾರಿ ಜಾಗ ಒತ್ತುವರಿ ಆರೋಪ: ತಹಶೀಲ್ದಾರ್‌ರಿಂದ ಪರಿಶೀಲನೆ



ಕೈಕಂಬ: ಬಜಪೆ ಸಮೀಪದ ಪಡುಪೆರಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಮೂಡುಪೆರಾರ ಗ್ರಾಮದ ನೆಲ್ಲಿಕಾಡು ದುಗ್ಗಲಚ್ಚಿಲ್ ಕೊಳಪಿಲದಲ್ಲಿ ವ್ಯಕ್ತಿಯೊಬ್ಬರು ಸುಮಾರು 5 ಎಕ್ರೆ ಸರಕಾರಿ ಜಮೀನು ಒತ್ತುವರಿ ಮಾಡಿರುವ ಸ್ಥಳಕ್ಕೆ ಮಂಗಳೂರು ತಹಶೀಲ್ದಾರ್ ರಮೇಶ್ ಬಾಬು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳಿಕ ಸ್ಥಳೀಯರ ಜತೆ ಮಾತನಾಡಿದ ತಹಶೀಲ್ದಾರ್ ಸರಕಾರಿ ಜಾಗ ಒತ್ತುವರಿ ಮಾಡಿರುವ ವ್ಯಕ್ತಿಗೆ ನೋಟೀಸು ನೋಟೀಸು ಜಾರಿಗೊಳಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ನೆಲ್ಲಿಕಾಡು ದುಗ್ಗಲಚ್ಚಿಲ್‌ನ ಸ್ಥಳೀಯರಿಗೆ ಭರವಸೆ ನೀಡಿದರು. ಸರಕಾರಿ ಜಾಗವಿರುವ ನೆಲ್ಲಿಕಾಡು ದುಗ್ಗಲಚ್ಚಿಲ್-ಕೊಳಪಿಲ ಗುಡ್ಡ ಪ್ರದೇಶದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ರಸ್ತೆ ನಿರ್ಮಿಸಲು ಯಾವುದೇ ಅಭ್ಯಂತರವಿಲ್ಲ, ಮೊದಲಾಗಿ ಇಲ್ಲಿರುವ ಖಾಸಗಿ ಜಾಗದ ವಿವಾದ ಬಗೆಹರಿಸುವ ನಿಟ್ಟಿನಲ್ಲಿ ವ್ಯಕ್ತಿಯ ಕುಟುಂಬಿಕರು ಸೌಹಾರ್ದಯುತ ಅಥವಾ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು. ಬಳಿಕ ಆ ಜಾಗದಿಂದ ಮುಂದಕ್ಕೆ ಮುಖ್ಯರಸ್ತೆಗೆ ಸಂಪರ್ಕ ರಸ್ತೆ ನಿರ್ಮಿಸಲು ಸಾಧ್ಯವಿದೆ ಎಂದರು. ಖಾಸಗಿ ವ್ಯಕ್ತಿಯ ತಾಯಿ ಸಹಿತ ಇಬ್ಬರು ಮಕ್ಕಳು ರಸ್ತೆ ನಿರ್ಮಿಸಲು ರಸ್ತೆ ಬಿಟ್ಟುಕೊಡುವುದಾಗಿ ಲಿಖಿತ ಭರವಸೆ ನೀಡಿದ್ದರೂ, ಅವರ ಸಹೋದರ (ಖಾಸಗಿ ವ್ಯಕ್ತಿ) ಜಾಗ ಬಿಟ್ಟುಕೊಡಲು ಆಕ್ಷೇಪವೆತ್ತಿದ್ದಾರೆ ಎಂದು ಸ್ಥಳೀಯರು ತಹಶೀಲ್ದಾರ್‌ರಿಗೆ ಮಾಹಿತಿ ನೀಡಿದರು. ಎಲ್ಲೂ ಸರ್ಕಾರಿ ಜಾಗ ಒತ್ತುವರಿಗೆ ಅವಕಾಶವಿಲ್ಲ. ಮೂಡುಪೆರಾರದ ನೆಲ್ಲಿಕಾಡಿನಲ್ಲಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿದ್ದರೆ ಆ ಬಗ್ಗೆ ಪರಿಶೀಲಿಸಲಾಗುವುದು. ಅಕ್ರಮವೆಂದಾದಲ್ಲಿ ಒತ್ತುವರಿ ತೆರವಿಗೆ ತಕ್ಷಣ ನೋಟಿಸು ಜಾರಿ ಮಾಡಲಾಗುವುದು ಎಂದು ತಹಶೀಲ್ದಾರ್ ರಮೇಶ್ ಬಾಬು ಭರವಸೆ ನೀಡಿದರು.



ದೇವರಾಜು ಅರಸು ಹಿಂದುಳಿದ ವರ್ಗ ಅಭಿವೃದ್ಧಿ ನಿಗಮದಿಂದ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಅವರ ಶಿಫಾರಸಿನ ಮೇರೆಗೆ 26 ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಬಿ.ಸಿ ರೋಡ್‌ನ ಶಾಸಕರ ಕಚೇರಿಯಲ್ಲಿ ಹಸ್ತಾಂತರಿಸಿದರು.ಈ ಸಂದರ್ಭ ದೇವರಾಜು ಅರಸು ಹಿಂ.ವರ್ಗ ನಿಗಮದ ಸಹಾಯಕ ಅಭಿವೃದ್ಧಿ ಅಧಿಕಾರಿ ಜಯಶ್ರೀ, ಸಿಬ್ಬಂದಿ ಸುಶ್ಮಿತಾ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



ಕುಂದಾಪುರದ ತಾಲೂಕು ಪಂಚಾಯತ್‌ನಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದ ವಂಡ್ಸೆ ಹೋಬಲಿ ವ್ಯಾಪ್ತಿಯ ಅರ್ಹ ಫಲಾನುಭವಿಗಳಿಗೆ 94ಸಿ ಹಕುಪತ್ರವನ್ನು ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ವಿತರಿಸಿದರು. ಈ ಸಂದರ್ಭ ಕಂದಾಯ ಇಲಾಖೆಯ ಅಧಿಕಾರಿಗಳು, ಫಲಾನುಭವಿಗಳು ಉಪಸ್ಥಿತರಿದ್ದರು.

ಸಮಾಲೋಚನಾ ಸಭೆಯಲ್ಲಿ ಶಾಸಕ ಉಮಾನಾಥ ಕೋಟ್ಯಾನ್ ಅಭಿಪ್ರಾಯ | 32 ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ, ಸಾರ್ವಜನಿಕರಿಂದ ಸಲಹೆ

ಹೆಚ್ಚುತ್ತಿರುವ ವಾಹನ ದಟ್ಟಣೆ, ಟ್ರಾಫಿಕ್ ನಿಯಮ ಉಲ್ಲಂಘನೆಗೆ ಪೊಲೀಸರಿಂದ ಕಠಿಣ ಕ್ರಮ ಅಗತ್ಯ

ಮೂಡುಬಿದಿರೆ: ಕ್ಷೇತ್ರದ ಹಲವು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ 'ನಮ್ಮ ಮೂಡುಬಿದಿರೆ ಫೋರಂ' ಆಶ್ರಯದಲ್ಲಿ ಸಮಾಲೋಚನಾ ಸಭೆಯು ಮೂಡುಬಿದಿರೆಯ ಕನ್ನಡ ಭವನದಲ್ಲಿ ಶಾಸಕ ಉಮಾನಾಥ ಕೋಟ್ಯಾನ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸುಮಾರು 32 ಸಮಸ್ಯೆಗಳ ಬಗ್ಗೆ ಗಮನ ಹರಿಸಲಾಗಿದ್ದು, ಪ್ರಮುಖ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಒದಗಿಸಿ, ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಶಾಸಕ ಕೋಟ್ಯಾನ್ ಸೂಚಿಸಿದರು.

ಪೇಟೆಯಲ್ಲಿ ಹೆಚ್ಚುತ್ತಿರುವ ವಾಹನ ದಟ್ಟನೆ, ವನ್-ವೇಯಲ್ಲಿ ಸಂಚಾರ, ತ್ರಿಬಲ್ ರೈಡಿಂಗ್ ಸಹಿತ ನಿಯಮಗಾಳಿಗೆ ತೂರಿ ವಾಹನ ಚಾಲನೆ ಮಾಡುವವರಿಗೆ ದಂಡ ಹಾಗೂ ಮೂಡುಬಿದಿರೆ ಬಸ್ ನಿಲ್ದಾಣದ ಬಳಿ ಕಾರು, ದ್ವಿಚಕ್ರ ವಾಹನಗಳನ್ನು ಸಂಜೆವರೆಗೆ ನಿಲ್ಲಿಸಿ ಮಂಗಳೂರಿಗೆ ತೆರಳುವವರ ವಾಹನ ಹಾಗೂ ಮಾಲೀಕರ ವಿರುದ್ಧ ಪೊಲೀಸರು ಮುಲಾಜಿಲ್ಲದೆ ಕ್ರಮ ಕೈಗೊಳ್ಳುವಂತೆ ಉಮಾನಾಥ ಕೋಟ್ಯಾನ್ ಸೂಚಿಸಿದ್ದಾರೆ.



ಎಲ್ಲೆಂದರಲ್ಲಿ ರಿಕ್ಷಾಗಳ ನಿಲುಗಡೆ

ಸರಕಾರಿ, ಖಾಸಗಿ, ಬೆಂಗಳೂರು ಹಾಗೂ ಮುಂಬೈ ಬಸ್‌ಗಳು ಏಕಮುಖವಾಗಿ ಸಂಚರಿಸುತ್ತಿರುವುದರಿಂದ, ಆಟೋ ಚಾಲಕರು ಎಲ್ಲೆಂದರಲ್ಲಿ ಜನರನ್ನು ಹತ್ತಿಸುವುದು ಮತ್ತು ಇಳಿಸುವುದರಿಂದ ಇತರ ವಾಹನಗಳ ಸಂಚಾರಕ್ಕೆ, ಪಾದಚಾರಿಗಳಿಗೆ ತೊಂದರೆ ಅನುಭವಿಸುತ್ತಿರುವ ಬಗ್ಗೆ 'ನಮ್ಮ ಫೋರಂ'ನ ಅಕ್ಷಯ್ ಜೈನ್ ಶಾಸಕರ ಗಮನಕ್ಕೆ ತಂದಾಗ, ಸಮಸ್ಯೆಗಳನ್ನು ಯಾವ ರೀತಿ ನಿವಾರಿಸಬೇಕೆಂಬುದರ ಬಗ್ಗೆ ಪೊಲೀಸರೇ ಸಭೆ ನಡೆಸಿ 10 ದಿನಗಳೊಳಗಾಗಿ ಪರಿಹಾರವನ್ನು ಕಂಡುಕೊಂಡು ಮುಂದಿನ ಮೀಟಿಂಗ್ ನಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸಬೇಕೆಂದರು.

ಅಕ್ಷಯ್ ಕೆ. ಜೈನ್ ಪ್ರಮುಖ ಸಮಸ್ಯೆಗಳ ವರದಿ ಮಂಡಿಸಿ, ಕೆಲವು ಸಮಸ್ಯೆಗಳನ್ನು ಕೇವಲ ಸರ್ಕಾರ ಅಥವಾ ಇಲಾಖೆಗಳು ಮಾತ್ರವಲ್ಲದೆ, ಸ್ಥಳೀಯ ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಘಟನೆಗಳು ಹಾಗೂ ಸಾರ್ವಜನಿಕರ ಸಹಭಾಗಿತ್ವದ ಮೂಲಕವೂ ಪರಿಹರಿಸಬಹುದಾಗಿದೆ.ಮೂಡುಬಿದಿರೆಯನ್ನು ಇನ್ನಷ್ಟು ಸುಂದರ, ಸುರಕ್ಷಿತ ಹಾಗೂ ಮಾದರಿ ಪಟ್ಟಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುವ ಅಗತ್ಯವಿದೆ ಎಂದು ಹೇಳಿದರು.

ಟ್ರಾಫಿಕ್ ಸಮಸ್ಯೆಗಳು, ಪಾರ್ಕಿಂಗ್ ಅವ್ಯವಸ್ಥೆ, ರಸ್ತೆ ಸುರಕ್ಷತೆ, ಚರಂಡಿ ವ್ಯವಸ್ಥೆ, ಸಾರ್ವಜನಿಕ ಆರೋಗ್ಯ, ತ್ಯಾಜ್ಯ ನಿರ್ವಹಣೆ, ವಿದ್ಯುತ್ ಸಮಸ್ಯೆಗಳು, ಪ್ರವಾಸೋದ್ಯಮ ಅಭಿವೃದ್ಧಿ, ಅಕ್ರಮ ಒತ್ತುವರಿ, ಸಾರ್ವಜನಿಕ ಮೂಲಸೌಕರ್ಯ ಸೇರಿದಂತೆ ವಿವಿಧ ವಿಷಯಗಳ ಕುರಿತು ವಿವರವಾದ ಮಾಹಿತಿಯನ್ನು ಅವರು ಸಭೆಯ ಗಮನಕ್ಕೆ ತಂದರು.

ಸಾರ್ವಜನಿಕರ ಪರವಾಗಿ ಎಂಸಿಎಸ್ ಬ್ಯಾಂಕಿನ ಅಧ್ಯಕ್ಷ ಬಾಹುಬಲಿ ಪ್ರಸಾದ್, ಸಾರಿಗೆ ಉದ್ಯಮಿ ನಾರಾಯಣ ಪಿ. ಎಂ, ಪುರಸಭೆಯ ಮಾಜಿ ಸದಸ್ಯ ರಾಜೇಶ್ ನಾಯ್ಕ್, ಬೆಳುವಾಯಿ ಗ್ರಾ.ಪಂ.ನ ಮಾಜಿ ಸದಸ್ಯ ಭರತ್ ಶೆಟ್ಟಿ, ರೋಟರಿ ಟೆಂಪಲ್ ಟೌನ್‌ನ ಅಧ್ಯಕ್ಷ ಹರೀಶ್ ಎಂ. ಕೆ, ಜುವನೆರ್ ಬೆದ್ರದ ಸ್ಥಾಪಕಾಧ್ಯಕ್ಷ ಅಮರ್ ಕೋಟೆ, ನೇತಾಜಿ ಬ್ರಿಗೇಡ್‌ನ ಸಂಚಾಲಕ ರಾಹುಲ್ ಕುಲಾಲ್, ಆಟೋ ಚಾಲಕ-ಮಾಲಕರ ಸಂಘದ ಅಧ್ಯಕ್ಷ ದಿಲೀಪ್, ಪತ್ರಕರ್ತ ಧನಂಜಯ ಮೂಡುಬಿದಿರೆ ಬಿ. ಸೀತಾರಾಮ ಆಚಾರ್ಯ, ಯಶೋಧರ ವಿ. ಬಂಗೇರಾ, ಕೃಷ್ಣ ಕುಮಾರ್ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಸಾರ್ವಜನಿಕರ ಅಭಿಪ್ರಾಯ ಆಲಿಸಿದ ಶಾಸಕರು, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ, ಮೂಡುಬಿದಿರೆಯ ಪ್ರಮುಖ ಸಮಸ್ಯೆಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಲು ಸಲಹಾ ಸಮಿತಿ ರಚಿಸುವ ಬಗ್ಗೆ ಮಾರ್ಗದರ್ಶನ ನೀಡಿದರು. ಈ ಸಮಿತಿಯಲ್ಲಿ ವಿವಿಧ ಸಂಘ ಸಂಸ್ಥೆಗಳು, ಸಾರ್ವಜನಿಕ ಪ್ರತಿನಿಧಿಗಳು ಹಾಗೂ ಸಂಬಂಧಿತ ಇಲಾಖೆಗಳ ಸಹಭಾಗಿತ್ವದೊಂದಿಗೆ ಸಮಸ್ಯೆ ಚರ್ಚಿಸಿ, ಪರಿಹಾರ ಕ್ರಮಗಳ ಕುರಿತು ಮುಂದಿನ 10 ದಿನಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದರು. ತಹಶೀಲ್ದಾರ್ ಶ್ರೀಧರ್ ಮುಂದಲಮನಿ, ಪುರಸಭಾ ಮುಖ್ಯಾಧಿಕಾರಿ ಇಂದು ಎಂ. ಉಪಸ್ಥಿತರಿದ್ದರು. ವಿವಿಧ ಇಲಾಖೆಗಳ ಅಧಿಕಾರಿಗಳು, ಪೊಲೀಸ್ ಇಲಾಖೆ, ತಾಲೂಕು ಆಡಳಿತದ ಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕ ಪ್ರಮುಖರು ಭಾಗವಹಿಸಿದ್ದರು.

ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಬುಧವಾರ 27, ಮೇ 2026

ಸುತ್ತ ಮುತ್ತ

ನಾಳೆ 'ಮೆಡಿಕ್ವೆಸ್ಟ್ ಹೆಲ್ತ್ ಕೇರ್'ನ ನೂತನ ಕೇಂದ್ರ ಉದ್ಘಾಟನೆ



ಉಡುಪಿ: ಕರಾವಳಿಯ ಪ್ರಸಿದ್ಧ ವೈದ್ಯಕೀಯ ಪ್ರಯೋಗಾಲಯ ಸಂಸ್ಥೆಯಾದ 'ಮೆಡಿಕ್ವೆಸ್ಟ್ ಹೆಲ್ತ್‌ಕೇರ್' ತನ್ನ ಅತ್ಯಾಧುನಿಕ ನೂತನ ಕೇಂದ್ರವನ್ನು ಉಡುಪಿಯಲ್ಲಿ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುತ್ತಿದೆ. ಉಡುಪಿ ನಗರದ ಹೃದಯ ಭಾಗದ ಕೆ.ಎಂ. ಮಾರ್ಗದಲ್ಲಿರುವ ಅಂದ್ರಾದೆ ಆರ್ಕೇಡ್‌ನಲ್ಲಿ ನೂತನವಾಗಿ ಸಜ್ಜುಗೊಂಡಿರುವ ಈ ಸುಸಜ್ಜಿತ ಪ್ರಯೋಗಾಲಯದ ಉದ್ಘಾಟನಾ ಸಮಾರಂಭವು ಮೇ 28ರಂದು ಬೆಳಿಗ್ಗೆ ಜರುಗಲಿದೆ ಎಂದು ಸಂಸ್ಥೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ. ಪೇಜಾವರ ಅಧೋಕ್ಷಜ ಮಠದ ಪರಮ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ನೂತನ ಕೇಂದ್ರವನ್ನು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ ಹಾಗೂ ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ ನಾಡೋಜ ಡಾ. ಕೃಷ್ಣಪ್ರಸಾದ್ ಕೂಡ್ಲು ವಹಿಸಲಿದ್ದಾರೆ.

ಸಂತ ಫಿಲೋಮಿನಾ ಪ.ಪೂ. ಕಾಲೇಜಿನಲ್ಲಿ ಶೈಕ್ಷಣಿಕ ವರ್ಷದ ಆರಂಭ

ಪುತ್ತೂರು: ನಗರದ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನಲ್ಲಿ 2026–27ರ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ 'ಫಿಲೋ ಆರಂಭ್' ಕಾರ್ಯಕ್ರಮ ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾದ ಮಾಯಿದೆ ದೇವುಸ್ ಶಿಕ್ಷಣ ಸಂಸ್ಥೆಯ ಸಂಚಾಲಕ ರೆ.ಫಾ.ಡಾ. ಜೋನ್ ಬ್ಯಾಪ್ಟಿಸ್ಟ್ ಸಲ್ದಾನ್ಹಾ ಅವರು ಪ್ರಥಮ ಪದವಿ ಪೂರ್ವ ತರಗತಿಗಳನ್ನು ಉದ್ಘಾಟಿಸಿ, ಮಾತನಾಡಿದರು. ಎಸ್ಸೆಸ್ಸೆಲ್ಸಿಯಲ್ಲಿ ಅತೀ ಹೆಚ್ಚು ಅಂಕವನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಕಾಲೇಜಿನ ವಾರ್ಷಿಕ ಸಂಚಿಕೆ 'ಫಿಲೋ ದರ್ಶನ'ವನ್ನು ಬಿಡುಗಡೆಗೊಳಿಸಲಾಯಿತು. ಶಿಕ್ಷಕ-ರಕ್ಷಕ ಸಂಘದ ಉಪಾಧ್ಯಕ್ಷೆ ದಿವ್ಯಾ ರೈ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ರೆ.ಫಾ. ಆಶೋಕ್ ರಾಯನ್ ಕ್ರಾಸ್ತಾ ಪ್ರಾಸ್ತಾವಿಸಿದರು. ಉಪಪ್ರಾಂಶುಪಾಲರಾದ ಹರ್ಷಿತ್ ಕುಮಾರ್ ಸ್ವಾಗತಿಸಿ, ಅನಿಲಾ ಮಾಡ್ತಾ ವಂದಿಸಿದರು. ಸುಮಾ ಡಿ. ಕಾರ್ಯಕ್ರಮ ನಿರ್ವಹಿಸಿದರು.

ಬಿಎಸ್‌ಎಫ್‌ಐ ಬ್ಯಾಂಕಿಂಗ್ ಪ್ರಮಾಣ ಪತ್ರ ಕೋರ್ಸ್ ಬಗ್ಗೆ ಮಾಹಿತಿ

ಮಂಗಳೂರು: ಶಾರದಾ ಪದವಿ ಕಾಲೇಜಿನಲ್ಲಿ ಬಿಎಸ್‌ಎಫ್‌ಐ ಬ್ಯಾಂಕಿಂಗ್ ಪ್ರಮಾಣಪತ್ರ ಕೋರ್ಸ್ ಬಗ್ಗೆ ಮಾಹಿತಿ ಕಾರ್ಯಾಗಾರ ಮಂಗಳವಾರ



ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಪ್ರಮುಖರಾದ ಅರುಣ್ ಪ್ರದೀಪ್, ಅವರು ಬ್ಯಾಂಕಿಂಗ್ ಉದ್ಯಮದ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರಮಾಣೀಕರಣ ಕೋರ್ಸ್‌ಗಳ ಮಹತ್ವದ ಬಗ್ಗೆ ಅಮೂಲ್ಯವಾದ ಮಾಹಿತಿ ಹಂಚಿಕೊಂಡರು. ಅವರು ವಿದ್ಯಾರ್ಥಿಗಳು ತಮ್ಮ ವೃತ್ತಿಪರ ಕೌಶಲ್ಯಗಳನ್ನು ಸುಧಾರಿಸಲು ಮತ್ತು ಭವಿಷ್ಯದ ವೃತ್ತಿ ಅವಕಾಶಗಳಿಗೆ ಸಿದ್ಧರಾಗಲು ಪ್ರೇರೇಪಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಮೀನಾ ಜೆ. ಪಣಿಕ್ಕರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳು ತಮ್ಮ ವೃತ್ತಿ ಬೆಳವಣಿಗೆಗೆ ಅಂತಹ ಅವಕಾಶಗಳನ್ನು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಿದರು.

ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥ ರೇಷ್ಮಾ ಪಿ.ವಿ, ಕಾಲೇಜಿನ ಎಸ್‌ಡಬ್ಲ್ಯೂ ಅಧಿಕಾರಿ ಚೆನ್ನಯ ಮತ್ತು ತರಬೇತಿ ಮತ್ತು ಉದ್ಯೋಗ ಅಧಿಕಾರಿ ಸೂರಜ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬ್ಯಾಂಕಿಂಗ್ ಮತ್ತು ಹಣಕಾಸು ವಲಯದಲ್ಲಿನ ವೃತ್ತಿ ಅವಕಾಶಗಳ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.

ಕೊಡಗು ಗ್ಯಾರಂಟಿ ಯೋಜನಾ ಅನುಷ್ಠಾನ ಪ್ರಾಧಿಕಾರ ಸಭೆ | ಧರ್ಮಜ ಉತ್ತಪ್ಪ ನಿರ್ದೇಶನ

ಸರ್ಕಾರದ ಯೋಜನೆ ತಲುಪಿಸಲು ಮತ್ತಷ್ಟು ಪ್ರಯತ್ನ ಅಗತ್ಯ

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಂಡಿದ್ದು ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ಭೂ ಗ್ಯಾರಂಟಿ ಯೋಜನೆಯನ್ನೂ ಜಾರಿಗೊಳಿಸಿದೆ. ಸರ್ಕಾರದ ಗ್ಯಾರಂಟಿ ಯೋಜನೆ ತಲುಪಿಸುವಲ್ಲಿ ಇನ್ನಷ್ಟು ಪ್ರಯತ್ನ ಮಾಡಬೇಕು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಅವರು ಸೂಚಿಸಿದರು.



ನಗರದ ಜಿ.ಪಂ. ಕೆಡಿಪಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಸಂಬಂಧ ನಡೆದ ಗ್ಯಾರಂಟಿ ಯೋಜನಾ ಅನುಷ್ಠಾನ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೆಯೇ ಭೂ ಒಡೆತನ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಪ್ರಗತಿಯತ್ತ ಸಾಗುತ್ತಿದೆ. ಜೊತೆಗೆ ಬಡ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡುತ್ತಿದ್ದು ಆ ನಿಟ್ಟಿನಲ್ಲಿ ಸರ್ಕಾರದ ಕಾರ್ಯಕ್ರಮಗಳು ತಲುಪುವಂತಾಗಲು ಅಧಿಕಾರಿಗಳ ಕರ್ತವ್ಯ ಮಹತ್ತರ ಎಂದು ಧರ್ಮಜ ಉತ್ತಪ್ಪ ನುಡಿದರು.

ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾಗಿದೆ. ಜೊತೆಗೆ ಕೆಎಸ್‌ಆರ್‌ಟಿಸಿ ಬಲಪಡಿಸುವಲ್ಲಿಯೂ ಸಹ ಇದೊಂದು ಅತ್ಯುತ್ತಮ ಯೋಜನೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕರು ಮಾಹಿತಿ ನೀಡಿ, ಶಕ್ತಿ ಯೋಜನೆ ಪ್ರಾರಂಭವಾದ ದಿನದಿಂದ ಇದುವರೆಗೆ ಒಟ್ಟು 1,66,47,567 ವಯಸ್ಕ ಮಹಿಳಾ ಪ್ರಯಾಣಿಕರು ಮತ್ತು 4,02,999 ಹೆಣ್ಣು ಮಕ್ಕಳು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿನಿಯರು ಸಂಸ್ಥೆಯ ವಾಹನದಲ್ಲಿ ಪ್ರಯಾಣಿಸಿ, ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ. ದಿನವೊಂದಕ್ಕೆ ಸರಾಸರಿ 16,348 ಪ್ರಯಾಣಿಕರು ಪ್ರಯಾಣಿಸಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ಏಪ್ರಿಲ್ 2026ವರೆಗೆ ಶೇ.32.65 ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ ಎಂದರು.

ಆಹಾರ ಇಲಾಖೆ ಉಪ ನಿರ್ದೇಶಕ ಭೀಮರಾಯ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಒಟ್ಟು 1,05,954 ಪಡಿತರ ಚೀಟಿ ಕುಟುಂಬಗಳು ಯೋಜನೆ ಸದುಪಯೋಗ ಪಡೆದುಕೊಳ್ಳುತ್ತಿವೆ ಎಂದರು.

ಸಂಪೂರ್ಣ ಡಿಜಿಟಲೀಕರಣ

ಕಂದಾಯ ಇಲಾಖೆಯಲ್ಲಿ ಸಂಪೂರ್ಣ ಡಿಜಿಟಲೀಕರಣ ಮಾಡುವತ್ತ ಹೆಜ್ಜೆ ಇಡಲಾಗಿದ್ದು ಆ ದಿಸೆಯಲ್ಲಿ ಭೂ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ ನೀಡುವಲ್ಲಿ ಸರ್ಕಾರ ಕ್ರಾಂತಿಕಾರಕ ಹೆಜ್ಜೆ ಇಟ್ಟಿದೆ ಎಂದು ತೀತಿರ ಧರ್ಮಜ ಉತ್ತಪ್ಪ ಹೇಳಿದರು. ಆಸ್ತಿ ಮತ್ತು ಆರ್‌ಟಿಸಿ ಆಧಾರ್ ಜೋಡಣೆ ಮೂಲಕ ನಕಲಿ ದಾಖಲೆ ಸೃಷ್ಟಿಗೆ ಕಡಿವಾಣ ಹಾಕಲಾಗಿದೆ. ಲ್ಯಾಂಡ್ ಬೀಟ್, ಇ-ಪೌತಿ ಖಾತೆ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಹೊಸ ಬದಲಾವಣೆಗೆ ಕಂದಾಯ ಸಚಿವರು ಮುಂದಾಗಿದ್ದು, ಈ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ ನೀಡುವಂತಾಗಬೇಕು ಎಂದು ಅವರು ವಿವರಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ 1,17,905 ಫಲಾನುಭವಿಗಳಿಗೆ ಪ್ರತಿ ತಿಂಗಳು ತಲಾ 2,000 ರೂ.ನಂತೆ ಫೆಬ್ರವರಿವರೆಗೆ ಹಣ ಪಾವತಿಸಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪ್ರಸನ್ನ ಕುಮಾರ್ ನುಡಿದರು. ಗೃಹಜ್ಯೋತಿ ಯೋಜನೆಯಡಿ ಶೇ.99.1 ಪ್ರಗತಿ ಸಾಧಿಸಲಾಗಿದೆ ಎಂದು ಸೆಸ್ಕ್ ಇಂಜಿನಿಯರ್ ಮಾಹಿತಿ ನೀಡಿದರು.

ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿ ಮಂಜುನಾಥ್ ಮಾಹಿತಿ ನೀಡಿ ಏಪ್ರಿಲ್ ಮಾಸಾಂತ್ಯಕ್ಕೆ 1850 ಪದವೀಧರ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ಹಾಗೂ 30 ಡಿಪ್ಲೋಮಾ ಫಲಾನುಭವಿಗಳಿಗೆ ಸಹಾಯಧನ ಕಲ್ಪಿಸಲಾಗಿದೆ ಎಂದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಕೆ.ಸಿ.ಭೀಮಯ್ಯ, ಪಿ.ಆರ್.ಪಂಕಜ, ನಾಸಿರ್, ಸದಸ್ಯರಾದ ಬಿ.ಡಿ.ಅಣ್ಣಯ್ಯ, ಕೆ.ಎಂ. ಬಶೀರ್, ಕೆ.ಎಂ.ಉತ್ತಪ್ಪ, ಪಿ.ಎಲ್.ಸುರೇಶ್, ಕೆ.ಜಿ.ಪೀಟರ್, ಕಾಂತರಾಜು, ಮಂದ್ರೀರ ಮೋಹನ್ ದಾಸ್, ಜಾನ್ಸನ್ ಪಿ.ಎ., ಕಾಳಿಮಾಡ ಪ್ರಶಾಂತ್, ಸಮ್ಮದ್ ಬಗ್ಗೆ ಬೆಳಕು ಚೆಲ್ಲಿದರು. ಜಿ.ಪಂ. ಮುಖ್ಯ ಯೋಜನಾಧಿಕಾರಿ ಅಬ್ದುಲ್ ನಬೀ ಇದ್ದರು.

ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ಜೀವನದಲ್ಲಿ ಗೆಲುವು: ಪ್ರಶಾಂತ ಕಾಜವ



ಕೊಣಾಜೆ: ಜೀವನದಲ್ಲಿ ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸಬೇಕಾದರೆ ನಿರಂತರ ಪ್ರಯತ್ನ, ಪರಿಶ್ರಮ ಅಗತ್ಯ ಎಂದು ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯಾಧ್ಯಕ್ಷ ಪ್ರಶಾಂತ ಕಾಜವ ಹೇಳಿದರು.

ಮುಡಿಪುವಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾಲೇಜು ವಾರ್ಷಿಕೋತ್ಸವ ಹಾಗೂ ಕಾಲೇಜು ಸಂಚಿಕೆ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ಒಂದು ಸ್ಪಷ್ಟ ಗುರಿ ಇರಬೇಕು. ಆ ಗುರಿ ತಲುಪಲು ಪ್ರಾಮಾಣಿಕ ಪ್ರಯತ್ನವಿದ್ದಾಗ ಮಾತ್ರ ಗೆಲುವು ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಂಗಳೂರು ವಿಶ್ವವಿದ್ಯಾಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ. ನಾಗಪ್ಪ ಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ನಾಯಕತ್ವ ಗುಣವನ್ನು ಬೆಳೆಸಿಕೊಂಡು ಸಮಾಜಮುಖಿಯಾಗಿ ಹೊರ ಹೊಮ್ಮಬೇಕು. ತಾವು ಕಲಿತ ಕಾಲೇಜಿಗೆ ಗೌರವ ತರುವ ಕಾರ್ಯವನ್ನು ಮಾಡಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ.ಸತೀಶ್ ಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪಿಎಚ್‌ಡಿ ಪದವಿ ಪಡೆದ ಆಕ್ಷತಾ ಸುವರ್ಣ ಸನ್ಮಾನಿಸಲಾಯಿತು. ಕಾಲೇಜಿನ ಐಕ್ಯೂಎಸಿ ಸಂಯೋಜಕ ಕವಿತಾ ಎಂ.ಎಲ್. ವಾರ್ಷಿಕ ವರದಿ ಮಂಡಿಸಿದರು. ಪ್ರಾಧ್ಯಾಪಕ ಡಾ. ಪವನ್ ಬಿ.ಪಿ.ಕಾಲೇಜು ಸಂಚಿಕೆ ಬಿಡುಗಡೆ ಕಾರ್ಯಕ್ರಮ ನಡೆಸಿಕೊಟ್ಟರು. ಹಿರಿಯ ಪ್ರಾಧ್ಯಾಪಕ ಹೈದರಾಲಿ ಹಾಗೂ ಉಪನ್ಯಾಸಕ ಪ್ರಮೀಳಾ ಸಿ.ಎಚ್. ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಕಾಲೇಜು ಅಭಿವೃದ್ಧಿ ಆಡಳಿತ ಮಂಡಳಿ ಸದಸ್ಯ ಪ್ರವೀಣ್ ಆಳ್ವ, ನಾಸಿರ್ ನಡುಪದವು, ಇಬ್ರಾಹಿಂ ನಡುಪದವು, ಸುರೇಖಾ ಅಮೀನ್, ಯೋಗೀಶ್ ಆಚಾರ್ಯ, ಶೀನ ಶೆಟ್ಟಿ, ದೇವಪ್ಪ ನಾಯಕ, ಜಯಂತಿ ಶೆಟ್ ಇದ್ದರು. ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಡಾ.ಶೇಷಪ್ಪ ಅಮೀನ್ ಕೆ. ಸ್ವಾಗತಿಸಿ, ವಿದ್ಯಾರ್ಥಿ ಪ್ರತಿನಿಧಿ ಅನನ್ಯ ಎ.ಆರ್. ನಿರೂಪಿಸಿದರು. ನಿಯಾಜ್ ಮಹಮ್ಮದ್ ಕಾರ್ಯಕ್ರಮ ವಂದಿಸಿದರು.

ಕಾವೂರಿನ ಶ್ರೀ ರಾಘವೇಂದ್ರ ಮಠ: ವಸಂತ ವೇದ ಶಿಬಿರದ ಸಮಾರೋಪ



ಮಂಗಳೂರು: ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶ ತೀರ್ಥಪಾದರು ಹಾಗೂ ಶ್ರೀ ವಿದ್ಯಾರಾಜೇಶ್ವರ ತೀರ್ಥಪಾದರುಗಳ ಆಶೀರ್ವಾದದೊಂದಿಗೆ ಶಿವಳ್ಳಿ ಸಭಾ ಮಂಗಳೂರು ಇದರ ಸಹಭಾಗಿತ್ವದೊಂದಿಗೆ ಕಾವೂರಿನ ಶ್ರೀ ರಾಘವೇಂದ್ರ ಮಠದಲ್ಲಿ ನಡೆಯುತ್ತಿದ್ದ 16 ದಿನಗಳ ವಸಂತ ವೇದ ಶಿಬಿರದ ಸಮಾರೋಪ ಸಮಾರಂಭ, ಶಿವಳ್ಳಿ ಸಭಾ ಇದರ ವಾರ್ಷಿಕೋತ್ಸವ ಹಾಗೂ ಶಿವಳ್ಳಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವು ಕಾವೂರಿನ ಶ್ರೀ ರಾಘವೇಂದ್ರ ಮಠದಲ್ಲಿ ಭಾನುವಾರ ನಡೆಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಡಾ. ಎಂ.ಬಿ. ಪುರಾಣಿಕ್ ಅವರು, ರಾಯರ ಮಠದ ವಸಂತ ವೇದ ಶಿಬಿರದ ಮೂಲಕ ಮಕ್ಕಳಿಗೆ ಸಂಸ್ಕಾರದ ಶಿಕ್ಷಣ ದೊರೆತಿದೆ. ಇದು ಮಕ್ಕಳ ಭಾಗ್ಯವಾಗಿದೆ. ಇಲ್ಲಿ ಕಲಿತ ವೇದ ಶಿಕ್ಷಣವನ್ನು ದಿನಾಲೂ ಅಭ್ಯಸಿಸಬೇಕು ಎಂದು ನುಡಿದರು. ಮುಖ್ಯ ಅತಿಥಿ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನುವಂಶಿಕ ಅರ್ಚಕ ವೆಂಕಟರಮಣ ಆಸ್ರಣ ಮಾತನಾಡಿ, ಪಲಿಮಾರು ಶ್ರೀಗಳ ಆಶೀರ್ವಾದದಿಂದ ನಡೆಯುತ್ತಿರುವ ವೇದ ಶಿಬಿರದ ಬಗ್ಗೆ ಶ್ಲಾಘಿಸಿ ಸದ್ಯಗಿನ ತಾವು ಬ್ರಾಹ್ಮಣರೆಂದು ಹೇಳಿ ಬ್ರಾಹ್ಮಣತ್ವದ ಬಗ್ಗೆ ಮಾತನಾಡಲು ಹಿಂಜರಿಕೆ ಸಲ್ಲದು ಎಂದರು.

ಇದೇ ಸಂದರ್ಭದ ಶಿವಳ್ಳಿ ಸಮಾಜದ ಏಳು ಮಂದಿ ಹಿರಿಯರನ್ನು ಶಿವಳ್ಳಿ ರತ್ನ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಸನ್ಮಾನಿತ ಪರ ಕಾವೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕ ವೇದಮೂರ್ತಿ ಶ್ರೀನಿವಾಸ್ ಭಟ್ ಮಾತನಾಡಿದರು. ಸಂಚಾಲಕ ಗಣೇಶ್ ಹೆಬ್ಬಾರ್ ಶಿವಳ್ಳಿರತ್ನ ಪ್ರಶಸ್ತಿ ಪ್ರದಾನವನ್ನು ನಡೆಸಿಕೊಟ್ಟರು. ಸಭಾ ಕಾರ್ಯಕ್ರಮದಲ್ಲಿ ಮೊದಲು ವೇದ ಶಿಬಿರಾರ್ಥಿಗಳ ಪ್ರತಿಭಾ ಪ್ರದರ್ಶನ ಹಾಗೂ ವಿವಿಧ ವಲಯಗಳ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಮಠದ ವ್ಯವಸ್ಥಾಪಕ ಸುದರ್ಶನ ಬಲ್ಲಂತಾಯ,ಖಜಾಂಚಿ ಪ್ರಸನ್ನ ರಾವ್ ಇದ್ದರು. ಶಿವಳ್ಳಿ ಸಭಾದ ಅಧ್ಯಕ್ಷ ಉದಯಶಂಕರ್ ಬಾಳ ಸ್ವಾಗತಿಸಿ, ಕಾರ್ಯದರ್ಶಿ ಭಾಸ್ಕರ್ ಭಟ್ ವಂದಿಸಿದರು. ಚಂದ್ರಿಕಾ ಸುರೇಶ್ ನಿರೂಪಿಸಿದರು. ಶಿಬಿರಾರ್ಥಿಗಳು ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಚಂಡೆ ಬಡಿತ, ಸಂಸ್ಕೃತದಲ್ಲಿ ಕಿರು ನಾಟಕ, ವಿವಿಧ ಶ್ಲೋಕಗಳು ಹಾಗೂ ಭಜನ ಕುಣಿತ ಭಜನೆ ಮೊದಲಾದವುಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಫಿಲೋಮಿನಾ ಕಾಲೇಜಿನಲ್ಲಿ ಐಡಿಯೇಶನ್ ಬೂಟ್ ಕ್ಯಾಂಪ್



ಪುತ್ತೂರು: ಸಂತ ಫಿಲೋಮಿನಾ ಕಾಲೇಜಿನ ಇನ್ನೋವೇಶನ್ ಹಬ್ ಸೆಂಟರ್ ಫಾರ್ ಇನ್ನೋವೇಶನ್ ಆಂಡ್ ಎಂಟ್ರಪ್ರಿನರ್‌ಶಿಪ್ ಹಾಗೂ ಸ್ಟ್ಯೂ ಏಜ್ ಇಂಕ್ಯುಬೇಷನ್ ನೆಟ್ ವರ್ಕ್ ಸಹಯೋಗದಲ್ಲಿ ಮೂರು ದಿನಗಳ ಕಾಲ ನಡೆಯುವ ಐಡಿಯೇಶನ್ ಬೂಟ್‌ಕ್ಯಾಂಪ್-2026 ಕಾರ್ಯಕ್ರಮಕ್ಕೆ ಕಾಲೇಜಿನ ಸ್ನಾತಕೋತ್ತರ ವಿಭಾಗದ ಸಭಾ ಭವನದಲ್ಲಿ ಚಾಲನೆ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಆಂಟನಿ ಪ್ರಕಾಶ್ ಮೊಂತೆರೋ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಮಡೋರಾ ಸಂಸ್ಥೆಯ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಉರೂಜ್ ಅಬ್ರಾರ್ ಖಾನ್ ಭಾಗವಹಿಸಿದರು.

ನ್ಯೂ ಏಜ್ ಯೋಜನಾ ಸಂಯೋಜಕ ಡಾ. ವಿನಯಚಂದ್ರ ಮೂರು ದಿನಗಳ ಕಾಲ ನಡೆಯಲಿರುವ ವಿವಿಧ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಕಾಲೇಜಿನ ಇನ್ನೋವೇಶನ್ ಮತ್ತು ಇನ್‌ಕ್ಯುಬೇಷನ್ ಕೇಂದ್ರದ ಡೀನ್ ಅಭಿಷೇಕ್ ಸುವರ್ಣ ಸ್ವಾಗತಿಸಿ, ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಶೋಧನ್ ಪಿ.ಜಿ. ವಂದಿಸಿದರು. ಇನ್ ಕ್ಯುಬೇಶನ್ ಕೇಂದ್ರದ ಎಂಬಿಎ ಕೋಆರ್ಡಿನೇಟರ್ ಡಾ. ಗೀತಾ ಪೂರ್ಣಿಮಾ ಕೆ. ನಿರ್ವಹಿಸಿದರು. ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಅಕ್ಷತಾ ಬಿ. ಹಾಗೂ ನೀಲಮ್ ಕುಟ್ಟಪ್ಪ ಸಹಕಾರ ನೀಡಿದರು.

ಅಡು ಮರೋಳಿ: 20 ಲ.ರೂ. ವೆಚ್ಚದಲ್ಲಿ ತಡೆಗೋಡೆಗೆ ಭೂಮಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 37ನೇ ಮರೋಳಿ ವಾರ್ಡಿನ ಅಡು ಮರೋಳಿ ಬಳಿ 20 ಲಕ್ಷ ರೂ. ವಿಶೇಷ ಅನುದಾನದಲ್ಲಿ ತಡೆಗೋಡೆ ನಿರ್ಮಾಣವಾಗಲಿದ್ದು, ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಕಳೆದ ಮಳೆಗಾಲದಲ್ಲಿ ಈ ಭಾಗದ ಗೋಡೆಯು ಸಂಪೂರ್ಣ ಹಾನಿಯಾಗಿದ್ದು ಇದೀಗ ಪರಿಹಾರ ನಿಧಿಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 300 ರಿಂದ 400 ಕೋಟಿಗೂ ಹೆಚ್ಚು ಹಾನಿಯಾಗಿದ್ದರೂ ಅಗತ್ಯ ಪ್ರಮಾಣದ ಪರಿಹಾರ ರಾಜ್ಯ ಸರ್ಕಾರದಿಂದ ಬಂದಿಲ್ಲದಿರುವುದು ಬೇಸರದ ಸಂಗತಿ. ಇತ್ತೀಚಿಗೆ ಇಡೀ ರಾಜ್ಯಕ್ಕೆ ಮಳೆ ಪರಿಹಾರ ನಿಧಿ ನೀಡಿದ್ದು ಆದರಲ್ಲಿ ನಮ್ಮ ಪಾಲಿಕೆ ವ್ಯಾಪ್ತಿಗೆ ಮಂಗಳೂರು ನಗರ ದಕ್ಷಿಣ ಕ್ಷೇತ್ರದ ಶಾಸಕರ ಹೆಸರಿನಲ್ಲಿ ರಾಜ್ಯ ಸರಕಾರದಿಂದ 10 ಕೋಟಿ ಪರಿಹಾರ ನಿಧಿ ಬಿಡುಗಡೆಯಾಗಿದ್ದು ಆದರಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಈ ವೇಳೆ ಪ್ರಮುಖರಾದ ಕಿರಣ್ ಮರೋಳಿ, ಮನೋಹರ್ ಶೆಟ್ಟಿ ಕದ್ರಿ, ಲೂಸಿ ಪಿಂಟೊ, ಗ್ರಿಪ್ಸೆನ್, ಎಲಿಜ, ಮಧು ಕುಮಾರ್, ನವೀನ್, ಡೇವಿಡ್, ಸಾವಿತ್ರಿ, ಶರತ್, ತುಷಾರ, ಹರಿಣಾಕ್ಷ, ಅಕ್ಷಿತ್, ಯೋಗೇಶ್ವರಿ, ಜಗದೀಶ್ ಶೆಟ್ಟಿ ರುಕ್ಮಯ್ಯ, ರಾಘು, ಅರುಣ್ ಶೆಟ್ಟಿ ಮನೋಹರ್ ಶೆಟ್ಟಿ ಕದ್ರಿ, ರಾಜೇಶ್ ಅಲಂಗಾರ್, ಶರತ್, ಮಾಲತಿ, ಸುಲೋಚನಾ, ವತ್ಸಲಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಚಿನ್ನದ ಕೆಲಸಗಾರರ ಸಂಘದಿಂದ ಡಾ. ರಾಜೇಂದ್ರ ಕುಮಾರ್‌ಗೆ ಮನವಿ



ಮಂಗಳೂರು: ಸಹಕಾರ ಸಂಘಗಳಲ್ಲಿ ಆಭರಣ ಮೌಲ್ಯಮಾಪಕರಾಗಿ (ಜ್ಯುವೆಲ್ ಅಪ್ರೈಸರ್) ಕಾರ್ಯನಿರ್ವಹಿಸುತ್ತಿರುವ ಚಿನ್ನದ ಕೆಲಸಗಾರರ ವೇತನವನ್ನು ಹೆಚ್ಚಿಸುವ ಬಗ್ಗೆ ಎಸ್ ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಡಾ.ಎಂ. ಎನ್ ರಾಜೇಂದ್ರ ಕುಮಾರ್ ಅವರನ್ನು, ದಕ್ಷಿಣ ಕನ್ನಡ ಜಿಲ್ಲಾ ಚಿನ್ನದ ಕೆಲಸಗಾರರ ಸಂಘದ ನಿಯೋಗವು ಭೇಟಿ ಮಾಡಿ ಸಮಸ್ಯೆಯ ಕುರಿತು ಮನವರಿಕೆ ಮಾಡುವುದರೊಂದಿಗೆ ಮನವಿಯೊಂದನ್ನು ಸಲ್ಲಿಸಿತು. ಈ ನಿಯೋಗದಲ್ಲಿ ಸಂಘದ ಅಧ್ಯಕ್ಷ ಕೆ. ಎಲ್. ಹರೀಶ್ , ಕಾರ್ಯದರ್ಶಿ ಪ್ರಕಾಶ್ ಆಚಾರ್ಯ ಹಲೇಜಿ, ವಿಶ್ವಕರ್ಮ ಸಹಕಾರ ಬ್ಯಾಂಕ್ ನ ಅಧ್ಯಕ್ಷ ಡಾ.ಎಸ್. ಆರ್.ಹರೀಶ್ ಆಚಾರ್ಯ, ಜಿಲ್ಲಾ ಅಪ್ರೈಸರ್ ಸಮಿತಿಯ ಸಂಚಾಲಕ ನಾಗರಾಜ್ ಆಚಾರ್ಯ ಮಂಗಳಾದೇವಿ, ಸಹ ಸಂಚಾಲಕ ರತನ್ ಆಚಾರ್ಯ ಬಿಜೈ, ಹಾಗೂ ಪ್ರವೀಣ್ ಕುಮಾರ್ ಎಂ. ಮತ್ತಿತರರು ಉಪಸ್ಥಿತರಿದ್ದರು.

ಕಂಕನಾಡಿ ಪಂಪ್‌ವೆಲ್ ರಸ್ತೆಯ ಒಂದು ಭಾಗದ ಕಾಮಗಾರಿ ಪೂರ್ಣ



ಮಂಗಳೂರು: ನಗರದ ಕಂಕನಾಡಿ ಪಂಪ್‌ವೆಲ್ ರಸ್ತೆಯ ಒಂದು ಭಾಗದ ಕಾಮಗಾರಿ ಪೂರ್ಣಗೊಂಡಿದ್ದು ಜೂನ್ 10ಕ್ಕೆ ವಾಹನ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ತಿಳಿಸಿದ್ದಾರೆ.

ಕಾಮಗಾರಿ ನಡೆಯುವ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು. ಕಾಂಕ್ರೀಟೀಕರಣದ ಒಂದು ಭಾಗದ ಕಾಮಗಾರಿಯು ಮುಕ್ತಾಯಗೊಂಡಿದ್ದು ಇನ್ನೂ ಬಾಕಿಇರುವ ಸಣ್ಣ ಕೆಲಸಗಳು ಹಾಗೂ ಚರಂಡಿ ವ್ಯವಸ್ಥೆಯು ನೀರಿನ ಸಂಚಾರದಾರಿ ಸುಗಮಗೊಳಿಸುವ ಕಾರ್ಯ ಮುಗಿಸಬೇಕಿದೆ ಎಂದರು. ಯಾವುದೇ ಸಂದರ್ಭದಲ್ಲಿ ನೀರು ಅಂಗಡಿಗಳಿಗೆ ನುಗ್ಗುವುದು ಮುಂತಾದ ತೊಂದರೆಗಳು ಆಗಬಾರದೆಂದು ಇಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು.


ಈಗಾಗಲೇ ಒಳಚರಂಡಿ ವ್ಯವಸ್ಥೆಯನ್ನು ಜೋಡಣೆ ಮಾಡುವ ಕೆಲಸ ಮಾಡಲಾಗಿದ್ದು ಒಳಚರಂಡಿ ವ್ಯವಸ್ಥೆಯು ಯಾವುದೇ ತೊಂದರೆ ಇಲ್ಲ ಎಂದು ಪಾಲಿಕೆ ಮುಖ್ಯ ಇಂಜಿನಿಯರ್ ನಾಗರಾಜ್ ತಿಳಿಸಿದರು.

ಬಾಕಿ ಇರುವ ಚರಂಡಿ ಮತ್ತು ಪಾದಾಚಾರಿ ಮಾರ್ಗವನ್ನು ನಗರ ಪಾಲಿಕೆಯಿಂದ ಮಾಡಬೇಕಾಗಿದ್ದು ಟೆಂಡರ್ ಕರೆಯಲಾಗಿದೆ. ಚರಂಡಿ ಹಾಗೂ ಫುಟ್‌ಪಾತ್ ಕಾಮಗಾರಿಯಯನ್ನು ಕೂಡಲೇ ನಿರ್ವಹಿಸಲು ಕ್ರಮ ಕೈಗೊಳ್ಳಬೇಕೆಂದು ಐವನ್ ಸೂಚಿಸಿದರು. ಇಂಜಿನಿಯರ್‌ಗಳಾದ ಪ್ರೀತಮ್, ಹೇಮಂತ್, ಮಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರ್ ನಾಗರಾಜ್, ಮಾಜಿ ಮೇಯರ್ ಶಶಿಧರ್ ಹೆಗ್ಡೆ ಮಾಜಿ ಕಾರ್ಪೊರೇಟರ್ ನವೀನ್ ಡಿಸೋಜ, ನಾಗೇಂದ್ರ ಕುಮಾರ್, ಭಾಸ್ಕರ್ ರಾವ್, ಅಪ್ಪಿ ಎಸ್, ಸತೀಶ್ ಪೆಂಗಲ್, ಕಾಂಗ್ರೆಸ್ ನಾಯಕ ಸುಹೇಲ್ ಕಂದಕ್, ಚೇತನ್ ಕುಮಾರ್, ಉಪೇಂದ್ರ ಕುದ್ರೋಳಿಗುಡ್ಡ, ಅನಿಲ್ ಕುದ್ರೋಳಿಗುಡ್ಡ ಉಪಸ್ಥಿತರಿದ್ದರು.

ಪುಣಚದ 3 ಕುಟುಂಬಗಳಿಗೆ 94 ಸಿ ಹಕ್ಕುಪತ್ರ ನೀಡಿಕೆ ವಿಚಾರ | ಶಾಸಕ ಅಶೋಕ್ ಕುಮಾರ್ ರೈ ಹೇಳಿಕೆ

ರಾಜಕೀಯ ಭೇದಭಾವ ಮಾಡಿಲ್ಲ, ಬಿಜೆಪಿಯಿಂದ ಗೊಂದಲ ಸೃಷ್ಟಿ

ಪುತ್ತೂರು: ಪುಣಚದ 3 ಕುಟುಂಬಗಳಿಗೆ 94 ಸಿ ಹಕ್ಕುಪತ್ರ ನೀಡಿಲ್ಲ ಎಂದು ಬಿಜೆಪಿಯು ಬಂಟ್ವಾಳ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ಮಾಡಿ ಗೊಂದಲ ಸೃಷ್ಟಿಸುವ ಕಾರ್ಯ ಮಾಡಿದೆ. ಆ ಕುಟುಂಬಗಳು 2020ರಲ್ಲಿ ಅರ್ಜಿ ಸಲ್ಲಿಸಿ 2023ರವರೆಗೆ ಪುತ್ತೂರಿನ ಬಿಜೆಪಿ ಶಾಸಕರ ಕಚೇರಿಗೆ ಓಡಾಟ ನಡೆಸಿದ್ದರೂ ಅವರು ಹಕ್ಕುಪತ್ರ ನೀಡಿಲ್ಲ, ನಾವು ರಾಜಕೀಯ ಭೇದವಿಲ್ಲದೆ ಹಕ್ಕುಪತ್ರ ನೀಡುವ ಕಾರ್ಯ ಮಾಡುತ್ತಿದ್ದು ಬಿಜೆಪಿಯ ಹುದ್ದೆಯಲ್ಲಿರುವವರಿಗೂ ಅಕ್ರಮ–ಸಕ್ರಮದಲ್ಲಿ ಜಾಗ ಮಂಜೂರಾತಿ ಮಾಡುತ್ತಿದ್ದೇವೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.



ಅವರು ಸೋಮವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪುಣಚದ 3 ಕುಟುಂಬದವರು ಕಳೆದ ಮೇ 14ರಂದು ನನ್ನ ಕಚೇರಿಗೆ ಬಂದು ಹಕ್ಕುಪತ್ರ ಸಿಗದೇ ಇರುವ ಕುರಿತು ತಿಳಿಸಿದ್ದು, ನಾನು ಕಂದಾಯ ಇಲಾಖೆಯಲ್ಲಿ ಮಾತನಾಡಿ ಹಕ್ಕುಪತ್ರ ನೀಡುವ ಕುರಿತು ಕೂಡ ತಿಳಿಸಿದ್ದೆ. ಹಕ್ಕುಪತ್ರಗಳನ್ನು ಸಿಎಂ, ಸಚಿವರು, ಶಾಸಕರು ನೀಡಬೇಕು ಎಂಬ ಸರಕಾರದ ಸುತ್ತೋಲೆಯ ಹಿನ್ನೆಲೆಯಲ್ಲಿ ಅಕ್ರಮ–ಸಕ್ರಮ ಬೈಠಕ್‌ಗೆ ಬಂಟ್ವಾಳ ತಹಶೀಲ್ದಾರ್ ದಿನಾಂಕ ನೀಡದೆ ಹಕ್ಕುಪತ್ರ ನೀಡಿರಲಿಲ್ಲ. ಈ ಕುಟುಂಬಗಳಿಗೆ ಹಿಂದೆ ಮನೆ ಕಟ್ಟುವ ಸಂದರ್ಭ ನನ್ನ ಟ್ರಸ್ಟ್‌ನಿಂದ ಶೀಟ್, ಸಿಮೆಂಟ್ ಕೊಡುವ ಕಾರ್ಯ ಮಾಡಿದ್ದೆ. ಆದರೆ, ಅವರಿಗೆ 94 ಸಿ ಹಕ್ಕುಪತ್ರ ನೀಡುವ ಕುರಿತು ಆಕ್ಷೇಪಣೆಗಳಿದ್ದು, ಅವರು 15 ವರ್ಷಗಳಿಂದ ವಾಸ್ತವ್ಯ ಇರುವ ಕುರಿತು ದಾಖಲೆಗಳಿಲ್ಲ, ಜತೆಗೆ ಈ ಕುರಿತು ಲೋಕಾಯುಕ್ತ, ಎಸಿ, ಡಿಸಿಯವರಿಗೂ ಸ್ಥಳೀಯರು ದೂರು ನೀಡಿದ್ದಾರೆ. ಹೀಗಾಗಿ ಕಾನೂನಾತ್ಮಕವಾಗಿ ಹಕ್ಕುಪತ್ರ ನೀಡಲು ಸಾಧ್ಯವಿಲ್ಲ, ಜತೆಗೆ ಅವರಲ್ಲಿ ಒಬ್ಬರು ಈ ಹಿಂದೆಯೇ ಹಕ್ಕುಪತ್ರವನ್ನು ಪಡೆದಿರುತ್ತಾರೆ ಎಂದರು.

ಹಿಂದಿನ ಶಾಸಕರ ಅವಧಿಯಲ್ಲಿ ಅಕ್ರಮ–ಸಕ್ರಮ, 94 ಸಿ, 94 ಸಿಸಿಗೆ ಸಂಬಂಧಿಸಿ ಒಟ್ಟು 32 ಸಾವಿರ ಕಡತಗಳು ಬಾಕಿ ಇದ್ದು, ಆದರಲ್ಲಿ ನಾನು 4200 ಕಡತ ಈಗಾಗಲೇ ವಿಲೇ ಮಾಡಿ ಅಕ್ರಮ–ಸಕ್ರಮದಲ್ಲಿ 2 ಸಾವಿರ ಎಕರೆಯಷ್ಟು ಜಾಗ ನೀಡುವ ಕಾರ್ಯ ಮಾಡಲಾಗಿದೆ. ಸುಮಾರು 9 ಸಾವಿರ 94ಸಿ ಅರ್ಜಿಗಳನ್ನು ಬಿಜೆಪಿ ಸರಕಾರದ ಅವಧಿಯಲ್ಲಿ ರಿಜೆಕ್ಟ್ ಆಗಿದ್ದು, ಕಂದಾಯ ಸಚಿವರ ಗಮನಕ್ಕೆ ತಂದು ಅಂತಹ ಅರ್ಜಿಗಳನ್ನು ಕೂಡ ಪುನರ್ ಪರಿಶೀಲನೆ ಮಾಡಿ ಬಡವರಿಗೆ ಹಕ್ಕುಪತ್ರ ನೀಡುವ ಕಾರ್ಯ ಮಾಡುತ್ತಿದ್ದೇವೆ ಎಂದು ಶಾಸಕರು ಹೇಳಿದರು.

ಉಪ್ಪಿನಂಗಡಿ ದೇವಸ್ಥಾನ ಅಭಿವೃದ್ಧಿಯ ರೂ.352 ಕೋಟಿ ವೆಚ್ಚದ ಯೋಜನೆ ಕೇಂದ್ರ ಸರಕಾರದ ಪ್ರಸಾದಮ್ ಯೋಜನೆ ಎಂದು ಹೇಳಿಕೆ ನೀಡಿರುವ ಕಿಶೋರ್ ಬೊಟ್ಯಾಡಿಯವರು ಬಜೆಟ್ ಪುಸ್ತಕ ಓದಿ ಅರಿತುಕೊಳ್ಳಲಿ. ಅದು ರಾಜ್ಯ ಸರಕಾರದ ಯೋಜನೆಯಾಗಿದೆ. ಪ್ರಸಾದಮ್ ಯೋಜನೆಯ ಅನುದಾನ ನೀಡುವಂತೆ ಸಂಸದರಿಗೆ ನಾನು ಕೂಡ ಮನವಿ ಮಾಡಿದ್ದು, ಆದರೆ, ಈ ತನಕ ರಾಜ್ಯಕ್ಕೆ ಯಾವುದೇ ಹಣ ಬಂದಿಲ್ಲ. ಜತೆಗೆ ಖೇಲೊ ಇಂಡಿಯಾದಲ್ಲೂ ಅನುದಾನ ಬಂದಿಲ್ಲ. ಪ್ರತಿಭಟನೆಯಲ್ಲಿ ಸಂಸದ ಬ್ರಿಜೇಶ್ ಚೌಟ ಅವರು ಕೂಡ ಪಾಲ್ಗೊಂಡಿದ್ದು, ಅವರು ಈ ರೀತಿಯ ರಾಜಕೀಯ ಮಾಡದೆ ಜಿಲ್ಲೆಯ ಅಭಿವೃದ್ಧಿಗೆ ಪ್ರಯತ್ನಿಸಬೇಕಿದೆ ಎಂದರು.

ವಿಟ್ಲ ಠಾಣೆಯಲ್ಲಿ ಬಕ್ರಿದ್ ಶಾಂತಿ ಸಭೆಯಲ್ಲಿ ಸೂಚನೆ

ಅಪ್ರಾಪ್ತರಿಗೆ ವಾಹನಗಳನ್ನು ಕೊಡದಿರಿ

ವಿಟ್ಲ: ಹಬ್ಬಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದಕ್ಕೆ ಇಲಾಖೆಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಾರ್ಥನೆ ಮುಗಿದ ನಂತರ ಮನೆ ಭೇಟಿಗಳ ಸಂದರ್ಭ ಅಪ್ರಾಪ್ತರ ಕೈಗೆ ವಾಹನ ಸಿಗದಂತೆ ಎಚ್ಚರ ವಹಿಸಬೇಕು. ಕೇರಳ ಗಡಿಯಲ್ಲಿ ಅಗತ್ಯ ಮುನ್ನೆಚ್ಚರಿಕೆಯನ್ನು ಇಲಾಖೆ ತೆಗೆದುಕೊಂಡಿದ್ದು, ವಾಹನಗಳ ತಪಾಸಣೆಗೂ ಕ್ರಮ ವಹಿಸಲಾಗಿದೆ ಎಂದು ವಿಟ್ಲ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಪಕಾಶ್ ದೇವಾಡಿಗ ಹೇಳಿದರು.



ಪೊಲೀಸ್ ಠಾಣೆ ಸಭಾಂಗಣದಲ್ಲಿ ಬಕ್ರೀದ್ ಹಿನ್ನಲೆಯಲ್ಲಿ ವಿಟ್ಲ ವ್ಯಾಪ್ತಿಯ ಪ್ರಮುಖರ ಸಭೆ ನಡೆಸಿ ಮಾತನಾಡಿದರು. ಪ್ರಾರ್ಥನೆ ಸಮಯ ಹೆಚ್ಚಿನ ಜನಸಂದಣಿಯಿರುವುದರಿಂದ ಸಂಚಾರ ದಟ್ಟಣೆಯಾಗುವ ಸಾಧ್ಯತೆಯಿದೆ. ಇದಕ್ಕೆ ಅಗತ್ಯ ಕ್ರಮದ ಜತೆಗೆ ಪ್ರತಿಯೊಬ್ಬರ ಸಹಕಾರವೂ ಅಗತ್ಯ ಎದೆ. ರಸ್ತೆ ಸಂಚಾರ ಮತ್ತು ಸುರಕ್ಷತಾ ನಿಯಮ ಪಾಲನೆ ಮಾಡುವುದು ಅತ್ಯಗತ್ಯ ಎಂದರು.

ಕಾನೂನು ಸುವ್ಯವಸ್ಥೆ ಉಪನಿರೀಕ್ಷಕ ರಾಮಕೃಷ್ಣ, ಸಮುದಾಯದ ಪ್ರಮುಖರಾದ ಪದ್ಮನಾಭ ಪೂಜಾರಿ, ಹಂಝ, ಯೂಸುಫ್, ಸೋಮಶೇಖರ್, ಹಮೀದ್, ಸುದರ್ಶನ ಪಡಿಯಾರ್, ಸುಲೈಮಾನ್ ಮಜೀದ್ ಕನ್ಯಾನ ಮತ್ತಿತರರಿದ್ದರು.

ಕುಂಟುತ್ತಾ ಸಾಗುತ್ತಿರುವ ಚೆರ್ಕಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ | ಜನರಿಗೆ ಸಮಸ್ಯೆ ಎದುರಾಗುವ ಸಾಧ್ಯತೆ

ಮಳೆ ಶುರುವಾದರೆ ಕೆಸರು ನೀರಿನಲ್ಲೇ ಸಂಚಾರ ಅನಿವಾರ್ಯ?

ಕಾಸರಗೋಡು: ಜಿಲ್ಲೆಯಲ್ಲಿ ಮುಂಗಾರು ಮಳೆ ಕೆಲವೇ ದಿನಗಳಲ್ಲಿ ಆರಂಭವಾಗಲಿದ್ದು, ಈ ನಡುವೆ ಚೆರ್ಕಳದಲ್ಲಿ ಕುಂಟುತ್ತಾ ಸಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಗಳ ಕಾಮಗಾರಿಯು ಅವ್ಯವಸ್ಥೆಯ ಗೂಡಾಗುವ ಆತಂಕ ಎದುರಾಗಿದೆ. ನಾಲ್ಕು ವರ್ಷಗಳಾದರೂ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಯು ಚೆರ್ಕಳದಲ್ಲಿ ಪೂರ್ಣಗೊಳ್ಳದಿರುವುದು ಜನರ ಸಮಸ್ಯೆಗೆ ಕಾರಣವಾಗಿದೆ.





ಚೆರ್ಕಳ ಪೇಟೆಯು ಅಂತಾರಾಜ್ಯ ರಸ್ತೆಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಸಂಗಮಿಸುವ ಕಾಸರಗೋಡು ಜಿಲ್ಲೆಯ ಪ್ರಮುಖ ಜಂಕ್ಷನ್‌ಗಳಲ್ಲಿ ಒಂದಾಗಿದೆ. ಕಾಮಗಾರಿ ಆರಂಭಗೊಂಡ ಮೊದಲ ವರ್ಷವೇ ಚೆರ್ಕಳ ಪೇಟೆಯಲ್ಲಿ ಮಳೆಗಾಲದಲ್ಲಿ ಕೆಸರುನೀರು ಕಟ್ಟಿನಿಂತು ಪ್ರಯಾಣಿಕರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಅಲ್ಲದೆ ವಾಹನ ಚಾಲಕರು ಅಪಾರ ಸಂಕಷ್ಟ ಅನುಭವಿಸಿದ್ದರು.

ನಾಗರಿಕರ ಪ್ರತಿಭಟನೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ನಿರ್ಮಾಣ ಕಂಪೆನಿಗೆ ನೀಡಿದ ತುರ್ತು ನಿರ್ದೇಶನಗಳನ್ನು ಕಡೆಗಣಿಸಿರುವುದು ಬಳಿಕದ ವರ್ಷಗಳಲ್ಲಿ ಸಮಸ್ಯೆಗೆ ದಾರಿಮಾಡಿಕೊಟ್ಟಿತು. ಮುಂದಿನ ತಿಂಗಳ ಆರಂಭದಿಂದ ಶಾಲೆಗಳು ತೆರೆಯಲಿದ್ದು, ಚೆರ್ಕಳ ಪೇಟೆಗೆ ಆಗಮಿಸುವವರ ಜನಸಂಖ್ಯೆಯಲ್ಲೂ ಭಾರೀ ಹೆಚ್ಚಳ ಉಂಟಾಗಲಿದೆ. ಮಳೆಗಾಲದ ಮೊದಲು ಚೆರ್ಕಳದ ನಿರ್ಮಾಣ ಪೂರ್ತಿಗೊಳಿಸಲಾಗುವುದು ಎಂದು ಹಲವು ಬಾರಿ ನಿರ್ಮಾಣ ಕಂಪೆನಿಯ ಅಧಿಕಾರಿಗಳು ಭರವಸೆ ನೀಡಿದ್ದರೂ ಅದ್ಯಾವುದೂ ಕಾರ್ಯಗೊಂಡಿಲ್ಲ.

ಚೆರ್ಕಳ ಪೇಟೆಯಲ್ಲಿ ಮೇಲ್ಸೇತುವೆ ಹಾದುಹೋಗುವ ಕೆಳಗಿನ 300 ಮೀಟರ್‌ನಷ್ಟು ಭಾಗದ ಸರ್ವೀಸ್ ರಸ್ತೆಗಳು, ಫುಟ್‌ಪಾತ್, ಚರಂಡಿ ನಿರ್ಮಾಣ ಇತ್ಯಾದಿ ಕೆಲಸಕಾರ್ಯಗಳು ಮಾರ್ಚ್ 31ರೊಳಗೆ ಪೂರ್ತಿಯಾಗಲಿವೆ ಎಂದು ಜನವರಿ ಆರಂಭದಲ್ಲಿ ಜಿಲ್ಲಾಧಿಕಾರಿ, ಶಾಸಕರು ಮೊದಲಾದ ಜನಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕಲೆಕ್ಟರೇಟ್‌ನಲ್ಲಿ ನಡೆದ ಸಭೆಯಲ್ಲಿ ನಿರ್ಮಾಣ ಕಂಪೆನಿಯು ತಿಳಿಸಿತ್ತು.

ಕ್ರಿಯಾ ಸಮಿತಿಯ ಒತ್ತಡದಿಂದ ಫೆಬ್ರವರಿಯಲ್ಲಿ ನಿರ್ಮಾಣ ಕಾರ್ಯದಲ್ಲಿ ತ್ವರಿತಗತಿ ಕಂಡುಬಂದರೂ ಬಳಿಕ ಹಿಂದಿನಂತೆಯೇ ವಿಳಂಬವಾಯಿತು. ಮೇಲ್ಸೇತುವೆ ಹಾದುಹೋಗುವ ಪರಿಸರ ಪ್ರದೇಶದ ವ್ಯಾಪಾರಿಗಳು, ಆಟೋ ಚಾಲಕರು ಅತೀ ಹೆಚ್ಚು ತೊಂದರೆ ಅನುಭವಿಸುವಂತಾಗಿದೆ. ಧಾರಾಕಾರವಾಗಿ ಸುರಿದ ಒಂದು ಮಳೆಗೆ ಚೇರ್ಕಳದ ಪಾಡಿ ರಸ್ತೆಯಲ್ಲಿ ಭಾರೀ ಪ್ರಮಾಣದಲ್ಲಿ ಕೆಸರುನೀರು ಕಟ್ಟಿನಿಂತು ಸಮಸ್ಯೆಯಾಗಿದೆ. ಚೆರ್ಕಳ ಪೇಟೆಯಲ್ಲಿ ನೀರು ಕಟ್ಟಿ ನಿಲ್ಲಲು ಕಾರಣವಾಗುವ ಚರಂಡಿಯ ನಿರ್ಮಾಣ ಇದೀಗ ಅರ್ಧದಲ್ಲೇ ಸ್ಥಗಿತಗೊಂಡಿದೆ. ನಾಗರಿಕರು ಮತ್ತು ವ್ಯಾಪಾರಿಗಳು ಪ್ರತ್ಯಕ್ಷ ಹಾಗೂ ಪರೋಕ್ಷ ಹೋರಾಟಗಳನ್ನು ನಡೆಸಿದರೂ ಯೋಜನಾ ಕಾಮಗಾರಿಯಲ್ಲಿ ಗಂಭೀರವಾದ ಪ್ರಗತಿ ಸಾಧ್ಯವಾಗದಿರುವುದು ದುರಂತವಾಗಿದೆ.

ಸರ್ವೀಸ್ ರಸ್ತೆಗಳಲ್ಲಿ ವಾಹನ ದಟ್ಟಣೆ

ಕ್ರಿಯಾಸಮಿತಿ, ವ್ಯಾಪಾರಿಗಳ ಮಧ್ಯ ಪ್ರವೇಶದಿಂದಾಗಿ ಜಿಲ್ಲಾಧಿಕಾರಿ, ಸಂಸದರು, ಶಾಸಕರು ಸೇರಿದಂತೆ ಜನಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡಿ ನಿರ್ಮಾಣ ಕಂಪೆನಿಗೆ ನೀಡಿದ ಹಲವು ನಿರ್ದೇಶನಗಳು ಕೂಡಾ ಪಾಲನೆಯಾಗಿಲ್ಲ. ವಾಹನ ಸಂಚಾರಕ್ಕೆ ತೆರೆದು ನೀಡಿದ ಚೆರ್ಕಳ ಮೇಲ್ಸೇತುವೆಯು ಇತ್ತೀಚೆಗೆ ಮತ್ತೆ ಮುಚ್ಚಿರುವುದರಿಂದ ಚೆರ್ಕಳ ಪೇಟೆಯ ಸರ್ವೀಸ್ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಕಂಡುಬಂದಿದೆ.

ಅವೈಜ್ಞಾನಿಕ ಕಾಮಗಾರಿ

ಅಂತಾರಾಜ್ಯ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗಿರುವ ಮೇಲ್ಸೇತುವೆಯ ನಿರ್ಮಾಣವು ಅರ್ಧದಲ್ಲೇ ಸ್ಥಗಿತಗೊಂಡಿದೆ. ನಿರ್ಮಾಣದ ಅವೈಜ್ಞಾನಿಕ ಹಾಗೂ ಕಾಮಗಾರಿಯನ್ನು ಪೂರ್ತಿಗೊಳಿಸುವಲ್ಲಿ ಕಾರ್ಯದಕ್ಷತೆ ಇಲ್ಲದಿರುವುದು, ಅಶ್ರದ್ಧೆ ಇತ್ಯಾದಿಗಳಿಂದ ಚೆರ್ಕಳ ಪೇಟೆಯಲ್ಲಿ ಹಾಗೂ ಪರಿಸರ ಭಾಗಗಳಲ್ಲಿ ಅನೇಕ ಅಪಘಾತಗಳು ಸಂಭವಿಸುವಂತಾಗಿದೆ. ನಿರ್ಮಾಣ ಸಂಸ್ಥೆಯ ಬೇಜವಾಬ್ದಾರಿ ಧೋರಣೆಗೆ ಅಂಕುಶ ಹಾಕುವಲ್ಲಿ ಜಿಲ್ಲಾಡಳಿತವು ವಿಶೇಷ ಗಮನ ಹರಿಸಬೇಕಾಗಿದೆ.

ಬಂದಡ್ಕ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಗಮ



ಕಾಸರಗೋಡು: ಬಂದಡ್ಕ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಪ್ಲಾಟಿನಂ ಜುಬಿಲಿ ಮಹೋತ್ಸವದ ಅಂಗವಾಗಿ ಹಳೆ ವಿದ್ಯಾರ್ಥಿಗಳ ಸಂಗಮವನ್ನು ಶಾಲೆಯಲ್ಲಿ ಭಾನುವಾರ ವಿವಿಧ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಆಯೋಜಿಸಲಾಗಿತ್ತು.

ಶಾಲಾ ಹಳೆ ವಿದ್ಯಾರ್ಥಿ, ಜಿಲ್ಲಾ ನಿವೃತ್ತ ನ್ಯಾಯಾಧೀಶ ಶಂಕರನ್ ನಾಯರ್ ಸಮಾರಂಭವನ್ನು ಉದ್ಘಾಟಿಸಿದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಲರಾಮನ್ ನಂಬಿಯಾರ್ ಅಧ್ಯಕ್ಷತೆ ವಹಿಸಿದ್ದರು.

ಪ್ಲಾಟಿನಂ ಜುಬಿಲಿ ಕಾರ್ಯಾಧ್ಯಕ್ಷ ಪಿ.ವಿ.ಸುರೇಶ್, ನಿವೃತ್ತ ತಹಶೀಲ್ದಾರ್ ಎ.ರಾಧಾಕೃಷ್ಣನ್ ನಾಯರ್, ಜೋಸ್ ಪಾರತಟ್ಟೆಲ್, ರಾಧಾಕೃಷ್ಣನ್ ನಂಬಿಯಾರ್, ಕೃಷ್ಣನ್ ಮೇಲತ್, ರಾಧಾಕೃಷ್ಣನ್ ಎ.ಕೆ., ಶಾಲಾ ಮುಖ್ಯ ಶಿಕ್ಷಕ ರಾಘವ ಎಂ.ಎನ್., ಗೋಪಿ ಮಾಣಿಮೂಲೆ ಮುಂತಾದವರು ಮಾತನಾಡಿದರು. ಸಂಚಾಲಕ ಕೆ.ಎ.ರಜಾಕ್ ಸ್ವಾಗತಿಸಿ, ಸಿಬ್ಬಂದಿ ಕಾರ್ಯದರ್ಶಿ ಜ್ಯೋತಿಲಕ್ಷ್ಮಿ ಕೆ. ವಂದಿಸಿದರು. ಇದೇ ವೇಳೆ ಹಳೆ ವಿದ್ಯಾರ್ಥಿ ಸಂಘದ ನೂತನ ಅಧ್ಯಕ್ಷರಾಗಿ ಬಲರಾಮನ್ ನಂಬಿಯಾರ್ ಮತ್ತು ಸಂಚಾಲಕರಾಗಿ ಕೆ.ಎ.ರಜಾಕ್ ಅವರನ್ನು ಆಯ್ಕೆ ಮಾಡಲಾಯಿತು.

ಕಾಸರಗೋಡಿನಲ್ಲಿ 'ಮಕ್ಕಳ ಬೇಸಿಗೆ ತರಬೇತಿ ಶಿಬಿರ'ದ ಸಮಾರೋಪ



ಕಾಸರಗೋಡು: ಮಕ್ಕಳಿಗಾಗಿ 2026ರ ಬೇಸಿಗೆ ತರಬೇತಿ ಶಿಬಿರ (ಕಾಸರಗೋಡು ಸಮ್ಮರ್ ಕೋಚಿಂಗ್ ಕ್ಯಾಂಪ್)ದ ಸಮಾರೋಪ ಸಮಾರಂಭವನ್ನು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಉದ್ಘಾಟಿಸಿದರು.

ಏ.5ರಿಂದ ಮೇ 22ರ ವರೆಗೆ ಕಾಸರಗೋಡು ಕೆಸಿಎ ಕ್ರೀಡಾಂಗಣ, ಉಪ್ಪಳ ಮಣ್ಣಂಗುಳಿ ಮೈದಾನ ಮತ್ತು ನೀಲೇಶ್ವರ ರಾಜಾಸ್ ಹೈಯರ್ ಸೆಕೆಂಡರಿ ಶಾಲಾ ಮೈದಾನದಲ್ಲಿ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಸಮಾರೋಪ ಕಾರ್ಯಕ್ರಮದಲ್ಲಿ ಡಿಸಿಎ ಅಧ್ಯಕ್ಷ ಕೆ.ಎಂ.ಅಬ್ದುಲ್ ರಹಮಾನ್ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಕೆಸಿಎ ಅಪೆಕ್ಸ್ ಕೌನ್ಸಿಲ್ ಸದಸ್ಯ ತಳಂಗರೆ ನೌಫಲ್, ಡಿಸಿಎ ಕೋಶಾಧಿಕಾರಿ ಸಲಾಂ ಚೆರ್ಕಳ, ಬದಿಯಡ್ಕ ಗ್ರಾಮ ಪಂಚಾಯತ್ ಸದಸ್ಯ ಮಾಹಿನ್ ಕೇಳೋಟ್, ಡಿಸಿಎ ಕಾರ್ಯಕಾರಿ ಸದಸ್ಯ ಅಜೀಜ್ ಟಿ., ಡಿಸಿಎ ಕೋಚ್ ದಿಜು ದಾಸ್, ಮುನೀರ್ ವಲಿಯ ಮುಂತಾದವರು ಮಾತನಾಡಿದರು.

ಪ್ರಮಾಣ ಪತ್ರ ವಿತರಣೆ

ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಸಮಾರೋಪದಲ್ಲಿ ಅಪಾರ ಮಂದಿ ಪಾಲ್ಗೊಂಡಿದ್ದರು. ಡಿಸಿಎ ಕಾರ್ಯದರ್ಶಿ ಟಿ.ಎಂ.ಇಕ್ಬಾಲ್ ಸ್ವಾಗತಿಸಿ, ವಂದಿಸಿದರು.

- **ಕಾಸರಗೋಡು ಕೆಸಿಎ ಕ್ರೀಡಾಂಗಣ, ಉಪ್ಪಳ ಮಣ್ಣಂಗುಳಿ ಮೈದಾನ ಮತ್ತು ನೀಲೇಶ್ವರ ರಾಜಾಸ್ ಹೈಯರ್ ಸೆಕೆಂಡರಿ ಶಾಲಾ ಮೈದಾನದಲ್ಲಿ ತರಬೇತಿ**

ಕೋಡಿಬೈಲು: ವಿಶ್ವ ಹಿಂದೂ ಪರಿಷತ್ ಆಶ್ರಯದಲ್ಲಿ ಉಚಿತ ಶ್ರವಣ ತಪಾಸಣೆ



ಉಪ್ಪಳ: ವಿಶ್ವ ಹಿಂದೂ ಪರಿಷತ್ ಕೋಡಿಬೈಲು ಉಪಖಂಡ ಸಮಿತಿ ಹಾಗೂ ಓಂ ಶಕ್ತಿ ಫ್ರೆಂಡ್ಸ್ ಕ್ಲಬ್ ಕೋಡಿಬೈಲು ಇವುಗಳ ಆಶ್ರಯದಲ್ಲಿ ಟೀಮ್ ಈಶ್ವರ್ ಮಲ್ಪೆ ಸಹಯೋಗದೊಂದಿಗೆ ಶ್ರವಣ ಉಚಿತ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ಕಾರ್ಯಕ್ರಮ ಹಾಗೂ ವಿತರಣೆ ಕಾರ್ಯಕ್ರಮ ಜರಗಿತು.

ವಿಶ್ವ ಹಿಂದೂ ಪರಿಷತ್‌ನ ಕಾಸರಗೋಡು ಜಿಲ್ಲಾ ಮಾತೃ ಶಕ್ತಿ ಪ್ರಮುಖ್ ಮೀರಾ ಆಳ್ವ ಬೇಕೂರು ಉದ್ಘಾಟಿಸಿ ಶುಭಹಾರೈಸಿದರು. ಕೋಡಿಬೈಲು ಗ್ರಾಮಸಮಿತಿಯ ಅಧ್ಯಕ್ಷ ನಾರಾಯಣ ತೊಟ್ಟಿ, ಮಂಜೇಶ್ವರ ಪ್ರಖಂಡ ಅಧ್ಯಕ್ಷೆ ಕುಸುಮಾ ಸದಾನಂದ, ವಿಶ್ವ ಹಿಂದೂ ಪರಿಷತ್ ಮಂಗಲ್ಪಾಡಿ ಖಂಡ ಸಮಿತಿಯ ಅಧ್ಯಕ್ಷ ಹರಿನಾಥ ಭಂಡಾರಿ, ಓಂ ಶಕ್ತಿ ಫ್ರೆಂಡ್ಸ್ ಕ್ಲಬ್‌ನ ಗೌರವ ಅಧ್ಯಕ್ಷ ರಾಜೇಶ್ ಕೋಡಿಬೈಲು, ಶ್ರವಣ ತಜ್ಞ ಡಾ.ಮೋಹಿತ್, ಈಶ್ವರ್ ಮಲ್ಪೆ ಟೀಮ್ ಸಂಚಾಲಕ ಲವ ಬಂಗೇರ ಮುಂತಾದವರು ಭಾಗವಹಿಸಿದ್ದರು. ಮಂಜೇಶ್ವರ ಪ್ರಖಂಡ ಕಾರ್ಯದರ್ಶಿ ರಂಜಿತ್ ಕೋಡಿಬೈಲು ನೇತೃತ್ವ ವಹಿಸಿದ್ದರು. ಶಾಂತಿಕುಮಾರಿ ಸ್ವಾಗತಿಸಿ, ವಂದಿಸಿದರು.

ಕುಲಾಲ ಸಂಘ ಮಂಗಲ್ಪಾಡಿ ಶಾಖೆ ಪ್ರಥಮ ವಾರ್ಷಿಕೋತ್ಸವ, ಕೃಷಿರತ್ನ ಬಿರುದು ಪ್ರದಾನ



ಉಪ್ಪಳ: ಕಾಸರಗೋಡು ಜಿಲ್ಲಾ ಕುಲಾಲ ಸಂಘದ ಮಂಗಲ್ಪಾಡಿ ಶಾಖೆಯ ಪ್ರಥಮ ವಾರ್ಷಿಕೋತ್ಸವ ಕುಬಣೂರು ಶ್ರೀರಾಮ ಎಯುಪಿ ಶಾಲಾ ಸಭಾಂಗಣದಲ್ಲಿ ಜರಗಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಲ್ಪಾಡಿ ಶಾಖೆಯ ಅಧ್ಯಕ್ಷ ಸತೀಶ್ ಎಂ. ಹೇರೂರು ವಹಿಸಿದ್ದರು. ಪ್ರಮುಖರಾದ ಶಂಕರ ಕುಂಜತ್ತೂರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರಗತಿಪರ ಕೃಷಿಕರಾದ ಶ್ರೀನಿವಾಸ ಮೂಲ್ಯ ಮಯ್ಯರಮೂಲೆ ಮತ್ತು ಮುಂಡಪ್ಪ ಮೂಲ್ಯ ಮಯ್ಯರಮೂಲೆ ಅವರಿಗೆ ಗೌರವದಿಂದ ಕೃಷಿರತ್ನ ಬಿರುದು ನೀಡಿ ಸನ್ಮಾನಿಸಲಾಯಿತು. ಸನ್ಮಾನಿತರ ಪರಿಚಯವನ್ನು ಸುಮತಿ ಟೀಚರ್ ನೆರವೇರಿಸಿದರು.

ಪ್ರತಿಭಾ ಪುರಸ್ಕಾರ

ನಂತರ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರಾದ ಶ್ರೀಜಿತ ಬಿ. ಮತ್ತು ಪ್ರೀಯಶ್ರೀ ಅವರಿಗೆ ಪ್ರತಿಭಾ ಪುರಸ್ಕಾರವನ್ನು ಗಣ್ಯರ ಸಮ್ಮುಖದಲ್ಲಿ ನೀಡಲಾಯಿತು. ಅದರೊಂದಿಗೆ ಮಂಗಲ್ಪಾಡಿ ಶಾಖೆಯ ಕನಸಿನ ಯೋಜನೆಯಾದ ಬೆಳಕು (ಬದುಕಿಗೊಂದು ಭರವಸೆಯ ಬೆಳಕು) ಎಂಬ ವಿನೂತನ ಯೋಜನೆಯಡಿ ವಾರಿಜಾ ಕುಲಾಲ್ ಬೇಕೂರು ಹಾಗೂ ದಿ.ಸೋಮನಾಥ ಬೊಳ್ಳಾರು ಅವರ ಬಡ ಕುಟುಂಬಗಳಿಗೆ ಸಹಾಯಹಸ್ತ ಒದಗಿಸಲಾಯಿತು.

ಮುಖ್ಯ ಅತಿಥಿಗಳಾಗಿ ಕುಶಲಾಕ್ಷಿ ವಿ.ಕುಲಾಲ್ ಕಣ್ವತೀರ್ಥ, ದಾಮೋದರ ಮಾಸ್ಟರ್ ಕಬ್ಬಿನಹಿತ್ತಿಲು, ಎಂ.ಪಿ.ಬಾಲಕೃಷ್ಣ ಶೆಟ್ಟಿ ಮೀನಾರು, ಮಂಗಲ್ಪಾಡಿ ಶಾಖೆಯ ಗೌರವ ಸಲಹೆಗಾರ ಸೇಸಪ್ಪ ಮೂಲ್ಯ ಬೊಳ್ಳಾರು, ಗೌರವಾಧ್ಯಕ್ಷ ವಾಸು ಕುಲಾಲ್ ಬೊಳ್ಳಾರು ಇದ್ದರು.

ಪ್ರೇಮಲತಾ ಬೊಳ್ಳಾರು ಮತ್ತು ಬಳಗದವರು ಪ್ರಾರ್ಥನೆ ಹಾಡಿದರು. ಬಾಲಕೃಷ್ಣ ಪಯ್ಯಾರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವನೀತ ರಾಜೇಶ್ ಕೊಂಡೆವೂರು ವರದಿಯನ್ನು ಮಂಡಿಸಿದರು. ನಾರಾಯಣ ಕುಲಾಲ್ ಕುಬಣೂರು ಸ್ವಾಗತಿಸಿ, ವಂದಿಸಿದರು. ಎನ್.ಕೆ.ಕುಲಾಲ್ ಬೇಕೂರು ನಿರೂಪಿಸಿದರು.

ವಿದ್ಯಾರ್ಥಿಗಳಿಗೆ ಬದಿಯಡ್ಕದಲ್ಲಿ ಎಲೈಟ್ ಏಕದಿನ ವ್ಯಕ್ತಿತ್ವ ವಿಕಸನ ಶಿಬಿರ



ಬದಿಯಡ್ಕ: ಎಲೈಟ್ ಅಕಾಡೆಮಿ ಬದಿಯಡ್ಕ ಮತ್ತು ರೂಟ್ರೋನಿಕ್ಸ್ ಕಂಪ್ಯೂಟರ್ ಸೆಂಟರ್ ಬದಿಯಡ್ಕ ಇವುಗಳ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಎಲೈಟ್ ವ್ಯಕ್ತಿತ್ವ ವಿಕಸನ ಶಿಬಿರ ಎಂಬ ಏಕದಿನ ಕಾರ್ಯಾಗಾರವು ಬದಿಯಡ್ಕದ ರಾಮ್ ಲೀಲಾ ಸಭಾಂಗಣದಲ್ಲಿ ಜರಗಿತು.

ಬದಿಯಡ್ಕ ಗ್ರಾಮ ಪಂಚಾಯತ್ ಸದಸ್ಯ ಹಮೀದ್ ಕೆಡೆಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳ ಜೀವನಕ್ಕೆ ಪೂರಕವಾದ ಶಿಕ್ಷಣದ ಜೊತೆಗೆ ಔದ್ಯೋಗಿಕ ನೆಲೆಯಲ್ಲಿ ಸಹಕಾರವಾಗುವ ಇಂತಹ ವ್ಯಕ್ತಿತ್ವ ವಿಕಸನ ಸೂತ್ರಗಳನ್ನು ಕಲಿಸುವ ಕಾರ್ಯಾಗಾರವು ಬದುಕಿನ ಸಿದ್ಧ ಸೂತ್ರಗಳಿಗೆ ಮುನ್ನುಡಿಯಾಗಲೆಂದು ಶುಭಹಾರೈಸಿದರು.

ಹಿರಿಯ ಯಕ್ಷಗಾನ ಕಲಾವಿದ, ದಸ್ತಾವೇಜು ಬರಹಗಾರ ಕರಿಂಬಿಲ ಲಕ್ಷ್ಮಣ ಪ್ರಭು, ತುಳುವೆರೆ ಆಯನೋ ಕೂಟದ ಕಾರ್ಯದರ್ಶಿ ಜಯ ಮಣಿಯಂಪಾರೆ, ಪ್ರಗತಿ ಸ್ಪೆಷಲ್ ಸ್ಕೂಲ್ ಉಳಿಯತ್ತಡ್ಕ ಇದರ ಪ್ರಾಂಶುಪಾಲ ಉದಯಕುಮಾರ್ ಎಂ., ಕವಿ ಸುಂದರ ಬಾರಡ್ಕ ಭಾಗವಹಿಸಿದ್ದರು. ಶಿಕ್ಷಕರಾದ ವೈಶಾಖ್, ಚಿತ್ರಿಕಾ ಸಹಕರಿಸಿದರು.

ದಿವಾಕರ್ ಬಲ್ಲಾಳ್ ಎ.ಬಿ. ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ವಿವಿಧ ವಿಷಯಗಳನ್ನು ತಿಳಿಸಿದರು. ಗೀತಾಲಕ್ಷ್ಮಿ ಪಿ. ಸ್ವಾಗತಿಸಿ, ಪ್ರಾಂಶುಪಾಲ ಕಿಶೋರ್ ವಂದಿಸಿದರು.

ಉಕ್ಕಿನಡ್ಕ ಪೇಟೆಯಲ್ಲಿ ಮಳೆಗಾಲ ಪೂರ್ವ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ 7ನೇ ಹಾಗೂ 9ನೇ ವಾರ್ಡ್‌ಗಳ ನೇತೃತ್ವದಲ್ಲಿ ಮಳೆಗಾಲ ಪೂರ್ವ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ನಡೆಯಿತು.

ಗ್ರಾಮ ಪಂಚಾಯತ್ ಸದಸ್ಯರಾದ ಮಧುಸೂದನ, ಲೀಲಾವತಿ, ಪಂಚಾಯತ್ ಹೆಲ್ತ್ ಇನ್‌ಸ್ಪೆಕ್ಟರ್ ಪಿ.ಕೆ.ಬಾಬುರಾಜ್, ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಸೂರಜ್, ಆಶಾ ಕಾರ್ಯಕರ್ತೆ ಲಲಿತಾ ಎ. ಮೊದಲಾದವರು ನೇತೃತ್ವ ವಹಿಸಿದ್ದರು. ಆರೋಗ್ಯ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಹಸಿರು ಕ್ರಿಯಾ ಸೇನೆ, ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರು, ಎಡಿಎಸ್, ಸಿಡಿಎಸ್ ಸದಸ್ಯೆಯರು, ವ್ಯಾಪಾರಿಗಳು, ಸಮಾಜ ಸೇವಕರು ಮುಂತಾದವರು ಪಾಲ್ಗೊಂಡಿದ್ದರು.



ಮಳೆಗಾಲದ ಹಿನ್ನೆಲೆಯಲ್ಲಿ ಮಂಗಲ್ಪಾಡಿ ಪಂಚಾಯತ್‌ನ 7ನೇ ವಾರ್ಡ್ ಪ್ರತಾಪನಗರದಲ್ಲಿ ಮಳೆ ನೀರು ಹರಿಯಲು ಚರಂಡಿಯನ್ನು ಶುಚೀಕರಿಸಲಾಯಿತು. ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ ನೇತೃತ್ವ ವಹಿಸಿದ್ದರು.

ಕಾಸರಗೋಡು ನಗರದಿಂದ 2 ಕಿ.ಮೀ. ದೂರ | ಅಧಿಕಾರ ವರ್ಗ ಇಚ್ಛಾಶಕ್ತಿ ಪ್ರದರ್ಶಿಸಿದರೆ ಉತ್ತಮ ಪ್ರವಾಸಿ ಕೇಂದ್ರವಾಗುವ ಅವಕಾಶ

ನೆಲ್ಲಿಕುಂಜೆ ಶಾಂತ ಕಡಲತೀರ ಕಸಬಾ ಬೀಚ್‌ಗೆ ಬೇಕಿದೆ ಅಭಿವೃದ್ಧಿ ಯೋಜನೆ

ಕಾಸರಗೋಡು: ನಗರದಿಂದ 2 ಕಿಲೋಮೀಟರ್‌ನಷ್ಟು ದೂರದಲ್ಲಿರುವ ನೆಲ್ಲಿಕುಂಜೆ ಕಡಲ ಕಿನಾರೆಗೆ ಪ್ರವಾಸೋದ್ಯಮ ಅವಕಾಶಗಳು ಹೇರಳವಾಗಿವೆ. ಹೆಚ್ಚಿನವರಿಗೆ ಪರಿಚಿತವಲ್ಲದ ಈ ಕಡಲ ಕಿನಾರೆ ಶಾಂತವಾದ ಕಡಲತೀರ ಎನಿಸಿಕೊಂಡಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ ಜಿಲ್ಲೆಯ ಪ್ರಧಾನ ಪ್ರವಾಸೋದ್ಯಮ ಕೇಂದ್ರವಾಗಲಿದೆ.

ಬೀಚ್‌ನಲ್ಲಿ ಹೊಸದಾಗಿ ನಿರ್ಮಿಸಲಾದ ಸಮುದ್ರ ಅಲೆ ತಡೆಗೋಡೆ (ಬ್ರೇಕ್ ವಾಟರ್)ಯನ್ನು ಉಡುಪಿ ಜಿಲ್ಲೆಯ ಮಲ್ಪೆಯ ಸೀ ವಾಕ್ ವೇ ಮಾದರಿಯಲ್ಲಿ ಅಭಿವೃದ್ಧಿಗೊಳಿಸಿದರೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಾಗಲಿದೆ. ಪ್ರವಾಸೋದ್ಯಮ, ಮೀನುಗಾರಿಕೆ ಇಲಾಖೆ ಹಾಗೂ ನಗರಸಭೆಯು ಒಗ್ಗೂಡಿದರೆ ಯೋಜನೆ ಕಾರ್ಯಗತಗೊಳ್ಳುವುದು ಸುಲಭವಾಗಲಿದೆ.



ಸುರಕ್ಷಾ ಬೇಲಿ ಸ್ಥಾಪನೆ ಅಗತ್ಯ

ನೆಲ್ಲಿಕುಂಜೆಯಲ್ಲಿ ಅಲೆ ತಡೆಗೋಡೆಯಲ್ಲಿ ಸ್ಟೀಲ್ ಕೈಗೋಡೆಗಳನ್ನು ನಿರ್ಮಿಸಿ ಟೈಲ್‌ಗಳನ್ನು ಅಳವಡಿಸಿ ಸುರಕ್ಷಾ ಬೇಲಿಯನ್ನು ಸ್ಥಾಪಿಸಿದರೆ ವೃದ್ಧರಿಗೆ ಹಾಗೂ ಮಕ್ಕಳಿಗೆ ನಿರ್ಭಯವಾಗಿ ನಡೆದಾಡಬಹುದಾದ ಕಡಲು ವಾಕ್‌ವೇಯಾಗಲಿದೆ. ಸೌರ ವಿದ್ಯುತ್‌ನಲ್ಲಿ ಕಾರ್ಯಾಚರಿಸುವ ಅಲಂಕಾರ ದೀಪಗಳು ಚಂದ್ರಗಿರಿ ಅಳಿವೆ ಬಾಗಿಲಿಗೆ ಅಭಿಮುಖವಾಗಿ ಆಸನಗಳನ್ನು ಸ್ಥಾಪಿಸಿದರೆ ನೆಲ್ಲಿಕುಂಜೆ ಸಂಧ್ಯಾ ಪ್ರವಾಸೋದ್ಯಮ ತಾಣವಾಗಿ ಮಾರ್ಪಾಡುಗೊಳ್ಳಲಿದೆ. ಅಲೆ ತಡೆಗೋಡೆಗಳಲ್ಲಿ ಕುಳಿತು ಗಾಳ ಹಾಕಿ ಮೀನು ಹಿಡಿಯುವುದು ವಿದೇಶಗಳಲ್ಲಿ ಇತರ ಪ್ರಧಾನ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಟ್ರೆಂಡ್ ಆಗಿದೆ. ಇದಕ್ಕಾಗಿ ಆಸಕ್ತ ಪ್ರವಾಸಿಗರನ್ನು ಆಕರ್ಷಿಸಲು ಇಲ್ಲಿ ಅತ್ಯುತ್ತಮ ಸಾಧ್ಯತೆಗಳಿವೆ.

ನೆಲ್ಲಿಕುಂಜೆ ಚಾರಿತ್ರಿಕ ಹಾಗೂ ಧಾರ್ಮಿಕವಾಗಿ ಪ್ರಾಧಾನ್ಯತೆ ಇರುವ ಸ್ಥಳವಾಗಿದೆ. ಪ್ರಸಿದ್ಧ ಸೂಫಿಸಂತ ತಂಙಳ್ ಉಪ್ಪಾಪ ಅವರ ಮಖಾಂ ಇಲ್ಲಿ ಇದ್ದು, ಇಲ್ಲಿಗೆ ಆಗಮಿಸುವ ಯಾತ್ರಿಗಳನ್ನು ಗಮನದಲ್ಲಿರಿಸಿಕೊಂಡು ತೀರ್ಥಯಾತ್ರಿಕರ ಪ್ರವಾಸೋದ್ಯಮ ಸಾಧ್ಯತೆ ಅಭಿವೃದ್ಧಿ ಪಡಿಸಬಹುದಾಗಿದೆ.

ಪಕ್ಕದಲ್ಲೇ ಇದೆ ಲೈಟ್‌ಹೌಸ್

ನೆಲ್ಲಿಕುಂಜೆ ಬೀಚ್ ಪಕ್ಕದಲ್ಲೇ ಕಾಸರಗೋಡು ಲೈಟ್ ಹೌಸ್ ಇರುವುದರಿಂದ ಲೈಟ್ ಹೌಸ್ ಟೂರಿಸಂ ಯೋಜನೆಗಳೊಂದಿಗೆ ಇದನ್ನು ಜೋಡಿಸಬಹುದಾಗಿದೆ. ನೆಲ್ಲಿಕುಂಜೆ ಬೀಚ್‌ನಿಂದ ಅಲ್ಪ ದೂರದಲ್ಲಿರುವ ಕಸಬಾ ಬೀಚ್, ಹಾರ್ಬರ್ ವೀಕ್ಷಣಾ ಕೇಂದ್ರ ಪ್ರವಾಸಿಗರಿಗೆ ಸಮುದ್ರದ ಮೀನುಗಾರಿಕೆ ದೃಶ್ಯ ವೀಕ್ಷಿಸುವ ಸ್ಥಳವಾಗಿದೆ. ನೆಲ್ಲಿಕುಂಜೆ –ಕಸಬಾ ಬೀಚ್‌ಗೆ ಪ್ರವಾಸೋದ್ಯಮ ಸಾಧ್ಯತೆಗಳನ್ನು ಮುಂದಿಟ್ಟುಕೊಂಡು ಜಿಲ್ಲಾ ಆಡಳಿತವು, ಜಿಲ್ಲಾ ಪ್ರವಾಸೋದ್ಯಮ ಭದ್ರ ಸಮಿತಿ ಹಾಗೂ ನಗರಸಭೆಯು ಸೇರಿ ಭಾನುವಾರ ನೆಲ್ಲಿಕುಂಜೆಯಲ್ಲಿ ಬೀಚ್ ರನ್ ನಡೆಸಿ ಹೊಸ ಹೊಸ ಯೋಜನೆಗಳಿಗೆ ನಾಂದಿ ಹಾಕಿದೆ.

ಸ್ವಚ್ಛತೆಗೆ ಆದ್ಯತೆ ಬೇಕಿದೆ

ಕೇರಳ ಸಮುದ್ರ ತೀರಗಳ ಅಲೆ ತಡೆಗೋಡೆಗಳಲ್ಲಿ ಮಳೆಗಾಲದಲ್ಲಿ ತೀವ್ರ ಅಲೆಗಳು ಅಪ್ಪಳಿಸುತ್ತವೆ. ಅದಕ್ಕಾಗಿ ಮಳೆಗಾಲದಲ್ಲಿ ಕಟ್ಟುನಿಟ್ಟಿನ ನಿಯಂತ್ರಣಗಳು, ಲೈಫ್ ಗಾರ್ಡ್ ವ್ಯವಸ್ಥೆ ಖಾತರಿ ಪಡಿಸಬೇಕಿದೆ. ಪ್ರವಾಸಿಗರು ಹೆಚ್ಚುವಾಗ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಮುದ್ರಕ್ಕೆ ಎಸೆಯುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಮಾಲಿನ್ಯ ನಿಯಂತ್ರಣ ಯೋಜನೆ ಅಗತ್ಯವಿದೆ.

ಸುತ್ತ ಮುತ್ತ

ಪ್ಲಸ್ ಟು ಫಲಿತಾಂಶ ಪ್ರಕಟ: ಕಾಸರಗೋಡಿನಲ್ಲಿ ಶೇ. 71.72 ಉತ್ತೀರ್ಣ

ಕಾಸರಗೋಡು: 2025–26ನೇ ಸಾಲಿನ ಕೇರಳ ಪ್ಲಸ್ ಟು ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ಕಾಸರಗೋಡು ಜಿಲ್ಲೆಯಲ್ಲಿ ನಿಯಮಿತ ವಿಭಾಗದಲ್ಲಿ ಉತ್ತೀರ್ಣ ಪ್ರಮಾಣ ಶೇಕಡಾ 71.72 ರಷ್ಟಿದೆ. ಮುಕ್ತ ಶಾಲಾ ವಿಭಾಗದಲ್ಲಿ ಶೇಕಡಾ 42.2 ರಷ್ಟು ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಅರ್ಹತೆ ಪಡೆದಿದ್ದಾರೆ. ಜಿಲ್ಲೆಯಲ್ಲಿ ನಿಯಮಿತ ವಿಭಾಗದಲ್ಲಿ ಒಟ್ಟು 16,432 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದರು. ಈ ಪೈಕಿ 16,173 ಮಂದಿ ಪರೀಕ್ಷೆ ಬರೆದಿದ್ದಾರೆ. ಅದರಲ್ಲಿ 11,599 ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅರ್ಹರಾಗಿದ್ದಾರೆ. ಮುಕ್ತ ಶಾಲಾ ವಿಭಾಗದಲ್ಲಿ ಅರ್ಜಿ ಸಲ್ಲಿಸಿದ ಒಟ್ಟು 1,416 ವಿದ್ಯಾರ್ಥಿಗಳಲ್ಲಿ 1,365 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಈ ಪೈಕಿ 576 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಿಲ್ಲೆಯಲ್ಲಿ ಚೆಮ್ನಾಡ್ ಹೈಯರ್ ಸೆಕೆಂಡರಿ ಶಾಲೆಯ ಕಾರ್ತಿಕಾ ವಾಣಿಜ್ಯ ವಿಭಾಗದಲ್ಲಿ ಶೇಕಡಾ 100 ಮತ್ತು ತೃಕ್ಕರಿಪುರ ದಕ್ಷಿಣ ಜಿಎಚ್‌ಎಸ್‌ಎಸ್‌ನ ಮುಹಮ್ಮದ್ ಶುಹೈಬ್ ಎಂ. ವಿಜ್ಞಾನ ವಿಭಾಗದಲ್ಲಿ ಶೇಕಡಾ 100 ಅಂಕಗಳನ್ನು ಗಳಿಸಿದ್ದಾರೆ. ಮಾರ್ಥೋಮಾ ಕಿವುಡ ಎಚ್‌ಎಸ್‌ಎಸ್ ಶೇಕಡಾ 100ರಷ್ಟು ಯಶಸ್ಸನ್ನು ಸಾಧಿಸಿದೆ. ಪರವನಡ್ಕ ಜಿಎಂಆರ್‌ಎಚ್‌ಎಸ್ ಬಾಲಕಿಯರ ಶಾಲೆಯು ಶೇಕಡಾ 96.88 ರಷ್ಟು ಉತ್ತೀರ್ಣತೆ ಹೊಂದಿದೆ. ಪಾಕಂ ಜಿಎಚ್‌ಎಸ್ ಶಾಲೆಯು ಶೇಕಡಾ 96.15 ರಷ್ಟು ಯಶಸ್ಸು ಗಳಿಸಿದೆ. ರಾಜಪುರಂ ಹೋಲಿ ಫ್ಯಾಮಿಲಿ ಎಚ್‌ಎಸ್‌ಎಸ್ ಶೇಕಡಾ 96 ರಷ್ಟು ಯಶಸ್ಸನ್ನು ಪಡೆದಿದೆ. ಜಿಲ್ಲೆಯ ವೃತ್ತಿಪರ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಶೇಕಡಾ 60.63 ರಷ್ಟು ಉತ್ತೀರ್ಣತೆ ದಾಖಲಾಗಿದೆ. ಪರೀಕ್ಷೆಗೆ ಹಾಜರಾದ 1,082 ವಿದ್ಯಾರ್ಥಿಗಳಲ್ಲಿ 656 ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಅರ್ಹತೆ ಪಡೆದಿದ್ದಾರೆ. ಮುಳ್ಳೇರಿಯ ಮತ್ತು ಕುಂಜತ್ತೂರು ಸರಕಾರಿ ವೃತ್ತಿಪರ ಹೈಯರ್ ಸೆಕೆಂಡರಿ ಶಾಲೆಗಳು ಶೇಕಡಾ 100 ರಷ್ಟು ಸಾಧನೆ ಮಾಡಿವೆ. ಕೊಡಕ್ಕಾಡು ವೃತ್ತಿಪರ ಹೈಯರ್ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳು ಶೇಕಡಾ 96.23 ರಷ್ಟು ಯಶಸ್ಸು ಗಳಿಸಿದ್ದಾರೆ.

ಕೇರಳ ಕೇಂದ್ರೀಯ ವಿವಿ: ಸೈಟ್ ಇಂಜಿನಿಯರ್ ಹುದ್ದೆಗೆ ನೇಮಕ

ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಸೈಟ್ ಇಂಜಿನಿಯರ್/ ಸೈಟ್ ಸೂಪರ್‌ವೈಸರ್ (ಸಿವಿಲ್) ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್/ ಬಿಇ ಕೇಂದ್ರೀಯ ಸಂಸ್ಥೆಗಳ ಅಥವಾ ಯೋಜನೆಗಳಲ್ಲಿ ಹಿಂದಿನ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ವಯೋಮಿತಿ 35 ವರ್ಷಗಳು. ಆಸಕ್ತ ಅಭ್ಯರ್ಥಿಗಳು ಜೂನ್ 8 ರೊಳಗೆ ವಿವರವಾದ ಬಯೋಡೇಟಾ ಮತ್ತು ಅರ್ಹತಾ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ ಸಂಪರ್ಕಿಸಬಹುದು.

ಸಂಶೋಧನಾ ಸಹಾಯಕ, ಕ್ಷೇತ್ರ ತನಿಖಾಧಿಕಾರಿ ಹುದ್ದೆಗೆ ನೇಮಕ

ಕಾಸರಗೋಡು: ತಿರುವನಂತಪುರದ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಪಿಟಲ್ ಸೆಂಟರ್‌ನಲ್ಲಿ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿಯ ಆರ್ಥಿಕ ನೆರವಿನೊಂದಿಗೆ ನಡೆಸಲಾಗುತ್ತಿರುವ ಪ್ರಮುಖ ಸಂಶೋಧನಾ ಯೋಜನೆಯಲ್ಲಿ ಸಂಶೋಧನಾ ಸಹಾಯಕ ಮತ್ತು ಕ್ಷೇತ್ರ ತನಿಖಾಧಿಕಾರಿಗಳ ಹುದ್ದೆಗಳು ಖಾಲಿಯಿವೆ. ಸಂಶೋಧನಾ ಸಹಾಯಕ: ಒಂದು ಹುದ್ದೆ ಖಾಲಿಯಾಗಿದ್ದು, ವಿದ್ಯಾರ್ಹತೆ: ಸಮಾಜ ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ. ಅವಧಿ ಒಂದು ವರ್ಷ ಆಗಿದೆ. ಕ್ಷೇತ್ರ ತನಿಖಾಧಿಕಾರಿ: ಒಂದು ಹುದ್ದೆ ಖಾಲಿಯಿದ್ದು ಅರ್ಹತೆ ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ ಸಮಾಜ ವಿಜ್ಞಾನದಲ್ಲಿ ಪದವಿ. ಅವಧಿ 22 ತಿಂಗಳುಗಳು. ಆಸಕ್ತ ಅಭ್ಯರ್ಥಿಗಳು ಜೂನ್ 15 ರಂದು ಬೆಳಿಗ್ಗೆ 10.30ಕ್ಕೆ ಕ್ಯಾಪಿಟಲ್ ಸೆಂಟರ್‌ನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ 8281266665 ಕರೆ ಮಾಡಬಹುದು.

ಮೇ 30: ಶಾಲಾ ವಾಹನ ತಪಾಸಣೆ

ಕಾಸರಗೋಡು: ಕಾಸರಗೋಡು ತಾಲೂಕಿನ ಶಾಲಾ ವಾಹನಗಳ ದಕ್ಷತೆ ತಪಾಸಣೆ ಮೇ 30 ರಂದು ಬೆಳಗ್ಗೆ 9 ಗಂಟೆಗೆ ಕಾಸರಗೋಡು ನಗರಸಭಾ ಕ್ರೀಡಾಂಗಣದಲ್ಲಿ ಮತ್ತು ಮಂಜೇಶ್ವರ ತಾಲೂಕಿನ ವಾಹನಗಳ ತಪಾಸಣೆ ಮೇ 30 ರಂದು ಬೆಳಗ್ಗೆ 9 ಗಂಟೆಗೆ ಉಪ್ಪಳ ಎಜೆಐ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಡೆಯಲಿದ್ದು ವಾಹನಗಳ ಮೂಲ ದಾಖಲೆಗಳೊಂದಿಗೆ ಚಾಲನಾ ಪರವಾನಗಿ, ಜಿಪಿಎಸ್ ಪ್ರಮಾಣಪತ್ರ, ವಿದ್ಯಾವಾಹನ ಪ್ರಮಾಣಪತ್ರ ಮತ್ತು ವೇಗ ಮಿತಿ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು ಎಂದು ತಿಳಿಸಲಾಗಿದೆ.

ಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸಂಸ್ಕೃತ ವಿಷಯಕ್ಕೆ ಸಂಬಂಧಿಸಿ ಅತಿಥಿ ಪ್ರಾಧ್ಯಾಪಕರ ನೇಮಕಾತಿ ಸಂದರ್ಶನವು ಜೂನ್ 3 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಮತ್ತು ನೆಟ್ ಅರ್ಹತೆ ಪಡೆದ ಅಭ್ಯರ್ಥಿಗಳ ಅನುಪಸ್ಥಿತಿಯಲ್ಲಿ ಸ್ನಾತಕೋತ್ತರ ಪದವೀಧರರನ್ನು ಸಹ ಪರಿಗಣಿಸಲಾಗುತ್ತದೆ. ಕಾಲೇಜು ಶಿಕ್ಷಣ ನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿದ ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 256027 ಸಂಪರ್ಕಿಸಬಹುದು.

ಸುತ್ತ ಮುತ್ತ

ನಿಟ್ಟೆ ಸಹ ಪ್ರಾಧ್ಯಾಪಕ ಡಾ. ರಂಜಿತ್‌ಗೆ ಅತ್ಯುತ್ತಮ ವಿಮರ್ಶಕ ಗೌರವ

ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ರಂಜಿತ್ ಅವರು



ಅಂತಾರಾಷ್ಟ್ರೀಯ ವಿದ್ವಾಂಸ ನಿಯತಕಾಲಿಕಗಳಿಗೆ ಅಮೂಲ್ಯವಾದ ಪೀರ್-ರಿವ್ಯೂ ನೀಡುತ್ತಾ ಬಂದಿದ್ದು ಈ ಕೊಡುಗೆಗಳನ್ನು ಗುರುತಿಸಿ ಅಮೆರಿಕನ್ ಸೊಸೈಟಿ ಆಫ್ ಸಿವಿಲ್ ಎಂಜಿನಿಯರ್ಸ್‌ನಿಂದ 2025-26ನೇ ಸಾಲಿನ 'ಅತ್ಯುತ್ತಮ ವಿಮರ್ಶಕ' ಎಂಬ ಗೌರವ ದೊರೆತಿದೆ. ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ವಿಶ್ವದ ಅತ್ಯಂತ ಪ್ರತಿಷ್ಠಿತ ವೃತ್ತಿಪರ ಸಂಸ್ಥೆಗಳಲ್ಲಿ ಒಂದಾಗಿದೆ.

ಮೇ 28ರಿಂದ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಪ್ರವಾಸ

ಉಡುಪಿ: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಡಾ. ರಾಮಪ್ಪ ಎಂ ಅವರು ಮೇ 28 ರಿಂದ 30ರ ವರೆಗೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಮೇ 28ರಂದು ರಾತ್ರಿ ಉಡುಪಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ಮೇ 29 ರಂದು ಬೆಳಗ್ಗೆ 8 ಗಂಟೆಗೆ ಶ್ರೀ ಕೃಷ್ಣ ದೇವಸ್ಥಾನಕ್ಕೆ ಭೇಟಿ, 11 ಗಂಟೆಗೆ ಜಿಲ್ಲಾ ಪಂಚಾಯತ್ ಡಾ. ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ನಿಗಮದ ಪ್ರಗತಿ ಪರಿಶೀಲನಾ ಸಭೆ, ಮಧ್ಯಾಹ್ನ 2 ಗಂಟೆಗೆ ಸಾಯಬ್ರಕಟ್ಟೆ ಯಡ್ತಾಡಿ ಗ್ರಾಮದ ಭೋವಿ ಕಾಲೋನಿಗೆ ಭೇಟಿ ನೀಡಿ, ನಂತರ ವಾಸ್ತವ್ಯ ಮಾಡಲಿದ್ದಾರೆ. ಮೇ 30 ರಂದು ಬೆಳಗ್ಗೆ 11 ಗಂಟೆಗೆ ಉಡುಪಿಯಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಮೈಸೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಮೊದಲನೇ ಪುಟದಿಂದ

ಶ್ವಾನ ಶೆಲ್ಟರ್

ಸೆರೆಹಿಡಿದ ನಾಯಿಗಳನ್ನು ತಾತ್ಕಾಲಿಕವಾಗಿ ಈ ಶೆಲ್ಟರ್ ಹೋಮ್‌ಗಳಲ್ಲಿ ಕೂಡಿಹಾಕಲು ನಿರ್ಧರಿಸಲಾಗಿತ್ತು. ಆದರೆ ಯೋಜನೆ ಯು ಕಾರ್ಯಗತಗೊಳ್ಳದೆ ಮೂಲೆ ಗುಂಪಾಗಿದೆ. ಜಿಲ್ಲೆಗಳಲ್ಲಿ ಅನಿಮಲ್ ಬರ್ತ್ ಕಂಟ್ರೋಲ್ (ಎಬಿಸಿ) ಕೇಂದ್ರ ಅತೀ ಅಗತ್ಯ ಎಂಬುದನ್ನು ಸುಪ್ರೀಂಕೋರ್ಟ್‌ನ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಕಾಸರಗೋಡು ಜಿಲ್ಲೆಯ ಮುಳಿಯಾರಿನ ಎಬಿಸಿ ಕೇಂದ್ರವು ಪ್ರಸ್ತುತ ಉತ್ತಮ ರೀತಿಯಲ್ಲಿ ಕಾರ್ಯಾಚರಿಸುತ್ತಿದೆ. 100 ಬೀದಿನಾಯಿಗಳನ್ನು ಇರಿಸಬಹುದಾದ ಸೌಕರ್ಯ ಈ ಕೇಂದ್ರದಲ್ಲಿದೆ. ಮುಳಿಯಾರಿನ ಎಬಿಸಿ ಕೇಂದ್ರವು ಅನಿಮಲ್ ವೆಲ್ಫೇರ್ ಬೋರ್ಡ್ ಮಾನ್ಯತೆ ಪಡೆದಿದೆ.

ನೀರು ಸಂಪರ್ಕ ಕಟ್

ಸಮುದಾಯದವರಿಗೆ ಬಿಲ್ಲಿನಲ್ಲಿ ಶೇ.50 ರಿಯಾಯಿತಿ ಹಾಗೂ ಇತರರಿಗೆ ಶೇ.25 ರಿಯಾಯಿತಿ ನೀಡುವುದೆಂದು ನಿರ್ಣಯಿಸಿದ್ದೆವು. ಆ ಅವಕಾಶವನ್ನು ಸದುಯೋಗಪಡಿಸಿಕೊಂಡ ಕೆಲವು ಗ್ರಾಹಕರು ಬಿಲ್ ಪಾವತಿ ಮಾಡಿದ್ದಾರೆ. ಆದರೂ ಸಂಗ್ರಹವಾಗಿರುವುದು ಕೇವಲ ರೂ.8 ಲಕ್ಷ ಮಾತ್ರ ಎಂದು ಅವರು ಹೇಳಿದ್ದಾರೆ. ಮಂಗಳವಾರ 2ನೇ ವಾರ್ಡ್‌ನಲ್ಲಿ ಕಾರ್ಯಾಚರಣೆ ನಡೆದಿದ್ದು ಪಂಚಾಯತ್‌ನ 13 ವರ್ಡ್‌ಗಳಲ್ಲಿಯೂ ಬಿಲ್ ಪಾವತಿಸಲು ಬಾಕಿ ಇರುವವರ ನೀರಿನ ಸಂಪರ್ಕ ಕಡಿತಗೊಳಿಸಲಾಗುವುದು. ಆದರೂ ಸಂಪೂರ್ಣ ಪಾವತಿಯಾಗದಿದ್ದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇದರಲ್ಲಿ ಯಾವುದೇ ಜಾತಿ, ಧರ್ಮ, ರಾಜಕೀಯ ನೋಡುವುದಿಲ್ಲ, ಪಂಚಾಯತ್‌ಗೆ ಬರಬೇಕಾದ ಆದಾಯದ ವಿಚಾರ ದಲ್ಲಿ ಯಾವುದೇ ರಾಜಿ ಇಲ್ಲ ಎಂದು ಹೇಳಿದ್ದಾರೆ.

ಕಸ ಹೆಕ್ಕಿಸಿದ್ರು!

ತೆಕ್ಕಟ್ಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತ್ಯಾಜ್ಯ ಎಸೆದ ಮಂಡ್ಯ ಮೂಲದ ಮಿನಿ ಬಸ್‌ನಲ್ಲಿದ್ದ ಪ್ರವಾಸಿಗರಿಗೆ ಪಿಡಿಓ ಸಂತೋಷ್ ಸ್ವಚ್ಛತೆಯ ಪಾಠ ಮಾಡಿದ್ದಾರೆ. ಅಲ್ಲದೆ ಎಸ್‌ಎಲ್‌ಆರ್‌ಎಂ ಘಟಕದ ಮಾಹಿತಿ ತಿಳಿಯುತ್ತಲೇ ಸ್ಥಳಕ್ಕಾಗಮಿಸಿ ಪ್ರವಾಸಿಗರಿಂದಲೇ ಎಸೆದ ತ್ಯಾಜ್ಯವನ್ನು ತೆರವುಗೊಳಿಸಿ ಸಮರ್ಥ ಆಡಳಿತಕ್ಕೆಮುನ್ನುಡಿ ಬರೆದು ಮಾದರಿಯಾಗಿದ್ದಾರೆ.ಈ ಕಾರ್ಯವೈಖರಿಗೆ ವ್ಯಾಪಕ ಪ್ರಶಂಸೆ ಕೂಡಾ ವ್ಯಕ್ತವಾಗಿದ್ದು, ತೆಕ್ಕಟ್ಟೆ ಈ ಪ್ರಕರಣದಿಂದಲೆ ಸಾಮಾಜಿಕ ಜಾಲತಾಣದಲ್ಲಿ ಪರಿಸರ ಜಾಗೃತಿ ಪ್ರಜ್ಞೆ ಹರಿದಾಡುವಂತೆ ಮಾಡಿದೆ.

ಕೃಷ್ಣನ ನೈವೇದ್ಯಕ್ಕೆ ದೇಸೀ ಅಕ್ಕಿ ಅನ್ನದ ಸಂಕಲ್ಪ | 200ಕ್ಕೂ ಹೆಚ್ಚು ಪ್ರಗತಿಪರ, ತಳಿ ಸಂರಕ್ಷಕ ರೈತರು ಉಡುಪಿಗೆ

ಮೇ 28ರಂದು ಉಡುಪಿಯಲ್ಲಿ 'ಬೊಗಸೆ ಭತ್ತ ಬೀಜ ಪ್ರದಾನ'

ಉಡುಪಿ: ಆಧುನಿಕ ಕೃಷಿಯ ಭರಾಟೆಯ ನಡುವೆ ಕಣ್ಮರೆಯಾಗುತ್ತಿರುವ ಭಾರತೀಯ ಪಾರಂಪರಿಕ ಭತ್ತದ ತಳಿಗಳನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಉಡುಪಿಯಲ್ಲಿಂದು ಅಪೂರ್ವ ಹಾಗೂ ಐತಿಹಾಸಿಕ ಕೃಷಿ ಅಭಿಯಾನಕ್ಕೆ ಚಾಲನೆ ದೊರೆಯುತ್ತಿದೆ. ಸೋದೆ ಶ್ರೀ ವಾದಿರಾಜ ಮಠ ಮತ್ತು ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಮೇ 28 ನೇ ತಾರೀಕಿನಂದು ಉಡುಪಿಯ ಶ್ರೀ ಸೋದೆ ಮಠದ ಆವರಣದಲ್ಲಿ ಅನ್ನಬ್ರಹ್ಮ ಶ್ರೀಕೃಷ್ಣನಿಂದ ಅನುಗ್ರಹಿಸಲ್ಪಟ್ಟ ಭತ್ತದ ಬೀಜಗಳ 'ಬೊಗಸೆ ಭತ್ತ ಬೀಜ ಪ್ರದಾನ' ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಕುರಿತು ಸೋದೆ ಮಠದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೃಷಿ ಪ್ರಯೋಗ ಪರಿವಾರದ ಶ್ರೀವತ್ಸ ಮಾಹಿತಿ ನೀಡಿದರು. ಅಂದು ಬೆಳಗ್ಗೆ 10ಕ್ಕೆ ಆರಂಭವಾಗುವ ಈ ಧಾರ್ಮಿಕ-ಕೃಷಿ ಸಮ್ಮಿಲನದ ದಿವ್ಯ ಸಾನ್ನಿಧ್ಯವನ್ನು ಸೋದೆ ಶ್ರೀ ವಾದಿರಾಜ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರು ವಹಿಸಲಿದ್ದಾರೆ. ವಿವಿಧ ಜಿಲ್ಲೆಗಳಿಂದ ಪಾರಂಪರಿಕ ಭತ್ತದ ತಳಿಗಳನ್ನು



ಜೀವಂತವಾಗಿಟ್ಟಿರುವ 200ಕ್ಕೂ ಹೆಚ್ಚು ಪ್ರಗತಿಪರ ಹಾಗೂ ತಳಿ ಸಂರಕ್ಷಕ ರೈತರು ಉಡುಪಿಗೆ ಆಗಮಿಸುತ್ತಿದ್ದಾರೆ.

'ಶುದ್ಧ ನೈವೇದ್ಯ ಸಮರ್ಪಣಂ' ಸಂಕಲ್ಪ

ಬರುವ 2028ರ ಸೋದೆ ಶ್ರೀ ವಾದಿರಾಜ ಮಠದ ಪರ್ಯಾಯದ ಅವಧಿಯಲ್ಲಿ ನಡೆಯುವ ನಿತ್ಯ ಮಹಾ ನೈವೇದ್ಯಕ್ಕೆ ಸಾವಯವ ಕೃಷಿಕರು ಅತ್ಯಂತ ಭಕ್ತಿಯಿಂದ ಬೆಳೆದು ಸಮರ್ಪಿಸುವ ದೇಶಿ ಭತ್ತದ ಅಕ್ಕಿಯ ಅನ್ನವನ್ನೇ ಬಳಸುವ ಮಹತ್ತರ ಸಂಕಲ್ಪವನ್ನು ಪೂಜ್ಯ ಶ್ರೀಗಳು ಮಾಡಿದ್ದಾರೆ. ಭತ್ತದ ಪಾರಂಪರಿಕ ತಳಿಗಳ ಸಂರಕ್ಷಣೆ ಈ ವಿಶಿಷ್ಟ ಅಭಿಯಾನಕ್ಕೆ ಶ್ರೀಗಳು 'ಶುದ್ಧ ನೈವೇದ್ಯ ಸಮರ್ಪಣಂ' ಎಂದು ಹೆಸರಿಟ್ಟಿದ್ದಾರೆ. ಇದರ ಮೂಲಕ ಉಡುಪಿ ಶ್ರೀಕೃಷ್ಣನಿಗೆ ಪ್ರತಿನಿತ್ಯವೂ ಒಂದೊಂದು ಪ್ರತ್ಯೇಕ ತಳಿಯ ಪಾರಂಪರಿಕ ಅಕ್ಕಿಯಿಂದ ಸಿದ್ಧಪಡಿಸಿದ ಮಹಾ ನೈವೇದ್ಯ ಸಮರ್ಪಿಸುವುದು ಈ ಯೋಜನೆ ಮೂಲ ಆಶಯವಾಗಿದೆ. ಈ ಮೂಲಕ ರಾಜ್ಯಾದ್ಯಂತ ಸುಮಾರು 350ಕ್ಕೂ ಹೆಚ್ಚು ದೇಶೀ ಭತ್ತದ ತಳಿಗಳು ಆಯಾ ಪ್ರದೇಶದಲ್ಲೇ ರೈತರಿಂದ ನೈಸರ್ಗಿಕವಾಗಿ ಸಂರಕ್ಷಣೆ ಪಡೆಯಲಿವೆ.

ಸಂಘ-ಸಂಸ್ಥೆಗಳ ಸಹಯೋಗ

ಕಳೆದ 4 ವರ್ಷಗಳಿಂದ ಅಭಿಯಾನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 250ಕ್ಕೂ ಹೆಚ್ಚು ರೈತರು ದೇಸೀ ಭತ್ತದ ಬೀಜಗಳನ್ನು ಪಡೆದು ಯಶಸ್ವಿಯಾಗಿ ಬೆಳೆಸುತ್ತಿದ್ದಾರೆ. ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರದ ಜೊತೆಗೆ ಭಾರತೀಯ ಕಿಸಾನ್ ಸಂಘ, ಉಡುಪಿ ಕೇದಾರೋತ್ಥಾನ ಟ್ರಸ್ಟ್, ಸಾವಯವ ಕೃಷಿ ಪರಿವಾರ, ಹಾದಿಗಲ್ಲಿನ ಶ್ರೀ ಅಭಯ ಲಕ್ಷ್ಮೀನೃಸಿಂಹ ದೇವಸ್ಥಾನ, ಹೊಸನಗರದ ಗ್ರಾಮ ಭಾರತಿ ಟ್ರಸ್ಟ್ ಕೈಜೋಡಿಸಿವೆ. ಕೆಳದಿ ಶಿವಪ್ಪ ನಾಯಕ ಕೃಷಿ, ತೋಟಗಾರಿಕೆ ವಿವಿ, ಮಂಜುಗುಣಿ ಶ್ರೀ ವೇಂಕಟರಮಣ ದೇವಸ್ಥಾನ, ಶಿರಸಿಯ ಕದಂಬ ಸಂಸ್ಥೆ, ಹರಿಹರಪುರದ ಶ್ರೀಮಠ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗ್ರಾಮವಿಕಾಸ ಗತಿವಿಧಿ ಸಂಘಟನೆಗಳು ತಾಂತ್ರಿಕ, ಸಾಮಾಜಿಕ ಸಹಕಾರ ನೀಡುತ್ತಿವೆ.

ರೈತರಿಗೆ ಗೌರವ, ಭಕ್ತರಿಗೆ ತಳಿ ಪರಿಚಯ

ಅಭಿಯಾನದ ಕುರಿತು ಮಾತನಾಡಿದ ಸೋದೆ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರು, ಮುಂದಿನ ಪರ್ಯಾಯದಅವಧಿಯಲ್ಲಿಶ್ರೀಕೃಷ್ಣನಿಗೆಸಂಪೂರ್ಣ ಸಾವಯವ ಅಕ್ಕಿ ಹಾಗೂ ನೈಸರ್ಗಿಕ ತರಕಾರಿಗಳಿಂದ ತಯಾರಿಸಿದ ಪ್ರಸಾದವನ್ನೇ ಭಕ್ತರಿಗೆ ನೀಡುವ ಸುಂದರ ಯೋಜನೆ ನಾವು ರೂಪಿಸುತ್ತಿದ್ದೇವೆ. ಅದಕ್ಕೆ ಯಾವ ರೀತಿಯ ದೇಸೀ ತಳಿಯ ಅಕ್ಕಿ ಹೆಚ್ಚು ಸೂಕ್ತ ಎಂಬ ಬಗ್ಗೆ ಕೃಷಿ ತಜ್ಞರೊಂದಿಗೆ ನಿರಂತರ ಚರ್ಚೆಗಳು ನಡೆಯುತ್ತಿವೆ. ಕೇವಲ ನೈವೇದ್ಯ ಸಮರ್ಪಣೆಯಷ್ಟೇ ಅಲ್ಲದೆ, ಶ್ರೀಮಠಕ್ಕೆ ಭಕ್ತಿಪೂರ್ವಕವಾಗಿ ಭತ್ತದ ಅಕ್ಕಿ ಒದಗಿಸುವ ಪ್ರತೀದಿನದ ರೈತನನ್ನು ಗುರುತಿಸಿ ಮಠದ ವತಿಯಿಂದ ವಿಶೇಷವಾಗಿ ಸನ್ಮಾನಿಸುವ ಕಾರ್ಯ ಹಮ್ಮಿಕೊಳ್ಳಲಾಗುವುದು. ಇದರೊಂದಿಗೆ ಉಡುಪಿಗೆ ಬರುವ ಲಕ್ಷಾಂತರ ಭಕ್ತರಿಗೆ ಭಾರತದ ಶ್ರೀಮಂತ ಕೃಷಿ ವೈವಿಧ್ಯತೆಯನ್ನು ಪರಿಚಯಿಸುವ ಸಲುವಾಗಿ, ಎಲ್ಲಾ ಪಾರಂಪರಿಕ ತಳಿಗಳ ಪ್ರದರ್ಶನ ಹಾಗೂ ಪರಿಚಯವನ್ನು ಒದಗಿಸುವ ಕಾರ್ಯವನ್ನೂ ಶ್ರೀಮಠ ಮಾಡಲಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕೃಷಿ ಪರಿವಾರದ ಪ್ರಮುಖರಾದ ದಿನೇಶ್ ಹಾಗೂ ಅರುಣ ಇದ್ದರು.

ಫಲಿಮಾರು: ಶೇ.100 ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ



ಪಡುಬಿದ್ರಿ: ಫಲಿಮಾರು ಸರಕಾರಿ ಪದವಿ ಪೂರ್ವ ಕಾಲೇಜು ಇದರ 2025-26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 100 ಶೇ. ಫಲಿತಾಂಶ ದಾಖಲಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ 'ಅಭಿನಂದನಾ ಸಮಾರಂಭ'ದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ 5 ಲಕ್ಷ ರೂಪಾಯಿ ಅನುದಾನದಲ್ಲಿ ನಿರ್ಮಿಸಲಾದ ಇಂಟರ್ ಲಾಕ್ ಕಾಮಗಾರಿ ಹಾಗೂ ಶಾಲೆಯ ಮೂಲಭೂತ ಸೌಕರ್ಯಗಳನ್ನು ಶಾಸಕರು ಉದ್ಘಾಟಿಸಿದರು. ಪಲಿಮಾರು ಗ್ರಾಮ

- **5 ಲಕ್ಷ ರೂಪಾಯಿ ಅನುದಾನದಲ್ಲಿ ನಿರ್ಮಿಸಲಾದ ಇಂಟರ್ ಲಾಕ್ ಕಾಮಗಾರಿ ಹಾಗೂ ಶಾಲೆಯ ಮೂಲಭೂತ ಸೌಕರ್ಯಗಳ ಉದ್ಘಾಟನೆ**

ಪಂಚಾಯತ್ ಮಾಜಿ ಅಧ್ಯಕ್ಷರಾದ ಸೌಮಲತಾ ಶೆಟ್ಟಿ, ಮಾಜಿ ಉಪಾಧ್ಯಕ್ಷರಾದ ರಾಯೇಶ್ ಪೈ, ಮಾಜಿ ಸದಸ್ಯರಾದ ಗಾಯತ್ರಿ ಪ್ರಭು, ಪ್ರವೀಣ್ ಪೂಜಾರಿ, ಸುಜಾತಾ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಪ್ರಸಾದ್ ಪಲಿಮಾರು, ಪ್ರಾಂಶುಪಾಲರಾದ ಗ್ರೇಟ್ಟಾ ಡಿ'ಸೋಜಾ, ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ ಮಾಧವ ಸಾಲ್ಯಾನ್, ಹಳೆ ವಿದ್ಯಾರ್ಥಿ, ದಾನಿ ಪ್ರಭಾ ನಂಬಿಯಾರ್ ಇದ್ದರು.

ಮಂದಾರ್ತಿ ದೇಗುಲದಲ್ಲಿ ವರ್ಷದ ಕೊನೆಯ ಸೇವೆ ಆಟ, ಪ್ರಶಸ್ತಿ ಪ್ರದಾನ



ಬ್ರಹ್ಮಾವರ: ಮಂದಾರ್ತಿ ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ಯಕ್ಷಗಾನ ದಶಾವತಾರ ಮೇಳಗಳ ಈ ವರ್ಷದ ಕೊನೆಯ ದೇವರ ಸೇವೆ ಆಟ ಜರಗಿತು.

ಈ ಸಂದರ್ಭ ಕೀರ್ತಿಶೇಷ ದಿ. ಹಾರಾಡಿ ರಾಮ ಗಾಣಿಗ ಪ್ರಶಸ್ತಿಯನ್ನು ಗಾವಳಿ ಶೀನ ಕುಲಾಲ ಅವರಿಗೆ ದೇವಾಲಯದ ವತಿಯಿಂದ ನೀಡಲಾಯಿತು.

ಈ ಸಂದರ್ಭದಲ್ಲಿ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ದೇವಸ್ಥಾನದ ಅಧ್ಯಕ್ಷ ಎಚ್. ಧನಂಜಯ ಶೆಟ್ಟಿ ಆಡಳಿತ ಮಂಡಳಿ ಸದಸ್ಯರಾದ ಎಚ್. ಶಂಭು ಶೆಟ್ಟಿ ಎಚ್. ಪ್ರಭಾಕರ ಶೆಟ್ಟಿ ಆರ್. ಶ್ರೀನಿವಾಸ್ ಶೆಟ್ಟಿ ಎಚ್. ಜಯರಾಮ್ ಶೆಟ್ಟಿ ಪ್ರಮುಖರಾದ ಎಸ್.ವಿ. ಉದಯ ಕುಮಾರ್ ಶೆಟ್ಟಿ ಶೇಡಿಕೋಡ್ಲು ವಿಟ್ಠಲ ಶೆಟ್ಟಿ ಪ್ರದೀಪ್ ಶೆಟ್ಟಿ ಅಶೋಕ್ ಕುಂದರ್, ಅಧ್ಯಾಪಕ ಶಶಿಧರ್ ಶೆಟ್ಟಿ ಯಕ್ಷಗಾನ ಕಲಾವಿದರು,ದೇವಳದ ಸಿಬ್ಬಂದಿ ವರ್ಗದವರು, ಭಕ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಕಲಾವಿದರಿಗೆ ನೆರವು

ನಿವೃತ್ತ ಕಲಾವಿದರಾದ ಹಾರಾಡಿ ರಮೇಶ್ ಗಾಣಿಗ, ಪೇತ್ರಿ ಶಾಮ ನಾಯ್ಕ ಅವರಿಗೆ ಹಾಗೂ ಮಂದಾರ್ತಿ ಮೇಳದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿಧನ ಹೊಂದಿದ ಈಶ್ವರ ಗೌಡ ಮತ್ತು ಸೂರ್ಯ ದೇವಾಡಿಗ ನೀಲಾವರ ಅವರ ಮನೆಯವರಿಗೆ 1 ಲಕ್ಷ ರೂ. ನೀಡಿ ಗೌರವಿಸಲಾಯಿತು.

ಡಾ.ಬಸವರಾಜ್ ಶೆಟ್ಟಿಗಾರರಿಗೆ 'ಆರ್ಯಭಟ ಪ್ರಶಸ್ತಿ' ಪ್ರದಾನ



ಕೋಟ: ರಾಜ್ಯ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಇತ್ತೀಚೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ವಾಸ್ತುತಜ್ಞ ಡಾ. ಬಸವರಾಜ್ ಶೆಟ್ಟಿಗಾರರಿಗೆ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಅಧ್ಯಕ್ಷತೆಯನ್ನು ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಚ್.ಎಲ್.ಎನ್. ರಾವ್ ವಹಿಸಿದ್ದರು. ಪ್ರಶಸ್ತಿ ಪ್ರಧಾನ ಸಮಾರಂಭವನ್ನು ವಿದ್ಯಾ ವಾಚಸ್ಪತಿ ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದೂರದರ್ಶನದ ವಿಶ್ರಾಂತ ಹೆಚ್ಚುವರಿ ಮಹಾ ನಿರ್ದೇಶಕ ನಾಡೋಜ ಡಾಟ ಮಹೇಶ್ ಜೋಶಿ ಪಾಲ್ಗೊಂಡಿದ್ದರು. ಸಾರ್ಥಹಳ್ಳಿ ನಾರಾಯಣಸ್ವಾಮಿ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ ಕೆ ಎನ್ ಅಡಿಗ ಅತಿಥಿಗಳನ್ನು ಗೌರವಿಸಿದರು ಹಿರಿಯ ಲೇಖಕರಾದ ಆರ್. ವೆಂಕಟರಾಜು ವಂದಿಸಿದರು.

ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರಿಗೆ ಕಾರ್ಯಾಗಾರ



ಕುಂದಾಪುರ: ಆತ್ಮವಿಶ್ವಾಸ, ಧನಾತ್ಮಕ ಆಲೋಚನೆ ಹಾಗೂ ಸಮಯ ನಿರ್ವಹಣೆಯ ಮೂಲಕ ಮಕ್ಕಳ ಮನದಿಂಗಿತವನ್ನು ಅರಿತು ಜ್ಞಾನವನ್ನು ಬಿತ್ತರಿಸಿದ್ದಲ್ಲಿ ಒಬ್ಬ ಶಿಕ್ಷಕ ಯಶಸ್ಸಿನ ಮೆಟ್ಟಿಲೇರುತ್ತಾನೆ. ಹಾಗೆಯೇ ಸಮಯಕ್ಕೆ ತಕ್ಕಂತೆ ಸಮಾಜವನ್ನು ಎದುರಿಸಲು ಮಗುವನ್ನು ತಯಾರಿಸುವುದರೊಂದಿಗೆ ತಾನು ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದು ಶಿಕ್ಷಣ ಸಮಾಲೋಚಕಿ ಹಾಗೂ ಮೃದು ಕೌಶಲ್ಯಗಳ ತರಬೇತುಗಾರ್ತಿ ಅರುಣಾ ಎಸ್. ಹೇಳಿದರು.

ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ವಿಭಾಗದ ಶಿಕ್ಷಕರಿಗೆ 'ಆಂಗ್ಲ ಭಾಷಾ ಪ್ರಾವಿಣ್ಯತೆಯೊಂದಿಗೆ ಸಂವಹನ ಕೌಶಲ್ಯಗಳು' ಎಂಬ ಶೀರ್ಷಿಕೆಯಡಿ ಶಾಲೆಯ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಓರಿಯಂಟ್ ಬ್ಲ್ಯಾಕ್ ಸ್ವಾನ್ ಪಬ್ಲಿಕೇಶನ್‌ನ ರೂಪೇಶ್ ಉಪಸ್ಥಿತರಿದ್ದರು.

ಸಹಾಯಕ ಶಿಕ್ಷಕಿ ಪದ್ಮಾವತಿ ಸ್ವಾಗತಿಸಿದರು. ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಪ್ರಮೀಳಾ ಡಿಸೋಜಾ ಅತಿಥಿಗಳನ್ನು ಪರಿಚಯಿಸಿದರು. ಸಹಾಯಕ ಶಿಕ್ಷಕಿ ಅಶ್ವಿನಿ ಕಾರ್ಯಕ್ರಮ ನಿರೂಪಿಸಿದರು. ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ರೇಷ್ಮಾ ಡಿಸೋಜಾ ವಂದಿಸಿದರು.

ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ ಶೈಕ್ಷಣಿಕ ಕಾರ್ಯಾಗಾರ



ಕುಂದಾಪುರ: ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳಲು ವೃತ್ತ ಚಟುವಟಿಕೆ ಮತ್ತು ಕಥಾ ಮಾದರಿಯ ಬೋಧನಾ ಕ್ರಮ ಬಹಳ ಮಹತ್ವದ್ದಾಗಿದ್ದು, ಸಂವಾದಾತ್ಮಕ ಕಾರ್ಯಕ್ರಮಗಳ ಮೂಲಕ ಹೊಸ ಹೊಸ ಬೋಧನಾ ತಂತ್ರಗಳನ್ನು ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳ ಬೌದ್ಧಿಕ ಕೌಶಲ್ಯಕ್ಕೆ ಅನುಗುಣವಾಗಿ ಆಸಕ್ತಿದಾಯಕ ಕಲಿಕೆಗೆ ಹೆಚ್ಚು ಒತ್ತುಕೊಟ್ಟು ಶೈಕ್ಷಣಿಕವಾಗಿ ಸಮರ್ಥರಾಗುವಂತೆ ರೂಪಿಸಬೇಕು ಎಂದು ಪ್ರಾರಂಭಿಕ ಬಾಲ್ಯ ಶಿಕ್ಷಣ ಹಾಗೂ ಅಂತರಾಷ್ಟ್ರೀಯ ಫೋನಿಕ್ಸ್ ತರಬೇತುಗಾರ್ತಿ ಪ್ರಶಿಕ್ಷಕಿ ಲೀನಾ ನ್ಯಾನ್ಸಿ ಎ. ಹೇಳಿದರು.

ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕರು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳಲು ಪರಿಣಾಮಕಾರಿ ವೃತ್ತ ಚಟುವಟಿಕೆ ಹಾಗೂ ಕಥೆ ಹೇಳುವಿಕೆ ಮತ್ತು ಪ್ರಾಥಮಿಕ ಹಂತದ

- **ವೃತ್ತ ಚಟುವಟಿಕೆ ಹಾಗೂ ಕಥೆ ಹೇಳುವಿಕೆ ಮತ್ತು ಪ್ರಾಥಮಿಕ ಹಂತದ ಆಟ ಆಧಾರಿತ ಕಲಿಕೆಗೆ ಸಂಬಂಧಿಸಿದಂತೆ ಶೈಕ್ಷಣಿಕ ಕಾರ್ಯಾಗಾರ**

ಆಟ ಆಧಾರಿತ ಕಲಿಕೆಗೆ ಸಂಬಂಧಿಸಿದಂತೆ ಸೋಮವಾರ ಜರಗಿದ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಾಗಾರವನ್ನು ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಕಾರ್ಯಾಗಾರಕ್ಕೆ ಶುಭ ಕೋರಿದರು. ಪ್ರಾಂಶುಪಾಲೆ ಡಾ. ರೂಪಾ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ವಿಜಯಲಕ್ಷ್ಮೀ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.

ಬೆಂಗಳೂರು ಯಕ್ಷಾಂಗಣ ಟ್ರಸ್ಟ್ ವಿದ್ಯಾರ್ಥಿಗಳ 'ಯಕ್ಷ ಪಯಣ'



ಕೋಟ: ಬೆಂಗಳೂರಿನ ಯಕ್ಷಾಂಗಣ ಟ್ರಸ್ಟ್‌ನ ವಿದ್ಯಾರ್ಥಿಗಳು ಆಯೋಜಿಸಿ ರುವ ತಿಂಗಳಲ್ಲಿ ಕಲಿತ ವಿದ್ಯೆ ಪ್ರಸ್ತುತ ಪಡಿಸುವ 5ನೇ 'ಯಕ್ಷ ಪಯಣ' ಕಾರ್ಯಕ್ರಮ ಬೆಂಗಳೂರಿನ ತ್ಯಾಗರಾಜನಗರದ ಅಭೇರಿ ಸಭಾಭವನದಲ್ಲಿ ಯಕ್ಷಗಾನ ಗುರು ಕೋಟ ಸುದರ್ಶನ ಉರಾಳರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಯಕ್ಷಗುರು ಪ್ರಿಯಾಂಕ ಕೆ. ಮೋಹನ್ ಇದ್ದರು. ನಂತರ ವಿದ್ಯಾರ್ಥಿಗಳಿಂದ ಯಕ್ಷಗಾನದ ಸಭಾ ಲಕ್ಷಣದ ಕೆಲವು ತುಣುಕುಗಳು, ಪಾದಾಭಿನ, ಪ್ರಸಂಗದ ಒಂದು ಸನ್ನಿವೇಷವನ್ನು ಪ್ರದರ್ಶನ ನೀಡಿದರು.



ಉಡುಪಿ ಜಿಲ್ಲಾ ಯುವ ಬ್ರಾಹ್ಮಣ ಪರಿಷತ್ ಇವರು ನಡೆಸಿರುವ ಜಿಲ್ಲಾಮಟ್ಟದ ಭಜನಾ ಸ್ಪರ್ಧೆಯಲ್ಲಿ ಶ್ರೀ ರಾಮ ಮಹಿಳಾ ಭಜನಾ ಮಂಡಳಿ ಸಾಲಿಗ್ರಾಮ ಇವರು ದ್ವಿತೀಯ ಬಹುಮಾನ ಪಡೆದುಕೊಂಡರು.

ಕಾಪು ಪುರಸಭಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಗಳ ಹೆಚ್ಚಳ

ಪೊಲೀಸ್, ಆರ್‌ಟಿಒ ಅಧಿಕಾರಿಗಳು, ಶಾಸಕರ ಸಭೆ

ಕಾಪು: ಕಾಪು ಪುರಸಭಾ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಗಳು ದಿನೇ ದಿನೇ ಹೆಚ್ಚುತ್ತಿದ್ದು, ಈ ಸಂಬಂಧ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿ ಕಾರಿಗಳು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿ ಚರ್ಚಿಸಿದರು.

ಸಭೆಯಲ್ಲಿ ಶೀಘ್ರವೇ ಸರ್ವಿಸ್ ರಸ್ತೆಯಲ್ಲಿ ಸ್ಪೀಡ್ ಬ್ರೆಕರ್ ಅಳವಡಿಸುವಂತೆ ಮತ್ತು ಬೀದಿ ದೀಪ ಮತ್ತು ಚರಂಡಿಗಳ ದುರಸ್ತಿಗೊಳಿಸುವಂತೆ ಸಂಭಂದಿಸಿದ ಅಧಿ ಕಾರಿಗಳಿಗೆ ಸೂಚಿಸಲಾಯಿತು.

ಈಸಂದರ್ಭದಲ್ಲಿಕಾಪುಪುರಸಭೆಯಅಧ್ಯಕ್ಷೆಮೋಹಿನಿ ಶೆಟ್ಟಿ, ಉಪಾಧ್ಯಕ್ಷೆ ಸರಿತಾ ಶಿವಾನಂದ, ಸ್ಥಾಯಿ ಸಮಿತಿ ಅಧ್ಯಕ್ಷ ಕಿರಣ್ ಆಳ್ವ ಕಾಪು ಪುರಸಭೆಯ ಸದಸ್ಯರು,



- **ಸರ್ವಿಸ್ ರಸ್ತೆಯಲ್ಲಿ ಸ್ಪೀಡ್ ಬ್ರೆಕರ್ ಅಳವಡಿಸುವಂತೆ ಮತ್ತು ಬೀದಿ ದೀಪ ಮತ್ತು ಚರಂಡಿ ದುರಸ್ತಿಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಲಿಗೆ ಸೂಚನೆ**

ಕಾಪು ಪುರಸಭೆಯ ಮುಖ್ಯಾಧಿಕಾರಿಗಳಾದ ನೀಲಕಂಠ ಮೇಸ್ತಾ, ಪ್ರಭಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಸಂತೋಷ ಶೆಟ್ಟಿ ಕಾಪು ಪೊಲೀಸ್ ಉಪ ನಿರೀಕ್ಷಕ ತೇಜಸ್ವಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಾದ ವಿಘ್ನೇಶ್ ಉಪಸ್ಥಿತರಿದ್ದರು.

ಉಪ್ಪಿನಕುದ್ರು, ಗೊಂಬೆಯಾಟ ಅಕಾಡೆಮಿ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ಸರಣಿ

ಬ್ಯಾನರ್ ಕಲಾವಿದ ರಾಮನ್, ಶಾಲಿನಿಗೆ ಸನ್ಮಾನ

ಕುಂದಾಪುರ: ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ವಿನೂತನ ಕಾರ್ಯಕ್ರಮ ಸರಣಿಯಡಿ ಸತತ 119ನೇ ತಿಂಗಳ ಕಾರ್ಯಕ್ರಮ ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ ಗೊಂಬೆ ಮನೆಯಲ್ಲಿ ಭಾನುವಾರ ಜರುಗಿತು.

ಟಿ.ಎನ್. ಪ್ರಭು, ತಲ್ಲೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಎಂ. ರತ್ನಾಕರ್ ಪೈ, ಬ್ಯಾನರ್ ಕಲಾವಿದ ಕೆ.ಕೆ. ರಾಮನ್, ರಜನಿ ಎನ್. ಪ್ರಭು, ವಿಶ್ವನಾಥ್ ಶ್ಯಾನುಭಾಗ್, ಆಶಾ ಕಾರ್ಯಕರ್ತೆ ಜ್ಯೋತಿ ಪೂಜಾರಿ ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು.

ಈ ಸಂದರ್ಭ ಬ್ಯಾನರ್ ಕಲಾವಿದ ಕೆ.ಕೆ.ರಾಮನ್



- **'ಪ್ರತಿಭೆ ನಿಮ್ಮದು, ವೇದಿಕೆ ನಮದು' ವಿನೂತನ ಕಾರ್ಯಕ್ರಮ ಸರಣಿಯಡಿ ಸತತ 119ನೇ ತಿಂಗಳ ಕಾರ್ಯಕ್ರಮ**
- **ಯಕ್ಷೇಶ್ವರಿ ತಂಡದಿಂದ ಕುಣಿತ ಭಜನೆ**

ಕುಂದಾಪುರ ಮತ್ತು ಶಾಲಿನಿ ಉಪ್ಪಿನಕುದ್ರು ಇವರನ್ನು ಅಕಾಡೆಮಿಯ ವತಿಯಿಂದ ಸನ್ಮಾನಿಸಲಾಯಿತು. ತದನಂತರ ಯಕ್ಷೇಶ್ವರಿ ತಂಡ ಉಪ್ಪಿನಕುದ್ರು ಇವರಿಂದ ಕುಣಿತ ಭಜನೆ ಜರುಗಿತು. ರಾಜೇಂದ್ರ ಪೈ ಕಾರ್ಯಕ್ರಮ ನಿರೂಪಿಸಿದರು.